f prajavani.net prajavani
ಗುರುವಾರ, ಫೆಬ್ರುವರಿ 19, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 50 | ಪುಟ 14
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಶಿವಂ ಸುಂದರಂ!

ಅಹಮದಾಬಾದಿನಲ್ಲಿ ಬುಧವಾರ ನಡೆದ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ನೆದರ್ಲೆಂಡ್ಸ್ ಎದುರು ಶಿವಂ ದುಬೆ ಅರ್ಧಶತಕ ಗಳಿಸಿದರು. ಭಾರತ ತಂಡ 17 ರನ್‌ಗಳಿಂದ ಜಯಿಸಿತು

ಸೆನ್ಸೆಕ್ಸ್ 83,734 | ನಿಫ್ಟಿ 25,819 | $/₹ 90.68 | ಚಿನ್ನ (Std. 10g) ₹1,58,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,52,200 (ಬೆಂಗಳೂರು)

ಭಾರತ–ಅಮೆರಿಕ ಮಧ್ಯೆ ಕೇಬಲ್

ಕೃತಕ ಬುದ್ಧಿಮತ್ತೆ ಸಂಪರ್ಕ ಬಲಪಡಿಸುವ ಉದ್ದೇಶ ಗೂಗಲ್ ಸಿಇಒ ಸುಂದರ್ ಪಿಚೈ ಘೋಷಣೆ

ನವದೆಹಲಿ (ಪಿಟಿಐ): ಎ.ಐ. (ಕೃತಕ ಬುದ್ಧಿಮತ್ತೆ) ಸಂಪರ್ಕವನ್ನು ಬಲಪಡಿಸುವ ಉದ್ದೇಶದಿಂದ ಭಾರತ ಮತ್ತು ಅಮೆರಿಕದ ನಡುವೆ ಸಮುದ್ರದ ಅಡಿಯಲ್ಲಿ ಹೊಸ ಕೇಬಲ್ ಜಾಲ ಅಳವಡಿಕೆ ಮಾಡುವುದಾಗಿ ಗೂಗಲ್ ಕಂಪನಿಯ ಸಿಇಒ ಸುಂದರ್ ಪಿಚೈ ಬುಧವಾರ ಪ್ರಕಟಿಸಿದ್ದಾರೆ.

ಗೂಗಲ್ ಕಂಪನಿಯು ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ಜೊತೆ ಪಾಲುದಾರಿಕೆ ಮಾಡಿಕೊಳ್ಳಲಿದ್ದು, 10 ಸಾವಿರಕ್ಕೂ ಹೆಚ್ಚಿನ ಶಾಲೆಗಳ 1.1 ಕೋಟಿ ಮಕ್ಕಳಿಗೆ ಎ.ಐ. ನೆರವು ಒದಗಿಸಲಿದೆ. ತರಗತಿಗಳಲ್ಲಿ ರೊಬೋಟಿಕ್ಸ್ ಮತ್ತು ಕೋಡಿಂಗ್ ಬಗ್ಗೆ ಮಾಹಿತಿ ನೀಡಲಿದೆ.

ಭಾರತ ಮತ್ತು ಅಮೆರಿಕ ನಡುವಿನ ಹೊಸ ಕೇಬಲ್ ಜಾಲವು ಈ ಎರಡು ದೇಶಗಳ ನಡುವೆ ಎ.ಐ ಸಂಪರ್ಕ ಹೆಚ್ಚಿಸುವುದಲ್ಲದೆ, ದಕ್ಷಿಣಾರ್ಧಗೋಳದ ಹಲವು ದೇಶಗಳ ನಡುವೆ ಸಂಪರ್ಕ ಬಲಪಡಿಸುವ ಕೆಲಸವನ್ನೂ ಮಾಡಲಿದೆ.

ಪಿಚೈ ಅವರು 'ಎ.ಐ ಇಂಪ್ಯಾಕ್ಟ್ ಶೃಂಗಸಭೆ'ಯಲ್ಲಿ ಭಾಗಿಯಾಗಲು ಇಲ್ಲಿಗೆ ಬಂದಿದ್ದಾರೆ. ಈಚೆಗೆ ಘೋಷಿಸಲಾಗಿರುವ, ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ತಲೆ ಎತ್ತಲಿರುವ ಎ.ಐ ಕೇಂದ್ರವು ಒಂದು ಗಿಗಾವಾಟ್‌ಗಿಂತ ಹೆಚ್ಚಿನ ಸಾಮರ್ಥ್ಯ ಹೊಂದಿರಲಿದೆ ಎಂದು ಹೇಳಿದ್ದಾರೆ. ಈ ಎ.ಐ. ಕೇಂದ್ರಕ್ಕಾಗಿ ಗೂಗಲ್ ಕಂಪನಿಯು ಅಂದಾಜು ₹1.36 ಲಕ್ಷ ಕೋಟಿ ವೆಚ್ಚ ಮಾಡುತ್ತಿದೆ. ಇದರ ನಿರ್ಮಾಣ ಪೂರ್ಣಗೊಂಡ ನಂತರದಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ, ಅತ್ಯಾಧುನಿಕ ಎ.ಐ ಸೌಲಭ್ಯಗಳು ದೇಶದ ಎಲ್ಲೆಡೆ ಜನರಿಗೆ ಮತ್ತು ಉದ್ದಿಮೆಗಳಿಗೆ ಲಭ್ಯವಾಗಲಿವೆ ಎಂದು ಪಿಚೈ ಹೇಳಿದ್ದಾರೆ.

▸10

ಸುಂದರ್ ಪಿಚೈ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದರು — ಪಿಟಿಐ ಚಿತ್ರ

ಭಾರತದಲ್ಲಿ ಎ.ಐ ಪಯಣವು ಅಸಾಮಾನ್ಯವಾಗಿರುತ್ತದೆ ಎಂಬುದು ನನ್ನ ನಂಬಿಕೆ. ಅದರಲ್ಲಿ ನಾವು ಪಾಲುದಾರ ಆಗಬೇಕಿದೆ
ಸುಂದರ್ ಪಿಚೈ, ಗೂಗಲ್ ಸಿಇಒ

ಸುಂದರ್ ಪಿಚೈ ಅವರನ್ನು ಭೇಟಿ ಮಾಡಿದ್ದು ಹರ್ಷ ತಂದಿತು... ಎ.ಐ ಕ್ಷೇತ್ರದಲ್ಲಿ ಭಾರತ ಏನು ಮಾಡುತ್ತಿದೆ, ಇಲ್ಲಿನ ವಿದ್ಯಾರ್ಥಿಗಳು ಮತ್ತು ವೃತ್ತಿಪರರ ಜೊತೆ ಗೂಗಲ್ ಹೇಗೆ ಕೆಲಸ ಮಾಡಬಹುದು ಎಂಬ ಬಗ್ಗೆ ಮಾತುಕತೆ ನಡೆಸಿದೆವು
ನರೇಂದ್ರ ಮೋದಿ, ಪ್ರಧಾನಿ

ಪ್ರಧಾನಿ ಮೋದಿ ಜೊತೆ ಚರ್ಚೆ

ಸುಂದರ್ ಪಿಚೈ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಜೊತೆಗೆ ಬುಧವಾರ ಮಾತುಕತೆ ನಡೆಸಿದರು. 'ಆರೋಗ್ಯ ಸುಧಾರಣೆ, ಎಲ್ಲ ಭಾಷೆಗಳಲ್ಲಿ ಮಾಹಿತಿ ಲಭ್ಯತೆ ಹೆಚ್ಚಿಸುವುದು, ನವೋದ್ಯಮ ಹಾಗೂ ಕೃಷಿಗೆ ನೆರವು ನೀಡುವುದು ಸೇರಿದಂತೆ ಪ್ರಧಾನಿಯವರ ಇಂತಹ ಹಲವು ಗುರಿಗಳಿಗೆ ಅನುಗುಣವಾಗಿ ಗೂಗಲ್ ಹೇಗೆ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ನಾವು ಚರ್ಚಿಸಿದೆವು' ಎಂದು ಪಿಚೈ ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ.

ಗೂಗಲ್ ಕಂಪನಿಯು ಒಂದು ದಶಕಕ್ಕೂ ಹೆಚ್ಚಿನ ಅವಧಿಯಿಂದ ಎ.ಐ ಮೇಲೆ ಹೂಡಿಕೆ ಮಾಡುತ್ತಿದೆ... ಎ.ಐ ತಂತ್ರಜ್ಞಾನವು ಜನರು ಗೂಗಲ್ ಶೋಧ ಉಪಕರಣವನ್ನು ಬಳಕೆ ಮಾಡುವ ಬಗೆಯನ್ನು ಬದಲಾಯಿಸುತ್ತಿದೆ. ಗೂಗಲ್ ಮೂಲಕ ಬೇರೆ ಬೇರೆ ವಿಷಯಗಳ ಬಗ್ಗೆ ಹುಡುಕಾಟ ನಡೆಸಿದಾಗ, ಎ.ಐ ನೆರವಿನಿಂದ ನೀಡಲಾಗುವ ಸಂಕ್ಷಿಪ್ತ ವಿವರಗಳು ಕಳೆದ ಒಂದು ದಶಕದ ಅತ್ಯಂತ ಯಶಸ್ವಿ ಉಪಕ್ರಮಗಳಲ್ಲಿ ಒಂದಾಗಿವೆ ಎಂದು ಪಿಚೈ ತಿಳಿಸಿದ್ದಾರೆ.

'ಎ.ಐ ಮಾದರಿಯಲ್ಲಿ ಶೋಧ ಸೌಲಭ್ಯವು 35 ಭಾಷೆಗಳಲ್ಲಿ ಲಭ್ಯವಿದೆ, 200 ದೇಶಗಳಲ್ಲಿ ಸಿಗುತ್ತಿದೆ. ಧ್ವನಿ ಮತ್ತು ದೃಶ್ಯ ಆಧಾರಿತ ಶೋಧ ಸೌಲಭ್ಯವನ್ನು ಅಳವಡಿಕೆ ಮಾಡುವಲ್ಲಿ ಭಾರತೀಯರು ಬಹಳ ಮುಂದಿದ್ದಾರೆ... ಮುಂದಿನ ವಾರಗಳಲ್ಲಿ ಧ್ವನಿ ಹಾಗೂ ಕ್ಯಾಮೆರಾ ಮೂಲಕವೂ ಶೋಧ ಸೌಲಭ್ಯವನ್ನು ಬಳಕೆ ಮಾಡಬಹುದು. ಜನ ತಮಗೆ ಕಾಣಿಸುವ ಸಂಗತಿಗಳನ್ನು ತಮ್ಮದೇ ಭಾಷೆಯಲ್ಲಿ ಗೂಗಲ್ ಮೂಲಕ ಹುಡುಕಬಹುದು' ಎಂದು ಪಿಚೈ ಮಾಹಿತಿ ನೀಡಿದ್ದಾರೆ.

ನೌಕರರಿಗೆ ತರಬೇತಿ

ಗೂಗಲ್ ಕಂಪನಿಯು ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ) 'ಕರ್ಮಯೋಗಿ ಭಾರತ್' ಜೊತೆ ಪಾಲುದಾರಿಕೆ ಮಾಡಿಕೊಂಡಿದೆ. ಇದರ ಅಡಿಯಲ್ಲಿ ಅದು 800 ಜಿಲ್ಲೆಗಳಲ್ಲಿನ 2 ಕೋಟಿ ಸರ್ಕಾರಿ ನೌಕರರಿಗೆ 18 ಭಾಷೆಗಳಲ್ಲಿ ತರಬೇತಿ ಒದಗಿಸಲಿದೆ.

ಬಂಡೀಪುರ, ನಾಗರಹೊಳೆ ಸಫಾರಿ ಮತ್ತೆ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಸಫಾರಿಯನ್ನು ತಾಂತ್ರಿಕ ಸಮಿತಿಯ ವರದಿ ಆಧರಿಸಿ ಹಂತ ಹಂತವಾಗಿ ಪುನರಾರಂಭಿಸಲು ನಿರ್ಧರಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಎರಡೂ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮ ಧಾರಣಾ ಸಾಮರ್ಥ್ಯವನ್ನು ವೈಜ್ಞಾನಿಕವಾಗಿ ನಿಗದಿಪಡಿಸಲು ರಚಿಸಲಾಗಿರುವ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತಾಂತ್ರಿಕ ಸಮಿತಿ ಈ ಕುರಿತು ಪ್ರಾಥಮಿಕ ವರದಿ ನೀಡಿತ್ತು. ವರದಿಯ ಪರಾಮರ್ಶೆ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಖಂಡ್ರೆ ಅವರು ಈ ಮಾಹಿತಿ ನೀಡಿದರು.

ಹುಲಿ ದಾಳಿಯಿಂದ ಸರಣಿ ಸಾವು ಸಂಭವಿಸಿದ ಕಾರಣ ಕಳೆದ ನವೆಂಬರ್ 7ರಿಂದ ಸಫಾರಿಯನ್ನು ನಿಲ್ಲಿಸಲಾಗಿತ್ತು. ಎಚ್‌.ಡಿ.ಕೋಟೆಯಲ್ಲಿ ಪ್ರತಿಭಟನೆ ನಡೆಸಿದ್ದ ರೈತರು ಸೇರಿ ಸಾವಿರಾರು ಸ್ಥಳೀಯರು, ರೆಸಾರ್ಟ್ ಸಿಬ್ಬಂದಿ, ಸಫಾರಿ ನಿಲ್ಲಿಸಿರುವುದರಿಂದ ಜೀವನೋಪಾಯಕ್ಕೆ ಅಡ್ಡಿಯಾಗಿದ್ದು, ಅದನ್ನು ಪುನರಾರಂಭಿಸಬೇಕು ಎಂದು ಮನವಿ ಮಾಡಿದ್ದರು. ಜೀವವೂ ಉಳಿಯಬೇಕು ಮತ್ತು ಜೀವನೋಪಾಯವೂ ನಡೆಯಬೇಕು ಎಂಬ ಕಾರಣಕ್ಕಾಗಿ ಸಫಾರಿಯನ್ನು ನಿಯಂತ್ರಿತವಾಗಿ ಪುನರಾರಂಭ ಮಾಡುವ ಕುರಿತು ಸುದೀರ್ಘ ಚರ್ಚೆ ನಡೆಯಿತು ಎಂದರು.

ಸಫಾರಿಯಿಂದ ಬರುವ ಒಟ್ಟು ಆದಾಯದ ಮೂರನೇ ಒಂದು ಭಾಗದಷ್ಟು ಹಣವನ್ನು ಅರಣ್ಯದಂಚಿನ ಗ್ರಾಮಗಳ ಸ್ಥಳೀಯ ಸಮುದಾಯದವರಿಗೆ ಕೌಶಲ ಅಭಿವೃದ್ಧಿಗಾಗಿ, ಜಾನುವಾರುಗಳಿಗೆ ಮೇವು ಬೆಳೆಸಲು ಬಳಸಲಾಗುವುದು ಎಂದರು.

▸11

ಚೀನಾ ನಿರ್ಮಿತ 'ರೋಬೊಶ್ವಾನ' ಪ್ರದರ್ಶನ

ನವದೆಹಲಿ: ನೊಯಿಡಾದ ಗಲ್ಗೋಟಿಯಾಸ್ ವಿಶ್ವವಿದ್ಯಾಲಯದ ಪ್ರತಿನಿಧಿಗಳು ಇಲ್ಲಿ ನಡೆಯುತ್ತಿರುವ ಎ.ಐ ಶೃಂಗದಲ್ಲಿ ಚೀನಾ ನಿರ್ಮಿತ 'ರೋಬೊಶ್ವಾನ' ಪ್ರದರ್ಶಿಸಿದ್ದು ವಿವಾದಕ್ಕೆ ಕಾರಣವಾಗಿದೆ.

ಈ ಘಟನೆಯನ್ನು ಪ್ರಸ್ತಾಪಿಸಿ ವಿರೋಧ ಪಕ್ಷಗಳು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರವನ್ನು ಟೀಕಿಸಿವೆ. ಈ ಬೆಳವಣಿಗೆಯಿಂದ ಮುಜುಗರಕ್ಕೆ ಒಳಗಾದ ಸಂಘಟಕರು, ಶೃಂಗ ಸಭೆಯಿಂದ ಹೊರನಡೆಯುವಂತೆ ಗಲ್ಗೋಟಿಯಾಸ್ ವಿ.ವಿ ಪ್ರತಿನಿಧಿಗಳಿಗೆ ಸೂಚಿಸಿದ್ದಾರೆ.

'ಭಾರತದ ಪ್ರತಿಭೆಯನ್ನು ಬಳಸಿಕೊಳ್ಳುವ ಬದಲು ಚೀನಾದ ಉತ್ಪನ್ನಗಳನ್ನು ಎ.ಐ ಶೃಂಗ ಸಭೆಯಲ್ಲಿ ಪ್ರದರ್ಶಿಸಲಾಗಿದೆ. ಇದರಿಂದ ದೇಶದ ಘನತೆಗೆ ಕುಂದು ಉಂಟಾಗಿದೆ' ಎಂದು ರಾಹುಲ್ ಗಾಂಧಿ ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

▸10

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಬಸ್ ಸಂಚಾರಕ್ಕೆ ಅಡ್ಡಿಯಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ನಿಗಮಗಳ ನೌಕರರ ಬೇಡಿಕೆ ಈಡೇರಿಸದೇ ಇರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ಫೆ.19ರಂದು ಬೆಂಗಳೂರು ಚಲೊ ನಡೆಯಲಿದೆ.

ಬಸ್ ಸಂಚಾರ ಎಂದಿನಂತೆ ಇರಲಿದೆ. ಗುರುವಾರ ಸಂಜೆಯ ಒಳಗೆ ಸರ್ಕಾರ ಯಾವ ರೀತಿ ಸ್ಪಂದಿಸಲಿದೆ ಎಂಬುದನ್ನು ನೋಡಿಕೊಂಡು ಮುಂದಿನ ನಡೆ ಬಗ್ಗೆ ನಿರ್ಧರಿಸಲಾಗುವುದು ಎಂದು ಸಂಘಟನೆಯ ಮುಖಂಡರು ತಿಳಿಸಿದ್ದಾರೆ.

38 ತಿಂಗಳ ಹಿಂಬಾಕಿ ನೀಡಿಲ್ಲ. 2024ರ ಜನವರಿಯಲ್ಲಿ ವೇತನ ಪರಿಷ್ಕರಣೆ ನಡೆಸಬೇಕಿತ್ತು. ಹಲವು ಬಾರಿ ಸರ್ಕಾರದೊಂದಿಗೆ ಮಾತುಕತೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಈಗ ಏಕಪಕ್ಷೀಯವಾಗಿ ಸಭೆ ನಡೆಸಿ, ನಿರ್ಧಾರ ಕೈಗೊಂಡಿರುವುದನ್ನು ವಿರೋಧಿಸಿ ಚಲೊ ನಡೆಸಲಾಗುತ್ತಿದೆ ಎಂದು ಕ್ರಿಯಾ ಸಮಿತಿಯ ಸಂಚಾಲಕ ಬಿ. ಜಯದೇವ ಅರಸು ಮಾಹಿತಿ ನೀಡಿದ್ದಾರೆ.

▸5

ಕೆರೆ ಬಫರ್ ವಲಯಕ್ಕೆ ಕತ್ತರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಗಳ 'ಸಂರಕ್ಷಿತ ಪ್ರದೇಶ'ದ (ಬಫರ್ ವಲಯ) ಕಡಿತಕ್ಕೆ ರಾಜ್ಯಪಾಲರ ಸಮ್ಮತಿ ದೊರೆತಿದ್ದು, ಬಫರ್ ವಲಯದ ಪ್ರಮಾಣವನ್ನು ಪರಿಷ್ಕರಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಈ ಉದ್ದೇಶಕ್ಕಾಗಿ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಕೆಟಿಸಿಡಿಎ) ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದ್ದ ಸರ್ಕಾರ, 2025ರ ಆಗಸ್ಟ್‌ನಲ್ಲಿ ನಡೆದ ವಿಧಾನ ಮಂಡಲ ಅಧಿವೇಶನ ಮಸೂದೆಗೆ ಅಂಗೀಕಾರ ಪಡೆದಿತ್ತು. ಅದನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗಿತ್ತು. ಎರಡು ಬಾರಿ ವಿವರಣೆ ಕೇಳಿದ್ದ ರಾಜ್ಯಪಾಲರು, ಅಂತಿಮವಾಗಿ ಇದೇ 16ರಂದು ಅಂಕಿತ ಹಾಕಿದ್ದಾರೆ. ಕೆರೆ ಹಾಗೂ ರಾಜಕಾಲುವೆಗಳ ಬಫರ್ ವಲಯ ಕಡಿಮೆ ಮಾಡಲು ಮುಖ್ಯ ಕಾರ್ಯದರ್ಶಿ ನೇತೃತ್ವದ ಅಧಿಕಾರಿಗಳ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಅದರನ್ವಯ ಮಸೂದೆ ಸಿದ್ಧಪಡಿಸಲಾಗಿತ್ತು.

▸7

ಕೆರೆಗಳ ಬಫರ್ ವಲಯ (ತಿದ್ದುಪಡಿ ಕಾಯ್ದೆಯಂತೆ)

ಕೆರೆ ವಿಸ್ತೀರ್ಣ	ಬಫರ್ ವಲಯ
5 ಗುಂಟೆವರೆಗೆ	0
5 ಗುಂಟೆಯಿಂದ 10 ಗುಂಟೆ	1 ಮೀಟರ್
10 ಗುಂಟೆಯಿಂದ 1 ಎಕರೆ	3 ಮೀಟರ್
1 ಎಕರೆಯಿಂದ 10 ಎಕರೆ	6 ಮೀಟರ್
10 ಎಕರೆಯಿಂದ 25 ಎಕರೆ	12 ಮೀಟರ್
25 ಎಕರೆಯಿಂದ 100 ಎಕರೆ	24 ಮೀಟರ್
100 ಎಕರೆಗೂ ಹೆಚ್ಚು	30 ಮೀಟರ್

* ಈ ಹಿಂದೆ ಎಲ್ಲ ಕೆರೆಗಳಿಗೂ 30 ಮೀಟರ್ ಬಫರ್ ವಲಯ ಇತ್ತು

ಮುಸ್ಲಿಂ ಮೀಸಲು ರದ್ದು

ಮಹಾರಾಷ್ಟ್ರ

ಮುಂಬೈ (ಪಿಟಿಐ): ಉದ್ಯೋಗ ಮತ್ತು ಶಿಕ್ಷಣದಲ್ಲಿ ಮುಸ್ಲಿಂ ಸಮುದಾಯಕ್ಕೆ ನೀಡಿದ್ದ ಶೇ 5ರಷ್ಟು ಮೀಸಲಾತಿಯನ್ನು ಮಹಾರಾಷ್ಟ್ರ ಸರ್ಕಾರ ರದ್ದುಗೊಳಿಸಿದೆ.

ಮಂಗಳವಾರದಿಂದಲೇ ಇದು ಅನುಷ್ಠಾನಗೊಂಡಿದೆ.

ಮುಸ್ಲಿಂ ಸಮುದಾಯಕ್ಕೆ ಶೇ 5ರಷ್ಟು ಮೀಸಲಾತಿ ನೀಡುವ ಸುಗ್ರೀವಾಜ್ಞೆಗೆ ನ್ಯಾಯಾಲಯ ಮಧ್ಯಂತರ ತಡೆ ನೀಡಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರ ತಿಳಿಸಿದೆ. ಈ ಹಿಂದಿನ ಕಾಂಗ್ರೆಸ್–ಎನ್‌ಸಿಪಿ ಸರ್ಕಾರವು ಮರಾಠಿಗರಿಗೆ ಶೇ 16ರಷ್ಟು, ಮುಸ್ಲಿಮರಿಗೆ ಶೇ 5ರಷ್ಟು ಮೀಸಲಾತಿ ನೀಡಿ ಸುಗ್ರೀವಾಜ್ಞೆ ಹೊರಡಿಸಿತ್ತು.

ಬಿಜೆಪಿಯು ಪಕ್ಷದಲ್ಲಿರುವ ಮತ್ತು ಮಿತ್ರಪಕ್ಷಗಳ ಮುಸ್ಲಿಂ ನಾಯಕರಿಗೆ ಸರಿಯಾದ ಗೌರವ ನೀಡುವುದಿಲ್ಲ ಎಂಬುದಕ್ಕೆ ಈ ನಿರ್ಧಾರವೇ ಸಾಕ್ಷಿ
ಕ್ಲೈಡ್ ಕ್ರಾಸ್ಟೊ, ಎನ್‌ಸಿಪಿ (ಎಸ್‌ಪಿ) ವಕ್ತಾರ

ಅಲ್ಪಸಂಖ್ಯಾತ ಸಮುದಾಯದವರು ಐಎಎಸ್ ಅಧಿಕಾರಿಗಳಾಗುವುದು ಆಡಳಿತಾರೂಢ ಪಕ್ಷಕ್ಕೆ ಇಷ್ಟವಿಲ್ಲ. ಅವರು ಆಟೊ ಚಾಲಕರಾಗಿರಬೇಕು ಎಂದು ಅದು ಬಯಸುತ್ತದೆ
ಇಮ್ತಿಯಾಜ್ ಜಲೀಲ್, ಎಐಎಂಐಎಂ ನಾಯಕ

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಗಸ ಇರಲಿದ್ದು, ಮಧ್ಯಾಹ್ನದ ನಂತರ ಭಾಗಶಃ ಮೋಡ ಆವರಿಸಲಿದೆ.

ನಗರದಲ್ಲಿ 'ಇ.ವಿ.ರೆಡಿ' ವಾಹನ ಮೇಳ 21ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಧ್ಯಮ ಸಂಸ್ಥೆ 'ನ್ಯೂಸ್ ಫಸ್ಟ್' ಶನಿವಾರದಿಂದ ಸೋಮವಾರ ದವರೆಗೆ ನಗರದಲ್ಲಿ 'ಇ.ವಿ.ರೆಡಿ' ಹೆಸರಿನ ವಿದ್ಯುತ್ ಚಾಲಿತ ವಾಹನಗಳ ಮೇಳವನ್ನು ಆಯೋಜಿಸಿದೆ.

ಇದು ಅರಮನೆ ಮೈದಾನದ 'ತ್ರಿಪುರ ವಾಸಿನಿ'ಯಲ್ಲಿ ನಡೆಯಲಿದೆ. ಸಾರ್ವಜನಿಕರಿಗೆ ಪ್ರವೇಶ ಮುಕ್ತವಾಗಿ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ. ಈ ಕಾರ್ಯಕ್ರಮಕ್ಕೆ ಕೇಂದ್ರ ಬೃಹತ್ ಕೈಗಾರಿಕಾ ಸಚಿವಾಲಯದ ನೆರವು ಇದೆ.

ದೇಶದ ಹಾಗೂ ವಿದೇಶಗಳ ಮುಂಚೂಣಿ ಇ.ವಿ. ಬ್ರ್ಯಾಂಡ್‌ಗಳು, ನೀತಿ ನಿರೂಪಕರು, ಉದ್ಯಮದ ಪ್ರಮುಖರು, ಗ್ರಾಹಕರು ಒಂದೆಡೆ ಸೇರುವ ಸಮಾವೇಶ ಇದು. ಟಾಟಾ ಇ.ವಿ., ಟಾಟಾ ಮೋಟರ್ಸ್ ಕಮರ್ಷಿಯಲ್ ವೆಹಿಕಲ್ಸ್, ಮಹೀಂದ್ರ ಎಲೆಕ್ಟ್ರಿಕ್ ಆಟೊ ಮೊಬೈಲ್ ಲಿಮಿಟೆಡ್, ಅಶೋಕ್ ಲೇಲ್ಯಾಂಡ್, ಸ್ವಿಚ್ ಮೊಬಿಲಿಟಿ, ಕಿಯಾ ಇಂಡಿಯಾ, ಮೋರಿಸ್ ಗರಾಜಸ್, ಏಥರ್, ಟಿವಿಎಸ್ ಮೋಟರ್ ಕಂಪನಿ, ವಿಡಾ (ಹೀರೊ) ಸೇರಿ ಹಲವು ಕಂಪನಿಗಳು ಭಾಗವಹಿಸುತ್ತಿವೆ. ಇ.ವಿ. ಕುರಿತ ಅಪನಂಬಿಕೆಗಳು ಹಾಗೂ ವಾಸ್ತವಗಳ ಬಗ್ಗೆ ಒಂದು ಗೋಷ್ಠಿ ನಡೆಯಲಿದೆ. ಇದು ಬ್ಯಾಟರಿ ಬಾಳಿಕೆ, ಸುರಕ್ಷತೆ, ವಾಹನಗಳ ಮರುಮಾರಾಟ ಮೌಲ್ಯ, ಮಾಲಕತ್ವದ ವೆಚ್ಚ ಕುರಿತಾಗಿನ ಕಳವಳಗಳನ್ನು ಪರಿಹರಿಸುವ ಯತ್ನ ನಡೆಸಲಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಸ್ಪಾ ಮಾಲೀಕನ ಅಪಹರಣ: ಬಂಧನ

ಎಲೆಕ್ಟ್ರಾನಿಕ್ ಸಿಟಿ ಪೊಲೀಸರ ಕಾರ್ಯಾಚರಣೆ • ಕಾರು, ಮಾರಕಾಸ್ತ್ರ ವಶ

ಅಕ್ಷಯ್, ಮಂಜುನಾಥ್, ಪ್ರಜ್ವಲ್

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪಾ ಮಾಲೀಕರೊಬ್ಬರನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಮೂವರನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಗೊಟ್ಟಿಗೆರೆ ನಿವಾಸಿಗಳಾದ ಅಕ್ಷಯ್, ಮಂಜುನಾಥ್, ಪ್ರಜ್ವಲ್ ಬಂಧಿತರು. ಅವರಿಂದ ಕಾರು, ಮಾರಕಾಸ್ತ್ರ, ಮೂರು ಮೊಬೈಲ್ ಹಾಗೂ ₹9 ಸಾವಿರ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬೇಗೂರಿನ ಅಕ್ಷಯ್‌ನಗರದಲ್ಲಿ ಇರುವ ಸ್ಪಾ ವ್ಯವಸ್ಥಾಪಕ ಮುನ್ನು ಕುಮಾರ್ ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸ್ಪಾ ಮಾಲೀಕ ಆಶಿತ್ ಕುಮಾರ್ ಅವರನ್ನು ಆರೋಪಿಗಳು ಅಪಹರಿಸಿ ₹2 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಪೊಲೀಸರು ಹೇಳಿದರು.

'ಆಶಿತ್ ಕುಮಾರ್ ಹಾಗೂ ಮುನ್ನು ಕುಮಾರ್ ಅವರು ಸ್ಪಾ ಸೆಂಟರ್‌ನ ಬಾಗಿಲು ಹಾಕಿ, ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಬೆಟ್ಟದಾಸನಪುರದ ಅರೇನಾ ಸ್ಪೋರ್ಟ್ಸ್ ರಸ್ತೆಯಲ್ಲಿ ಸಾಗು ವಾಗ ಕಾರಿನಲ್ಲಿ ಬಂದಿದ್ದ ಮೂವರು, ದ್ವಿಚಕ್ರ ವಾಹನ ಅಡ್ಡಗಟ್ಟಿದ್ದರು. ಬಳಿಕ, ಇಬ್ಬರ ಮೇಲೂ ಆರೋಪಿಗಳು ಮಾರಕಾಸ್ತ್ರಗಳಿದ ಹಲ್ಲೆ ಮಾಡಿದ್ದರು. ಆಶಿತ್ ಅವರನ್ನು ಕಾರಿನಲ್ಲಿ ಅಪಹರಿಸಿದ್ದರು. ಮುನ್ನು ಕುಮಾರ್ ಅವರು ಆರೋಪಿಗಳಿಂದ ತಪ್ಪಿಸಿಕೊಂಡು ಹೋಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

'ತನಿಖೆ ನಡೆಸಿದಾಗ ಎಸ್.ಬಿಂಗಿಪುರ ದಲ್ಲಿ ಆರೋಪಿಗಳು ಅಡಗಿರುವುದು ಪತ್ತೆಯಾಗಿತ್ತು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಪಹರಣದ ಬಳಿಕ ಸ್ಪಾ ವ್ಯವಸ್ಥಾಪಕರಿಗೆ ಕರೆ ಮಾಡಿದ್ದ ಆರೋಪಿಗಳು, ₹2 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಹಣ ಕೊಡದಿದ್ದರೆ, ಕೊಲೆ ಮಾಡುವುದಾಗಿ ಬೆದರಿಸಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿ ಮಂಜುನಾಥ್ ಅವರು ಗೊಟ್ಟಿಗೆರೆಯ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗೆ ಸಂಬಂಧಿಸಿದ ಹಣವನ್ನು ದುರ್ಬಳಕೆ ಮಾಡಿಕೊಂಡು ಆ ಹಣವನ್ನು ಆನ್‌ಲೈನ್ ಗೇಮ್‌ಗೆ ಬಳಸಿದ್ದರು.

ಅಲ್ಲಿಯೂ ಹಣ ಕಳೆದುಕೊಂಡಿದ್ದರು. ಬಳಿಕ, ಸ್ನೇಹಿತರ ಜತೆಗೆ ಸೇರಿಕೊಂಡು ಸ್ಪಾ ಮಾಲೀಕ ಹಾಗೂ ವ್ಯವಸ್ಥಾಪಕರನ್ನು ಅಪಹರಿಸಲು ಸಂಚು ರೂಪಿಸಿದ್ದರು. ಬಂಧಿತರನ್ನು ವಿಚಾರಣೆಗೆ ಕಸ್ಟಡಿಗೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ನೇಮಕಾತಿ: ವಿಶ್ವವಿದ್ಯಾಲಯವನ್ನೇ ಘಟಕವಾಗಿಸಲು ಸಮ್ಮತಿ

ಬೆಂಗಳೂರು: ನೇಮಕಾತಿ ಪ್ರಕ್ರಿಯೆಯಲ್ಲಿ ಒಳಮೀಸಲಾತಿ ಅನ್ವಯ ಮಾಡುವಾಗ ಆಯಾ ವಿಶ್ವವಿದ್ಯಾಲಯವನ್ನೇ ಘಟಕವಾಗಿ ಪರಿಗಣಿಸಲು ಸಂಪುಟ ಉಪಸಮಿತಿ ಸಮ್ಮತಿಸಿದ್ದು, ಅಗತ್ಯ ನಿಯಮಗಳನ್ನು ರೂಪಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಒಳ ಮೀಸಲಾತಿ ಹಂಚಿಕೆಯಲ್ಲಿ ಎ, ಬಿ, ಸಿ ಎಂದು ವರ್ಗೀಕರಣ ಮಾಡಲಾಗಿದೆ. ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಇರುವ ವರ್ಗವಾರು (ಆಯಾ ವಿಷಯ) ನೇಮಕಾತಿ ಸಮಯದಲ್ಲಿ ಒಂದೇ ಹುದ್ದೆಗಳು ಇರುವಾಗ ಒಳ ಮೀಸಲಾತಿ ಗುಂಪಿನ 'ಎ' ವರ್ಗಕ್ಕೆ ಮಾತ್ರವೇ ಉದ್ಯೋಗ ದೊರೆಯುತ್ತಿದೆ. ಉಳಿದ ಎರಡೂ ವರ್ಗಗಳ ಅಭ್ಯರ್ಥಿಗಳು ಅವಕಾಶ ವಂಚಿತರಾಗುತ್ತಾರೆ ಎಂಬ ದೂರುಗಳ ಆಧಾರದಲ್ಲಿ ಸಮಿತಿ ಇಂತಹ ನಿರ್ಧಾರಕ್ಕೆ ಬಂದಿದೆ ಎಂದು ವಿವರಿಸಿದ್ದಾರೆ.



ನೇಮಕಾತಿ ಮಾಡುವಾಗ ವಿಶ್ವವಿದ್ಯಾಲಯವನ್ನೇ ಒಂದು ಘಟಕವನ್ನಾಗಿ ಪರಿಗಣಿಸಿದರೆ, ಆಗ ಮೂರೂ ವರ್ಗಗಳಿಗೂ ಅವಕಾಶ ದೊರೆಯುತ್ತದೆ ಎನ್ನುವುದು ಪರಿಶಿಷ್ಟ ಸಮುದಾಯಗಳ ಬೇಡಿಕೆ. ಪರಿಶಿಷ್ಟರ 101 ಜಾತಿಗಳಿಗೂ ಸಮಾನ ನ್ಯಾಯ ಹಂಚಿಕೆಗೆ ಇದೇ ಮಾರ್ಗದ ಅನುಸರಣೆ ಸೂಕ್ತವಾಗಿದೆ ಎಂದಿದ್ದಾರೆ.

'ಅಧಿಕಾರಿಗಳೇ ಕ್ರಮ ವಹಿಸಲಿ'

ಬೆಂಗಳೂರು: 'ನಗರದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ವಾಹನ ಸಂಚಾರ ದಟ್ಟಣೆಯನ್ನು ನಿರ್ವಹಿಸಲು ಹೈಕೋರ್ಟ್ ಉಸ್ತುವಾರಿಯಲ್ಲಿ ಉನ್ನತ ಮಟ್ಟದ ಸಮಿತಿ ರಚನೆ ಮಾಡಬೇಕು' ಎಂದು ಕೋರಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಿಲೇವಾರಿ ಮಾಡಿದೆ.

ಈ ಸಂಬಂಧ ಹೈಕೋರ್ಟ್‌ನ ಹಿರಿಯ ವಕೀಲ ಎ.ವಿ. ಅಮರನಾಥನ್ ಸಲ್ಲಿಸಿದ್ದ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಮರನಾಥನ್, 'ಬೆಂಗಳೂರು ವಿಶ್ವದಲ್ಲೇ 2ನೇ ಸಂಚಾರ ದಟ್ಟಣೆಯ ನಗರವಾಗಿದ್ದು, ಸಾರ್ವಜನಿಕರು ದಿನನಿತ್ಯ ಪರದಾಟ ಅನುಭವಿಸುತ್ತಿದ್ದಾರೆ. ಇಲ್ಲಿನ ಸಂಚಾರ ಸಮಸ್ಯೆಯ ಬಗ್ಗೆ ತಮ್ಮ ಮಕ್ಕಳೂ ದೂರಿದ್ದಾರೆಂದು ಸ್ವತಃ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಹೇಳಿದ್ದಾರೆ. ಆದ್ದರಿಂದ, ಸಂಚಾರ ದಟ್ಟಣೆಯ ಪರಿಹಾರಕ್ಕೆ ಹೈಕೋರ್ಟ್ ಉಸ್ತುವಾರಿಯಲ್ಲಿ ತಜ್ಞರ ಸಮಿತಿ ರಚನೆ ಮಾಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನಗರದಲ್ಲಿನ ಸಂಚಾರ ದಟ್ಟಣೆ ನಿವಾರಣೆಗೆ ಸಂಬಂಧಿಸಿದ ಅಧಿಕಾರಿಗಳೇ ಸೂಕ್ತ ಕ್ರಮ ಕೈಗೊಳ್ಳುತ್ತಾರೆಂದು ಕೋರ್ಟ್ ನಿರೀಕ್ಷಿಸುತ್ತದೆ. ಹಾಗಾಗಿ, ಈ ವಿಚಾರದಲ್ಲಿ ಕೋರ್ಟ್ ನಿರ್ದೇಶನ ನೀಡುವ ಅಗತ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ಇತ್ಯರ್ಥಗೊಳಿಸಿತು.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಇಂ/ಸನೀ/ಸ.ಇಂ–1&5/ಟೆಂಡರ್ ಪ್ರಕಟಣೆ ಸಂ.32/2025–26 ದಿನಾಂಕ: 18.02.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರು ಲೆಕ್ಕ ಶೀರ್ಷಿಕೆ 4702- SCP (A&B) ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-4 ರ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸುವುದು, ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :– ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕುಗಳಲ್ಲಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳನ್ನೊಳಗೊಂಡಂತೆ **ಒಟ್ಟು 3 ಕಾಮಗಾರಿಗಳು.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.160.29 (ಕನಿಷ್ಠ) & ರೂ.200.81 (ಗರಿಷ್ಠ)** ಇಎಂಡಿ: **ರೂ.2,40,500/– (ಕನಿಷ್ಠ) & ರೂ.3,01,300/– (ಗರಿಷ್ಠ).**

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 9 ತಿಂಗಳು ಮಳೆಗಾಲ ಸೇರಿದಂತೆ.

(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **18.02.2026 ಸಂಜೆ 16.30** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **27.02.2026 ಸಂಜೆ 15.00** ಗಂಟೆಯವರೆಗೆ. (3) ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : **24.02.2026 ಬೆಳಗ್ಗೆ 11.30** ಗಂಟೆಗೆ, (4) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **28.02.2026 ಸಂಜೆ 16.30** ಗಂಟೆಯವರೆಗೆ, (5) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **02.03.2026 ಬೆಳಗ್ಗೆ 11.30** ಗಂಟೆಗೆ, (6) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 4 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

DIPR/CP/5734/SHIRDI SAI/2025-26

ಗೋವಿಂದರಾಜನಗರ ಠಾಣಾ ವ್ಯಾಪ್ತಿಯ ಸಂಜೀವಿನಿ ನಗರದಲ್ಲಿ ಕೃತ್ಯ

ಪತ್ನಿ ಕೊಂದು ಪತಿ ಆತ್ಮಹತ್ಯೆಗೆ ಯತ್ನ: ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಕೊಲೆ ಮಾಡಿದ ಪತಿಯನ್ನು ಗೋವಿಂದರಾಜನಗರ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಸಂಜೀವಿನಿನಗರ ನಿವಾಸಿ ಕುಮಾರ್ (66) ಅವರು ಪತ್ನಿ ದೇವಮ್ಮ (58) ಅವರನ್ನು ಕೊಲೆ ಮಾಡಿ, ಬಳಿಕ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಆರೋಪಿಯನ್ನು ಬಂಧಿಸಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕುಮಾರ್ ಹಾಗೂ ದೇವಮ್ಮ ಅವರ ನಡುವೆ ಮಂಗಳವಾರ ರಾತ್ರಿ ಜಗಳ ನಡೆದಿತ್ತು. ನಂತರ, ದಂಪತಿ ಊಟ ಮಾಡಿ ಮಲಗಿದ್ದರು. ತಡರಾತ್ರಿ ನಿದ್ದೆ ಯಿಂದ ಎಚ್ಚರಗೊಂಡಿದ್ದ ಕುಮಾರ್, ಪತ್ನಿಯ ಕತ್ತಿನ ಭಾಗಕ್ಕೆ ಮಚ್ಚಿನಿಂದ ಹೊಡೆದು ಕೊಲೆ ಮಾಡಿದ್ದಾರೆ. ಬಳಿಕ, ಮಗ ಮಂಜುನಾಥ್‌ಗೆ ಕರೆ ಮಾಡಿ ಕೊಲೆ ವಿಚಾರ ತಿಳಿಸಿದ್ದಾರೆ. ಪುತ್ರ ಮನೆಗೆ ಬಂದು ನೋಡುವಷ್ಟರಲ್ಲಿ ದೇವಮ್ಮ ಅವರು ಮೃತಪಟ್ಟಿದ್ದರು ಎಂದು ಪೊಲೀಸರು ಹೇಳಿದರು.

ತಮಿಳುನಾಡಿನ ಕುಮಾರ್ ಮತ್ತು ದೇವಮ್ಮ ದಂಪತಿ ಸಂಜೀವಿನಿನಗರದಲ್ಲಿ ನೆಲಸಿದ್ದರು. ಕುಮಾರ್ ಅವರು ಗಾರೆ ಕೆಲಸ ಮಾಡುತ್ತಿದ್ದರು. ದೇವಮ್ಮ ಅವರು ರೈಲು ನಿಲ್ದಾಣದಲ್ಲಿ ಸ್ವಚ್ಛತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು.

ದಂಪತಿಗೆ ಮೂವರು ಮಕ್ಕಳಿದ್ದು, ಈ ಪೈಕಿ ಇಬ್ಬರು ಹೆಣ್ಣು ಮಕ್ಕಳು ಮದುವೆಯಾಗಿ ಬೇರೆಡೆ ನೆಲಸಿದ್ದಾರೆ. ಮಗ ಮಂಜುನಾಥ್, ಮದುವೆಯಾಗಿ ಸಂಜೀವಿನಿನಗರದಲ್ಲೇ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ತಪ್ಪು ತಿಳಿವಳಿಕೆಯಿಂದ ಕೃತ್ಯ?: 'ಕುಮಾರ್ ದಂಪತಿ ಹಾಗೂ ಕುಟುಂಬದ ಸದಸ್ಯರು ಜನವರಿಯಲ್ಲಿ ಟೆಂಪೊ ಟ್ರಾವೆಲರ್‌ನಲ್ಲಿ ಕೇರಳಕ್ಕೆ ಪ್ರವಾಸ ಹೋಗಿದ್ದರು. ಆಗ ಟೆಂಪೊ ಟ್ರಾವೆಲರ್‌ನ ಚಾಲಕ, ದೇವಮ್ಮ ಅವರಿಗೆ ಪರಿಚಯವಾಗಿದ್ದರು. ಬಳಿಕ ದೇವಮ್ಮ ಹಾಗೂ ಚಾಲಕ ಮೊಬೈಲ್‌ನಲ್ಲಿ ಆಗಾಗ್ಗೆ ಮಾತನಾಡುತ್ತಿದ್ದರು. ಚಾಲಕನ ಜತೆಗೆ ಮಾತನಾಡುತ್ತಿರುವುದು ಕುಮಾರ್ ಅವರಿಗೆ ಇಷ್ಟ ಇರಲಿಲ್ಲ. ಪದೇ ಪದೇ ಪ್ರಶ್ನೆ ಮಾಡುತ್ತಿದ್ದರು. ಇಬ್ಬರ ಸ್ನೇಹವನ್ನು ತಪ್ಪಾಗಿ ತಿಳಿದು ಕೃತ್ಯ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಪತ್ನಿ ಕೊಲೆ ಮಾಡಿದ ಬಳಿಕ ಕುಮಾರ್, ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಮನೆಗೆ ಬಂದಿದ್ದ ಪುತ್ರ ಅವರನ್ನು ರಕ್ಷಿಸಿದ್ದರು ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿ ಆತ್ಮಹತ್ಯೆ

ಕನಕಪುರ: ಪರೀಕ್ಷೆಗೆ ಚೆನ್ನಾಗಿ ಓದು ಎಂದು ಪೋಷಕರು ಬುದ್ಧಿಮಾತು ಹೇಳಿದ್ದಕ್ಕೆ ಬೇಸರಗೊಂಡ ದ್ವಿತೀಯ ಪಿಯು ವಿದ್ಯಾರ್ಥಿ ಕಾಲೇಜಿನ ಕಟ್ಟಡದ 2ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಶ್ರೀನಿವಾಸ್

ಆದಿತ್ಯ ಪಿಯು ಕಾಲೇಜಿನ ಶ್ರೀನಿವಾಸ್ (18) ಮೃತ ವಿದ್ಯಾರ್ಥಿ. ತಾಲ್ಲೂಕಿನ ಸಂತೆ ಕೋಡಿಹಳ್ಳಿಯಲ್ಲಿ ಬೇಕರಿ ಹೊಂದಿರುವ ಮೂಲತಃ ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ದಂಟಳ್ಳಿ ಗ್ರಾಮದ ಮಹದೇವ ಪ್ರಭು ಅವರ ಪುತ್ರನಾದ ಶ್ರೀನಿವಾಸ್, ವಾಣಿಜ್ಯ ವಿಭಾಗದಲ್ಲಿ ಓದುತ್ತಿದ್ದ. ಪರೀಕ್ಷೆ ಸಮೀಪಿಸಿದರೂ ಶ್ರೀನಿವಾಸ್ ಓದಿನ ಕಡೆಗೆ ಸರಿಯಾಗಿ ಗಮನ ಕೊಡದೆ ಮೊಬೈಲ್‌ನಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದ. ಪೋಷಕರು ಬುದ್ಧಿವಾದ ಹೇಳುತ್ತಿದ್ದರು ಎಂದು ಕನಕಪುರ ಟೌನ್ ಪೊಲೀಸರು ತಿಳಿಸಿದರು.

ರೌಡಿ ಬಿಕ್ಲು ಶಿವು ಕೊಲೆ ಪ್ರಕರಣ

ಶಾಸಕ ಬೈರತಿ ವಿಚಾರಣೆ ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಸಿಐಡಿ ಪೊಲೀಸರ ಕಸ್ಟಡಿಯಲ್ಲಿರುವ ಐದನೇ ಆರೋಪಿ, ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ.

ನ್ಯಾಯಾಲಯದ ಅನುಮತಿ ಪಡೆದು ಏಳು ದಿನ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಮೂರು ದಿನಗಳಿಂದ ಕೊಲೆ ಪ್ರಕರಣದ ಸಂಬಂಧ ವಿಚಾರಣೆ ನಡೆಸಲಾಗುತ್ತಿದೆ. ಬಂಧಿತರ ಪೈಕಿ ಕೆಲವು ಆರೋಪಿಗಳು ಹಾಗೂ ಶಾಸಕರು ಹೊರರಾಜ್ಯಕ್ಕೆ ತೆರಳಿ ಸುತ್ತಾಟ ನಡೆಸಿರುವ ವಿಡಿಯೊ ಹಾಗೂ ಫೋಟೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ್ದವು. ಆ ಎಲ್ಲ ಫೋಟೊ, ವಿಡಿಯೊಗಳನ್ನು ಬೈರತಿ ಅವರ ಎದುರಿಗಿಟ್ಟು ಪ್ರಶ್ನೆ ಕೇಳಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗುತ್ತಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಬೈರತಿ ಬಸವರಾಜ

'ಕೆಲವು ಪ್ರಶ್ನೆಗಳಿಗೆ ಅವರು ಸಮರ್ಪಕ ಉತ್ತರ ನೀಡುತ್ತಿಲ್ಲ. 'ನನಗೆ ಗೊತ್ತಿಲ್ಲ. ಹೊರರಾಜ್ಯಕ್ಕೆ ತೆರಳಿದಾಗ ಹಾಗೂ ನನ್ನ ಕಚೇರಿಗೆ ಯಾರೊ ಬಂದು ನನ್ನ ಜತೆಗೆ ಫೋಟೊ ತೆಗೆಸಿಕೊಂಡಿರಬಹುದು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೋಟೊಗಳಿಗೂ, ನನಗೂ ಸಂಬಂಧ ಇಲ್ಲ. ಕೊಲೆಯಾದ ಬಿಕ್ಲು ಶಿವು ಅವರೂ ನನಗೆ ಪರಿಚಯ ಇರಲಿಲ್ಲ. ಜಮೀನಿಗೆ ವಿವಾದವೂ ನನಗೆ ಗೊತ್ತಿಲ್ಲ ಎಂಬುದಾಗಿ ಹೇಳಿಕೆ ನೀಡಿದ್ದಾರೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಕೊಲೆ ಪ್ರಕರಣದಲ್ಲಿ ತಾಂತ್ರಿಕ ಸಾಕ್ಷ್ಯಾಧಾರ ಕಲೆ ಹಾಕಲಾಗಿದೆ. ಮೊದಲ ಆರೋಪಿ ಜಗ್ಗ ಅಲಿಯಾಸ್ ಜಗದೀಶ್ ಹಾಗೂ ಬೈರತಿ ಬಸವರಾಜ ಅವರ ನಡುವೆ ದೂರವಾಣಿ ಮೂಲಕ ಸಂಭಾಷಣೆ ನಡೆದಿರುವುದಕ್ಕೆ ಪುರಾವೆ ಗಳು ಸಿಕ್ಕಿವೆ. ದೂರವಾಣಿ ಕರೆಗಳ ವಿವರವನ್ನು ಶಾಸಕರ ಎದುರು ತೋರಿಸಿ, ಪ್ರಶ್ನೆ ಕೇಳಿದಾಗ ತದ್ವಿರುದ್ಧವಾದ ಹೇಳಿಕೆ ನೀಡುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

2025ರ ಜುಲೈ 15ರಂದು ಬಿಕ್ಲು ಶಿವು ಅವರ ಕೊಲೆ ನಡೆದಿತ್ತು. ಶಿವು ಅವರ ತಾಯಿ ನೀಡಿದ ದೂರಿನ ಮೇರೆಗೆ ಭಾರತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ, ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿತ್ತು.

ಬಸ್‌ಗೆ ಬೆಂಕಿ: ಕಿಡಿಗೇಡಿಗಳ ಕೃತ್ಯ

ಬೆಂಗಳೂರು: ನಗರದ ಚಂದ್ರಾ ಲೇಔಟ್‌ನ ಬಿಎಂಟಿಸಿ ಡಿಪೊ ಬಳಿ ಖಾಸಗಿ ಬಸ್‌ವೊಂದು ಬೆಂಕಿಗೆ ಆಹುತಿಯಾಗಿದೆ.

ಬಸ್ ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಬಸ್‌ನಲ್ಲಿ ಪ್ರಯಾಣಿಕರು ಯಾರೂ ಇಲ್ಲದ ಕಾರಣ ಪ್ರಾಣ ಹಾನಿ ಸಂಭವಿಸಿಲ್ಲ. ಬೆಂಕಿಯ ಜ್ವಾಲೆ ಬಸ್‌ನ ಅಕ್ಕಪಕ್ಕ ನಿಲುಗಡೆ ಮಾಡಿದ್ದ ಇತರೆ ವಾಹನಗಳಿಗೂ ಹಬ್ಬಿ ಹಾನಿಯಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿಯನ್ನು ನಂದಿಸಿದ್ದಾರೆ.

ಮದ್ಯದ ನಶೆಯಲ್ಲಿ ಕೃತ್ಯ?: ಕಿಡಿಗೇಡಿಗಳು ಮದ್ಯದ ನಶೆಯಲ್ಲಿ ಸಿಗರೇಟ್ ತುಂಡನ್ನು ಎಸೆದಿದ್ದರಿಂದ ಬೆಂಕಿ ಹೊತ್ತಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಬಸ್ ನಿಲ್ದಾಣದಲ್ಲಿ ಇಬ್ಬರು ಓಡಾಟ ನಡೆಸುತ್ತಿದ್ದರು. ಅವರೇ ಕೃತ್ಯ ಎಸಗಿರಬಹುದು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ನಗರಸಭಾ ಕಾರ್ಯಾಲಯ, ರಾಮನಗರ

ಬೆಂಗಳೂರು ದಕ್ಷಿಣ ಜಿಲ್ಲೆ – 562159

ದೂರವಾಣಿ ಸಂ. : 080–27271286 e-mail: itstaff_ulb_ramanagaram@yahoo.com

ಸಂ.: ನಸರಾ/ತಾ.ವಿ./ಟೆಂ./ಸಿ.ಆರ್./2025–26 ದಿನಾಂಕ: 18.02.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ರಾಮನಗರ ನಗರಸಭೆಯ ವಿವಿಧ ಅನುದಾನದಡಿಯಲ್ಲಿ ಈ ಕೆಳಕಂಡ ಸೇವೆಯ ಟೆಂಡರ್‌ನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಬಿಡ್‌ದಾರರು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದು. ಈ ಕೆಳಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ.ಯನ್ನು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರ್‌ನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) **90 ದಿನಗಳವರೆಗೆ** ಮಾನ್ಯತೆ ಇರತಕ್ಕದ್ದು.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ. ಗಳಲ್ಲಿ)
1	DMA/2025-26/RD/ WORK_INDENT55347	42.24	84,480/-	As per KPPP
2	DMA/2025-26/RD/ WORK_INDENT55348	40.00	80,000/-	
3	DMA/2025-26/EL/ WORK_INDENT55390	18.10	45,250/-	
4	DMA/2025-26/EL/ WORK_INDENT55414	16.22	40,550/-	

1) ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 04.03.2026** ರಂದು **ಸಂಜೆ 4:30 ಗಂಟೆವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 05.03.2026** ರಂದು **ಸಂಜೆ 5:30 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 06.03.2026** ರಂದು **ಸಂಜೆ 5.30 ಗಂಟೆಗೆ.**

Note: ಮೇಲಿನ ದಿನಾಂಕಗಳಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ಮುಖಾಂತರ ತಿಳಿಸಲಾಗುವುದು.

ಸಹಿ/– **ಪೌರಾಯುಕ್ತರು** ನಗರಸಭೆ, ರಾಮನಗರ

DIPR/BSD/646/SA/2025-26

ಆಟೊ– ದ್ವಿಚಕ್ರವಾಹನ ಅಪಘಾತ ಎಂಜಿನಿಯರಿಂಗ್ ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಐಐಎಚ್‌ಆರ್ ಸಮೀಪದ ಸರಕು ಸಾಗಣೆ ಆಟೊ ಹಾಗೂ ದ್ವಿಚಕ್ರ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ ಮೃತಪಟ್ಟಿದ್ದಾರೆ.

ಪವನ್

ತೋಟದಗುಡ್ಡದ ಹಳ್ಳಿ ನಿವಾಸಿ ಪವನ್‌ಕುಮಾರ್ (20) ಮೃತ ವಿದ್ಯಾರ್ಥಿ.

ಮಂಗಳವಾರ ಸಂಜೆ 6 ಗಂಟೆ ಸುಮಾರಿಗೆ ಐಐಎಚ್‌ಆರ್ ಸಮೀಪದಲ್ಲಿ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಮಂಗಳವಾರ ಪವನ್‌ಕುಮಾರ್ ಅವರ ಜನ್ಮದಿನವಿತ್ತು. ಸ್ನೇಹಿತರ ಜತೆಗೆ ಜನ್ಮದಿನ ಆಚರಿಸಿಕೊಂಡು ದ್ವಿಚಕ್ರ ವಾಹನದಲ್ಲಿ ಮನೆಗೆ ವಾಪಸ್ ಆಗುತ್ತಿದ್ದರು. ಹೆಸರ ಘಟ್ಟ ಮುಖ್ಯರಸ್ತೆಯ ಐಐಎಚ್‌ಆರ್ ಸಮೀಪ ವೇಗವಾಗಿ ಬಂದ ಸರಕು ಸಾಗಣೆ ಆಟೊವೊಂದು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಕೆಳಕ್ಕೆ ಬಿದ್ದ ಪವನ್‌ಕುಮಾರ್ ಅವರು ಗಂಭೀರವಾಗಿ ಗಾಯಗೊಂಡಿದ್ದರು.

ಪವನ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

'ಅಪಘಾತ ಎಸಗಿದ ಬಳಿಕ ಸರಕು ಸಾಗಣೆ ಆಟೊದ ಚಾಲಕ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿ ಆಗಿದ್ದಾನೆ. ಆತನ ಪತ್ತೆ ಕಾರ್ಯ ನಡೆಯುತ್ತಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಚಿಕ್ಕಬಾಣಾವಾರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಮಾನ ನಿಲ್ದಾಣ: ₹23 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ದೇವನಹಳ್ಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ನಡೆಸಿದ ಎನ್‌ಸಿಬಿ ಅಧಿಕಾರಿಗಳು, ₹23.88 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಬ್ರೆಜಿಲ್ ದೇಶದ ಪ್ರಜೆಯನ್ನು ಎನ್‌ಸಿಬಿ ಅಧಿಕಾರಿಗಳು ಬಂಧಿಸಿದ್ದಾರೆ. ಆರೋಪಿ ದೋಹಾದಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿದ್ದರು.

ಖಚಿತ ಮಾಹಿತಿ ಆಧರಿಸಿ ಮಂಗಳವಾರ ಬೆಳಿಗ್ಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ನಾಲ್ಕು ಕೆ.ಜಿ ಕೊಕೇನ್ ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಲ್ಕು ಹ್ಯಾಂಡ್‌ಬ್ಯಾಗ್‌ಗಳ ತಳಭಾಗದಲ್ಲಿ ಕೊಕೇನ್ ಬಚ್ಚಿಡಲಾಗಿತ್ತು. ಮಾದಕ ವಸ್ತುಗಳ ಸಾಗಣೆಗೆಂದು ಹ್ಯಾಂಡ್‌ಬ್ಯಾಗ್‌ಗಳನ್ನು ವಿಶೇಷವಾಗಿ ವಿನ್ಯಾಸ ಮಾಡಲಾಗಿತ್ತು. ಅದರ ತಳಭಾಗದಲ್ಲಿ ಯಾರಿಗೂ ಪತ್ತೆ ಮಾಡದ ರೀತಿಯಲ್ಲಿ ಡ್ರಗ್ಸ್ ಬಚ್ಚಿಡಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಆರೋಪಿಯ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಎನ್‌ಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

'ಬಡ ಮಕ್ಕಳ ಊಟಕ್ಕೂ ಅನುದಾನ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬಡ ಮತ್ತು ಅನಾಥ ಮಕ್ಕಳು ಹೊಟ್ಟೆಗೆ ಅನ್ನವಿಲ್ಲದೆ ಉಪವಾಸದಿಂದ ಸಾಯುವ ಸ್ಥಿತಿ ಬಂದಿದೆ. ಆದರೆ, ಕಾಂಗ್ರೆಸ್ ಶಾಸಕರಿಗೆ ಅನ್ನ ಜಾಸ್ತಿಯಾಗಿ ವಿದೇಶ ಪ್ರವಾಸ ಮಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

ಕೋವಿಡ್ ಸಮಯದಲ್ಲಿ ತಂದೆ–ತಾಯಿಯನ್ನು ಕಳೆದುಕೊಂಡ ಅನಾಥ ಮಕ್ಕಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ 26,334 ಮಕ್ಕಳನ್ನು ಸಲಹಲಾಗುತ್ತಿದೆ. ಈ ಮಕ್ಕಳ ಊಟ ವ್ಯವಸ್ಥೆಗಾಗಿ ನೀಡಬೇಕಿರುವ ₹75 ಕೋಟಿ ಕಳೆದ ಏಳು ತಿಂಗಳಿಂದ ಬಿಡುಗಡೆ ಮಾಡಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಅಷ್ಟೇ ಅಲ್ಲ ಗೃಹಲಕ್ಷ್ಮಿ ಯೋಜನೆಯ ₹5000 ಕೋಟಿ, ಅನ್ನಭಾಗ್ಯದ ₹750 ಕೋಟಿಗೆ ನಾಮ ಹಾಕಿದ್ದು, ಅನಾಥ ಮಕ್ಕಳ ಹಣವನ್ನೂ ನುಂಗಿ ಹಾಕಿದ್ದಾರೆ ಎಂದು ಕಿಡಿಕಾರಿದರು.

'ಕಳೆದ ಬಜೆಟ್‌ನಲ್ಲಿ ಮೀಸಲಾದ ಹಣವನ್ನೇ ಯೋಜನೆಗಳಿಗೆ ನೀಡಿಲ್ಲ. ಈಗ ಹೊಸ ಬಜೆಟ್ ಮಾಡಲು ತಯಾರಿ ನಡೆಸಿದ್ದಾರೆ. ನಾಲ್ಕು ಸಾರಿಗೆ ನಿಗಮಗಳ ನೌಕರರು 38 ತಿಂಗಳ ಹಿಂಬಾಕಿ ನೀಡಿಲ್ಲವೆಂದು ಹೋರಾಟ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ದಿವಾಳಿಯಾಗಿದೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ. ನಾನು ಸಾರಿಗೆ ಸಚಿವನಾಗಿದ್ದಾಗ ನಷ್ಟವಿತ್ತೊ, ಲಾಭವಿತ್ತೊ ಎಂಬ ಮಾಹಿತಿ ಬಿಡುಗಡೆ ಮಾಡಲಿ. ಶಾಲಾ ಮಕ್ಕಳಿಗೆ ಬಸ್ ಸಿಗದೇ ಟಿಪ್ಪರ್‌ನಲ್ಲಿ ಹೋಗುತ್ತಿದ್ದಾರೆ' ಎಂದರು.

ಗುತ್ತಿಗೆಗಳು ಆಂಧ್ರದ ಪಾಲು: 'ಗುತ್ತಿಗೆದಾರರ ಸಂಘದವರು ಬಿಲ್ ಕೇಳಿದರೆ ನಾಳೆ ಬಾ ಎಂದು ಮುಖ್ಯಮಂತ್ರಿ ಹೇಳುತ್ತಾರೆ. ಆದರೆ, ಸಚಿವರು ದೊಡ್ಡ ಪ್ಯಾಕೇಜ್ ಮಾಡಿ ಆಂಧ್ರಪ್ರದೇಶದ ಗುತ್ತಿಗೆದಾರರಿಗೆ ನೀಡುತ್ತಿದ್ದಾರೆ. ಅವರಿಂದ ಕಮಿಷನ್ ಪಡೆಯುತ್ತಿದ್ದಾರೆ. ಕಲ್ಯಾಣ ಕರ್ನಾಟಕದ ಕಾಮಗಾರಿಗಳನ್ನು ತೆಲಂಗಾಣಕ್ಕೆ ನೀಡಿದ್ದಾರೆ. ಇದರಿಂದ ಸ್ಥಳೀಯ ಗುತ್ತಿಗೆದಾರರಿಗೆ ಸಮಸ್ಯೆಯಾಗಿದೆ' ಎಂದರು

'ಕಸ ವಿಲೇವಾರಿಯ ಟೆಂಡರ್ ಪಡೆಯಲು ಶೇ 7, ಬಿಲ್ ಪಡೆಯಲು ಶೇ7, ಎನ್‌ಒಸಿಗೆ ಶೇ 7 ಕಮಿಷನ್ ಕೊಡಬೇಕು. ಶೇ 21 ಕಮಿಷನ್ ನೀಡಿದರೆ ಮಾತ್ರ ಕೆಲಸ ಆಗುತ್ತದೆ. ಬೆಂಗಳೂರಿನ ಕಸ ವಿಲೇವಾರಿಯಲ್ಲಿ ಆಂಧ್ರದ ಮಾಫಿಯಾ ಇದೆ. ತಮಗೆ ಕಸದ ಟೆಂಡರ್ ಸಿಕ್ಕಿಲ್ಲ ಎಂದು ಬೆಂಗಳೂರು ಗುತ್ತಿಗೆದಾರರ ಸಂಘ ಹೇಳಿದೆ' ಎಂದರು.

ನಿಧನ ವಾರ್ತೆ

ಕ್ಯಾಪ್ಟನ್ ಅರವಿಂದ ಶರ್ಮ

ಬೆಂಗಳೂರು: ಮೈಕ್ರೋಲೈಟ್ (ಪುಟ್ಟದಾದ ಹಗುರ) ಹೆಲಿಕಾಪ್ಟರ್ ಪೈಲಟ್ ಪರವಾನಗಿ ಪಡೆದ ರಾಜ್ಯದ ಮೊದಲ ಪೈಲಟ್ ಎಂಬ ಹೆಗ್ಗಳಿಕೆ ಹೊಂದಿದ್ದ ಕರ್ನಾಟಕ ಹೈಕೋರ್ಟ್ ವಕೀಲ, ಕ್ಯಾಪ್ಟನ್ ಅರವಿಂದ ಶರ್ಮ (58) ಬೆಂಗಳೂರಿನ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ಬುಧವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಒಬ್ಬ ಪುತ್ರ ಇದ್ದಾರೆ. ಅರವಿಂದ ಶರ್ಮ 1969ರ ಮಾರ್ಚ್ 21ರಂದು ಬೆಂಗಳೂರಿನಲ್ಲಿ ಜನಿಸಿದ್ದರು. 'ಬಿಷಪ್ ಕಾಟನ್ ಬಾಯ್ಸ್'ನಲ್ಲಿ ಶಾಲಾ ಶಿಕ್ಷಣ ಪೂರೈಸಿದ್ದರು. ಬಿಎಂಎಸ್ ಕಾಲೇಜಿನಿಂದ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಎಂಜಿನಿಯರಿಂಗ್ ಪದವಿ ನಂತರ ಮೈಸೂರಿನ 'ಶಾರದಾ' ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಹಾಗೂ ಬೆಂಗಳೂರಿನ ಆರ್.ವಿ ಕಾಲೇಜಿನಲ್ಲಿ ಸ್ನಾತಕೋತ್ತರ ಕಾನೂನು ಪದವಿ ಪಡೆದಿದ್ದರು.

ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಹೈಕೋರ್ಟ್ ವಕೀಲರಾಗಿ ವೃತ್ತಿ ನಡೆಸುತ್ತಿದ್ದರು. ರಕ್ಷಣಾ ಇಲಾಖೆ ಮತ್ತು ಸಶಸ್ತ್ರ ಬಲ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಪರಿಣತಿ ಹೊಂದಿದ್ದರು.

'ಗುರುವಾರ (ಫೆ.19) ಸಂಜೆ 4 ಗಂಟೆಗೆ ವಿಲ್ಸನ್ ಗಾರ್ಡನ್‌ನಲ್ಲಿರುವ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ' ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಂಪರ್ಕಕ್ಕೆ ಪ್ರತಾಪ್: 90350-98733 ಮತ್ತು ನಿತಿನ್ ಕುನ್ನೂಲ್: 90350-03434.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ. ನಿವೇಶನ ಖಾತೆ ನಂ. 31–511–371, ವಾರ್ಡ್ ನಂ.20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉಬ/154/2025–26/3120 ದಿನಾಂಕ: 16–02–2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ವ್ಯವಸಾಯ'** ಭೂಉಪಯೋಗ ವಲಯದಿಂದ **'ವಸತಿ'** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	Mr. Harshavardhan Jahagirdhar S/o Nateshkumar Jahagirdhar	ದೇವನಹಳ್ಳಿ	ಕುಂದಾಣ	ನರಗನಹಳ್ಳಿ	74/2	0ಎ–15.08ಗು	ವ್ಯವಸಾಯ	ವಸತಿ
2					74/3	0ಎ–25.08ಗು		
					ಒಟ್ಟು	01ಎ–01ಗು		

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ಭೂಉಪಯೋಗ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/5710/ಅಡ್ವಟೋರ್/2025–26

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್ಸ್ (ಎಲ್.ಇ.ಓ.ಎಸ್.) ಪ್ರಯೋಗಾಲಯ

ಪೀಣ್ಯ, ಬೆಂಗಳೂರು - 560058.

ಎಲ್.ಇ.ಓ.ಎಸ್. ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್.ಸಿ.ಎಂ.ಡಿ.)

[ದೂರವಾಣಿ : (080)-22685088, 5047, 5045, 5086, (080)-28392310]

ಸಂಕ್ಷಿಪ್ತ ಇ-ಟೆಂಡರ್ (ಎನ್.ಐ.ಇ.ಟಿ.) ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರ ಇ–ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ : ಎಂ.ಇ.ಎಂ.ಎಸ್ ಪ್ರದೇಶ ಮತ್ತು ಇ.ಟಿ.ಎಫ್. ಪ್ರಯೋಗಾಲಯ, ಎಲ್.ಇ.ಓ.ಎಸ್. ಕ್ಯಾಂಪಸ್, ಪೀಣ್ಯ, ಬೆಂಗಳೂರು – 560058.ಇಲ್ಲಿಗೆ ಪ್ರಯೋಗಾಲಯದ ಆಪ್ಟಿಕ್ಸ್ ಬ್ಲಾಕ್‌ನಲ್ಲಿ ಸಂಕುಚಿತ ವಾಯು ಸೌಲಭ್ಯದ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ. **ಎನ್.ಐ.ಇ.ಟಿ. ನಂ.: C&MG/LEOS/Compressed Air/ETN-02/2025-26**; ದಿನಾಂಕ : **10-02-2026; ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ 17.12 ಲಕ್ಷ ; ಇ.ಎಂ.ಡಿ. ರೂ. 34,240/- ; ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ : 05** ತಿಂಗಳು, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ : 19.02.2026 ; ಮುಕ್ತಾಯದ ದಿನಾಂಕ : 09.03.2026.**

ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ : ಎಲ್.ಇ.ಓ.ಎಸ್. ಕ್ಯಾಂಪಸ್, ಪೀಣ್ಯ, ಬೆಂಗಳೂರು – 560058 ಇಲ್ಲಿಗೆ ಒಂದು ವರ್ಷದ ಅವಧಿಗೆ ಎಲ್.ಟಿ. ಕೇಬಲ್‌ಗಳ ಪೂರೈಕೆ, ಸ್ಥಾಪನೆ ಮತ್ತು ರದ್ದು ಪಡಿಸುವ ದರ ಒಪ್ಪಂದ. **ಎನ್.ಐ.ಇ.ಟಿ. ನಂ.: LEOS/CMG/EMN-07/2025-26** ; ದಿನಾಂಕ : **10-02-2026; ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ 12.48 ಲಕ್ಷ ; ಇ.ಎಂ.ಡಿ. ರೂ. 24,960/- ; ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ : 12** ತಿಂಗಳು, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ : 20.02.2026 ; ಮುಕ್ತಾಯದ ದಿನಾಂಕ : 10.03.2026.**

ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ : ಎಲ್.ಇ.ಓ.ಎಸ್. ಕ್ಯಾಂಪಸ್, ಪೀಣ್ಯ, ಬೆಂಗಳೂರು – 560058 ಇಲ್ಲಿನ ಆಡಳಿತ ಬ್ಲಾಕ್‌ನ 1ನೇ ಮಹಡಿಯಲ್ಲಿರುವ ನಿರ್ದೇಶಕರ ಕಚೇರಿಯ ವಿಸ್ತರಣೆ ಮತ್ತು ಮಾರ್ಪಾಡುಗಳಿಗಾಗಿ ಪ್ರಸ್ತಾವಿತ ವಿದ್ಯುತ್ ಕಾಮಗಾರಿಗಳು. **ಎನ್.ಐ.ಇ.ಟಿ. ನಂ.: LEOS/CMG/EMW-09/2025-26**; ದಿನಾಂಕ : **10-02-2026; ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ 12.17 ಲಕ್ಷ ; ಇ.ಎಂ.ಡಿ. ರೂ. 24,340/- ; ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ : 6** ತಿಂಗಳು, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ : 18.02.2026 ; ಮುಕ್ತಾಯದ ದಿನಾಂಕ : 06.03.2026.**

ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್ : www.isro.gov.in ನಲ್ಲಿ ವಿವರವಾದ ಇ–ಟೆಂಡರ್ ಆಹ್ವಾನ ಸೂಚನೆ (NIET) ಅನ್ನು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸಮೂಹ ನಿರ್ದೇಶಕರು, ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಸಿ & ಎಂ.ಜಿ.) ಯು.ಆರ್.ಎಸ್.ಸಿ., ಬೆಂಗಳೂರು.

‘ರಾಜ್ಯದಲ್ಲಿ ಎಸ್‌ಐಆರ್ ಬೇಡ’

ಮತದಾನದ ಹಕ್ಕು ಕಸಿಯುವ ಯತ್ನ: ‘ನನ್ನ ಮತ ನನ್ನ ಹಕ್ಕು’ ಸಂಘಟನೆ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು, ಕಾರ್ಮಿಕರು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರ ಮತದಾನದ ಹಕ್ಕು ಕಸಿಯುವ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ರಾಜ್ಯದಲ್ಲಿ ನಡೆಸಬಾರದು ಎಂದು ‘ನನ್ನ ಮತ ನನ್ನ ಹಕ್ಕು’ ಸಂಘಟನೆ ಆಗ್ರಹಿಸಿದೆ.

ಎಐಸಿಸಿಟಿಯು ರಾಷ್ಟ್ರೀಯ ಉಪಾಧ್ಯಕ್ಷ ಕ್ಲಿಫ್ಟನ್ ಡಿ'ರೋಜಾರಿಯೋ ಮಾತನಾಡಿ, ‘ಎಸ್‌ಐಆರ್ ಅನಿಯಂತ್ರಿತ ಪ್ರಕ್ರಿಯೆಯಾಗಿದ್ದು, ವಿವಿಧ ರಾಜ್ಯಗಳಲ್ಲಿ ಇದನ್ನು ಬೇರೆ ಬೇರೆ ರೀತಿಯಲ್ಲಿ ಜಾರಿಗೆ ತರಲಾಗಿದೆ. ಪಶ್ಚಿಮ ಬಂಗಾಳದಲ್ಲಿ ತಾರ್ಕಿಕ ವ್ಯತ್ಯಯ ಎಂಬ ಹೊಸ ವರ್ಗ ಸೃಷ್ಟಿಸಿ, ದಾಖಲೆಗಳಲ್ಲಿನ ಸಣ್ಣ ಕಾಗುಣಿತ ಅಥವಾ ವಯಸ್ಸಿನ ವ್ಯತ್ಯಾಸಗಳಿಗಾಗಿ ಮತದಾರರಿಗೆ ನೋಟಿಸ್ ನೀಡಲಾಗುತ್ತಿದೆ. ಮತದಾರರ ಪಟ್ಟಿಗೆ ಹೆಸರು ಸೇರಿಸುವುದನ್ನು ಉದ್ದೇಶಪೂರ್ವಕವಾಗಿಯೇ ಕ್ಲಿಷ್ಟಗೊಳಿಸಲಾಗಿದೆ’ ಎಂದು ಆರೋಪಿಸಿದರು.

ಸಾಮಾಜಿಕ ಕಾರ್ಯಕರ್ತ ಬಿ. ಶ್ರೀಪಾದ್ ಭಟ್ ಮಾತನಾಡಿ, ‘ಜನರನ್ನು ಮತದಾರರ ಪಟ್ಟಿಯಿಂದ ಸಾಮೂಹಿಕವಾಗಿ ಹೊರದಬ್ಬುವುದೇ ಎಸ್‌ಐಆರ್ ವಿನ್ಯಾಸ. ಪಟ್ಟಿ ಮಾಡಲಾದ 11 ದಾಖಲೆಗಳು ಎಷ್ಟು ಜನರ ಬಳಿ ಇವೆ? ವಲಸೆ ಕಾರ್ಮಿಕರು ಮತ್ತು ಬಡವರು 2002ರ ಹಳೆಯ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಹುಡುಕುವುದು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ‘ಎಸ್‌ಐಆರ್ ಸಂವಿಧಾನ ವಿರೋಧಿಯಾಗಿದ್ದು, ಚುನಾವಣಾ ನರಮೇಧವಾಗಿದೆ. ದಲಿತರು, ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ ಪರವಾಗಿ ಕಾಂಗ್ರೆಸ್ ಸರ್ಕಾರ ಮಾತನಾಡಬೇಕು. ಇದನ್ನು ರಾಜಕೀಯಗೊಳಿಸಲ್ಲ ಎಂದು ಮುಖ್ಯಮಂತ್ರಿ ಹೇಳಿದ್ದು ಸರಿಯಲ್ಲ’ ಎಂದು ಆಕ್ಷೇಪಿಸಿದರು.

‘ನಾವೆದ್ದು ನಿಲ್ಲದಿದ್ದರೆ’ ಅಭಿಯಾನದ ಮಮತಾ ಯಜಮಾನ್ ಮಾತನಾಡಿ, ‘ಈ ಪ್ರಕ್ರಿಯೆಯಲ್ಲಿ ಮದುವೆಯಾಗಿ ಬಂದ ಸೊಸೆಯಂದಿರ ಹೆಸರನ್ನು ಸೇರಿಸಲೂ ಬೂತ್ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ) ಅವಕಾಶ ನೀಡುತ್ತಿಲ್ಲ. ಅಂತರಜಾತಿ ಮತ್ತು ಅಂತರಧರ್ಮೀಯ ವಿವಾಹವಾದ ಮಹಿಳೆಯರಿಗೆ ಮತ್ತಷ್ಟು ಕಷ್ಟವಾಗಲಿದೆ’ ಎಂದು ಹೇಳಿದರು.

ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ನಿಶಾ ಗೂಳೂರು ಮಾತನಾಡಿ, ‘ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಹಕ್ಕುಗಳನ್ನು ಪರಿಗಣಿಸದೆ ಎಸ್‌ಐಆರ್ ವಿನ್ಯಾಸಗೊಳಿಸಲಾಗಿದೆ. ನಮ್ಮ ಸಮುದಾಯ ಸಂಪೂರ್ಣವಾಗಿ ಮತದಾನದ ಹಕ್ಕಿನಿಂದ ವಂಚಿತವಾಗುವ ಸಾಧ್ಯತೆ ಇದೆ’ ಎಂದು ಆತಂಕ ವ್ಯಕ್ತಪಡಿಸಿದರು.

ನಮ್ಮ ಮತ, ನಮ್ಮ ಹಕ್ಕು ಅಭಿಯಾನದ ಖಲೀಲುಲ್ಲಾ, ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ - ಕರ್ನಾಟಕದ ಐಶ್ವರ್ಯ ಆರ್. ವಿನಯ್ ಉಪಸ್ಥಿತರಿದ್ದರು.

ಲಿಂಗತ್ವ ಅಲ್ಪಸಂಖ್ಯಾತರ ಅಭಿವೃದ್ಧಿಗೆ ₹ 200 ಕೋಟಿ ಒದಗಿಸಿ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಬಜೆಟ್‌ನಲ್ಲಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರಿಗಾಗಿ ₹ 200 ಕೋಟಿ ಮೀಸಲಿಡಬೇಕು ಎಂದು ‘ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳವಳಿ’ಯ ಪದಾಧಿಕಾರಿಗಳು ಆಗ್ರಹಿಸಿದರು.

ಚಳವಳಿ ರಾಜ್ಯ ಸಮಿತಿ ಸದಸ್ಯರಾದ ಕೃತಿಕಾ, ನಿಶಾ ಗುಳೂರ್, ಆಕಾಶ್ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಕಾಂಗ್ರೆಸ್ ಕಳೆದ ಚುನಾವಣೆಯ ಸಂದರ್ಭದಲ್ಲಿ ತನ್ನ ಪ್ರಣಾಳಿಕೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ₹200 ಕೋಟಿ ಮೀಸಲಿಡುವುದಾಗಿ ಘೋಷಣೆ ಮಾಡಿತ್ತು. ಆದರೆ, ಈ ವಾಗ್ದಾನವನ್ನು ಇನ್ನೂ ನೆರವೇರಿಸಿಲ್ಲ. ಈ ವರ್ಷದ ಬಜೆಟ್‌ನಲ್ಲಿ ಇದನ್ನು ಘೋಷಿಸಬೇಕು’ ಎಂದು ಒತ್ತಾಯಿಸಿದರು.

‘ಈ ಸಮುದಾಯದ ಅಭಿವೃದ್ಧಿಗಾಗಿ ನಿಗಮ ಸ್ಥಾಪಿಸಬೇಕು. ಸರ್ವತೋಮುಖ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ₹250 ಕೋಟಿ ಒದಗಿಸಬೇಕು. ವಸತಿ, ವಸತಿ ನಿಲಯ, ತಾತ್ಕಾಲಿಕ ಸ್ಟೇಹೋಮ್‌ಗಳನ್ನು ಒದಗಿಸಬೇಕು. ಪ್ರತಿ ವರ್ಷ ಕನಿಷ್ಠ 500 ಮನೆ ಹಂಚಿಕೆ ಮಾಡಬೇಕು’ ಎಂದು ಹೇಳಿದರು.

‘ಕೃಷಿ ಆಸಕ್ತ ಪ್ರತಿಯೊಬ್ಬರಿಗೆ ಎರಡು ಎಕರೆ ಭೂಮಿ ಒದಗಿಸಬೇಕು. ಗೋಮಾಳ ಜಮೀನನ್ನು ಗುತ್ತಿಗೆ ಆಧಾರದಲ್ಲಿ ನೀಡಬೇಕು. ಉದ್ಯಮಶೀಲವನ್ನು ಪ್ರೋತ್ಸಾಹಿಸಲು ಬ್ಯಾಂಕ್ ಲಿಂಕ್ ಆಧಾರಿತ ಯೋಜನೆ ಜಾರಿಗೊಳಿಸಿ ಪ್ರತಿ ವ್ಯಕ್ತಿಗೆ ₹ 2 ಲಕ್ಷ ಸಬ್ಸಿಡಿ ನೀಡಬೇಕು. ಸ್ವಸಹಾಯ ಗುಂಪುಗಳನ್ನು ರಚಿಸಲು ಅನುದಾನ ನೀಡಬೇಕು ಬಡ್ಡಿರಹಿತ ಸಾಲ ಒದಗಿಸಬೇಕು. ಮೈತ್ರಿ ಪಿಂಚಣಿಯನ್ನು ₹2 ಸಾವಿರಕ್ಕೆ ಹೆಚ್ಚಿಸಬೇಕು. ವೃದ್ಧಾಪ್ಯ ಪಿಂಚಣಿ ₹5 ಸಾವಿರ ನೀಡಬೇಕು. ಸರ್ಕಾರಿ ಉದ್ಯೋಗ, ಸ್ಪರ್ಧಾತ್ಮಕ ಪರಿಕ್ಷಾ ತರಬೇತಿ, ಕೋಚಿಂಗ್‌ಗಳಲ್ಲಿ ಶೇ 1 ಮೀಸಲಾತಿ ನೀಡಬೇಕು’ ಎಂದು ಚಳವಳಿ ರಾಜ್ಯ ಸಮಿತಿ ಸದಸ್ಯರು ಆಗ್ರಹಿಸಿದರು.

ನ್ಯಾಯಾಧೀಶರ ಹುದ್ದೆಗೆ ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರ ಆಯ್ಕೆ

ಬೆಂಗಳೂರು: ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರೂ ಸೇರಿದಂತೆ ಒಟ್ಟು 83 ಮಂದಿ ಆಯ್ಕೆಯಾಗಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ಲಿಖಿತ ಪರೀಕ್ಷೆ ಹಾಗೂ 2026ರ ಜನವರಿಯಲ್ಲಿ ಸಂದರ್ಶನ ಪ್ರಕ್ರಿಯೆ ಬಳಿಕ ಜ್ಯೇಷ್ಠತೆ ಆಧಾರದಡಿ 83 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

‘ಈ 83 ಮಂದಿಯನ್ನು ಮೀಸಲು, ಲಿಂಗತ್ವ ಅಲ್ಪಸಂಖ್ಯಾತರು, ಮಹಿಳಾ ಮತ್ತು ಮಾಜಿ ಯೋಧರ ಕೋಟಾ ಆಧರಿಸಿ ನೇಮಕಾತಿ ಮಾಡಲಾಗಿದೆ’ ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

बैंक ऑफ़ बड़ौदा
Bank of Baroda
ಪ್ಯಾಲೇಸ್ ಆರ್ಕೆಡ್ಸ್ ಶಾಖೆ, ನಂ. 344/8, 4ನೇ ಮುಖ್ಯರಸ್ತೆ, ಅಪ್ಪರ್ ಪ್ಯಾಲೇಸ್ ಆರ್ಕೆಡ್ಸ್, ಬೆಂಗಳೂರು–560080. ಫೋನ್: 080–2361 7185
ಇ–ಮೇಲ್ : vjpaor@bankofbaroda.co.in

ಲಾಕರ್ ಬ್ರೇಕ್ ಓಪನ್ ನೋಟಿಸ್

ಈ ಕೆಳಗಿನ ಬ್ಯಾಂಕ್ ಆಫ್ ಬರೋಡಾ, ಪ್ಯಾಲೇಸ್ ಆರ್ಕೆಡ್ಸ್ ಶಾಖೆ, ಬೆಂಗಳೂರಿನಲ್ಲಿ ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟಿಸ್‌ಗಳನ್ನು ನಮೂದಿಸಿದ ವ್ಯಕ್ತಿ/ವ್ಯಕ್ತಿಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈ ಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ ಶಾಖೆಯನ್ನು ಸಂಪರ್ಕಿಸಲು ಮತ್ತು 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್‌ನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರೆ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ:- ಪ್ಯಾಲೇಸ್ ಆರ್ಕೆಡ್ಸ್

ಲಾಕರ್ ಹೋಲ್ಡರ್ : ದೀಪ್ತಿ ದಿವಾಕರ್, ನಂ. 233/4, 18ನೇ ಅಡ್ಡರಸ್ತೆ, ರಾಜ್‌ಕುಮಾರ್ ಹೌಸ್, ಸದಾಶಿವನಗರ, ಬೆಂಗಳೂರು. ಲಾಕರ್ ಸಂಖ್ಯೆ 7411, ದಂಡದೊಂದಿಗೆ ಬಾಕಿ ಇರುವ ಮೊತ್ತ ರೂ. 12,689.50 ಬ್ಯಾಂಕ್ ಓಪನ್ ದಿನಾಂಕ ಮತ್ತು ಸಮಯ: 15–05–2026 ಬೆಳಿಗ್ಗೆ 10–30 ಗಂಟೆ.

ಸ್ಥಳ: ಬೆಂಗಳೂರು, ದಿನಾಂಕ: 16–2–2026 ಸಹಿ/– ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ

ಅಮುಲ್ ಮೊಸರು
ಕೇವಲ ₹25* ರಲ್ಲಿ
450g ದೊರೆಯುತ್ತದೆ

900 gಗೆ ₹50* ರಲ್ಲಿ ಕೂಡ ಲಭ್ಯವಿದೆ
ವ್ಯಾಪಾರ-ಸಂಬಂಧಿತ ವಿಚಾರಣೆಗಾಗಿ ಸಂಪರ್ಕಿಸಿರಿ: 7829962583, 9482990402
*MRP (incl.of all taxes). Conditions apply.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ
ಸಹಯೋಗ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ
ದಿನಾಂಕ : 19.02.2026, ಗುರುವಾರ
ಸಂಜೆ 6.00 ಗಂಟೆಗೆ
ಸ್ಥಳ : ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ದಿವ್ಯ ಸಾನಿಧ್ಯ
ಶ್ರೀ ಶ್ರೀ ಶ್ರೀ ಮಂಜುನಾಥ ಭಾರತಿ ಸ್ವಾಮೀಜಿ
ಶ್ರೀ ಗೋಸಾಯಿ ಮಹಾಸಂಸ್ಥಾನ ಮಠ,
ಶ್ರೀ ಭವಾನಿಪೀಠ, ಬೆಂಗಳೂರು

ಘನ ಉಪಸ್ಥಿತಿ
ಶ್ರೀ ಡಿ.ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಶಿವರಾಜ ಎಸ್. ತಂಗಡಗಿ
ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು
ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ಉದಯ ಬಿ. ಗರುಡಾಚಾರ್
ಮಾನ್ಯ ಶಾಸಕರು,
ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಶ್ರೀ ಸಂತೋಷ್ ಲಾಡ್
ಮಾನ್ಯ ಕಾರ್ಮಿಕ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಜಿ. ಹೆಚ್. ಮರಿಯೋಜಿರಾವ್
ಮಾನ್ಯ ಅಧ್ಯಕ್ಷರು, ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ

ಸಾಂಸ್ಕೃತಿಕ ಕಾರ್ಯಕ್ರಮಗಳು : ಸಂಜೆ 5.00 ರಿಂದ 6.00 ಗಂಟೆಯವರೆಗೆ
ಗಾಯನ : ಶ್ರೀಮತಿ ಕಮಲಾ ಪ್ರಾಣೇಶ್ ಮತ್ತು ತಂಡ, ಬೆಂಗಳೂರು

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರಾದ ಶ್ರೀ ಶಿವರಾಜ ಎಸ್. ತಂಗಡಗಿ ರವರರೊಂದಿಗೆ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ಹೆಚ್. ಮರಿಯೋಜಿರಾವ್ ರವರು ಸಮಾರಂಭವೊಂದರಲ್ಲಿ ಭಾಗವಹಿಸಿರುವುದು.

ಸರ್ವರಿಗೂ ಆದರದ ಸುಸ್ವಾಗತ

ಶ್ರೀ ಜೆ. ಮಂಜುನಾಥ ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀಮತಿ ಕೆ.ಎಂ. ಗಾಯತ್ರಿ, ಭಾ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀಮತಿ ತುಳಸಿ ಮದ್ದಿನೇನಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಡಾ. ಪ್ರಕಾಶ್ ಆರ್. ಪಾಗೋಜಿ
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ

“ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು” – ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಕರ್ತವ್ಯ
ನುಡಿದಂತೆ ನಡೆದಿದ್ದೇವೆ...
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ | ಅನ್ನಭಾಗ್ಯ 10 kg | ಗೃಹಲಕ್ಷ್ಮಿ ₹2000 | ಯುವನಿಧಿ ₹3000 | ₹1500

AI IMPACT SUMMIT
भारत 2026 INDIA
सर्वजन हिताय | सर्वजन सुखाय
WELFARE FOR ALL | HAPPINESS OF ALL
ಫೆಬ್ರವರಿ 16–20, 2026 । ನವದೆಹಲಿ, ಭಾರತ

ಭಾರತದ ಎಐ ಜಗಿತ ಕ್ರಿಯೆಯಿಂದ ಪರಿಣಾಮದವರೆಗೆ
ಭಾರತೀಯ ಎಐ ಪರಿಣಾಮ ಸಮಾವೇಶ 2026
ಉದ್ಘಾಟಕರು
ನರೇಂದ್ರ ಮೋದಿ
ಪ್ರಧಾನಮಂತ್ರಿ

ಫೆಬ್ರವರಿ 19, 2026 – ಸಮಯ: ಬೆಳಗ್ಗೆ 9:40 – ಭಾರತ ಮಂಟಪ, ನವದೆಹಲಿ, ಭಾರತ

ದೂರದೃಷ್ಟಿ ಮತ್ತು ಪರಿಣಾಮ

20 ಸರ್ಕಾರಿ ಮುಖ್ಯಸ್ಥರು
59 ಸಚಿವಾಲಯ ಮಟ್ಟದ ಪ್ರಾತ್ಯಕ್ಷಿಕೆಗಳು
118 ದೇಶಗಳ ಸರ್ಕಾರಿ ಪ್ರತಿನಿಧಿಗಳು
100+ ಜಾಗತಿಕ ಎಐ ನಾಯಕರು, ಸಿಇಒ ಮತ್ತು ಸಿಎಕ್ಸ್‌ಒಗಳು
500 ವಿಶ್ವದಾದ್ಯಂತದ ಅಗ್ರಗಣ್ಯ ಎಐ ಪರಿಣತರು
500+ ಸಹ ಕಾರ್ಯಕ್ರಮಗಳು ಸಮಾವೇಶದ ಆರಂಭಿಕ ಸಮಯದಲ್ಲಿ
3,00,000+ ಸಮಾವೇಶದಲ್ಲಿ ಸಲ್ಲಿಕೆಯಾಗಿರುವ ನೋಂದಣಿಗಳು
ಸಮಾವೇಶ ಪೂರ್ವ 30 ದೇಶಗಳಾದ್ಯಂತ ಹಮ್ಮಿಕೊಳ್ಳಲಾದ 550 ಕಾರ್ಯಕ್ರಮಗಳು

ಜಾಗತಿಕ ಒಳಿತಿಗಾಗಿ ಎಐ ಉತ್ತೇಜನ

- ಭಾರತಕ್ಕಾಗಿ ಮತ್ತು ವಿಶ್ವಕ್ಕಾಗಿ, ಭಾರತದಲ್ಲಿಯೇ ಆತ್ಮನಿರ್ಭರ ಭಾರತ ಎಐ ಪರಿಹಾರಗಳನ್ನು ನಿರ್ಮಿಸುವ ಮೂಲಕ ಜಾಗತಿಕ ಪರಿಣಾಮ ಮೂಡಿಸುವುದು
- ಸಾರ್ವಜನಿಕ ಕಲ್ಯಾಣಕ್ಕಾಗಿ ಆರೋಗ್ಯ, ಕೃಷಿ, ಶಿಕ್ಷಣ ಮತ್ತು ಆಡಳಿತ ಪರಿವರ್ತನೆಗಾಗಿ ಎಐ ಸಜ್ಜುಗೊಳಿಸುವುದು
- ಜಾಗತಿಕ ದಕ್ಷಿಣ ಧ್ವನಿ ಒಳಗೊಂಡಿರುವ ಆದ್ಯತೆಗಳನ್ನು ಪ್ರತಿಬಿಂಬಿಸುವ, ಭಾರತದ ಧ್ವನಿಯೊಂದಿಗೆ ಜಾಗತಿಕ ಮಾನದಂಡಗಳ ಹಾಗೂ ಕಾರ್ಯ ಚೌಕಟ್ಟುಗಳ ರಚನೆ
- ಜವಾಬ್ದಾರಿಯುತ ಮತ್ತು ಒಳಗೊಳ್ಳುವಿಕೆ ಕುರಿತಾದ ಎಐ ಸಂಬಂಧಿತ ಜಾಗತಿಕ ಉಪನ್ಯಾಸದಲ್ಲಿ ಎಐ ಧ್ವನಿಗಳಿಗೆ ಶಕ್ತಿ ತುಂಬುವುದು
- ಭಾರತದ ಮೌಲ್ಯಗಳು, ದೂರದೃಷ್ಟಿಗಳು ಹಾಗೂ ಪ್ರಮಾಣಗಳ ಮೂಲಕ ಜಾಗತಿಕ ಎಐ ಹೇಳಿಕೆಗಳ ನಾಯಕತ್ವ ವಹಿಸುವುದು

CBC 06124/13/0002/2526
ನೋಂದಣಿಗಾಗಿ ಸ್ಕ್ಯಾನ್ ಮಾಡಿ
ಇಲ್ಲಿ ನೇರಪ್ರಸಾರ ವೀಕ್ಷಿಸಿ

ಅಪರಿಚಿತ ಮಹಿಳೆಗೆ ಮೂತ್ರಪಿಂಡ ದಾನ

ನ್ಯಾಯಾಲಯದ ಅನುಮತಿ ಪಡೆದು ದಾನ ಮಾಡಿದ ಮಣಿಪಾಲ್ ಆಸ್ಪತ್ರೆ ವೈದ್ಯೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಅಂಗಾಂಗಗಳಿಗೆ ಬೇಡಿಕೆ ಹೆಚ್ಚುತ್ತಲೇ ಇದ್ದು, ಸಾವಿರಾರು ಮಂದಿ ಅಂಗಾಂಗಕ್ಕಾಗಿ ಎದುರು ನೋಡುತ್ತಿದ್ದಾರೆ. ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದಲೇ ಅಪರಿಚಿತ ವ್ಯಕ್ತಿಗೆ ಜೀವಂತ ವ್ಯಕ್ತಿಯೊಬ್ಬರು ಮೂತ್ರಪಿಂಡವನ್ನು ದಾನ ಮಾಡಿದ್ದಾರೆ.

ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯ ವೈದ್ಯೆ ಡಾ.ಥಂಕಮ್ ಎಸ್. ಅವರು ಹೈಕೋರ್ಟ್ ಅನುಮತಿ ಪಡೆದು ಮೂತ್ರಪಿಂಡವನ್ನು ದಾನ ಮಾಡಿದ್ದಾರೆ. 2014ರಲ್ಲಿ ಮರಣೋತ್ತರ ಅಂಗಾಂಗ ದಾನದ ಪ್ರತಿಜ್ಞೆ ಕೈಗೊಂಡಿದ್ದ ಅವರು, ಬಳಿಕ ಜೀವಂತ ದಾನಿಯಾಗಲು ಬಯಸಿದರು. ಆದರೆ, ಇದಕ್ಕೆ ಕಾನೂನು ತೊಡಕುಗಳು ಇದ್ದ ಕಾರಣ, ಹತ್ತು ವರ್ಷಗಳು ಕಾನೂನು ಹೋರಾಟ ನಡೆಸಿದ್ದರು. ಅಂತಿಮವಾಗಿ ಹೈಕೋರ್ಟ್ ಅನುಮತಿ ನೀಡಿದ್ದರಿಂದ ಅವರು 56 ವರ್ಷದ ಅಪರಿಚಿತ ಮಹಿಳೆಗೆ ತಮ್ಮ ಮೂತ್ರಪಿಂಡವನ್ನು ದಾನವಾಗಿ ನೀಡಿದ್ದಾರೆ. ಈ ಮೂಲಕ ಅವರು ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಿ, ಮಾದರಿಯಾಗಿದ್ದಾರೆ. ಅವರ ಕಾರ್ಯಕ್ಕೆ ವೈದ್ಯಕೀಯ ಕ್ಷೇತ್ರದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ಮಾನವ ಅಂಗಾಂಗ ದಾನ ಕಸಿ ಕಾಯ್ದೆ 1994 ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ರಾಜ್ಯದಲ್ಲಿ 2007ರಿಂದ 'ಜೀವಸಾರ್ಥಕತೆ' ಸಂಸ್ಥೆಯಡಿ ಅಂಗಾಂಗ ದಾನ ಹಾಗೂ ಅಂಗಾಂಗ ಕಸಿಗೆ ಉತ್ತೇಜನ ನೀಡಲಾಗುತ್ತಿದೆ. ಮೂತ್ರಪಿಂಡ ವೈಫಲ್ಯದಂತಹ ಪ್ರಕರಣಗಳಲ್ಲಿ ಕುಟುಂಬಸ್ಥರು ಅಥವಾ ಸಂಬಂಧಿಗಳು ಅಂಗಾಂಗ ದಾನಕ್ಕೆ ಮುಂದೆ ಬಂದು, ಅವರ ಅಂಗಾಂಗ ಹೊಂದಾಣಿಕೆಯಾದಲ್ಲಿ ಕಸಿ ಮಾಡಲಾಗುತ್ತದೆ. ಇಲ್ಲವಾದಲ್ಲಿ, ಜೀವಸಾರ್ಥಕತೆಯಡಿ ಮೃತ ದಾನಿಯಿಂದ ಪಡೆದ ಅಂಗಾಂಗಕ್ಕೆ ಎದುರು ನೋಡಬೇಕಾಗುತ್ತದೆ. ಅದು ಹೊಂದಾಣಿಕೆಯಾದಲ್ಲಿ ಮಾತ್ರ ಕಸಿ ಸಾಧ್ಯವಾಗಲಿದೆ.

> ಮೂತ್ರಪಿಂಡ ದಾನ ಸುರಕ್ಷಿತವಾಗಿದ್ದು, ಯುವಜನರಲ್ಲಿ ಈ ಬಗ್ಗೆ ಜಾಗೃತಿ ಮೂಡಬೇಕು. ಆದ್ದರಿಂದಲೇ ನಾನು ಕಾನೂನು ಹೋರಾಟ ನಡೆಸಿ, ಅಪರಿಚಿತ ವ್ಯಕ್ತಿಗೆ ಮೂತ್ರಪಿಂಡ ದಾನ ಮಾಡಿದೆ
>
> **ಡಾ.ಥಂಕಮ್ ಎಸ್.,** ಮೂತ್ರಪಿಂಡದಾನಿ

ಯಶಸ್ವಿ ಕಸಿ: ಅಂಗಾಂಗ ದಾನ ಪ್ರಕ್ರಿಯೆಯು ಹಣಕಾಸಿನ ವ್ಯವಹಾರಕ್ಕೆ ಅವಕಾಶ ಮಾಡಿಕೊಡಬಾರದು ಎಂಬ ಕಾರಣಕ್ಕೆ, ಸಂಬಂಧಿಗಳು ಹಾಗೂ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಗಳಿಂದ ಮಾತ್ರ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತಿದೆ. ಈ ಸಂಬಂಧ ನಿರ್ಬಂಧಗಳನ್ನೂ ವಿಧಿಸಲಾಗಿದೆ. 59 ವರ್ಷದ ಥಂಕಮ್ ಅವರು ಮಣಿಪಾಲ್ ಆಸ್ಪತ್ರೆಯಲ್ಲಿ ಭ್ರೂಣ ಔಷಧ ವಿಭಾಗದ ಸಲಹೆಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜೀವಂತ ದಾನಿಯಾಗುವ ಅವರ ನಿರ್ಧಾರಕ್ಕೆ ಕುಟುಂಬಸ್ಥರಿಂದಲೂ ಆರಂಭಿಕ ದಿನಗಳಲ್ಲಿ ವಿರೋಧವಿತ್ತು. ಬಳಿಕ ಅವರ ಮನವೊಲಿಸಿದರೂ, ಆಸ್ಪತ್ರೆಯ ಆಡಳಿತ ಮಂಡಳಿ ಅನುಮತಿ ನೀಡಿರಲಿಲ್ಲ. ಇದರಿಂದಾಗಿ 2023ರಲ್ಲಿ ಅವರ ಮೂತ್ರಪಿಂಡ 24 ವರ್ಷದ ವ್ಯಕ್ತಿಗೆ ಹೊಂದಾಣಿಕೆಯಾದರೂ ಕಸಿ ಸಾಧ್ಯವಾಗಿರಲಿಲ್ಲ.

2025ರ ಜೂನ್‌ನಲ್ಲಿ ಅನುಮತಿಗಾಗಿ ಹೈಕೋರ್ಟ್ ಮೊರೆ ಹೋಗಿದ್ದರು. ಡಿಸೆಂಬರ್‌ನಲ್ಲಿ ದಾನಕ್ಕೆ ಹೈಕೋರ್ಟ್ ಅನುಮತಿ ನೀಡಿತ್ತು. ಮೂತ್ರಪಿಂಡ ಸ್ವೀಕರಿಸಲು ಅರ್ಹರಾಗಿರುವ ಐದು ಮಂದಿಯನ್ನು ಐದು ವಾರದೊಳಗೆ ಗುರುತಿಸಬೇಕು ಎಂದು ಕೋರ್ಟ್ ಆದೇಶಿಸಿತ್ತು. 56 ವರ್ಷದ ಅಪರಿಚಿತ ಮಹಿಳೆಗೆ ಮೂತ್ರಪಿಂಡ ಹೊಂದಾಣಿಕೆಯಾಗಿದ್ದು, ಫೆ.2ರಂದು ಕಸಿಗೆ ಅನುಮತಿ ನೀಡಲಾಗಿತ್ತು. ಫೆ.10ರಂದು ಯಶಸ್ವಿಯಾಗಿ ಕಸಿ ಪ್ರಕ್ರಿಯೆ ನಡೆಸಲಾಗಿದೆ. ವೈದ್ಯೆಯೂ ಈಗ ಚೇತರಿಸಿಕೊಂಡಿದ್ದಾರೆ.

'ಥಂಕಮ್ ಅವರು ಸದ್ಯ ವಿಶ್ರಾಂತಿಯಲ್ಲಿದ್ದು, ಶೀಘ್ರದಲ್ಲಿಯೇ ವೈದ್ಯಕೀಯ ಸೇವೆಗೆ ಮರಳಲಿದ್ದಾರೆ' ಎಂದು ಆಸ್ಪತ್ರೆಯ ಆಡಳಿತ ಮಂಡಳಿ 'ಪ್ರಜಾವಾಣಿ'ಗೆ ತಿಳಿಸಿದೆ.

ಜೀವಸಾರ್ಥಕತೆಯಡಿ ಅಂಗಾಂಗ ದಾನ

ವರ್ಷ	ದಾನಿಗಳು	ಅಂಗಾಂಗ	ಅಂಗಾಂಶ
2022	151	415	348
2023	178	469	393
2024	162	457	339
2025	198	564	397
2026	12	32	14

ಮೂತ್ರಪಿಂಡಕ್ಕೆ ಬೇಡಿಕೆ

ರಾಜ್ಯದಲ್ಲಿ ಐದು ಸಾವಿರಕ್ಕೂ ಅಧಿಕ ಮಂದಿ ಅಂಗಾಂಗಕ್ಕಾಗಿ ಎದುರು ನೋಡುತ್ತಿದ್ದಾರೆ. ಅವರಲ್ಲಿ ಮೂತ್ರಪಿಂಡಕ್ಕೆ ಎದುರು ನೋಡುತ್ತಿರುವವರ ಸಂಖ್ಯೆಯೇ ನಾಲ್ಕು ಸಾವಿರಕ್ಕೂ ಅಧಿಕವಿದೆ. ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಜೀವಸಾರ್ಥಕತೆ ಸಂಸ್ಥೆಯು ಅಂಗಾಂಗಗಳ ಕೊರತೆ ನೀಗಿಸಲು ಶ್ರಮಿಸುತ್ತಿದೆ. ದಾನಿಗಳ ಕೊರತೆ ಹಾಗೂ ಹೊಂದಾಣಿಕೆಯಾಗುವ ಅಂಗಾಂಗಗಳು ಸಿಗದಿರುವುದು ಕಸಿ ಪ್ರಕ್ರಿಯೆಗೆ ತೊಡಕಾಗಿದೆ. ರಾಜ್ಯದಲ್ಲಿ ಕಳೆದ ವರ್ಷ 198 ಮಂದಿಯಿಂದ 564 ಅಂಗಾಂಗಗಳನ್ನು ದಾನವಾಗಿ ಪಡೆಯಲಾಗಿತ್ತು.

ಔಷಧ ಪೂರೈಕೆ: ₹30 ಕೋಟಿ ಬಿಡುಗಡೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಪತ್ರೆಗಳಿಗೆ ಅಗತ್ಯ ಔಷಧ ಪೂರೈಸಲು ₹30 ಕೋಟಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಉಚಿತ ಔಷಧ ಯೋಜನೆ ಹಾಗೂ ಜನನಿ ಶಿಶು ಸುರಕ್ಷಾ ಕಾರ್ಯಕ್ರಮದಡಿ ನೀಡಲಾಗುವ ಅನುದಾನ ಬಳಸಿಕೊಂಡು ಆಸ್ಪತ್ರೆಗಳಲ್ಲಿ ಸ್ಥಳೀಯವಾಗಿ ಔಷಧಗಳನ್ನು ಖರೀದಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಯೋಜನೆಯಾದ 'ರಾಷ್ಟ್ರೀಯ ಆರೋಗ್ಯ ಅಭಿಯಾನ'ದಡಿ (ಎನ್‌ಎಚ್‌ಎಂ) ಅನುದಾನ ಬಿಡುಗಡೆಯಾಗದಿರುವುದರಿಂದ, ವಿವಿಧ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳ ಹಿತದೃಷ್ಟಿಯಿಂದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ ಎಂದು ಆದೇಶದಲ್ಲಿ ಇಲಾಖೆ ತಿಳಿಸಿದೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್‌ಸಿಎಲ್) ಖಾತೆಯಲ್ಲಿ ಲಭ್ಯವಿರುವ ₹30 ಕೋಟಿ ಹಣವನ್ನು ಎರಡು ತಿಂಗಳ ಅವಧಿಗೆ ಸ್ಥಳೀಯವಾಗಿ ಔಷಧ ಖರೀದಿಗೆ ಬಳಸಲು ಅನುಮತಿ ನೀಡಲಾಗಿದೆ. ಕೆಎಸ್‌ಎಂಎಸ್‌ಸಿಎಲ್ ಕೂಡಲೇ ₹30 ಕೋಟಿಯನ್ನು ಸುವರ್ಣ ಆರೋಗ್ಯ ಟ್ರಸ್ಟ್‌ನ (ಸಾಸ್ಟ್) ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕು ಎಂದು ಸೂಚಿಸಿದೆ.

ಸಾಸ್ಟ್ ಹಣವನ್ನು ಸ್ವೀಕರಿಸಿದ ನಂತರ ಸರ್ಕಾರಿ ಆಸ್ಪತ್ರೆಗಳ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು. ಆಸ್ಪತ್ರೆಗಳು ಸ್ಥಳೀಯವಾಗಿ ಅತ್ಯವಶ್ಯಕ ಔಷಧಗಳನ್ನು ಖರೀದಿಸಿ, ರೋಗಿಗಳಿಗೆ ವಿತರಿಸಬೇಕು ಎಂದು ತಿಳಿಸಿದೆ.

4 ಖಾಸಗಿ ಆಸ್ಪತ್ರೆಗಳಲ್ಲಿ ನೇರ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' (ಎಬಿ–ಎಆರ್‌ಕೆ) ಯೋಜನೆಯಡಿ ನಗರದ ನಾಲ್ಕು ಖಾಸಗಿ ಆಸ್ಪತ್ರೆಗಳಿಗೆ ದ್ವಿತೀಯ ಹಂತದ ಸರಳ ಚಿಕಿತ್ಸಾ ವಿಧಾನಗಳಿಗೆ (2ಎ) ಅವಕಾಶ ನೀಡಲಾಗಿದೆ. ಇದರಿಂದಾಗಿ ಫಲಾನುಭವಿಗಳು ಯಾವುದೇ ಶಿಫಾರಸು ಪತ್ರ ಪಡೆಯದೆ ನೇರವಾಗಿ ತೆರಳಿ ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ.

ಆಯುಷ್ಮಾನ್ ಭಾರತ್

ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್) ಹಾಗೂ ಡಾ. ಅಂಬೇಡ್ಕರ್ ವೈದ್ಯಕೀಯ ಕಾಲೇಜಿಗೆ ಯೋಜನೆಯಡಿ ದ್ವಿತೀಯ ಹಂತದ ಸರಳ ಚಿಕಿತ್ಸಾ ವಿಧಾನಗಳನ್ನು ಒದಗಿಸಲು ಅನುಮತಿ ನೀಡಲಾಗಿದೆ. ಸದ್ಯ ಈ ವಿಧಾನದ ಚಿಕಿತ್ಸೆಗಳನ್ನು ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾತ್ರ ಒದಗಿಸಲಾಗುತ್ತಿತ್ತು.

ಒಂದು ವರ್ಷದ ಅವಧಿಗೆ ಪ್ರಾಯೋಗಿಕವಾಗಿ ನಾಲ್ಕು ಆಸ್ಪತ್ರೆಗಳಲ್ಲಿ ದ್ವಿತೀಯ ಹಂತದ ಸರಳ ಚಿಕಿತ್ಸಾ ವಿಧಾನಗಳನ್ನು ಪರಿಚಯಿಸಲಾಗಿದೆ. ಈ ಆಸ್ಪತ್ರೆಗಳಲ್ಲಿ ಇತರೆ ಚಿಕಿತ್ಸಾ ವಿಧಾನಗಳಿಗೂ ಶಿಫಾರಸು ಪ್ರಕ್ರಿಯೆಯ ವಿನಾಯಿತಿ ನೀಡಲಾಗಿದೆ. ಜಿಬಿಎ ವ್ಯಾಪ್ತಿಯಲ್ಲಿ ಸರ್ಕಾರಿ ಆಸ್ಪತ್ರೆಗಳ ಕೊರತೆಯ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ.

ಅಂಬೂರ್ ಬಿರಿಯಾನಿ ಹೋಟೆಲ್‌ಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಜಯನಗರ 4ನೇ ಟಿ-ಬ್ಲಾಕ್‌ನ ಸ್ವಾಗತ್ ರಸ್ತೆಯಲ್ಲಿರುವ 'ಸ್ಟಾರ್ ಅಂಬೂರ್ ಬಿರಿಯಾನಿ ಹೋಟೆಲ್'ನಲ್ಲಿ ಹಸಿ ಕಸ ಹಾಗೂ ಒಣ ಕಸ ಬೇರ್ಪಡಿಸದೆ, ಘನತ್ಯಾಜ್ಯ ನಿರ್ವಹಣೆ ಸರಿಯಾಗಿ ನಿರ್ವಹಣೆ ಮಾಡದ ಕಾರಣಕ್ಕೆ ₹1 ಲಕ್ಷ ದಂಡ ವಿಧಿಸಲಾಗಿದೆ.

ಹೋಟೆಲ್ ಒಳಗಡೆ ಅಶುಚಿತ್ವವಿರುವುದು, ಫ್ರಿಜ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಶುಚಿತ್ವ ಇಲ್ಲದಿರುವುದು ದಾಳಿಯ ಸಂದರ್ಭದಲ್ಲಿ ಕಂಡುಬಂದಿದೆ. ಇದೆಲ್ಲ ಪುನರಾವರ್ತನೆಯಾಗದಂತೆ ನೋಡಿಕೊಳ್ಳಲು ಹೋಟೆಲ್‌ನವರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಎಜಿಎಂ ಶ್ವೇತಾ ತಿಳಿಸಿದರು.

ರಾಮಯ್ಯ ಆಸ್ಪತ್ರೆಗೆ 'ಫ್ಯಾಕ್ಟ್' ಮಾನ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಸ್ಮಾರಕ ಆಸ್ಪತ್ರೆಯು ಅಸ್ಥಿಮಜ್ಜೆ ಚಿಕಿತ್ಸೆಗೆ ಸಂಬಂಧಿಸಿದಂತೆ ಜಾಗತಿಕ ಮಟ್ಟದ ಫೌಂಡೇಷನ್ ಫಾರ್ ದಿ ಆಫ್ ಸೆಲ್ಯೂಲರ್ ಥೆರಪಿ (ಫ್ಯಾಕ್ಟ್) ಮಾನ್ಯತೆ ಪಡೆದಿದೆ. ದೇಶದ ಎರಡು ಆಸ್ಪತ್ರೆಗಳಷ್ಟೇ ಈ ಮಾನ್ಯತೆ ಪಡೆದಿದ್ದು, ಅದರಲ್ಲಿ ರಾಮಯ್ಯ ಆಸ್ಪತ್ರೆ ಒಂದಾಗಿದೆ ಎಂದು ಗೋಕುಲ ಎಜುಕೇಷನ್ ಫೌಂಡೇಷನ್ (ವೈದ್ಯಕೀಯ) ಅಧ್ಯಕ್ಷ ಡಾ. ಎಂ.ಆರ್. ಜಯರಾಂ ತಿಳಿಸಿದರು.

ಅಸ್ಥಿಮಜ್ಜೆ ಕಸಿ

ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಸೆಲ್ಯೂಲರ್ ಥೆರಪಿ ಮತ್ತು ಅಸ್ಥಿಮಜ್ಜೆ ಚಿಕಿತ್ಸೆಯ ವೇಳೆ ಅನುಸರಿಸುವ ಸುರಕ್ಷತೆ ಮತ್ತು ಕಾಯ್ದುಕೊಳ್ಳುವ ಗುಣಮಟ್ಟತೆಯನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಭಾರತದಲ್ಲಿ 'ಫ್ಯಾಕ್ಟ್' ಮತ್ತು ಜಂಟಿ ಕಮಿಷನ್ ಇಂಟರ್ ನ್ಯಾಷನಲ್ (ಜೆಸಿಐ) ಈ ಎರಡು ಮಾನ್ಯತೆಯನ್ನು ಪಡೆದಿರುವ ಏಕೈಕ ಆಸ್ಪತ್ರೆ ಇದಾಗಿದೆ' ಎಂದರು.

'ದಾನಿಗಳ ಸುರಕ್ಷತೆ, ಸ್ಟೆಮ್‌ಸೆಲ್(ಆಕರಕೋಶ) ಪ್ರಗತಿ, ದೀರ್ಘಕಾಲದ ಅನುಸರಣೆ, ನಿರಂತರ ಗುಣಮಟ್ಟತೆಯ ಪ್ರಗತಿ, ನಾವು ನೀಡುವ ಚಿಕಿತ್ಸಾ ವಿಧಾನ ಗಮನಿಸಿ ಈ ಮಾನ್ಯತೆ ನೀಡಲಾಗಿದೆ' ಎಂದರು.

'ಫ್ಯಾಕ್ಟ್' ಮುಖ್ಯ ವೈದ್ಯಕೀಯ ಅಧಿಕಾರಿ ಡಾ.ಫಿಲ್ಲಿಸ್ ವಾರ್ಕೆಂಟಿನ್ ಮಾತನಾಡಿ, 'ಭಾರತದಲ್ಲಿ ರಕ್ತದ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಅಂದಾಜಿನ ಪ್ರಕಾರ ವಾರ್ಷಿಕ 1.20 ಲಕ್ಷ ಪ್ರಕರಣಗಳು ಪತ್ತೆಯಾಗುತ್ತಿವೆ. ಇದರಲ್ಲಿ 70 ಸಾವಿರ ಮಂದಿ ಮೃತರಾಗುತ್ತಿದ್ದಾರೆ. ಅಲ್ಲದೇ ತಲಸ್ಸೇಮಿಯಾ ಚಿಕಿತ್ಸೆಗೆ ರಕ್ತದ ಕೊರತೆ ಇದೆ. ಈ ಎಲ್ಲ ಕಾರಣದಿಂದಾಗಿ ಅಸ್ಥಿಮಜ್ಜೆ ಚಿಕಿತ್ಸೆ ಅವಶ್ಯಕವಾಗಿದೆ. ಈ ಚಿಕಿತ್ಸೆಯನ್ನು ಗುಣಮಟ್ಟ ಮತ್ತು ಸುರಕ್ಷಿತವಾಗಿ ನೀಡುವಲ್ಲಿ ರಾಮಯ್ಯ ಆಸ್ಪತ್ರೆ ಹೆಸರುವಾಸಿಯಾಗಿದೆ' ಎಂದು ಶ್ಲಾಘಿಸಿದರು.

ರಾಮಯ್ಯ ಸ್ಮಾರಕ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಸಿ.ನಾಗೇಂದ್ರ ಸ್ವಾಮಿ, 'ಕರ್ನಾಟಕ ಮತ್ತು ಪಕ್ಕದ ರಾಜ್ಯಗಳ ಸಂಕೀರ್ಣ ರಕ್ತದ ಕಾಯಿಲೆಗಳ ಪ್ರಮುಖ ರೆಫರಲ್ ಕೇಂದ್ರ ಬೆಂಗಳೂರು ಆಗಿದೆ. ರಾಮಯ್ಯ ಮೆಮೋರಿಯಲ್ ಆಸ್ಪತ್ರೆಯಲ್ಲಿ ಪ್ರತಿ ವರ್ಷ ಸುಮಾರು 1,000 ರೋಗಿಗಳನ್ನು ರಕ್ತದ ಕಾಯಿಲೆಗಳಿಗಾಗಿ ತಪಾಸಣೆ ಮಾಡಲಾಗುತ್ತದೆ. ಅದರಲ್ಲಿ ಸುಮಾರು 100 ಜನರು ಕ್ಲಿನಿಕಲ್ ದೃಷ್ಟಿಯಿಂದ ಕಸಿಗೆ ಅರ್ಹರಾಗಿರುತ್ತಾರೆ. ಆದರೆ, ದಾನಿಗಳ ಲಭ್ಯತೆ, ಸಾಗಾಟ ಮತ್ತು ಸುರಕ್ಷತೆಯ ಕಾರಣದಿಂದಾಗಿ ಕೇವಲ 30-40 ಜನರು ಕಸಿಗೆ ಒಳಪಡುತ್ತಾರೆ' ಎಂದು ಮಾಹಿತಿ ನೀಡಿದರು.

ರಾಮಯ್ಯ ಸ್ಮಾರಕ ಆಸ್ಪತ್ರೆಯ ಆಂಕೋಲಜಿ ವಿಭಾಗದ ಮುಖ್ಯಸ್ಥ ಡಾ. ಸಂತೋಷ್ ಕೆ. ದೇವದಾಸ್, ಡಾ. ಡಾಮಿಯಾನೊ ರೊಂಡೆಲ್ಲಿ ಭಾಗವಹಿಸಿದ್ದರು.

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಬೆಂಗಳೂರು: ನಗರದ ಕನಕಶ್ರೀ ಸಂಕೀರ್ಣದಲ್ಲಿ ಇನ್‌ಸೈಟ್ಸ್ ಐಎಎಸ್ ಮತ್ತು ಕನಕಶ್ರೀ ಚಾರಿಟಬಲ್ ಟ್ರಸ್ಟ್ ವತಿಯಿಂದ ಕೆಎಎಸ್ ಸಹಿತ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗದ ಆಕಾಂಕ್ಷಿಗಳಿಗೆ ತರಬೇತಿ ನೀಡಲು ನಿರ್ಧರಿಸಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು ಎಂದು ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕ ವಿನಯಕುಮಾರ್ ಜಿ.ಬಿ. ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 'ಯುಪಿಎಸ್‌ಸಿ, ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿರುವ ಸಂಸ್ಥೆಗಳ ಪೈಕಿ ರಾಜ್ಯದಲ್ಲಿಯೇ ಇನ್‌ಸೈಟ್ಸ್ ಐಎಎಸ್ ಅಗ್ರ ಪಂಕ್ತಿಯಲ್ಲಿದೆ. ಇಲ್ಲಿನ ನುರಿತ ಮತ್ತು ಅನುಭವಿ ಬೋಧನಾ ಸಿಬ್ಬಂದಿ ತರಬೇತಿ ನೀಡಲಿದ್ದಾರೆ' ಎಂದು ಮಾಹಿತಿ ನೀಡಿದರು.

ಆಸಕ್ತರಿಗೆ ಉಚಿತ ವಸತಿ ಒದಗಿಸಲಾಗುವುದು. ವಿಶಾಲವಾದ ಅಧ್ಯಯನ ಕೇಂದ್ರದಲ್ಲಿ ಶಿಬಿರ ನಡೆಯಲಿದೆ. ರಿಯಾಯಿತಿ ದರದಲ್ಲಿ ಊಟೋಪಹಾರ ಇರಲಿದೆ. ಶಿಬಿರ ಶೀಘ್ರದಲ್ಲಿ ಆರಂಭಿಸಲಾಗುವುದು ಎಂದರು.

ಮಾಹಿತಿಗಾಗಿ ಮತ್ತು ಪ್ರವೇಶಾವಕಾಶಕ್ಕಾಗಿ ಇನ್‌ಸೈಟ್ಸ್ ಐಎಎಸ್, ನಂದ ಆಶೀರ್ವಾದ್ ಕಾಂಪ್ಲೆಕ್ಸ್, 3ನೇ ಮಹಡಿ, ಚಂದ್ರಾ ಲೇಔಟ್ ಬೆಂಗಳೂರು–560072, ದೂರವಾಣಿ: 08069405205 ಸಂಪರ್ಕಿಸಬಹುದು ಎಂದು ಹೇಳಿದರು.

ಕನಕಶ್ರೀ ಟ್ರಸ್ಟ್ ಅಧ್ಯಕ್ಷ ಟಿ.ಬಿ. ಬಳಗಾವಿ, ಕಾರ್ಯದರ್ಶಿ ಪಿ.ಎನ್. ಕೃಷ್ಣಮೂರ್ತಿ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ವಿನಯ್ ಎಂ. ಚಿದಾನಂದಮೂರ್ತಿ, ಬಸವರಾಜ ಕಲ್ಗುಡಿ, ಹಂಪ ನಾಗರಾಜಯ್ಯ, ಮಾನಸ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಕನ್ನಡಕ್ಕೆ ಚಿದಾನಂದಮೂರ್ತಿ ಕೊಡುಗೆ ದೊಡ್ಡದು: ಹಂಪನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜ್ಞೆ ಹಾಗೂ ಪ್ರತಿಭೆಯೊಂದಿಗೆ ಕನ್ನಡದಲ್ಲಿ ಸಂಶೋಧನೆ ಹಾಗೂ ಹೋರಾಟದ ವಿಷಯದಲ್ಲಿ ಮುಂಚೂಣಿಯಲ್ಲಿದ್ದ ಚಿದಾನಂದಮೂರ್ತಿ ಅವರು ನಾಡು, ನುಡಿಗೆ ತಮ್ಮನ್ನು ಸಮರ್ಪಿಸಿಕೊಂಡು ನೀಡಿದ ಕೊಡುಗೆ ದೊಡ್ಡದು' ಎಂದು ಸಾಹಿತಿ ಹಂಪನಾ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರವು ಬುಧವಾರ ಆಯೋಜಿಸಿದ್ದ ಎಂ. ಚಿದಾನಂದಮೂರ್ತಿ ಅವರ ಸಮಗ್ರ ಸಾಹಿತ್ಯ ಸಂಪುಟಗಳು ಹಾಗೂ ವಿವಿಧ ಮರು ಮುದ್ರಣ ಕೃತಿಗಳನ್ನು ಜನಾರ್ಪಣೆಗೊಳಿಸಿ ಮಾತನಾಡಿದರು.

'ಲೇಖಕನಾದವನಿಗೆ ಸ್ಮೃತಿ, ಮತಿ, ಬುದ್ದಿ ಹಾಗೂ ಪ್ರಜ್ಞೆ ಬಹು ಮುಖ್ಯ. ಈ ನಾಲ್ಕು ಚಿದಾನಂದಮೂರ್ತಿ ಅವರಲ್ಲಿದ್ದವು' ಎಂದು ಹೇಳಿದರು.

ಸಂಪುಟಗಳ ಸಂಪಾದಕರಾದ ಬಸವರಾಜ ಕಲ್ಗುಡಿ ಮಾತನಾಡಿ, 'ಕರ್ನಾಟಕದಲ್ಲಿ ಚಿದಾನಂದಮೂರ್ತಿ ಹಾಗೂ ಎಂ.ಎಂ. ಕಲಬುರ್ಗಿ ಅವರು ಸಂಶೋಧನೆ, ಕ್ಷೇತ್ರ ಕಾರ್ಯ, ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿದ್ದ ರೀತಿ ಮಾದರಿ ಎನ್ನುವಂತೆಯೇ ಇತ್ತು. ಮೂರ್ತಿ ಅವರಂತೂ ಕನ್ನಡಕ್ಕಾಗಿ ಹೋರಾಟಕ್ಕಿಳಿದ ಪರಿ ಮರೆಯಲಾಗದು. ಅವರ ಪ್ರಯತ್ನದಿಂದಲೇ ಬೆಂಗಳೂರಿನ ಚರ್ಚ್‌ಗಳಲ್ಲಿ ತಮಿಳು ಪ್ರಾರ್ಥನೆ ತಪ್ಪಿ ಕನ್ನಡಕ್ಕೆ ಅವಕಾಶ ಸಿಕ್ಕಿತು' ಎಂದರು.

ವಿನಯ್ ಚಿದಾನಂದಮೂರ್ತಿ ಮಾತನಾಡಿ, 'ನಾಡು-ನುಡಿ ವಿಷಯ ದಲ್ಲಿ ನಮ್ಮ ತಂದೆ ಹೆದರುತ್ತಿರಲಿಲ್ಲ. ಪ್ರಾಣಭಯ ತೊರೆದು ಕನ್ನಡ ನೆಲ, ಜಲ, ಭಾಷೆಗಾಗಿ ಹೋರಾಡಿದ್ದರು' ಎಂದರು.

ಪ್ರಾಧಿಕಾರದ ಅಧ್ಯಕ್ಷ ಮಾನಸ ಅಧ್ಯಕ್ಷತೆ ವಹಿಸಿದ್ದರು. ಲೇಖಕ ಶ್ರೀನಿವಾಸ ಹಾವನೂರ ಅವರ ಪುತ್ರಿ ನಿವೇದಿತ ಹೊನ್ನತ್ತಿ, ಟಿ.ಎಸ್. ವೆಂಕಣ್ಣಯ್ಯ ಅವರ ಮಗ ಟಿ.ವಿ.ಶ್ರೀಕಂಠಯ್ಯ, ಸಂಪುಟ ತರಲು ಸಹಕರಿಸಿದ ಟಿ. ಮಂಜುನಾಥ ಅವರನ್ನು ಸನ್ಮಾನಿಸಲಾಯಿತು. ಲೇಖಕ ಡಾ.ಸಿ. ಆರ್.ಚಂದ್ರಶೇಖರ್, ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ.ಕಿರಣ್ ಸಿಂಗ್, ಸದಸ್ಯರಾದ ಬಿ.ಸಿ.ಕುಶಾಲ, ಲಕ್ಷ್ಮಣ ಕೊಡಸೆ ಇದ್ದರು.

ಚಿನ್ನದ ನಿಕ್ಷೇಪ ಶೋಧ ಹೆಲಿಕಾಪ್ಟರ್ ಬಳಕೆ

ಚಿಂತಾಮಣಿ: ತಾಲ್ಲೂಕಿನ ಕೈವಾರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಕಳೆದ ಮೂರು ದಿನಗಳಿಂದ ಕಡಿಮೆ ಅಂತರದಲ್ಲಿ ರೆಡಾರ್ ಕಟ್ಟಿಕೊಂಡು ಕೆಂಪು ಬಣ್ಣದ ಹೆಲಿಕಾಪ್ಟರ್ ಚಿನ್ನದ ನಿಕ್ಷೇಪದ ಶೋಧ ನಡೆಸುತ್ತಿದೆ.

ಮನೆಗಳ ಮೇಲೆಯೇ ಹಾರಾಟ ನಡೆಸುತ್ತಿರುವ ಹೆಲಿಕಾಪ್ಟರನ್ನು ಜನರು ಆಶ್ಚರ್ಯದಿಂದ ವೀಕ್ಷಿಸಿದರು.

ಕೆಲವು ದಿನಗಳ ಹಿಂದೆ ಗುಡಿಬಂಡೆ ಹಾಗೂ ಬಾಗೇಪಲ್ಲಿ ತಾಲ್ಲೂಕಿನ ವಿವಿಧೆಡೆ ಚಿನ್ನದ ನಿಕ್ಷೇಪ ಸಿಗಲಿದೆ ಎಂಬ ಹಿನ್ನೆಲೆಯಲ್ಲಿ ಹೆಲಿಕಾಪ್ಟರ್ ಹಾರಾಟ ನಡೆಸಿತ್ತು.

ಶೌಚ ಗುಂಡಿ ಶುಚಿತ್ವ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದ ಹೀರಾಪುರ ಪ್ರದೇಶ ರೈಲ್ವೆ ಬ್ರಿಡ್ಜ್ ಬಳಿಯ ಮಾದರಸನ ಹಳ್ಳಿಯಲ್ಲಿ ಮನೆಯ ಶೌಚದ ಗುಂಡಿ ಶುಚಿಗೊಳಿಸುವ ವೇಳೆ ಕೂಲಿ ಕಾರ್ಮಿಕ, ಅವರ ರಕ್ಷಣೆಗೆ ಹೋದ ಮನೆ ಮಾಲೀಕ ಉಸಿರುಗಟ್ಟಿ ಬುಧವಾರ ಮೃತಪಟ್ಟಿದ್ದಾರೆ.

ಮಾದರಸನ ಹಳ್ಳಿ ನಿವಾಸಿ, ಮನೆ ಮಾಲೀಕ ಶಿವಕುಮಾರ ಕಾಶೀನಾಥ್ ನಂದೂರಕರ್ (52) ಹಾಗೂ ಕಲಬುರಗಿಯ ಇಂದಿರಾ ನಗರದ ನಿವಾಸಿ ರತನ್ ಭುಜಂಗರಾವ ಹೋಟಕರ್ (60) ಮೃತರು.

ಶೌಚಗುಂಡಿ ಶುಚಿತ್ವಕ್ಕೆ ರತನ್ ಅವರನ್ನು ಕರೆಸಲಾಗಿತ್ತು. ಗುಂಡಿಯ ಆಳಕ್ಕೆ ಇಳಿದಾಗ ಅವಘಡ ಸಂಭವಿಸಿದೆ.

ನಗರದಲ್ಲಿ ಇಂದು

ಸಂತ ನಿಳೋಬ ಮಹಾರಾಜ ಅವರ ಸಪ್ತಾಹ ಮಹೋತ್ಸವ: ಕಾಕಡಾರತಿ, ಜ್ಞಾನೇಶ್ವರಿ ಗ್ರಂಥ ಪಾರಾಯಣ, ವಿಷ್ಣು ಸಹಸ್ರನಾಮ ಪಾರಾಯಣ, ಆಯೋಜನೆ ಹಾಗೂ ಸ್ಥಳ: ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ಸುಭೇದಾರ್ ಛತ್ರಂ ರಸ್ತೆ ಕ್ರಾಸ್, ಗಾಂಧಿನಗರ, ಬೆಳಿಗ್ಗೆ 5ರಿಂದ

'ಸಮಾಜಶಾಸ್ತ್ರೀಯ ಚಿಂತನೆ ಮತ್ತು ರಾಮ ಮನೋಹರ ಲೋಹಿಯಾ' ವಿಷಯದ ಬಗ್ಗೆ ಉಪನ್ಯಾಸ ಮತ್ತು ಸಂವಾದ: ಅತಿಥಿಗಳು: ಮಂಗಳೂರು ವಿಜಯ್, ಗಂಗಾಧರ ಬಿ.ಎಂ., ಆಯೋಜನೆ ಹಾಗೂ ಸ್ಥಳ: ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 11

'ಹೊಲೆಮಾದಿಗರ ಹಾಡು-50', 'ದಲಿತ ಕವಿ ಸಿದ್ಧಲಿಂಗಯ್ಯ-72' ವಿಷಯದ ಬಗ್ಗೆ ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ರಮೇಶ್ ಬಿ., ಅತಿಥಿಗಳು: ಜಯಕರ ಎಸ್.ಎಂ., ಶಾಂತಲಾ ಕೆ.ಟಿ., ಉಪಸ್ಥಿತಿ: ಸಿ. ರಮಾಕುಮಾರಿ, ಮಾನಸ ಸಿದ್ಧಲಿಂಗಯ್ಯ, ಡಿ. ಶಿವಶಂಕರ್, ಅಧ್ಯಕ್ಷತೆ: ಬಿ.ಸಿ. ನಾಗೇಂದ್ರಕುಮಾರ್, ಆಯೋಜನೆ: ನಾಡೋಜ ಡಾ. ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11.30



ಸಿದ್ಧಲಿಂಗಯ್ಯ

ಪ್ರೆಸ್‌ಕ್ಲಬ್ ವರ್ಷದ ವ್ಯಕ್ತಿ ಪ್ರಶಸ್ತಿ ಪ್ರದಾನ: ನಾಗಮೋಹನದಾಸ್, ಪ್ರಶಸ್ತಿ ಪುರಸ್ಕೃತರು: ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿ: ಕೆ.ವಿ. ಪ್ರಭಾಕರ್, ಆಯೋಜನೆ ಹಾಗೂ ಸ್ಥಳ: ಪ್ರೆಸ್ ಕ್ಲಬ್ ಆಫ್ ಬೆಂಗಳೂರು, ಬೆಳಿಗ್ಗೆ 11.30

ಸಮುದಾಯ ಆಧಾರಿತ ಕಲಿಕಾ ಕೇಂದ್ರದ ಉದ್ಘಾಟನೆ: ಎಸ್.ಆರ್. ವಿಶ್ವನಾಥ್, ಆಯೋಜನೆ: ಸಾಮೂಹಿಕ ಶಕ್ತಿ, ಸ್ಪರ್ಶ, ಸ್ಥಳ: ಮೆಡಿ ಅಗ್ರಹಾರ ಸಮುದಾಯ, ಜೆಕೆ ಬಸವಣ್ಣ ನಗರ, ಮಧ್ಯಾಹ್ನ 2.30

'ಅಖಂಡ ಕರ್ನಾಟಕ ಏಕೀಕರಣ 2.0' ಮತ್ತು 'ಕನ್ನಡ ಕಡಲ್' ನಾಮಕರಣ ಅಭಿಯಾನ: ಅತಿಥಿಗಳು: 'ಮುಖ್ಯಮಂತ್ರಿ' ಚಂದ್ರು, ಅಶೋಕ ಚಂದರಗಿ, ಸೋಮಣ್ಣ ಬೇವಿನಮರ, ಪ್ರಕಾಶ್ ಮತ್ತಿಹಳ್ಳಿ, ಕವಿರಾಜ್, ಧರ್ಮೇಂದ್ರಕುಮಾರ್, ಗಿರಿರಾಜ್, ಆಯೋಜನೆ: ಕನ್ನಡ ಮೊದಲು, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣ, ಚಾಮರಾಜಪೇಟೆ, ಸಂಜೆ 4

'ಓಪನ್ ಹಾರ್ಟ್' 8ನೇ ಆವೃತ್ತಿ: ಅತಿಥಿ: ಕಲ್ಯಾಣಿ ಪ್ರಿಯದರ್ಶನ್, ಆಯೋಜನೆ ಹಾಗೂ ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಸಂಜೆ 4.30

ದತ್ತಿ ಉಪನ್ಯಾಸ: 'ಆ.ನೇ. ಉಪಾಧ್ಯೆ ಅವರ ಸಾಹಿತ್ಯ' ವಿಷಯದ ಬಗ್ಗೆ: ಎನ್.ಆರ್. ಲಲಿತಾಂಬ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ. ಸೀ. ಸಭಾಂಗಣ, ಬಿ.ಎಂ. ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

26ನೇ ವಾರ್ಷಿಕೋತ್ಸವ ಸಮಾರಂಭ: ಪುರಂದರದಾಸರ ಆರಾಧನಾ ಮಹೋತ್ಸವ, ಪುರಂದರ ಸಂಗೀತ: ಸೋಸಲೆ ಸಮೀರಾಚಾರ್, ವಸಂತ ಕುಮಾರ್ ಕುಂಬಳೆ, ಕೆ.ಎಸ್. ಸುನೀಲ್, ಎಂ.ಸಿ. ಶ್ರೀನಿವಾಸ್, ಬಿರುದು ಪ್ರದಾನ: ಆರ್.ಕೆ. ಪದ್ಮನಾಭ, ಅತಿಥಿಗಳು: ಸಂತೋಷ್ ಹೆಗ್ಡೆ, ಮದನ್ ಬಿ.ಎಚ್., ಪುತ್ತೂರು ನರಸಿಂಹನಾಯಕ್, ರಾಯಚೂರು ಶೇಷಗಿರಿದಾಸ್, ಬಿರುದು ಹಾಗೂ ಪ್ರಶಸ್ತಿ ಪುರಸ್ಕೃತರು: ವಿದ್ಯಾಭೂಷಣ, ಮಾಧವ ಗುಡಿ ಪರವಾಗಿ ಅವರ ಪತ್ನಿ ರಮಾ ಮಾಧವ ಗುಡಿ, ಆಯೋಜನೆ: ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ: ವೆಂಕೋಬಾಚಾರ್ಯ ಸ್ಮೃತಿ ಸಾಂಸ್ಕೃತಿಕ ಮಂಟಪ, ದೇವಗಿರಿ ವೆಂಕಟೇಶ್ವರ ದೇವಸ್ಥಾನ, ಬನಶಂಕರಿ 2ನೇ ಹಂತ, ಸಂಜೆ 5

ವಿದ್ಯಾಭೂಷಣ

ದಾಸ ವೈಭವ: ರಾಯಚೂರು ಶೇಷಗಿರಿದಾಸ್ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 11ನೇ ಅಡ್ಡರಸ್ತೆ, ತ್ಯಾಗರಾಜನಗರ, ಸಂಜೆ 6

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಮಂಜುನಾಥ ಭಾರತಿ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅತಿಥಿಗಳು: ಸಂತೋಷ್ ಲಾಡ್, ಬಿ.ಎಚ್. ಮರಿಯೋಜಿರಾವ್, ಅಧ್ಯಕ್ಷತೆ: ಉದಯ್ ಗರುಡಾಚಾರ್, ಉಪನ್ಯಾಸ: ಮೀನಾ ಘೋರ್ಪಡೆ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

'ದೇವಚಂದ್ರನ ರಾಜಾವಳಿ ಕಥೆ ಮತ್ತು ಕನ್ನಡದ ಇತಿಹಾಸ' ವಿಷಯದ ಬಗ್ಗೆ ಉಪನ್ಯಾಸ: ಅತಿಥಿ: ರಶ್ಮಿ ಕೆ.ಎಂ., ಉಪಸ್ಥಿತಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30

'ವರ್ಣ ಪಲ್ಲಟ' ನಾಟಕ ಪ್ರದರ್ಶನ: ನಿರ್ದೇಶನ: ಶಶಿಧರ್ ಭಾರಿಘಾಟ್, ಆಯೋಜನೆ: ಅನಾವರಣ, ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PERSONAL

Change of Name

CHANGE OF NAME
I, ROOPA K, residing at No. F 114, BEL Layout, 1st Stage, Anjananagara, Magadi Main Road, Vishwaneedam Post, Bengaluru-560091, have changed my name to GAYATHRI vide affidavit dated 16-02-2026 before notary V Nagarajan, Bengaluru. Henceforth I shall be called GAYATHRI only

Lost

LOST
I, P. Arumugathammal, W/o Late. Subramanyapillai, residing at No. AM 04, Kundalahalli Colony, Flat No. M 004, A Block, Mezzanine Floor, Millennium Habitat Apartment, Kundalahalli, K.R. Puram, Bangalore-560037, Aadhaar No. 4475 0927 5340, hereby declare that I have lost my Original Sale deed of "MILLENNIUM HABITAT"- 2BHK Flat No.M-004, 842.53 sft, built up area 400 sft, situated at Kundalahalli Village, KR puram Hobli, Bangalore East Taluk. Purchased from Mr. Venkatesh G Reddy Alieas Venkatesh Gautham Reddy, registered in the name of Late. Subramanya Pillai Document No. 14276/2001-02, registered in Sub-Registrar Office KR Puram, Bangalore. Regarding this i have given a police complaint (FIR No. 2059488/2026) on 12.02.2026, Finder please contact: 7598135480 or Handover to the nearest police station.

RENTAL PROPERTIES

Accommodation Available

Commercial

13900 SQ.FT basement plus three commercial building for rent suitable for diagnostic office tutorial college play home hospital at jayanagar 7 th block contact 9845010485

REAL ESTATE BUYING

General

General

WE_DO FUNDING & Solutions/ Settlements for disputed properties under Bank,High Court, Civil/DC/AC/ Tribunal/Tahsildar courts pending cases. Contact Verna Developers, Barton Centre, MG_Road,Blr. 9620253180.

REAL ESTATE SELLING

Industrial & Factory

Tumkur Road

SALE, 10 Acres Industrial Converted Land. Company Property near Dabaspet opposite to KIADB. NAIK: 9141326819

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಅನುದಾನಕ್ಕೆ ಬಿಗಿ ಪಟ್ಟು: ಬಗೆಹರಿಯದ ಬಿಕ್ಕಟ್ಟು

ಬೆಳ್ಳಹಳ್ಳಿ ಮುಖ್ಯರಸ್ತೆಯಲ್ಲಿ ಎರಡು ದಿನದಿಂದ ನಿಂತಿರುವ 300ಕ್ಕೂ ಹೆಚ್ಚು ಕಾಂಪ್ಯಾಕ್ಟರ್‌ಗಳು

ಪ್ರಜಾವಾಣಿ ವಾರ್ತೆ

ಸಾಲುಗಟ್ಟಿ ನಿಂತಿದ್ದ ತ್ಯಾಜ್ಯ ತುಂಬಿದ ಕಾಂಪ್ಯಾಕ್ಟರ್‌ಗಳು

ಬೆಂಗಳೂರು: ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನಕ್ಕೆ ಮಹದೇವಪುರ ಹಾಗೂ ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ರಾಜಕೀಯ ಮುಖಂಡರು ಪಟ್ಟುಹಿಡಿದಿದ್ದರಿಂದ, ತ್ಯಾಜ್ಯ ತುಂಬಿದ 300ಕ್ಕೂ ಹೆಚ್ಚು ಕಾಂಪ್ಯಾಕ್ಟರ್‌ಗಳು ಬೆಳ್ಳಹಳ್ಳಿ ಮುಖ್ಯರಸ್ತೆಯಲ್ಲಿ ಸಾಲುಗಟ್ಟಿ ನಿಂತಿವೆ.

ನಗರದಿಂದ ಮಿಶ್ರತ್ಯಾಜ್ಯ ಸಂಗ್ರಹಿಸಿಕೊಂಡ ಕಾಂಪ್ಯಾಕ್ಟರ್‌ಗಳು ಬೆಳ್ಳಹಳ್ಳಿ, ಮಿಟ್ಟಗಾನಹಳ್ಳಿ–ಕಣ್ಣೂರು ಭಾಗದಲ್ಲಿರುವ ಭೂಭರ್ತಿ ಪ್ರದೇಶದಲ್ಲಿ ವಿಲೇವಾರಿ ಮಾಡುತ್ತವೆ. ಇವುಗಳನ್ನು ಮಂಗಳವಾರ ಬೆಳಿಗ್ಗೆಯಿಂದ ತಡೆ ಹಿಡಿಯಲಾಗಿದ್ದು, ಬುಧವಾರ ರಾತ್ರಿಯವರೆಗೂ ವಿಲೇವಾರಿಗೆ ಗ್ರಾಮಸ್ಥರು ಅವಕಾಶ ನೀಡಿಲ್ಲ. ಹೀಗಾಗಿ, ನಗರದ ಹಲವು ಭಾಗಗಳಲ್ಲಿ ತ್ಯಾಜ್ಯ ಸಂಗ್ರಹ, ವಿಲೇವಾರಿ ಸ್ಥಗಿತಗೊಂಡಿದೆ.

‘ಬೆಂಗಳೂರಿನ ಕಸವನ್ನು ಇಲ್ಲಿ ವಿಲೇವಾರಿ ಮಾಡಬೇಕೆಂದರೆ ನಮ್ಮ ಭಾಗದ ಗ್ರಾಮಗಳ ಅಭಿವೃದ್ಧಿಗೆ ಅನುದಾನ ನೀಡಬೇಕು’ ಎಂದು ಒತ್ತಾಯಿಸಿ ಮಹದೇವಪುರದ ಶಾಸಕಿ ಮಂಜುಳಾ ಹಾಗೂ ಮಾಜಿ ಶಾಸಕ ಅರವಿಂದ ಲಿಂಬಾವಳಿ ಅವರು ಮಂಗಳವಾರ ಒತ್ತಾಯಿಸಿದ್ದರು. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳ ಸಭೆ ನಡೆಸಿ, ಅನುದಾನದ ಭರವಸೆ ನೀಡಿದ್ದರು.

ಮಹದೇವಪುರ ಹಾಗೂ ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರಕ್ಕೆ ತಲಾ ₹90 ಕೋಟಿ ಅನುದಾನವನ್ನು ಬಿಎಸ್‌ಡಬ್ಲ್ಯುಎಂಎಲ್ ಬುಧವಾರ ಬೆಳಿಗ್ಗೆ ಬಿಡುಗಡೆ ಮಾಡಿದೆ. ಇದಕ್ಕೆ ಒಪ್ಪಿ, ಮಂಜುಳಾ, ಅರವಿಂದ ಲಿಂಬಾವಳಿ ಅವರು ತ್ಯಾಜ್ಯ ವಿಲೇವಾರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ, ಬೆಳ್ಳಹಳ್ಳಿ ಮುಖ್ಯರಸ್ತೆಯ ಭಾಗ ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಗೆ ಬರಲಿದ್ದು, ‘ನಮಗೆ ಇನ್ನೂ ಹೆಚ್ಚಿನ ಅನುದಾನ ನೀಡಬೇಕು’ ಎಂದು ಸಚಿವ ಕೃಷ್ಣಬೈರೇಗೌಡರ ಬೆಂಬಲಿಗರು ಒತ್ತಾಯಿಸಿ, ಲಾರಿಗಳಿಂದ ತ್ಯಾಜ್ಯ ವಿಲೇವಾರಿಯಾಗದಂತೆ ಬುಧವಾರ ಮಧ್ಯಾಹ್ನದಿಂದ ತಡೆದಿದ್ದಾರೆ.

‘ಬ್ಯಾಟರಾಯನಪುರದ ರಾಜಕೀಯ ಮುಖಂಡರು ₹300 ಕೋಟಿಗೂ ಹೆಚ್ಚು ಅನುದಾನ ನೀಡಬೇಕು ಎಂದು ಬೇಡಿಕೆ ಇರಿಸಿದ್ದಾರೆ. ಆದರೆ ಅಷ್ಟು ದೊಡ್ಡ ಮೊತ್ತ ನೀಡಲು ಸಾಧ್ಯವಿಲ್ಲ. ಇದನ್ನು ಪರಿಶೀಲಿಸುವುದಾಗಿ ಹೇಳಿದರೂ, ಆ ಮುಖಂಡರು ಒಪ್ಪುತ್ತಿಲ್ಲ. ನೀವು ಹಣ ನೀಡುವವರೆಗೂ ಲಾರಿ ಮುಂದಕ್ಕೆ ಹೋಗಲು ಬಿಡುವುದಿಲ್ಲ ಎಂದು ಹಠಹಿಡಿದ್ದಾರೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

‘ಬ್ಯಾಟರಾಯನಪುರದ ರಾಜಕೀಯ ಮುಖಂಡರ ಮನವೊಲಿಸುವ ಪ್ರಕ್ರಿಯೆ ಬುಧವಾರ ರಾತ್ರಿಯವರೆಗೂ ನಡೆದರೂ ಅದು ಸಫಲವಾಗಲಿಲ್ಲ. ಹೀಗಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮಾಹಿತಿ ನೀಡಲಾಗಿದ್ದು, ಅವರು ಸಚಿವ ಕೃಷ್ಣ ಬೈರೇಗೌಡರೊಂದಿಗೆ ಮಾತುಕತೆ ನಡೆಸಿ, ತ್ಯಾಜ್ಯ ವಿಲೇವಾರಿಗೆ ಅಡ್ಡಿಯಾಗದಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳು ಮನವಿ ಮಾಡಿಕೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಕಳೆದ ವರ್ಷದ ಮಾರ್ಚ್‌ನಲ್ಲಿಯೂ ತ್ಯಾಜ್ಯ ವಿಲೇವಾರಿಗೆ ತಡೆ ಹಾಕಲಾಗಿತ್ತು. ಗ್ರಾಮಗಳ ಅಭಿವೃದ್ಧಿಯಾಗಬೇಕು, ದ್ರವತ್ಯಾಜ್ಯ ತೆರವುಗೊಳಿಸಬೇಕು ಎಂದು ರಾಜಕೀಯ ಪಕ್ಷಗಳ ಸ್ಥಳೀಯ ಮುಖಂಡರು ಒತ್ತಾಯಿಸಿದ್ದರು. ಅಲ್ಲದೆ, ಅನುದಾನದ ಬೇಡಿಕೆಯನ್ನೂ ಇರಿಸಿದ್ದರು. ಹೀಗೆ, ವರ್ಷದ ಹಲವು ಸಂದರ್ಭದಲ್ಲಿ ಇಂತಹ ತಡೆಯಾಗುತ್ತಿದ್ದು, ಇದಕ್ಕೆ ಶಾಶ್ವತವಾದ ಕಾನೂನೂನಾತ್ಮಕ ಕ್ರಮವಾಗಬೇಕಿದೆ’ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು
- ಎರಡು ವಿಧಾನಸಭೆ ಕ್ಷೇತ್ರಕ್ಕೆ ತಲಾ ₹90 ಕೋಟಿ ಅನುದಾನ
- ಬ್ಯಾಟರಾಯನಪುರ ಕ್ಷೇತ್ರದ ಮುಖಂಡರಿಂದ ಹೆಚ್ಚು ಹಣಕ್ಕೆ ಒತ್ತಾಯ
- ಕಳೆದ ವರ್ಷವೂ ತಡೆ, ಅನುದಾನಕ್ಕೆ ಬೇಡಿಕೆ

ಬೆಂಗಳೂರಿನಲ್ಲಿ ಕಳೆದ ಮೂರು ತಿಂಗಳಿಂದ ಕಸ ವಿಲೇವಾರಿಯಾಗುತ್ತಿಲ್ಲ. ಲಾರಿಗಳಲ್ಲಿ ಕಸ ತುಂಬಿಕೊಂಡಿವೆ. ಬೆಂಗಳೂರನ್ನು ಸರ್ಕಾರ ಗಾರ್ಬೇಜ್ ಸಿಟಿ ಮಾಡಿದೆ
ಆರ್. ಅಶೋಕ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಬ್ಲ್ಯಾಕ್‌ಮೇಲ್ ಮಾಡಿದರೆ ಹುಷಾರ್: ಡಿಕೆಶಿ ಎಚ್ಚರಿಕೆ

‘ತ್ಯಾಜ್ಯ ವಿಲೇವಾರಿಗೆ ಅಡ್ಡಿಪಡಿಸಿ, ಅನುದಾನಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಿದರೆ ಹುಷಾರ್. ಅವರ ಮೇಲೆ ಎಸ್ಮಾ ಸೇರಿದಂತೆ ಎಲ್ಲ ರೀತಿಯ ಕಾನೂನು ಕ್ರಮಗಳನ್ನೂ ಕೈಗೊಳ್ಳಲಾಗುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಸಿದರು.

‘ಗೌರವದಿಂದ ಇದ್ದರೆ ಸರಿ. ಇಲ್ಲ ಅಂದರೆ ಕಸ ವಿಲೇವಾರಿಗೆ ಅಡ್ಡಿಪಡಿಸುವವರು ಶಾಸಕರಾದರೂ ಸರಿ, ಬೇರೆ ಯಾರೇ ಆಗಿದ್ದರೂ ಸಹ ಎಸ್ಮಾ ಕಾಯ್ದೆ ಅಡಿ, ಯಾವುದೇ ಕರುಣೆ ಇಲ್ಲದೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಶಾಸಕರ ಮನೆ ಮುಂದೆ ಅಥವಾ ಬಿಜೆಪಿ ಕಚೇರಿ ಎದುರು ಕಸವನ್ನು ತೆಗೆದುಕೊಂಡು ಹೋಗಿ ಸುರಿಯಬೇಕಾಗುತ್ತದೆ’ ಎಂದರು.

‘ಶಾಸಕರು ಕಸ ಹಾಕಬಾರದು ಹಾಗೂ ನಮಗೆ ಅನುದಾನ ಬೇಕು ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಮಂಗಳವಾರದಂದು ಅರವಿಂದ ಲಿಂಬಾವಳಿ, ಬುಧವಾರದಂದು ದೊಡ್ಡಬಳ್ಳಾಪುರ ಶಾಸಕರು. ಹೀಗೆ ಮಾಡಿದರೆ ಕಸ ಎಲ್ಲಿಗೆ ಹೋಗಬೇಕು? ಕಸವು ಆರ್.ಅಶೋಕ್, ವಿಜಯೇಂದ್ರ ಅಥವಾ ಬಿಜೆಪಿ ಕಚೇರಿಗೆ ಹೋಗಬೇಕಾಗುತ್ತದೆ’ ಎಂದು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದರು.

‘ಕಸವನ್ನು ಎಲ್ಲಾದರೂ ಒಂದು ಕಡೆ ಹಾಕಬೇಕಲ್ಲವೇ? ಈ ಹಿಂದಿನಿಂದ ಏನು ಕೆಲಸ ಮಾಡಿಕೊಂಡು ಬರಲಾಗುತ್ತಿತ್ತೊ ಅದೇ ಕೆಲಸವನ್ನು ಈಗಲೂ ಮಾಡಿಕೊಂಡು ಬರಲಾಗುತ್ತಿದೆ. ಅವರ ಕ್ಷೇತ್ರಗಳಿಗೆ ಅನುದಾನ ಬೇಕು ಎಂದು ಹೀಗೆ ಮಾಡುತ್ತಿದ್ದಾರೆ. ಕಸದ ಲಾರಿಯಿಂದ ಅಪಘಾತ ಆಗಬಾರದಿತ್ತು, ಆಗಿದೆ. ಅದಕ್ಕೆ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಕಸ ವಿಲೇವಾರಿ ನಿಲ್ಲಿಸಿರುವುದು ಸರಿಯಲ್ಲ. ಎಸ್‌.ಟಿ.ಸೋಮಶೇಖರ್, ಶಿವಣ್ಣ, ಕೃಷ್ಣಬೈರೇಗೌಡ ಅವರ ಕ್ಷೇತ್ರಗಳಲ್ಲೂ ಕಸ ವಿಲೇವಾರಿ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

‘ಹೊಸದಾಗಿ ಎರಡು ಜಾಗಗಳನ್ನು ಖರೀದಿ ಮಾಡಲಾಗಿದೆ. ಅಲ್ಲಿ ಕಸ ವಿಲೇವಾರಿಗೆ ಕಾನೂನಿನ ಪ್ರಕಾರ ಟೆಂಡರ್ ಕರೆಯಲಾಗಿದೆ. ಒಂದಷ್ಟು ಕಾನೂನಾತ್ಮಕ ವಿಚಾರಗಳನ್ನು ಬಗೆಹರಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

ಮಾತುಕತೆ ನಡೆಯುತ್ತಿದೆ: ಮಹೇಶ್ವರ್

‘ಸ್ಥಳೀಯ ಶಾಸಕರೊಂದಿಗೆ ಮಾತುಕತೆ ನಡೆಸುತ್ತಿದ್ದೇವೆ. ಅವರನ್ನು ಮನವೊಲಿಸುವ ಕಾರ್ಯ ನಡೆಯುತ್ತಿದೆ. ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಲಾಗುತ್ತದೆ. ಗ್ರಾಮಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಇನ್ನೂ ಹೆಚ್ಚಿನ ಕೆಲಸ ಆಗಬೇಕೆಂಬ ಬೇಡಿಕೆ ಇದೆ. ಅದನ್ನು ಪರಿಶೀಲಿಸಲಾಗುತ್ತಿದೆ. ನಗರದಲ್ಲಿ ಎಲ್ಲ ಜನರೂ ತ್ಯಾಜ್ಯವನ್ನು ವಿಂಗಡಿಸಿ ಕೊಟ್ಟರೆ, ಭೂಭರ್ತಿಗೆ ಹೋಗುವ ಪ್ರಮಾಣ ಬಹುತೇಕ ನಿಲ್ಲುತ್ತದೆ’ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ತಿಳಿಸಿದರು.

ಹೆದರುವ ಪ್ರಶ್ನೆಯೇ ಇಲ್ಲ: ವಿಜಯೇಂದ್ರ

‘ಉಪ ಮುಖ್ಯಮಂತ್ರಿಯವರ ಗೊಡ್ಡು ಬೆದರಿಕೆಗೆ ಹೆದರುವ ಪ್ರಶ್ನೆಯೇ ಇಲ್ಲ. ಇವರ ಯೋಗ್ಯತೆಗೆ ಸುರಂಗ ರಸ್ತೆ, ಸಿಂಗಪುರ, ದುಬೈ ಮಾಡುವುದನ್ನು ಬಿಟ್ಟು ಗುಂಡಿ ಮುಚ್ಚುವ ಕೆಲಸ ಮೊದಲು ಮಾಡಲಿ. ಕಸ ವಿಲೇವಾರಿ ರಾಜ್ಯ ಸರ್ಕಾರದ ಜವಾಬ್ದಾರಿ. ತಾವೇ ಬೆಂಗಳೂರಿನ ಉಸ್ತುವಾರಿ ಸಚಿವರು. ಅದನ್ನು ಹೇಗೆ ಸರಿಪಡಿಸಬೇಕೆಂಬ ಕುರಿತು ಗಮನ ಕೊಡಲಿ. ಈ ರೀತಿ ದರ್ಪ, ಸವಾಲು ಹಾಕುವ ಅಗತ್ಯ ಇಲ್ಲ. ಬೆಂಗಳೂರಿನ ಜ್ವಲಂತ ಸಮಸ್ಯೆಗೆ ಪರಿಹಾರ ಕೊಡಲಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಡಿ.ಕೆ. ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದರು.

ಎಸ್ಮಾದಡಿ ಬಂಧನವಾಗಲು ಸಿದ್ಧ: ಧೀರಜ್ ಮುನಿರಾಜು

‘ನನಗೆ ಅನುದಾನ, ಕಸದ ಅಗತ್ಯ ಇಲ್ಲ. ಎಸ್ಮಾ ಕಾಯ್ದೆ ಹಾಕಿ ನನ್ನನ್ನು ಬಂಧಿಸುವುದಾದರೆ ಬಂಧಿಸಲಿ. ತಾಲ್ಲೂಕಿನ ಜನತೆಗಾಗಿ, ನೀರು- ವಾಯು ಮಾಲಿನ್ಯ ತಪ್ಪಿಸಲು, ಅವೈಜ್ಞಾನಿಕವಾಗಿ ಭೂಮಿಗೆ ಕಸ ಭರ್ತಿ ಮಾಡುವ ಪದ್ಧತಿಯನ್ನು ತಪ್ಪಿಸಲು ಮುಂದಾಗಿರುವ ನನ್ನನ್ನು ಬಂಧಿಸಿ, ಆರು ತಿಂಗಳು ಜೈಲಿಗೆ ಕಳುಹಿಸಿದರೂ ನಾನು ಅದಕ್ಕೆ ಸಿದ್ಧ’ ಎಂದು ದೊಡ್ಡಬಳ್ಳಾಪುರ ವಿಧಾನಸಭೆ ಕ್ಷೇತ್ರದ ಶಾಸಕ ಧೀರಜ್ ಮುನಿರಾಜು ಹೇಳಿದರು.

‘ಉಪ ಮುಖ್ಯಮಂತ್ರಿಯವರು ಕಸದ ವಿಚಾರ ಮಾತನಾಡುವಾಗ ಬ್ಲ್ಯಾಕ್‌ಮೇಲ್ ಪದ ಬಳಸಿದ್ದಾರೆ. ಈ ಮೂಲಕ ಚುನಾಯಿತ ಪ್ರತಿನಿಧಿ, ದೊಡ್ಡಬಳ್ಳಾಪುರ ಕ್ಷೇತ್ರದ ಜನತೆಗೆ ಅವಮಾನ ಮಾಡಬಾರದು’ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

‘ದೊಡ್ಡಬಳ್ಳಾಪುರ ಕ್ಷೇತ್ರದ ಜನರು ಏನು ಪಾಪ ಮಾಡಿದ್ದಾರೆ? ಇಲ್ಲಿಗೆ ವೈದ್ಯಕೀಯ ತ್ಯಾಜ್ಯ ಏಕೆ ಕಳಿಸುತ್ತಿದ್ದಾರೆ. ಬಲ್ಕ್ ವೇಸ್ಟ್ ಕಮರ್ಷಿಯಲ್ ತ್ಯಾಜ್ಯಕ್ಕೆ ಕಳಿಸುವಂತಿಲ್ಲ; 20 ಬಲ್ಕ್ ವಾಹನ ಕಳಿಸುತ್ತಿದ್ದಾರೆ. ಆದರೂ ಎಂಎಸ್‌ಜಿಪಿ ಘಟಕಕ್ಕೆ 70 ವಾಹನ ಹೋಗಲು ಬಿಟ್ಟಿದ್ದೇವೆ’ ಎಂದರು.

‘ತಾಲ್ಲೂಕಿನ ಜನತೆಯ ಪರವಾದ ಹೋರಾಟವನ್ನು ನಾನು ನಿಲ್ಲಿಸುವುದಿಲ್ಲ. ನಿಗದಿಪಡಿಸಿದ ಕಸದ ವಾಹನ, ‘ಒಎಂ’ ಕಾಪಿಯಲ್ಲಿ ಏನಿದೆಯೋ ಅದನ್ನು ಬಿಟ್ಟು ಉಳಿದ ಹೆಚ್ಚುವರಿ ವಾಹನಗಳನ್ನು ನಾನು ನಿಲ್ಲಿಸುತ್ತೇನೆ’ ಎಂದು ತಿಳಿಸಿದರು.

ಚಿಟಿಕೆ ಸುದ್ದಿ

ಜಲಮಂಡಳಿ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಫೆ.19ರಂದು ಬೆಳಿಗ್ಗೆ 9.30ರಿಂದ 11ರವರೆಗೆ ಉಪವಿಭಾಗಗಳಲ್ಲಿ ನೀರಿನ ಅದಾಲತ್ ಹಮ್ಮಿಕೊಂಡಿದೆ.

ವಾಯವ್ಯ–2 ಉಪವಿಭಾಗದ ಅದಾಲತ್ ಪೀಣ್ಯ 2ನೇ ಹಂತದ ಬಿಐಇಟಿ ಬಸ್ ನಿಲ್ದಾಣ ಹತ್ತಿರ, ವಾಯವ್ಯ–4 ಸಂಕದಕಟ್ಟೆ, ಕೇಂದ್ರ 1–2 ಫ್ರೇಜರ್‌ಟೌನ್, ಈಶಾನ್ಯ–2 ಸಹಕಾರನಗರ, ಉತ್ತರ 1–2 ಆರ್‌ಟಿ ನಗರ, ಉತ್ತರ 2–2 ವಿದ್ಯಾರಣ್ಯಪುರ, ದಕ್ಷಿಣ 1–2 ಕೋಡಿಚಿಕ್ಕನಹಳ್ಳಿ, ದಕ್ಷಿಣ 2–2 ಬೇಗೂರು, ನೈರುತ್ಯ–2 ವಿವಿಪುರ, ನೈರುತ್ಯ–5 ಬನಶಂಕರಿ 3ನೇ ಹಂತ, ಪೂರ್ವ 1–3 ಕಾಡುಗೋಡಿ, ಪೂರ್ವ 2–3 ಉಪವಿಭಾಗದ ಅದಾಲತ್ ಕಲ್ಕೆರೆಯಲ್ಲಿ ನಡೆಯಲಿದೆ. ಸಹಾಯವಾಣಿ 1916.

ರೈಲು ಗಾಲಿ ಕಾರ್ಖಾನೆಗೆ ನೂತನ ಜಿ.ಎಂ

ಮನೋರಂಜನ್ ಪ್ರಧಾನ್

ಯಲಹಂಕ: ರೈಲು ಗಾಲಿ ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕರಾಗಿ ಮನೋರಂಜನ್ ಪ್ರಧಾನ್ ಅವರು ಬುಧವಾರ ಅಧಿಕಾರ ವಹಿಸಿಕೊಂಡರು.

ಐಆರ್‌ಎಸ್‌ಎಂಇ ಅಧಿಕಾರಿಯಾಗಿರುವ ಅವರು, ಚೆನ್ನೈನ ಇಂಟಿಗ್ರಲ್ ಕೋಚ್ ಫ್ಯಾಕ್ಟರಿಯಲ್ಲಿ(ಐಸಿಎಫ್) ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕ, ಖರಗ್‌ಪುರದಲ್ಲಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಐಸಿಎಫ್‌ನೊಂದಿಗೆ ಚಿತ್ತರಂಜನ್ ಲೋಕೊಮೋಟಿವ್ ವರ್ಕ್ಸ್, ಪೂರ್ವ ರೈಲ್ವೆ, ದಕ್ಷಿಣ ಪೂರ್ವ ರೈಲ್ವೆ, ನೈಋತ್ಯ ರೈಲ್ವೆ ಹಾಗೂ ದಕ್ಷಿಣ ರೈಲ್ವೆಗಳಲ್ಲಿ ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ.

ಕಾನೂನು ಸಲಹೆ ಮೇರೆಗೆ ಕ್ರಮ: ಜೋಶಿ

ಬೆಂಗಳೂರು: ‘ದೂರದರ್ಶನದಲ್ಲಿ ಉಪ ಮಹಾನಿರ್ದೇಶಕನಾಗಿ ಕಾರ್ಯ ನಿರ್ವಹಿಸುತ್ತಿರುವಾಗ, ‘ಮಾಹಿತಿ ಹಕ್ಕು ಕಾಯ್ದೆ ಅಡಿ ಮಾಹಿತಿ ನೀಡಲಿಲ್ಲ’ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಸ್ತವ ಅರಿಯಲು ನ್ಯಾಯಾಲಯದ ಆದೇಶಕ್ಕೆ ಕಾಯಬೇಕು’ ಎಂದು ಮಹೇಶ ಜೋಶಿ ಹೇಳಿದ್ದಾರೆ.

‘ಈ ಪ್ರಕರಣವು 2010ರಲ್ಲಿ ನಡೆದಿತ್ತು. ಕಾನೂನು ಸಲಹೆ ಮೇರೆಗೆ ಹಾಗೂ ನವದೆಹಲಿಯ ದೂರದರ್ಶನ ಮಹಾ ನಿರ್ದೇಶನಾಲಯದ ಸೂಚನೆ ಅನುಸಾರ ಕ್ರಮಗಳನ್ನು ಕೈಗೊಂಡಿದ್ದೇನೆ. ವಾಸ್ತವಿಕ ಮಾಹಿತಿ ಅರಿಯಬೇಕು’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನುಷ್ಯನ ಬುದ್ಧಿಶಕ್ತಿಗಿಂತ ಮಿಗಿಲಾದುದು ಯಾವುದೂ ಇಲ್ಲ: ನಾರಾಯಣ ಮೂರ್ತಿ



ನವದೆಹಲಿ(ಪಿಟಿಐ): ‘ಕೃತಕ ಬುದ್ಧಿಮತ್ತೆಯಿಂದ(ಎ.ಐ) ಆಗುವ ಪರಿಣಾಮಗಳ ಬಗ್ಗೆ ಎಷ್ಟೇ ಹೇಳಿಕೊಂಡರೂ ಮಾನವನ ಬುದ್ಧಿಶಕ್ತಿಯನ್ನು ಅದು ಮೀರಲಾರದು’ ಎಂದು ಇನ್ಫೊಸಿಸ್ ಸಂಸ್ಥಾಪಕ ಎನ್‌.ಆರ್‌. ನಾರಾಯಣ ಮೂರ್ತಿ ಬುಧವಾರ ಹೇಳಿದರು.

ದೆಹಲಿ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ‘ಲೀಡರ್ಸ್ ಟಾಕ್’ ಸಂವಾದದಲ್ಲಿ ಮಾತನಾಡಿದ ಅವರು, ‘ಮಾನವನ ಬುದ್ಧಿಶಕ್ತಿಗಿಂತ ಮಿಗಿಲಾದುದು ಯಾವುದೂ ಇಲ್ಲ’ ಎಂದು ಪ್ರತಿಪಾದಿಸಿದರು.

‘ಪ್ರಸ್ತುತ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯು ನಮಗೆ ವರವಾಗಿದೆಯೇ ಹೊರತು ಅದು ಬೆದರಿಕೆಯಲ್ಲ. ಕೌಶಲಗಳನ್ನು ಮತ್ತೆ ಸಾಣೆ ಹಿಡಿಯುವುದು ಹಾಗೂ ಕಲಿಯುವ ಸಾಮರ್ಥ್ಯ ವೃದ್ಧಿಸಿಕೊಳ್ಳುವುದಕ್ಕೆ ಯುವಕರು ಮಹತ್ವ ನೀಡಬೇಕು ಎಂಬುದಾಗಿ ನಾರಾಯಣಮೂರ್ತಿ ಹೇಳಿದರು’ ಎಂದು ವಿಶ್ವವಿದ್ಯಾಲಯ ತಿಳಿಸಿದೆ.

ಮಹಿಳೆಯರಿಗೆ ಶೇ 10 ಮೀಸಲು

‘ಫೈರ್‌ಮನ್’ ಹುದ್ದೆಗೆ ‘ಫೈರ್‌ಫೈಟರ್’; ಮರು ನಾಮಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಇರುವ ಹುದ್ದೆಗಳ ಪೈಕಿ ಶೇ 10 ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಟ್ಟು ರಾಜ್ಯ ಸರ್ಕಾರ ಇತ್ತೀಚೆಗೆ ಆದೇಶ ಹೊರಡಿಸಿದೆ.

ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ನೀಡುವ ಉದ್ದೇಶದಿಂದ ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆಯಲ್ಲಿರುವ ಹುದ್ದೆಗಳಿಗೆ ಮರು ನಾಮಕರಣ ಮಾಡಲಾಗಿದೆ.

ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ‘ಫೈರ್‌ಮನ್’ ಮತ್ತು ‘ಲೀಡಿಂಗ್ ಫೈರ್‌ಮನ್’ ಎಂಬ ಹುದ್ದೆಗಳು ಇದ್ದವು. ಆ ಹುದ್ದೆಗಳ ಪದನಾಮವನ್ನು ‘ಫೈರ್‌ಫೈಟರ್’ ಮತ್ತು ‘ಲೀಡಿಂಗ್ ಫೈರ್‌ಫೈಟರ್’ ಎಂದು ಬದಲಾವಣೆ ಮಾಡಿ ರಾಜ್ಯ ಸರ್ಕಾರವು ಆದೇಶಿಸಿದೆ.

ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು 1964ರಿಂದ ಕಾರ್ಯ ನಿರ್ವಹಿಸುತ್ತಿದೆ. ಇಲಾಖೆಯಲ್ಲಿ ಮಹಿಳೆಯರ ನೇಮಕಾತಿ ಇದುವರೆಗೂ ನಡೆದಿರಲಿಲ್ಲ. ಇಲಾಖೆಯ ನೇಮಕಾತಿ ವೇಳೆ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಬೇಕು ಎಂದು ಹೋರಾಟಗಳು ನಡೆದಿದ್ದವು. ಆ ಹೋರಾಟಗಳಿಗೆ ಇದೀಗ ಸ್ಪಂದನೆ ಸಿಕ್ಕಿದೆ.

ಅಗ್ನಿ ಅವಘಡ, ಪ್ರಕೃತಿ ವಿಕೋಪ, ನೆರೆ ಹಾವಳಿ, ಜಾನುವಾರುಗಳ ರಕ್ಷಣೆ, ವಿವಿಧ ಕಟ್ಟಡಗಳಲ್ಲಿ ಅಗ್ನಿ ದುರಂತದ ಸಂದರ್ಭದಲ್ಲಿ ಗಾಯಗೊಂಡ ಮಹಿಳೆಯರ ರಕ್ಷಣೆ, ಆಸ್ಪತ್ರೆಗೆ ದಾಖಲಿಸುವ ಕೆಲಸವನ್ನು ಪುರುಷ ಸಿಬ್ಬಂದಿ ನಿರ್ವಹಿಸುತ್ತಿದ್ದರು. ತೀವ್ರ ಗಾಯಗೊಂಡ ಹಾಗೂ ಅಸ್ವಸ್ಥ ಮಹಿಳೆಯರನ್ನು ಆಸ್ಪತ್ರೆಗೆ ದಾಖಲಿಸಲು ಮಹಿಳೆ ಸಿಬ್ಬಂದಿಯ ಅಗತ್ಯವಿತ್ತು. ನೇಮಕಾತಿಯಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲಾಗಿದೆ ಎಂದು ಇಲಾಖೆಯ ಅಧಿಕಾರಿಗಳು ಹೇಳಿದರು.

ಇಲಾಖೆಗೆ ಒಟ್ಟು 7,159 ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 5,272 ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಉಳಿದ ಹುದ್ದೆಗಳು ಖಾಲಿಯಿವೆ. ಇವುಗಳ ಪೈಕಿ ಅಗ್ನಿಶಾಮಕ ಮತ್ತು ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಶೇ 10 ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿರಿಸಿ ಆದೇಶ ಹೊರಡಿಸಲಾಗಿದೆ.

ಲೆಗಸಿ ಜಾಹೀರಾತಿಗೆ ‘ಒಟಿಎ’

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಪರಂಪರಾಗತ (ಲೆಗಸಿ) ಜಾಹೀರಾತುಗಳಿಗೆ ಅನುಮತಿ ನೀಡಲು ಒಂದು ಬಾರಿ ಅವಕಾಶ (ಒಟಿಎ) ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಗ್ರೇಟರ್ ಬೆಂಗಳೂರು ಪ್ರದೇಶ (ಜಾಹೀರಾತು) ನಿಯಮಗಳು, 2025ರಲ್ಲಿ ಲೆಗಸಿ ಜಾಹೀರಾತು ಹಾಗೂ ಎಲ್‌.ಇ.ಡಿ ಸ್ವಯಂ ಜಾಹೀರಾತು ಫಲಕಗಳನ್ನು ವಾಣಿಜ್ಯ ಜಾಹೀರಾತು ಫಲಕಗಳನ್ನಾಗಿ ಪರಿವರ್ತಿಸಲು ‘ಒಟಿಎ’ ಕಲ್ಪಿಸಲಾಗಿದೆ.

‘ಒಟಿಎ’ ಅನ್ನು ಕೇಂದ್ರೀಕೃತವಾಗಿ ಮೇಲ್ವಿಚಾರಣೆ ನಡೆಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ಅವರನ್ನು, ನೋಡಲ್ ಅಧಿಕಾರಿಯಾಗಿ ಸರ್ಕಾರ ನೇಮಿಸಿದೆ.

ಬಿಬಿಎಂಪಿ ಜಾಹೀರಾತು ಉಪವಿಧಿಗಳು-2006 ಅಡಿಯಲ್ಲಿ ಖಾಸಗಿ ಆಸ್ತಿಯ ಮೇಲೆ ಜಾಹೀರಾತು ಅಳವಡಿಸಲು ಅನುಮತಿ ಪಡೆದಿರುವ ಹಾಗೂ ಸಂಪೂರ್ಣ ಜಾಹೀರಾತು ತೆರಿಗೆ ಪಾವತಿಸಿರುವ ಜಾಹೀರಾತು ಸಂಸ್ಥೆಗಳನ್ನು ಪರಂಪರಾಗತ (ಲೆಗಸಿ) ಜಾಹೀರಾತು ಸಂಸ್ಥೆಗಳೆಂದು ಪರಿಗಣಿಸಲಾಗಿರುತ್ತದೆ. ಯಾವುದೇ ಹಿಂದಿನ ಜಾಹೀರಾತು ಉಪವಿಧಿಗಳ ಅಡಿಯಲ್ಲಿ ಎಲ್‌.ಇ.ಡಿ ಜಾಹೀರಾತು ಪ್ರದರ್ಶನ ಫಲಕಕ್ಕಾಗಿ ಪಡೆಯಲಾದ ಮತ್ತು ಚಾಲ್ತಿಯಲ್ಲಿರುವ ಹಾಗೂ ಅನುಮತಿ ಅವಧಿಯೊಳಗೆ ಎಲ್‌.ಇ.ಡಿ ಸ್ವಯಂ ಜಾಹೀರಾತುಗಳನ್ನು ವಾಣಿಜ್ಯ ಜಾಹೀರಾತು ಫಲಕಗಳನ್ನಾಗಿ ಪರಿವರ್ತಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

ಅರ್ಹ ಜಾಹೀರಾತುದಾರರು ಏ. 13ರೊಳಗೆ ಜಿಬಿಎ ಜಾಹೀರಾತು ವಿಭಾಗ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಾಂಸ್ಕೃತಿಕ ಮುನ್ನೋಟ

ಸಂಗೀತ–ನೃತ್ಯ

ಜಯತೀರ್ಥ ಮೇವುಂಡಿ

ಬೆಂಗಳೂರು: ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನವು 26ನೇ ವಾರ್ಷಿಕೋತ್ಸವದ ಪ್ರಯುಕ್ತ ಬನಶಂಕರಿ 2ನೇ ಹಂತದಲ್ಲಿರುವ ದೇವಗಿರಿ ವೆಂಕಟೇಶ್ವರ ದೇವಸ್ಥಾನದ ವೆಂಕೋಬಾಚಾರ್ಯ ಸ್ಮೃತಿ ಸಾಂಸ್ಕೃತಿಕ ಮಂಟಪದಲ್ಲಿ ಸಂಗೀತ–ನೃತ್ಯ ಕಾರ್ಯಕ್ರಮ ಹಮ್ಮಿಕೊಂಡಿದೆ.

20ರಂದು ಸಂಜೆ 6 ಗಂಟೆಯಿಂದ ಹರಿದಾಸ ಕೃತಿಗಳ ಗಾನಾಮೃತ ನಡೆಯಲಿದೆ. ಜಯತೀರ್ಥ ಮೇವುಂಡಿ ಅವರು ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಪ್ರಸ್ತುತಪಡಿಸಲಿದ್ದಾರೆ. ಅಕ್ಷಯ್ ಜೋಶಿ (ತಬಲಾ), ಶ್ರೀರಕ್ಷ ಶಾನಭೋಗ್ (ಹಾರ್ಮೋನಿಯಂ) ಸಾಥ್ ನೀಡಲಿದ್ದಾರೆ. 21ರಂದು ಸಂಜೆ 6ಕ್ಕೆ ‘ತ್ಯಾಗರಾಜ ವೈಭವಂ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಸ್‌. ಐಶ್ವರ್ಯ ಹಾಗೂ ಎಸ್‌. ಸೌಂದರ್ಯ ಅವರಿಂದ ಯುಗಳ ಗಾಯನ ನಡೆಯಲಿದೆ. ಅದಿತಿ ಕೃಷ್ಣ ಪ್ರಕಾಶ್ (ಪಿಟೀಲು), ನಿಕ್ಷಿತ್ ಪುತ್ತೂರು (ಮೃದಂಗ) ಹಾಗೂ ಆರ್‌. ಕಾರ್ತಿಕ್ (ಖಂಜಿರ) ಅವರು ಸಾಥ್ ನೀಡಲಿದ್ದಾರೆ.

22ರಂದು ಸಂಜೆ 6 ಗಂಟೆಗೆ ‘ಶ್ರೀರಾಮ ಚರಿತ್ರೆ’ ನೃತ್ಯ ವೈಭವ ನಡೆಯಲಿದೆ. ಮಮತಾ ಓಜಾ, ಮಾನಸಿ ಪ್ರಿಯದರ್ಶಿನಿ, ಧರಾಶ್ರೀ ಮಹಾರಾಜಾ ನೃತ್ಯ ಪ್ರದರ್ಶನ ನೀಡಲಿದ್ದಾರೆ.

ಉಡುಪ ಸಂಗೀತೋತ್ಸವ

ಬೆಂಗಳೂರು: ಉಡುಪ ಪ್ರತಿಷ್ಠಾನದ ದಶಮಾನೋತ್ಸವದ ಅಂಗವಾಗಿ ಇದೇ 20ರಿಂದ 22ರವರೆಗೆ ವೈಯಾಲಿಕಾವಲ್‌ನಲ್ಲಿರುವ ಚೌಡಯ್ಯ ಸ್ಮಾರಕ ಭವದಲ್ಲಿ ಉಡುಪ ಸಂಗೀತೋತ್ಸವ ಹಮ್ಮಿಕೊಳ್ಳಲಾಗಿದೆ.

20ರಂದು ಸಂಜೆ 7ಕ್ಕೆ ಹಿಂದೂಸ್ತಾನಿ ಗಾಯಕಿ ಬೇಗಂ ಪರ್ವಿನ್ ಸುಲ್ತಾನ್ ಅವರಿಂದ ಗಾಯನ ನಡೆಯಲಿದೆ. ರವೀಂದ್ರ ಕಾಟೋಟಿ (ಹಾರ್ಮೋನಿಯಂ), ಓಜಸ್ ಆದ್ಯ (ತಬಲಾ) ಸಾಥ್ ನೀಡಲಿದ್ದಾರೆ. ಬಳಿಕ ಪುರ್ಬಯನ್ ಚಟರ್ಜಿ ಅವರಿಂದ ಸಿತಾರ್ ವಾದನ ನಡೆಯಲಿದೆ. 21ರಂದು ಸಂಜೆ 6ಕ್ಕೆ ತಾಳವಾದ್ಯ ಕಛೇರಿ ನಡೆಯಲಿದೆ. ತಿರುವಾಯೂರು ಭಕ್ತವತ್ಸಲಂ, ನವೀನ್ ಶರ್ಮಾ, ವಿಜಯ ಶ್ಯಾಮರಾವ್ ಚವ್ಹಾಣ್ ಪಾಲ್ಗೊಳ್ಳಲಿದ್ದಾರೆ. ನಂತರ ರಂಜನಿ ಮತ್ತು ಗಾಯತ್ರಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ನಡೆಯಲಿದೆ.

22ರಂದು ಸಂಜೆ 7ಕ್ಕೆ ವಿಶ್ವಮೋಹನ್ ಭಟ್ ಅವರಿಂದ ವೀಣಾವಾದನ ಹಮ್ಮಿಕೊಳ್ಳಲಾಗಿದೆ. ಶಶಾಂಕ ಸುಬ್ರಹ್ಮಣ್ಯ, ಹರೀಶ ಶಿವರಾಮ ಕೃಷ್ಣನ್, ದರ್ಶನ್ ದೋಶಿ, ಶೆಲ್ಡನ್ ಡಿಸಿಲ್ವಾ, ಮಂಜುನಾಥ್ ಸತ್ಯಶೀಲ್, ರಾಹುಲ್ ಅಡ್ವಾಣಿ, ಹಿಮಾಂಶು ಮಹಾಂತ ಸಾಥ್ ನೀಡಲಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯ.


ವಿಶ್ವಮೋಹನ್ ಭಟ್

ಹಾಸ್ಯ ನಾಟಕ

ಬೆಂಗಳೂರು: ರಂಗರಸಧಾರೆ ಹವ್ಯಾಸಿ ರಂಗ ತಂಡದಿಂದ ಇದೇ 21ರಂದು ಸಂಜೆ 7 ಗಂಟೆಗೆ ಮಲ್ಲೇಶ್ವರದ ಸೇವಾಸದನದಲ್ಲಿ ‘ಮಾವ...! ಮಾವ...!! ಕಥೆ ಕೇಳು...!!!’ ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಪಾರ್ವತೀಸುತ ಅವರು ಈ ನಾಟಕ ರಚಿಸಿದ್ದಾರೆ. ವಿಜಯ್ ಕಶ್ಯಪ್ ಅವರು ನಿರ್ದೇಶಿಸಿದ್ದಾರೆ.

‘ಜ್ಞಾನ ದೇಗುಲ’ ನಾಟಕ

ಬೆಂಗಳೂರು: ಜನಪದರು ಸಾಂಸ್ಕೃತಿಕ ವೇದಿಕೆಯು ಇದೇ 20ರಂದು ಸಂಜೆ 7 ಗಂಟೆಗೆ ಬಸವನಗುಡಿಯ ವಾಡಿಯಾ ಸಭಾಂಗಣದಲ್ಲಿ ‘ಜ್ಞಾನ ದೇಗುಲ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ. ಸಿದ್ದೇಶ್ವರ ನನಸುಮನೆ ಅವರು ಈ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯ.

ಹಾಸ್ಯ ನಾಟಕ ಪ್ರದರ್ಶನ

‘ಮುದ್ದಣ್ಣನ ಪ್ರಮೋಷನ್ ಪ್ರಸಂಗ’ ನಾಟಕದ ದೃಶ್ಯ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡದಿಂದ ಇದೇ 22ರ ಸಂಜೆ 6.30ಕ್ಕೆ ‘ಮುದ್ದಣ್ಣನ ಪ್ರಮೋಷನ್ ಪ್ರಸಂಗ’ ಹಾಸ್ಯ ನಾಟಕವು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಪ್ರದರ್ಶನಗೊಳ್ಳಲಿದೆ.

ರಾಜೇಂದ್ರ ಕಾರಂತ ಅವರು ನಾಟಕದ ರಚಿಸಿದ್ದು, ಅಶೋಕ್ ಬಿ. ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯ. ಸಂಪರ್ಕಕ್ಕೆ: 9945977184 ಅಥವಾ 9916863637

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

‘ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ‘ಗ್ಯಾರಂಟಿ’ಗೆ ದುರ್ಬಳಕೆ ಬೇಡ’

ಬೆಂಗಳೂರು: ‘ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಳ್ಳಬಾರದು. ಅದಕ್ಕಾಗಿ ಏಕಗವಾಕ್ಷಿ ಪದ್ಧತಿಯನ್ನು ಜಾರಿ ಮಾಡಬೇಕು’ ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ‘ವಿಶೇಷ ಘಟಕ ಯೋಜನೆಯ ಸಾವಿರಾರು ಕೋಟಿ ರೂಪಾಯಿ ದುರ್ಬಳಕೆ ಆಗುತ್ತಿರುವುದು ಕಾಯ್ದೆಗೆ ಎಸಗುತ್ತಿರುದ ದ್ರೋಹ. ದಲಿತ ಸಮುದಾಯಗಳಿಗೆ ಸರ್ಕಾರ ಮಾಡುತ್ತಿರುವ ಅನ್ಯಾಯ’ ಎಂದು ಹೇಳಿದರು.

ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಹಗರಣಗಳನ್ನು ಮಾಡಿ ಅಂಬೇಡ್ಕರ್ ಹೆಸರಿಗೆ ಮಸಿ ಬಳಿಯುತ್ತಿರುವ ವ್ಯವಸ್ಥಾಪಕ ನಿರ್ದೇಶಕರನ್ನು ವರ್ಗಾವಣೆ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಅಧ್ಯಕ್ಷ ಆರ್‌ಪಿಐ ಸತೀಶ್, ದಲಿತ ಸಂರಕ್ಷಣಾ ಸಮಿತಿ ಅಧ್ಯಕ್ಷ ಲಯನ್ ಬಾಲು, ದಲಿತ ಸಂರಕ್ಷಣಾ ಸಮಿತಿ (ಭೀಮ ಸೇನೆ) ಅಧ್ಯಕ್ಷ ಲಯನ್ ಮಂಜುನಾಥ್, ಕರ್ನಾಟಕ ಭೀಮಸೇನೆ ಅಧ್ಯಕ್ಷ ಬನಶಂಕರಿ ನಾಗು, ಪ್ರಜಾ ವಿಮೋಚನಾ ಚಳವಳಿ ಅಧ್ಯಕ್ಷ ಮುರಳಿ, ಸಮತಾ ಸೈನಿಕದಳದ ಆರ್‌. ಚಂದ್ರಶೇಖರ್ ಉಪಸ್ಥಿತರಿದ್ದರು.

‘ಆಕಾಶ್’ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆಕಾಶ್ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿಗಳು ಜೆಇಇ ಮುಖ್ಯ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಇಂದಿರಾನಗರ ಶಾಖೆಯ ವಿದ್ಯಾರ್ಥಿ ಆದರ್ಶ್ ಕುಮಾರ್ ಬೆಹೆರಾ ಅವರು ಶೇ 99.99 ಅಂಕ ಪಡೆಯುವ ಮೂಲಕ ಅಗ್ರ ಸ್ಥಾನದಲ್ಲಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಫೆಬ್ರುವರಿ 16ರಂದು ಫಲಿತಾಂಶವನ್ನು ಘೋಷಿಸಿದ್ದು ನಗರದ ವಿವಿಧ ಶಾಖೆಗಳ 30ಕ್ಕೂ ಅಧಿಕ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಆಯುಷ್ ಎಸ್‌.ಕೋಲೇಕರ್ (ಶೇ 99.98), ಪ್ರನಿಲ್ ಸಿಂಗಿ (ಶೇ 99.96), ಆದರ್ಶ್ ದಾಸ್ (ಶೇ 99.89), ಗೋಕುಲ್ ಹರಿಕೃಷ್ಣನ್ (ಶೇ 99.88), ನಮನ್ ಅಗರ್‌ವಾಲ್ (ಶೇ 99.85), ಟಿ.ಆರ್‌.ಎಸ್‌.ಸಂಜಿತ್ (ಶೇ 99.82), ಗುಡಾಲ್ ಸತ್ಯ ಯಶಸ್ (ಶೇ 99.72), ಜೋಹಾನ್ ಜಾಬ್ (ಶೇ 99.69), ವ್ಯೋಮ್ ಗುಪ್ತ (ಶೇ 99.66), ಶಿವಾಂಶ್ ಪಂತ್ (ಶೇ 99.64), ಆದಿತ್ಯ (ಶೇ 99.61), ನಿತಿನ್ ಎಸ್‌. ಕೋಲೇಕರ್ (ಶೇ 99.48), ದರ್ಶನ್ ಹರೀಶ್ (ಶೇ 99.45), ಕೌಶಲ್ ಗುಂಡು (ಶೇ 99.44), ಆದಿತ್ಯ ಶರ್ಮ (ಶೇ 99.41) ಮತ್ತು ಅದ್ವೈತ್ ರವೀಂದ್ರನ್ (ಶೇ 99.35) ಉತ್ತಮ ಸ್ಥಾನ ಪಡೆದಿದ್ದಾರೆ.

‘ನಗರದ ವಿದ್ಯಾರ್ಥಿಗಳ ಅಸಾಧಾರಣ ಸಾಧನೆ ಅವರ ಪರಿಶ್ರಮ ಮತ್ತು ಆಕಾಶ್‌ನ ಬದ್ಧತೆಗೆ ಸಾಕ್ಷಿಯಾಗಿದೆ. ಅವರ ಕಠಿಣ ಪರಿಶ್ರಮದ ಬಗ್ಗೆ ನಮಗೆ ತುಂಬಾ ಹೆಮ್ಮೆ ಇದೆ’ ಎಂದು ಆಕಾಶ್ ಎಜುಕೇಷನಲ್ ಸರ್ವೀಸಸ್ ಲಿಮಿಟೆಡ್‌ನ ಮುಖ್ಯ ಶೈಕ್ಷಣಿಕ ಮುಖ್ಯಸ್ಥ ಧೀರಜ್ ಕುಮಾರ್ ಮಿಶ್ರಾ ತಿಳಿಸಿದರು.

ರಾಷ್ಟ್ರಮಟ್ಟದಲ್ಲಿ 14 ವಿದ್ಯಾರ್ಥಿಗಳು ಶೇ 99.99 ಅಂಕ ಪಡೆದಿದ್ದಾರೆ. ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಶೇ 99ಕ್ಕೂ ಅಧಿಕ ಅಂಕ ಪಡೆದಿದ್ದು, 400ಕ್ಕೂ ಅಧಿಕ ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್‌ಗೆ ಅರ್ಹತೆ ಹೊಂದಿದ್ದಾರೆ ಎಂದು ತಿಳಿಸಿದ್ದಾರೆ.

ಆಕಾಶ್ ಸಂಸ್ಥೆ ಬೆಂಗಳೂರಿನಲ್ಲಿ 11 ಹಾಗೂ ರಾಜ್ಯದ ವಿವಿಧ ನಗರಗಳಲ್ಲಿ ಎಂಟು ಶಾಖೆಗಳನ್ನು ಹೊಂದಿದ್ದು, ಎಲ್ಲ ಶಾಖೆಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಆಕಾಶ್ ಎಜುಕೇಷನಲ್ ಸರ್ವೀಸಸ್ ಲಿಮಿಟೆಡ್‌ನ ಪ್ರಾದೇಶಿಕ ಮುಖ್ಯಸ್ಥ ವಿಜಯ್ ಭಾಸ್ಕರ್ ಹೇಳಿದರು.

21ರಿಂದ ‘ಹೊನ್ನಾರು’ ರಂಗೋತ್ಸವ

6 ತಂಡಗಳ ಸುವರ್ಣ ಮಹೋತ್ಸವ: 6 ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ರಂಗಭೂಮಿಯಲ್ಲಿ 50 ವರ್ಷಗಳನ್ನು ದಾಟಿರುವ ಆರು ರಂಗ ತಂಡಗಳು ಸುವರ್ಣ ಸಂಭ್ರಮದ ಅಂಗವಾಗಿ ಇದೇ 21ರಿಂದ 26ರವರೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ‘ಹೊನ್ನಾರು’ ರಂಗೋತ್ಸವ ಹಮ್ಮಿಕೊಂಡಿವೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಉತ್ಸವದ ಸಂಚಾಲಕರೂ ಆಗಿರುವ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ‘ರಂಗಸಂಪದ, ಸಮುದಾಯ, ಕಲಾ ಗಂಗೋತ್ರಿ, ಸ್ಪಂದನ, ನಟರಂಗ ಮತ್ತು ಬೆನಕ ರಂಗ ತಂಡವು ಸುವರ್ಣ ಸಂಭ್ರಮದಲ್ಲಿವೆ. ಇವು ಕನ್ನಡ ರಂಗಭೂಮಿ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿವೆ. ಈ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾದ ರಂಗೋತ್ಸವದಲ್ಲಿ ಆರು ನಾಟಕಗಳನ್ನು ಪ್ರದರ್ಶಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಶರ್ಮಿಷ್ಠೆ’ ನಾಟಕದ ದೃಶ್ಯ

‘21ರಂದು 6 ಗಂಟೆಗೆ ಈ ರಂಗೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. 26ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಭಾಗವಹಿಸಲಿದ್ದಾರೆ. ಆರು ದಿನಗಳ ಈ ಉತ್ಸವದಲ್ಲಿ ವಿವಿಧ ಕ್ಷೇತ್ರಗಳ ದಿಗ್ಗರು, ಕಲಾವಿದರು ಹಾಗೂ ಕಲಾಸಕ್ತರು ಪಾಲ್ಗೊಳ್ಳಲಿದ್ದಾರೆ’ ಎಂದು ಹೇಳಿದರು.

‘ಆರು ದಿನಗಳು ಸಂಜೆ 6.30ರಿಂದ ನಾಟಕ ಪ್ರದರ್ಶನ ನಡೆಯಲಿದೆ. 21ರಂದು ರಂಗಸಂಪದ ತಂಡದಿಂದ ‘ಶರ್ಮಿಷ್ಠೆ’ ನಾಟಕ, 22ರಂದು ಸಮುದಾಯ ತಂಡದಿಂದ ‘ಭಗವಂತನ ಮರಣ’ ನಾಟಕ, 23ರಂದು ನಟರಂಗ ತಂಡದಿಂದ ‘ನೀರಗನ್ನಡಿ’ ನಾಟಕ, 24ರಂದು ಕಲಾ ಗಂಗೋತ್ರಿ ತಂಡದಿಂದ ‘ಮನೆಯೇ ದೇವರು’ ನಾಟಕ, 25ರಂದು ಸ್ಪಂದನ ತಂಡದಿಂದ ‘ಬೆಳಗಿನ ಕನಸು’ ನಾಟಕ ಹಾಗೂ 26ರಂದು ಬೆನಕ ತಂಡದಿಂದ ‘ಜೋಕುಮಾರಸ್ವಾಮಿ’ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯ’ ಎಂದು ತಿಳಿಸಿದರು.

ಕಲಾವಿದರಾದ ಬಿ.ಜಯಶ್ರೀ, ಉಮಾಶ್ರೀ, ಗಿರಿಜಾ ಲೋಕೇಶ್, ರಂಗಕರ್ಮಿಗಳಾದ ಬಿ.ವಿ. ರಾಜಾರಾಂ, ಟಿ.ಎಸ್‌. ನಾಗಾಭರಣ, ವಿ.ಎಂ. ನಾಗೇಶ್, ಶಶಿಧರ್ ಬಾರೀಘಾಟ್ ಉಪಸ್ಥಿತರಿದ್ದರು.

Publications Division
Ministry of Information and Broadcasting
Government of India

APPEAL

The Publications Division is undertaking a nationwide Archival and Digitization Initiative to preserve rare and historically significant books published by DPD from 1941 to 1990. Many of these works are now out of print, rare, or unavailable, and an effort is being made to trace and consolidate them for archival purposes.

If you have any book of the Publications Division **published before 1990**, kindly do share the photo and description (publication year, page number, content, etc.) of that book on email (bm-dpd@gov.in).

CBC 22213/13/0007/2526

ಕೋಟ್ಯಧಿಪತಿ ಆಗಲು ಬಯಸುವ ಮುನ್ನ ನೀವು, ಅವರಂತೆ ಆಲೋಚಿಸುವುದನ್ನು ಕಲಿಯಬೇಕು
ಥಾಮಸ್ ಜೆ. ಸ್ಟ್ಯಾನ್ಲಿ, ಅಮೆರಿಕದ ಬರಹಗಾರ

ದುಡ್ಡಿನಂಥಾ ಮಾತು

ವಿಳಂಬ ಕೇಡು ಬಗೆದೀತು...

ಸಾಂಪ್ರದಾಯಿಕ ಹೂಡಿಕೆ ಉತ್ಪನ್ನಗಳಲ್ಲಿ ಒಂದಾಗಿರುವ, ಕುಟುಂಬಗಳಿಗೆ ಅಗತ್ಯವಿರುವ ಹಣಕಾಸಿನ ರಕ್ಷೆಯನ್ನು ಒದಗಿಸುವ ಜೀವ ವಿಮೆಗಳ ಮಹತ್ವ ಹಾಗೂ ಹಣಕಾಸಿನ ಯೋಜನೆಗಳನ್ನು ಆದಷ್ಟು ಬೇಗನೆ ರೂಪಿಸಿ, ಅನುಷ್ಠಾನಕ್ಕೆ ತರಬೇಕಿರುವುದರ ಅಗತ್ಯವನ್ನು ಈ ಬರಹ ಹೇಳುತ್ತಿದೆ

• ಸವ್ಯಸಾಚಿ ಸರ್ಕಾರ್

ಹಲವು ಬಾರಿ ಜನರು ಹಣಕಾಸಿನ ಭವಿಷ್ಯದ ಬಗ್ಗೆ ಆಲೋಚಿಸುವುದನ್ನೇ ತಡ ಮಾಡುತ್ತಾರೆ. ಆದರೆ ಹಣಕಾಸಿನ ವಿಚಾರದಲ್ಲಿ ಆಗುತ್ತಿರುವ ಬದಲಾವಣೆ ಹಾಗೂ ಜೀವಿತಾವಧಿಯಲ್ಲಿನ ಹೆಚ್ಚಳವನ್ನು ಪರಿಗಣಿಸಿದರೆ, ಈ ವಿಳಂಬವು ಸಮಸ್ಯೆ ಸೃಷ್ಟಿ ಮಾಡಬಹುದು ಎಂಬುದು ಗೊತ್ತಾಗುತ್ತದೆ.

ಕೆಲವು ದತ್ತಾಂಶಗಳನ್ನು ಪರಿಗಣಿಸಿದಾಗ, ಹಣಕಾಸಿಗೆ ಸಂಬಂಧಿಸಿದ ಯೋಜನೆ ರೂಪಿಸುವುದನ್ನು 45 ವರ್ಷ ವಯಸ್ಸಿಗಿಂತ ಆಚೆಗೆ ಮುಂದಕ್ಕೆ ಹಾಕಿದಾಗ ಬಹಳಷ್ಟು ಸಮಸ್ಯೆಗಳು ಸೃಷ್ಟಿಯಾಗುತ್ತವೆ ಎಂಬುದು ತಿಳಿಯುತ್ತದೆ. ಹಣಕಾಸಿನ ಯೋಜನೆಗಳನ್ನು ಹಾಕಿಕೊಳ್ಳುವಲ್ಲಿ ಮಾಡುವ ವಿಳಂಬವು ಆತಂಕ ಮೂಡುವುದಕ್ಕೆ ಕಾರಣವಾಗುತ್ತದೆ, ವ್ಯಕ್ತಿ ತನ್ನ ಕೊನೆಯ ವರ್ಷಗಳಲ್ಲಿ ಮನಃಶಾಂತಿಯ ಬದಲು ಅವಲಂಬನೆಯ ಅನಿವಾರ್ಯಕ್ಕೆ ಸಿಲುಕಬಹುದು.

ಹಣಕಾಸು, ಹೂಡಿಕೆಯ ತೀರ್ಮಾನವನ್ನು ತಡ ಮಾಡಿದಂತೆಲ್ಲ, ಬಡ್ಡಿಗೆ ಚಕ್ರಬಡ್ಡಿ ಸೇರಿಕೊಳ್ಳುವುದರಿಂದ ಸಿಗುವ ಪ್ರಯೋಜನವನ್ನು ಪೂರ್ತಿಯಾಗಿ ಪಡೆಯಲು ಆಗುವುದಿಲ್ಲ. ಬಡ್ಡಿಗೆ ಚಕ್ರಬಡ್ಡಿ ಸಿಗುವುದು, ಬಡ್ಡಿ ಹಾಗೂ ಚಕ್ರಬಡ್ಡಿಯು ಅಸಲು ಮೊತ್ತಕ್ಕೆ ಸೇರಿಕೊಳ್ಳುವುದು ದೀರ್ಘಾವಧಿಯಲ್ಲಿ ಬಹಳ ದೊಡ್ಡ ಮೊತ್ತವನ್ನು ಒಗ್ಗೂಡಿಸಲು ನೆರವಾಗುತ್ತವೆ. ಹೂಡಿಕೆಯನ್ನು ಬೇಗನೆ ಆರಂಭಿಸಿದರೆ, ಅದನ್ನು ನಿಯಮಿತವಾಗಿ ಮುಂದುವರಿಸಿದರೆ ವರ್ಷಗಳು ಕಳೆದಂತೆಲ್ಲ ಸಂಪತ್ತು ಅಗಾಧವಾಗಿ ಬೆಳೆಯುತ್ತದೆ. ಹೂಡಿಕೆಯನ್ನು ಬೇಗ ಆರಂಭಿಸಿದರೆ ಹಣಕಾಸಿನ ಭದ್ರತೆಯೂ ಹೆಚ್ಚಿನ ಮಟ್ಟದಲ್ಲಿರುತ್ತದೆ.

ಮೂರು ಸಂಗತಿಗಳು

ಜೀವಿತಾವಧಿ ಹೆಚ್ಚಳ, ಹಣದುಬ್ಬರ ಪ್ರಮಾಣ ಮತ್ತು ಸಾಕಷ್ಟು ಮೊತ್ತದ ವಿಮಾ ರಕ್ಷೆ ಇಲ್ಲದಿರುವುದು ಹಣಕಾಸಿನ ಯೋಜನೆಗಳನ್ನು ಬೇಗನೆ ಶುರುವಾಗಬೇಕಿರುವುದರ ಮಹತ್ವವನ್ನು ಹೇಳುತ್ತವೆ.

ವೈದ್ಯಕೀಯ ವಿಜ್ಞಾನದಲ್ಲಿನ ಪ್ರಗತಿಯ ಕಾರಣದಿಂದಾಗಿ ಜೀವಿತಾವಧಿ ಕೂಡ ಹೆಚ್ಚಾಗಿದೆ. ಆದರೆ ಇದಕ್ಕೆ ಅನುಗುಣವಾಗಿ ಹಣಕಾಸಿನ ಸ್ಥಿತಿ ಸುಧಾರಿಸಿದೆಯೇ? ಜೀವಿತಾವಧಿ ಹೆಚ್ಚಿದಾಗ ಉಳಿತಾಯದ ಮೊತ್ತವೂ ಹೆಚ್ಚಬೇಕಾಗುತ್ತದೆ. ಅದಿಲ್ಲದಿದ್ದರೆ, ವ್ಯಕ್ತಿಗೆ ಕೊನೆಗಾಲದಲ್ಲಿ ವೆಚ್ಚಕ್ಕೆ ಹಣ ಕೊರತೆ ತೀವ್ರವಾಗಬಹುದು. ಇದೊಂದು ಬಗೆಯಲ್ಲಿ ಭೀತಿ ಮೂಡಿಸುವಂತಹ ಸ್ಥಿತಿ.

ಜೀವನದ ವೆಚ್ಚ ಹಾಗೂ ಆರೋಗ್ಯಸೇವಾ ವೆಚ್ಚಗಳು ಮುಂದಿನ 20ರಿಂದ 30 ವರ್ಷಗಳಲ್ಲಿ ಗಣನೀಯವಾಗಿ ಹೆಚ್ಚಲಿವೆ. ಹೀಗಾಗಿ ಹಣದುಬ್ಬರ ಪ್ರಮಾಣವನ್ನು ಮೀರುವ ಪ್ರಮಾಣದಲ್ಲಿ ವ್ಯಕ್ತಿಯ ಉಳಿತಾಯವು ಹೆಚ್ಚಾಗಬೇಕು. ಆಗ ಮಾತ್ರ ಆ ವ್ಯಕ್ತಿ ತನ್ನ ಈಗಿನ ಜೀವನ ಶೈಲಿಯನ್ನು ಕಾಪಾಡಿಕೊಳ್ಳಬಲ್ಲ. ಹೂಡಿಕೆಯನ್ನು ತಡವಾಗಿ ಆರಂಭಿಸಿದವರಿಗೆ ಹಣದುಬ್ಬರದ ವಿರುದ್ಧದ ಹೋರಾಟ ತೀರಾ ಕಷ್ಟಕರವಾಗುತ್ತದೆ.

2019ರಲ್ಲಿ ಸ್ವಿಸ್ ರಿ ನಡೆಸಿದ ಅಧ್ಯಯನವೊಂದರ ಪ್ರಕಾರ, ಭಾರತದಲ್ಲಿ ವ್ಯಕ್ತಿಯೊಬ್ಬ ಹಠಾತ್ ಮೃತಪಟ್ಟರೆ ಆತನ ಕುಟುಂಬದ ಅಗತ್ಯಗಳನ್ನು ಪೂರೈಸಲು ಸಾಕಾಗುವಷ್ಟು ನೆರವು ವಿಮಾ ಪಾಲಿಸಿಗಳಿಂದ ಸಿಗುವುದಿಲ್ಲ. ಅಂದರೆ ಅಗತ್ಯ ಪ್ರಮಾಣದ ವಿಮೆಯನ್ನು ವ್ಯಕ್ತಿ ಹೊಂದಿರುವುದಿಲ್ಲ. ಕೆಲವು ಬಗೆಯ ವಿಮಾ ರಕ್ಷೆಯನ್ನು ಹೊಂದಿರುವ ಕುಟುಂಬಗಳು, ತಮ್ಮ ಅಗತ್ಯದ ಅಲ್ಪ ಪ್ರಮಾಣವನ್ನು ಮಾತ್ರವೇ ವಿಮೆಯ ರೂಪದಲ್ಲಿ ಪಡೆಯುತ್ತವೆ. ಜೀವ ವಿಮೆಯಲ್ಲಿ ಹಣ ತೊಡಗಿಸುವುದನ್ನು ಬೇಗನೆ ಶುರು ಮಾಡುವುದರಿಂದ, ದೀರ್ಘಾವಧಿಯ ಉಳಿತಾಯಕ್ಕೆ ಅಗತ್ಯವಿರುವ ರಕ್ಷಾ ಕವಚವೊಂದು ಸಿಕ್ಕಂತಾಗುತ್ತದೆ.

ಜೀವ ವಿಮಾ ಯೋಜನೆಗಳು ವ್ಯಕ್ತಿಯ ಅನಿರೀಕ್ಷಿತ ಸಾವಿನ ಸಂದರ್ಭದಲ್ಲಿ ಆತನ ಕುಟುಂಬಕ್ಕೆ ಒಂದು ಇಡುಗಂಟು ಒದಗಿಸುವುದಕ್ಕಿಂತ ಹೆಚ್ಚಿನ ನೆರವನ್ನು ಕೊಡುತ್ತವೆ.

ವಿಮೆ ಹೊಂದಿರುವ ವ್ಯಕ್ತಿಯು ಅನಿರೀಕ್ಷಿತವಾಗಿ ಮೃತ್ಯುವಿಗೆ ಈಡಾದಾಗ, ಆತ ಮಾಡಿದ್ದ ಸಾಲಗಳನ್ನು ತೀರಿಸಲು ಕುಟುಂಬದ ಸದಸ್ಯರಿಗೆ ಈ ವಿಮೆಯು ನೆರವಾಗಬಹುದು. ವಿಮೆಯ ಮೊತ್ತವು ಉತ್ತಮವಾಗಿದ್ದರೆ ಕುಟುಂಬದ ನಿತ್ಯದ ಖರ್ಚುಗಳನ್ನು ನಿಭಾಯಿಸಲು ಆ ವಿಮಾ ಮೊತ್ತವು ಅನುಕೂಲ ಮಾಡಿಕೊಡಬಹುದು. ಆದರೆ ಇಂತಹ ನೆರವುಗಳ ಆಚೆಗೂ ವಿಮೆಯ ಪ್ರಯೋಜನ ಇದೆ.

ಹಣಕಾಸಿನ ಸ್ವಾತಂತ್ರ್ಯ

ಎಂಡೋಮೆಂಟ್ ಅಥವಾ ಪಿಂಚಣಿ ಯೋಜನೆಗಳು ಅವಧಿಯ ಕೊನೆಯಲ್ಲಿ ಖಚಿತ ಮೊತ್ತವನ್ನು ನೀಡುವ, ಸ್ಥಿರವಾದ ವರಮಾನವನ್ನು ಒದಗಿಸುವ ಪ್ರಯೋಜನ ಹೊತ್ತು ತರುತ್ತವೆ. ಈ ಮೂಲಕ ಅವು ವ್ಯಕ್ತಿಗೆ ಮತ್ತು ಆತನ ಕುಟುಂಬಕ್ಕೆ ಹಣಕಾಸಿನ ನೆರವು ಒದಗಿಸುತ್ತವೆ. ಯೂಲಿಪ್ ಯೋಜನೆಗಳು ಹೂಡಿಕೆದಾರರಿಗೆ ತಾವು ತೊಡಗಿಸಿದ ಹಣಕ್ಕೆ ಮಾರುಕಟ್ಟೆ ಆಧಾರಿತ ಹೆಚ್ಚಿನ ಲಾಭದ ಆಯ್ಕೆಯನ್ನು ನೀಡುತ್ತವೆ.

ಅನಾರೋಗ್ಯ ಕಾಡಿದಾಗ

ಜೀವ ವಿಮೆ ಖರೀದಿಸುವ ಸಂದರ್ಭದಲ್ಲಿ ಹೆಚ್ಚುವರಿಯಾಗಿ ಕೆಲವು ರೈಡರ್‌ಗಳನ್ನು ಪಡೆದುಕೊಳ್ಳಬಹುದು. ಕ್ರಿಟಿಕಲ್ ಇಲ್ನೆಸ್ ರೈಡರ್ ಅಂಥವುಗಳಲ್ಲಿ ಒಂದು. ಕೈಗೆಟಕುವ ಬೆಲೆಗೆ ಸಿಗುವ ಇವು ಕ್ಯಾನ್ಸರ್, ಹೃದ್ರೋಗದಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಎದುರಾದಾಗ ವ್ಯಕ್ತಿಗೆ ಒಂದೇ ಬಾರಿಗೆ ದೊಡ್ಡ ಮೊತ್ತದ ಹಣಕಾಸಿನ ನೆರವು ಒದಗಿಸುತ್ತವೆ. ಹೀಗೆ ಸಿಗುವ ನೆರವು ಕುಟುಂಬಕ್ಕೆ ದೊಡ್ಡ ಮಟ್ಟದಲ್ಲಿ ಸಹಾಯಕ್ಕೆ ಬರಬಲ್ಲದು. ವ್ಯಕ್ತಿಗೆ ತೀವ್ರ ಅನಾರೋಗ್ಯ ಉಂಟಾಗಿದ್ದಾಗ ಪ್ರೀಮಿಯಂ ಕಟ್ಟುವ ಪ್ರಮೇಯವನ್ನು ಕೆಲವು ವಿಮಾ ಯೋಜನೆಗಳು ಇಲ್ಲವಾಗಿಸುತ್ತವೆ. ಈ ಸೌಲಭ್ಯ ಪಡೆದಿದ್ದರೆ, ಪ್ರೀಮಿಯಂ ಹೊರೆ ಇಲ್ಲದಿದ್ದರೂ ಜೀವ ವಿಮಾ ರಕ್ಷೆಯು ಚಾಲ್ತಿಯಲ್ಲಿ ಇರುತ್ತದೆ.

ಸಾಲ ಮತ್ತು ಬಿಕ್ಕಟ್ಟು

ಸಾಲ ಪಡೆಯುವಾಗ ಜೀವ ವಿಮಾ ಯೋಜನೆಗಳು ಅಡಮಾನದ ರೂಪದಲ್ಲಿ ನೆರವಿಗೆ ಬರಬಲ್ಲವು. ಕೆಲವು ವಿಮಾ ಯೋಜನೆಗಳು ಉಳಿತಾಯದ ಹೂಡಿಕೆ ಉತ್ಪನ್ನವಾಗಿಯೂ ಬಳಕೆಗೆ ಸಿಗಬಲ್ಲವು. ಯೂಲಿಪ್ ಮತ್ತು ಎಂಡೋಮೆಂಟ್ ಯೋಜನೆಗಳನ್ನು ಬಳಸಿ ಪಾಲಿಸಿಯನ್ನು ಚಾಲ್ತಿಯಲ್ಲಿ ಇರಿಸಿಕೊಂಡೇ ತುರ್ತು ಸಂದರ್ಭಗಳಲ್ಲಿ ಹಣ ಪಡೆಯಬಹುದು.

ಹಣಕಾಸಿಗೆ ಸಂಬಂಧಿಸಿದ ಯೋಜನೆಗಳ ಅನುಷ್ಠಾನವನ್ನು ವಿಳಂಬ ಮಾಡುವುದು ದೊಡ್ಡ ತಪ್ಪು ಎಂಬುದನ್ನು ಹಣಕಾಸು ತಜ್ಞರು ಒಪ್ಪುತ್ತಾರೆ. ದೇಶದ ಪಶ್ಚಿಮ ವಲಯದಲ್ಲಿನ ನಗರವಾಸಿಗಳ ಪೈಕಿ ಪ್ರತಿ 10 ಮಂದಿಯಲ್ಲಿ ಒಂಬತ್ತು ಮಂದಿ, ಹಣಕಾಸಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದನ್ನು ತಾವು ವಿಳಂಬ ಮಾಡಿದ್ದರ ಬಗ್ಗೆ ವಿಷಾದ ಹೊಂದಿದ್ದಾರೆ. ನಿಮ್ಮ ಬಳಿ ಇರುವ ಉಳಿತಾಯದ ಹಣವು ಮುಂದಿನ ಜೀವನಕ್ಕೆ ಸಾಕಾಗುವುದಿಲ್ಲ ಎಂಬುದನ್ನು 40ನೆಯ ವಯಸ್ಸಿನ ನಂತರ ಅಥವಾ 50ನೆಯ ವಯಸ್ಸಿನ ನಂತರ ಅರಿತುಕೊಳ್ಳುವುದರ ಮಾನಸಿಕ ಪರಿಣಾಮವು ಬಹಳ ಕೆಟ್ಟದ್ದಾಗಿರುತ್ತದೆ. ಹೀಗೆ ಆದಾಗ ಕೆಲವರು ತಪ್ಪು ಹೂಡಿಕೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಧ್ಯತೆಯೂ ಇರುತ್ತದೆ.

ಜೀವ ವಿಮೆಯು ಕುಟುಂಬಕ್ಕೆ ರಕ್ಷಣೆ ಒದಗಿಸುವುದರ ಜೊತೆಯಲ್ಲೇ ದೀರ್ಘಾವಧಿಯಲ್ಲಿ ಉತ್ತಮ ಮೊತ್ತವನ್ನು ಉಳಿತಾಯ ಮಾಡಲು ಕೂಡ ದಾರಿ ತೋರಿಸಿಕೊಡುತ್ತದೆ. ಕೆಲವು ವಿಮಾ ಯೋಜನೆಗಳು ಹಣಕಾಸಿನ ರಕ್ಷೆಯ ಜೊತೆಯಲ್ಲೇ ಉಳಿತಾಯದ ಅಂಶವನ್ನೂ ಹೊಂದಿರುತ್ತವೆ. ಈ ಮೂಲಕ ಅವು ಕುಟುಂಬಕ್ಕೆ ಹಣಕಾಸಿನ ರಕ್ಷಣೆ ಒದಗಿಸುತ್ತಲೇ, ಉಳಿತಾಯದ ಅವಕಾಶವನ್ನೂ ಕಲ್ಪಿಸುತ್ತಿರುತ್ತವೆ. ಹಣಕಾಸಿನ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು ಬಯಸುವವರಿಗೆ ಈ ಎರಡು ಪ್ರಯೋಜನಗಳು ಮಹತ್ವದ್ದಾಗುತ್ತವೆ.

ವಿಳಂಬ ಬೇಡ

ಹಣಕಾಸಿನ ಯೋಜನೆ ಎಂಬುದು ಒಂದು ಬಾರಿಗೆ ಮಾಡಿ ಮುಗಿಸುವ ಕೆಲಸ ಅಲ್ಲ. ಅದು ದೀರ್ಘಾವಧಿಯ ಒಂದು ಪಯಣ. ಆದರೆ ಅತ್ಯಂತ ಪ್ರಭಾವಶಾಲಿ, ಪರಿಣಾಮಕಾರಿ ಪಯಣಗಳು ಒಂದು ಹೆಜ್ಜೆಯೊಂದಿಗೆ ಆರಂಭವಾಗುತ್ತವೆ. ಇಂಥದ್ದೊಂದು ತೀರ್ಮಾನ ತೆಗೆದುಕೊಳ್ಳಲು ಬಹುಕಾಲ ಕಾಯುವುದರಿಂದ 'ಸಮಯ' ಎನ್ನುವ ಅತ್ಯಂತ ಅಮೂಲ್ಯವಾದ ಆಸ್ತಿಯನ್ನು ಸವೆಯಲು ಬಿಟ್ಟಂತೆ ಆಗುತ್ತದೆ.

20ರ, 30ರ ಅಥವಾ 40ರ ಪ್ರಾಯದಲ್ಲಿ ಇರುವ ವ್ಯಕ್ತಿ ನೀವಾಗಿದ್ದರೆ, ಹಣಕಾಸಿನ ವಿಷಯಗಳ ಲಗಾಮನ್ನು ಕೈಗೆ ತೆಗೆದುಕೊಳ್ಳಬೇಕಾದ ಸಮಯ ಇದು. ಹಣಕಾಸು ಸಲಹೆಗಾರ ಜೊತೆ ಮಾತುಕತೆ ಆರಂಭಿಸಿ, ಸರಿಯಾದ ವಿಮೆ ಹಾಗೂ ಇತರ ಹಣಕಾಸಿನ ಯೋಜನೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಇದು ಸಕಾಲ.

ಲೇಖಕ ಗೋಡಿಜಿಟ್ ಜೀವ ವಿಮಾ ಕಂಪನಿಯ ಎಂ.ಡಿ ಹಾಗೂ ಸಿಇಒ

ಜೆನ್ ಝೀ ದ್ವಂದ್ವ

ಜೆನ್ ಝೀ ಎಂದು ಕರೆಸಿಕೊಳ್ಳುತ್ತಿರುವ ತಲೆಮಾರಿನವರು ದುಡಿಯಲು ಆರಂಭಿಸಿದ್ದಾರೆ. ಆದರೆ ಅವರ ದುಡಿಮೆಯ ವಾತಾವರಣವು ಅವರ ತಂದೆ–ತಾಯಿ ಹೊಂದಿದ್ದ ಕೆಲಸದ ವಾತಾವರಣಕ್ಕಿಂತ ಭಿನ್ನವಾಗಿದೆ. ಕೆಲಸದಲ್ಲಿ ಭದ್ರತೆ ಕಡಿಮೆಯಾಗಿರುವುದು, ಗಿಗ್ ಕೆಲಸಗಳು ವ್ಯಾಪಕವಾಗಿರುವುದು, ಕಂಪನಿಯ ಕಡೆಯಿಂದ ಪಿಂಚಣಿ ಸಿಗುತ್ತದೆ ಎಂಬ ಖಾತರಿ ಇಲ್ಲದಿರುವುದು... ಇವೆಲ್ಲ ಜೆನ್ ಝೀ ತಲೆಮಾರಿನವರ ವಾಸ್ತವಗಳು.

ಹೀಗಾಗಿ, ಹಣಕಾಸಿನ ವಿಚಾರದಲ್ಲಿ ತಮ್ಮ ದಾರಿಯನ್ನು ತಾವೇ ಕಂಡುಕೊಳ್ಳುವುದು ಅನಿವಾರ್ಯ ಎಂಬುದು ಅವರಿಗೆ ಗೊತ್ತಾಗಿದೆ. ಜೆನ್ ಝೀ ತಲೆಮಾರಿನವರ ಪೈಕಿ ಶೇ 18ರಷ್ಟು ಮಂದಿ ದೀರ್ಘಾವಧಿಯ ಉಳಿತಾಯ ಯೋಜನೆಗಳನ್ನು ಪರಿಶೀಲಿಸುತ್ತಿದ್ದಾರೆ ಎಂದು ಅಧ್ಯಯನವೊಂದು ಹೇಳುತ್ತದೆ. ಈ ತಲೆಮಾರಿನ ಶೇ 31ರಷ್ಟು ಮಂದಿ ಅವಧಿ ವಿಮೆಗೆ ಆದ್ಯತೆ ನೀಡುತ್ತಿದ್ದಾರೆ.

ಹಣಕಾಸಿಗೆ ಸಂಬಂಧಿಸಿದಂತೆ ಯುವ ಸಮುದಾಯದಲ್ಲಿ ಇರುವ ಆತಂಕವು ಎಲ್ಲ ವರ್ಗದವರಿಗೂ ಒಂದು ಎಚ್ಚರಿಕೆಯ ಕರೆಗಂಟೆ. ಹಣಕಾಸಿನ ಸುರಕ್ಷತಾ ಸೌಲಭ್ಯಗಳು ಕಡಿಮೆ ಇರುವಾಗ ಹಣಕಾಸಿನ ಯೋಜನೆ ಸಿದ್ಧಪಡಿಸುವುದು ಆಯ್ಕೆಯಲ್ಲ, ಅದು ಸಹಜವಾಗಿ ಆಗಲೇಬೇಕಾದ ಕೆಲಸ. ಹಣಕಾಸಿನ ಯೋಜನೆ ಸಿದ್ಧಪಡಿಸದ ಹಳಬರಿಗೆ ಇಲ್ಲಿ ತಿಳಿಸಿರುವ ಕೆಲವು ಸಂಗತಿಗಳು 'ಹಣಕಾಸಿನ ವಿಚಾರದಲ್ಲಿ ಹೆಚ್ಚು ಜಾಗೃತವಾಗಿರುವ ತಲೆಮಾರೊಂದರ ಎದುರು ನೀವು ಹಿಂದೆ ಬಿದ್ದಿದ್ದೀರಿ' ಎಂಬ ಪಾಠ ಹೇಳುತ್ತಿವೆ.

ಷೇರುಪೇಟೆಯಲ್ಲಿ 3.21 ಕೋಟಿ ಕುಟುಂಬಗಳಿಂದ ಹೂಡಿಕೆ

• ಗಂಜಿ ಆದಿಶೇಷ

ದೇಶದಲ್ಲಿ ಅಂದಾಜು 33.72 ಕೋಟಿ ಕುಟುಂಬಗಳಿವೆ. ಈ ಪೈಕಿ 21.3 ಕೋಟಿ (ಶೇ 63ರಷ್ಟು) ಕುಟುಂಬಗಳಿಗೆ ದೇಶದ ಷೇರುಪೇಟೆಯಲ್ಲಿನ ಒಂದಾದರೂ ಹೂಡಿಕೆ ಉತ್ಪನ್ನದ ಬಗ್ಗೆ ಅರಿವು ಇದೆ. ಈ ಪೈಕಿ 3.21 ಕೋಟಿ ಕುಟುಂಬಗಳು (ಶೇ 9.5ರಷ್ಟು) ಮಾತ್ರ ಹೂಡಿಕೆ ಮಾಡುತ್ತಿವೆ. ಇದರಲ್ಲಿ ಶೇ 60ರಷ್ಟು ಕುಟುಂಬಗಳು ಮಾತ್ರ ಸಕ್ರಿಯವಾಗಿ ಹೂಡಿಕೆ ಮಾಡುತ್ತಿವೆ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಹೂಡಿಕೆದಾರರ ಸಮೀಕ್ಷೆ 2025 ತಿಳಿಸಿದೆ.

ಷೇರುಪೇಟೆ ಉತ್ಪನ್ನದ ಬಗ್ಗೆ ಅರಿವು

ಲಿಂಗವಾರು

66% ಪುರುಷರು
58% ಮಹಿಳೆಯರು

ಪೀಳಿಗೆಗಳು

66% ಜೆನ್ ಝೀ (18ರಿಂದ 28 ವರ್ಷ ವಯಸ್ಸಿನವರು)
62% ಮಿಲೆನಿಯಲ್ಸ್ (29ರಿಂದ 44 ವರ್ಷ ವಯಸ್ಸಿನವರು)
58% ಜೆನ್ಸ್ ಎಕ್ಸ್ (45ರಿಂದ 60 ವರ್ಷ ವಯಸ್ಸಿನವರು)
50% ಸಿಲ್ವರ್ ಜೆನ್ (61 ವರ್ಷ ಮೇಲ್ಪಟ್ಟವರು)

ಕುಟುಂಬಗಳ ಮಟ್ಟದಲ್ಲಿ ಇರುವ ಅರಿವು

ಉತ್ಪನ್ನಗಳು	ಶೇಕಡವಾರು
ಷೇರುಪೇಟೆಯ ಒಟ್ಟು ಉತ್ಪನ್ನಗಳು	63
ಮ್ಯೂಚುವಲ್ ಫಂಡ್‌ಗಳು/ಇಟಿಎಫ್	53
ಷೇರುಗಳು	49
ಫ್ಯೂಚರ್ಸ್ ಆ್ಯಂಡ್ ಆಪ್ಶನ್ಸ್	13
ಆರ್‌ಇಐಟಿ/ಇನ್ವಿಟ್ಸ್	10
ಕಾರ್ಪೊರೇಟ್ ಸಾಲಪತ್ರಗಳು	10
ಪರ್ಯಾಯ ಹೂಡಿಕೆ ನಿಧಿ (ಎಐಎಫ್)	6
ನಿಶ್ಚಿತ ಠೇವಣಿ/ಆರ್‌ಡಿ	98
ವಿಮೆ/ಜೀವವಿಮೆ	95
ಅಂಚೆ ಇಲಾಖೆ ಉಳಿತಾಯ ಯೋಜನೆಗಳು/ಕೆವಿಪಿ/ಎನ್‌ಎಸ್‌ಸಿ	75
ಚಿನ್ನ–ಭೌತಿಕ ರೂಪ/ಸಾವರಿನ್ ಗೋಲ್ಡ್ ಬಾಂಡ್	74
ರಿಯಲ್ ಎಸ್ಟೇಟ್	46
ರಾಷ್ಟ್ರೀಯ ಪಿಂಚಣಿ ಯೋಜನೆ	31
ಚಿಟ್ ಫಂಡ್	31
ಸಾರ್ವಜನಿಕ ಹೂಡಿಕೆ ನಿಧಿ	27
ಇಪಿಎಫ್/ವಿಪಿಎಫ್	25
ಕ್ರಿಪ್ಟೊಕರೆನ್ಸಿ	15

ಶಿಕ್ಷಣ ಮಟ್ಟ ಆಧರಿಸಿ ಷೇರು ಉತ್ಪನ್ನದ ಮಾಹಿತಿ



ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್

ಬ್ರೋಕರೇಜ್ ಮಾತು

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಂಪನಿಯ ತೆರಿಗೆ ನಂತರದ ಲಾಭವು (ಪಿಎಟಿ) ಡಿಸೆಂಬರ್ ತ್ರೈಮಾಸಿಕದಲ್ಲಿ ಶೇಕಡ 29.3ರಷ್ಟು ಹೆಚ್ಚಾಗಿದೆ. ಕಂಪನಿಯ ವರಮಾನ ಮತ್ತು ತೆರಿಗೆ ನಂತರದ ಲಾಭವು 2027–28ರವರೆಗೆ ಕ್ರಮವಾಗಿ ಶೇ 19 ಹಾಗೂ ಶೇ 16ರಷ್ಟು ವಾರ್ಷಿಕ ಸಂಯುಕ್ತ ಬೆಳವಣಿಗೆ ದರದಲ್ಲಿ (ಸಿಎಜಿಆರ್) ಬೆಳೆಯುವ ನಿರೀಕ್ಷೆ ಇದೆ ಎಂದು ಬ್ರೋಕರೇಜ್ ಸಂಸ್ಥೆ ಆನಂದ ರಾಠಿ ಅಂದಾಜು ಮಾಡಿದೆ. ಕಂಪನಿಯ ಷೇರುಬೆಲೆಯು ₹5,768ಕ್ಕೆ ತಲುಪಬಹುದು ಎಂದು ಅದು ಹೇಳಿದೆ.

ಕಂಪನಿಯ ಬಳಿ ₹2.5 ಲಕ್ಷ ಕೋಟಿಯಷ್ಟು ಮೊತ್ತದ ಕಾರ್ಯಾದೇಶ ಇದೆ. ಇದು ಮುಂದಿನ ಹಲವು ವರ್ಷಗಳವರೆಗೆ ವರಮಾನದ ಖಾತರಿಯನ್ನು ನೀಡುತ್ತಿದೆ ಎಂದು ಆನಂದ ರಾಠಿ ಅಭಿಪ್ರಾಯಪಟ್ಟಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಎಚ್‌ಎಎಲ್ ಕಂಪನಿಯ ಷೇರು ಮೌಲ್ಯವು ₹4,247.60 ಆಗಿತ್ತು.

ಕಂಪನಿಯು ಎದುರಿಸಬಹುದಾದ ಕೆಲವು ಸವಾಲುಗಳನ್ನು ಕೂಡ ಆನಂದ ರಾಠಿ ಪಟ್ಟಿ ಮಾಡಿದೆ. ಎಂಜಿನ್ ಪೂರೈಕೆಯಲ್ಲಿನ ವಿಳಂಬ, ಎಂಕೆ1ಎ ಸಂಬಂಧಿತ ಕೆಲಸಗಳನ್ನು ನಿರ್ವಹಿಸುವಲ್ಲಿನ ಅಡಚಣೆಗಳು, ಬೃಹತ್ ಪ್ರಮಾಣದ ರಕ್ಷಣಾ ಗುತ್ತಿಗೆಗಳನ್ನು ನೀಡುವುದರಲ್ಲಿನ ವಿಳಂಬಗಳು ಆ ಕೆಲವು ಸವಾಲುಗಳು ಎಂದು ಬ್ರೋಕರೇಜ್ ಸಂಸ್ಥೆ ಹೇಳಿದೆ.

(ಬ್ರೋಕರೇಜ್ ಸಂಸ್ಥೆಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ್‌ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

Readthe following extracts and answer the questions that follows (Question No: 61 to 64)

61. "A walk in the park might make you feel better."
a) Who gave this suggestion?
b) Who does you refer to ?
c) Why did the speaker say this?
Ans:- (a) Aunt Sushila
(b) Smita
(c) Because Smita was very sad and much worried about her brother's health.

62."There are limits to patience, Sir."
a) Who made this statement?
b) Whom did he say so ?
c) When did the speaker say this?
Ans:- (a) Diego
(b) Pedro
(c) When Diego expressed some of them were welcoming the coast of Spain.

63. "The trees in that orchard are not mine."
a) Who is the speaker?
b) Who do the trees belong to according to the speaker?
c) Why did the speaker say so ?
Ans:- (a) Don Anselmo
(b) The children of Rio en Medio
(c) Because the speaker had planted a tree in the name of each child who was born in that village.

64. "There won't be any calendar, there won't be clock."
a) Who is the speaker?
b) When did the speaker say this?
c) Why did the speaker say this?
Ans:- (a) The poet Norman Nicholson
(b) When the speaker was ready to go to space.
(c) Because there is no concept of day and night.

Answer the following question in about 8-10 sentences

65. What do you think is the writer of 'Narayanapur incident' trying to impress upon the readers?
Ans:- This incident was most common during 1942. This gives bravery, truthfulness, patriotism etc., It teaches a lesson to readers. If youngsters during their school time read this type of incidents, they may cultivate these qualities. The writer's intention is to sow the good (virtue) seeds, it may give good fruits only.

66. What qualities of Dicky Dolma led her to realise her dream?
Ans:- From the childhood days she had an urge to climb Mount Everest. Daily she watched the beautiful, breath taking view of the Mountain. She had firm determination, and hard work helped her. She practiced 4 hours a day. She had one track mind and ready to face hardships. Her desire grew when she came to know about the newly opened mountaineering institute in Manali. She was just 16 years at that time. She joined the institute and got 'A' grade and selected at all India level.

67. Life for Hanif, in the beginning, was never a smooth sail. Explain.
Ans:- When Hanif was eight years old, he lost his father. He had to take the responsibility to look after his three younger brothers. His mother Hema aziz had a touring job and was out very often. They had to do their work for themselves. So it was not a smooth sail.

68. Why were the poeple miserable in Wangjia's village?
Ans:- In ancient times, there was a poor area in Tibet was Wangjia's village. The people who lived in that area suffered from hunger and cold. There was no river or water source, trees, green grass or any types of crops, No fruits, flowers or vegetables. The land was also not good. The people did not know what happiness could be. In spite of that they believed that happiness must exist somewhere in the world.

69. How did the bird in the garden change Satish's life?
Ans:- One day he saw a rare bird that was flying here and there. It had long tail and black crest. It had restless energy and to flight at any moment. He was attracted by the bird and sketched the bird from his memory. He liked his sketch, and kept beside his bed on the pile of books. He had discovered his past time by filling the pages with pictures and patterns of his thinking. Like this the bird in the garden changed his life.

70. Why does the poet's mother asserts her right to reside in a tree?
Ans:- The poet's mother asserts her right to reside in a tree because she loves to stay in a tree. She is fond of climbing trees even at her old age. When Grandma recover from her fall and after she became stronger she said her son that she could not lie on the bed any longer and without hesitating she ordered that she wanted a house on the tree top to reside in her house peacefully. So her obedient son fulfilled her ambition and right.

71. After Roma made a full recovery, Baleshwar met her. Briefly describe how Roma thanked him, and what Baleshwar said in reply
Ans : Roma made full recovery in few days. She was thinking about the accident and felt that she couldn't imagine what would have happened if Baleshwar hadn't been there. At that time Baleshwar met her. Roma thanked him and said that if he would not take such a risk. She was no more. She said that she could never repay him. For that Baleshwar said her that is humanity and at that time she needed help, that day was Roma, other day it could be some other helping is necessary those who needed, especially timely help will save the life.

(Contd……….)

Biology

REVISION : MODEL QUESTIONS

33. Fill in the blanks by choosing the appropriate word/Words from those given below: (Competent cells, Bacteria, non-living molecule, vectors, Competent cells, Recombinant cells)

1. The interstitial space in seminiferous tubules consists of immunologically ------------
Ans:- Competent cells

2. The version of biogenesis is accepted by majority, as the first form of life arose slowly through evolutionary forces from ---------.
Ans:- non-living molecule

3. Filariasis pathogens are transmitted to a healthy person through -----------
Ans:- vectors,

4. Swiss cheese with large holes is produced from ------------
Ans:- Bacteria,

5. The host cells which have the ability to incorporate foreign DNA within them are called - -----------
Ans:- Competent cells

34. Name the cells that secrete androgens?
Ans:- Leydig cells.

35. Name the causative agent of Elephantiasis.
Ans:- Wuchereria bancrafti and Wuchereria malayi.

36. Mention the bacterium responsible for the large holes seen in Swiss Cheese.
Ans:- Propionibacterium sharmanii

37. Distinguish between homogametes and heterogametes.
Ans:-

Homogametes	*Heterogametes*
When both alleles of a gene are similar, then the individual is called homogamete.	When both alleles of a gene are dissimilar, then the individual is called heterogamete.
They are true breeding leading to purelines.	They are not true breeding.

38. What are homologous organs? Mention any 2 examples.
Ans:- The organs with same structural design and developmental origin but differing in their functions are called homologous organs. Forelimb of human being is homologous to forelimbs of whales and bats.

39. Introduction of some alien species causes biodiversity loss. Justify the statement with an example.
Ans:-(i) The alien species become invasive and cause extinction or decline of indigenous species. *Eg:* The Nile perch introduced into Lale Victoria in east Africa led to the extinction of more than 200 species of cichlid fish in the lake.
ii) Loss of Habitat and fragmentation drive animals and plants to extinction. *Eg:* as the Amazon forest is cut and cleared for cultivating soya beans of for conversion of grasslands for raising forest is cut and cleared for cultivating soya beans or for conversion of grasslands for raising beef cattle, many species are affected.

40. a) What are hermaphrodites? Mention one example.
Ans:- The animals bearing both male and female sex organs are called hermaphrodites.
b) Off springs of asexual reproduction are called clones. Why?
Ans:- In asexual reproduction, the off spring is morphologically and genetically identical to the parent and to each other. Hence, it is called clone.

41. Briefly explain the structure of pollen grains.
Ans:- a) Pollen grains are the mature microscope. The wall of the pollen grain is made up outer exine and an inner intine.
b) The exine is outer hard coat due to the presence of sporollenin.
c) The intine is made up of cellulose and pectin.
d) The pollen grain has germ pore through which the pollen tube germinate.
e) Enclosed within the wall are two unequal cells. The larger one is called the vegetative cell and the smaller one is called the generative cell.
f) The generative cells produce two male gametes or sperms, which takes part in double fertilization.

42. Mention the different steps of process of recombinant DNA technology.
Ans:- The different steps of process of recombinant DNA technology are - a) Isolation of DNA
b)Fragmentation DNA by restriction endonucleases.
c) Isolation of a desired DNA fragment.
d) Amplification of gene of interest using PCR.
e) Insertion of recombinant DNA into the host.
f) Culturing the host cells on a suitable medium at a large scale.
g) Extraction of the desired gene product.
h) Downstream processing of the products as finished product, ready for marketing.

43. What is phenylketonurse? Write two Symptoms
Ans: A genetic disorder due to deficiency of enzyme phenyl alanine hydroxylase. As a result phenyl alanine ja accumulated and converted into phenyl pyruvic acid and other derivatives
Symptoms: Accumulation of these in bran reaults in mental retardation. They are excreted through urine because of poor absorption by kidney *(Contd)*

ರಣಹದ್ದು ಬಳಗಕ್ಕೆ ಹೊಸ ಅತಿಥಿ

• ಓದೇಶ ಸಕಲೇಶಪುರ

ರಾಮನಗರ: ಇಲ್ಲಿನ ರಾಮದೇವರ ಬೆಟ್ಟದಲ್ಲಿರುವ, ಅಳಿವಿನಂಚಿನ ರಣಹದ್ದು ಬಳಗಕ್ಕೆ ಹೊಸ ಅತಿಥಿ ಸೇರಿದೆ. ಉದ್ದ ಕೊಕ್ಕಿನ ರಣಹದ್ದು ಸತತ ಐದನೇ ವರ್ಷ, ಹೊಸ ಮರಿಯೊಂದಿಗೆ ಕಾಣಿಸಿಕೊಂಡಿದೆ.

'2015ರಲ್ಲಿ ಮೊದಲ ಬಾರಿಗೆ ರಣಹದ್ದು ಮೊಟ್ಟೆ ಇಟ್ಟು, ಮರಿ ಮಾಡಿದ್ದು ದಾಖಲಾಗಿತ್ತು. ನಂತರ ಪ್ರತಿ ವರ್ಷ ಮೊಟ್ಟೆ ಇಟ್ಟರೂ ಮರಿ ಹೊರಬಂದಿರಲಿಲ್ಲ. ಬಳಿಕ 2021ರಿಂದ ಸತತವಾಗಿ ಮೊಟ್ಟೆ ಇಟ್ಟು ಮರಿ ಮಾಡುತ್ತಿವೆ' ಎಂದು ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಮಹಮ್ಮದ್ ಮನ್ಸೂರ್ 'ಪ್ರಜಾವಾಣಿ'ಗೆ ತಿಳಿಸಿದರು.

'ರಣಹದ್ದುಗಳ ಆವಾಸ ಸ್ಥಾನವಾದ ರಾಮದೇವರ ಬೆಟ್ಟದಲ್ಲಿ ಹದ್ದುಗಳ ಸಂತತಿ ಹೆಚ್ಚಳಕ್ಕೆ ಪೂರಕ ಕ್ರಮಗಳನ್ನು ಇಲಾಖೆ ಕೈಗೊಂಡಿದೆ. ಕಳೆದ ಐದು ವರ್ಷಗಳಿಂದ ಬೆಟ್ಟದಲ್ಲಿ ಹದ್ದುಗಳ ಬಳಗಕ್ಕೆ ಹೊಸ ಅತಿಥಿ ಸೇರುತ್ತಿವೆ. ಇದೀಗ ಜನಿಸಿರುವ ಮರಿ ದೊಡ್ಡ ರಣಹದ್ದುಗಳ ಜೊತೆ ಸುರಕ್ಷಿತವಾಗಿದೆ' ಎಂದು ಹೇಳಿದರು.

ಅಳಿವಿನಂಚಿನ ಪಟ್ಟಿಯಲ್ಲಿರುವ ರಣಹದ್ದುಗಳ ಸಂರಕ್ಷಣೆಗಾಗಿ ರಾಜ್ಯ ಸರ್ಕಾರ 2012ರಲ್ಲಿ ರಾಮದೇವರ ಬೆಟ್ಟದ ವ್ಯಾಪ್ತಿಯ 346.14 ಹೆಕ್ಟೇರ್ ಪ್ರದೇಶವನ್ನು ರಣಹದ್ದು ಅಭಯಾರಣ್ಯ ಎಂದು ಘೋಷಿಸಿದೆ.

ಆಹಾರ ಅರಸಿ ನೂರಾರು ಕಿ.ಮೀ. ಹೋಗುವ ರಣಹದ್ದು ತನ್ನ ಮೂಲ ನೆಲೆ ರಾಮದೇವರ ಬೆಟ್ಟಕ್ಕೆ ಮರಳಿ, ಮೊಟ್ಟೆ ಇಟ್ಟು ಮರಿ ಮಾಡುತ್ತಿದೆ
ರಾಮಕೃಷ್ಣಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ದಕ್ಷಿಣ ಜಿಲ್ಲೆ

ರಾಮದೇವರ ಬೆಟ್ಟದಲ್ಲಿ ರಣಹದ್ದು ಸಂತಾನೋತ್ಪತ್ತಿ ಆದರೂ ಹದ್ದುಗಳ ಸಂಖ್ಯೆ ಏರದಿರುವುದು ದಾಟಿಲ್ಲ. ಈ ಕುರಿತು ಅಧ್ಯಯನ ನಡೆಸಬೇಕು
ಬಿ. ಶಿವಕುಮಾರ್, ರಣಹದ್ದು ಸಂರಕ್ಷಣಾ ಟ್ರಸ್ಟ್

'ನಷ್ಟದಲ್ಲಿವೆ ಸಾರಿಗೆ ನಿಗಮಗಳು'

ಕೋವಿಡ್ ಸಾವು: ಪರಿಹಾರ ಪಾವತಿಗೂ ಹಣವಿಲ್ಲ– ಹೈಕೋರ್ಟ್‌ಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳು ನಷ್ಟದಲ್ಲಿ ನಡೆಯುತ್ತಿದ್ದು, ಕೋವಿಡ್ ಸಂದರ್ಭದಲ್ಲಿ ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಪರಿಹಾರ ಧನ ಪಾವತಿ ಮಾಡಲು ನಿಗಮಗಳ ಬಳಿ ಹಣವಿಲ್ಲ. ವೇತನ ನೀಡುವುದೇ ಕಷ್ಟವಾಗಿದೆ' ಎಂದು ಕರ್ನಾಟಕ ಸಾರಿಗೆ ನಿಗಮಗಳ ಪರ ವಕೀಲರು ಹೈಕೋರ್ಟ್‌ಗೆ ಅರುಹಿದ್ದಾರೆ.

'ಕೋವಿಡ್ ಸಮಯದಲ್ಲಿ ಮೃತಪಟ್ಟ ನಾಲ್ಕು ನಿಗಮಗಳ ಸಿಬ್ಬಂದಿಗೆ ತಲಾ ₹30 ಲಕ್ಷ ಪರಿಹಾರ ಬಿಡುಗಡೆ ಮಾಡಲು ನಿರ್ದೇಶಿಸಬೇಕು' ಎಂದು ಕೋರಿ ದಾವಣಗೆರೆಯ ತಾಹಿರ್ ಹುಸೇನ್ ಮತ್ತು ರಾಯಚೂರಿನ ಅಜೀಜ್ ಪಾಷ ಜಹಗೀರ್‌ದಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪಿ.ಉಸ್ಮಾನ್, 'ಸಾರಿಗೆ ನಿಗಮಗಳ ಸಿಬ್ಬಂದಿಗೆ ಪರಿಹಾರ ಪಾವತಿಸಲು ಮೀನಮೇಷ ಎಣಿಸಲಾಗುತ್ತಿದೆ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಯಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪರ ವಕೀಲ ಎಚ್.ಆರ್.ರೇಣುಕಾ ಅವರು, 'ನಿಗಮಗಳು ನಷ್ಟದಲ್ಲಿ ನಡೆಯುತ್ತಿದ್ದು, ಎರಡು ವರ್ಷದಿಂದ ಬಿಎಂಟಿಸಿ ಉದ್ಯೋಗಿಗಳಿಗೆ ಗ್ರ್ಯಾಚ್ಯುಟಿ ಹಣ ನೀಡಿಲ್ಲ' ಎಂದರು.

ವಿವರ ಸಲ್ಲಿಸಲು ಸರ್ಕಾರಕ್ಕೆ ಸೂಚನೆ

'ಐದು ಕುಟುಂಬಗಳಿಗೆ ಪರಿಹಾರ ನೀಡಿ ಉಳಿದವರಿಗೆ ನೀಡದೇ ತಾರತಮ್ಯ ಮಾಡಲಾಗುತ್ತಿದೆ. ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಒದಗಿಸುತ್ತಿರುವ ಉಚಿತ ಬಸ್ ಸೇವೆ ಹೇಗೆ ಕೆಲಸ ಮಾಡುತ್ತಿದೆ? ಇದುವರೆಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ ಎಂಬುದರ ವಿವರವನ್ನು ಸಲ್ಲಿಸಿ' ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಮಾರ್ಚ್ 23ಕ್ಕೆ ಮುಂದೂಡಿತು.

ಸೂರಜ್ ರೇವಣ್ಣ ಅರ್ಜಿ ವಜಾ

'ಸ್ವಪಕ್ಷದ ಕಾರ್ಯಕರ್ತನ ಮೇಲಿನ ಅಸಹಜ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಿಂದ ನನ್ನನ್ನು ಕೈಬಿಡಬೇಕು' ಎಂದು ಕೋರಿದ್ದ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರ ಕ್ರಿಮಿನಲ್ ಮರುಪರಿಶೀಲನಾ ಅರ್ಜಿಯನ್ನು ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ವಜಾಗೊಳಿಸಿದೆ.

'ಹಾಸನ ಜಿಲ್ಲೆಯ ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣದಲ್ಲಿನ ಆರೋಪದಿಂದ ನನ್ನನ್ನು ಮುಕ್ತಗೊಳಿಸಬೇಕು' ಎಂದು ಕೋರಿ ಸೂರಜ್ ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಈ ಕುರಿತಂತೆ ಆದೇಶಿಸಿದ್ದಾರೆ.

'ಅರ್ಜಿಗೆ ಸಂಬಂಧಿಸಿದಂತೆ ನಗರದ 42ನೇ ಹೆಚ್ಚುವರಿ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ 2025ರ ನವೆಂಬರ್ 28ರಂದು ಹೊರಡಿಸಿರುವ ಆದೇಶವನ್ನು ದೃಢೀಕರಿಸಲಾಗಿದೆ' ಎಂದು ಸೆಷನ್ಸ್ ನ್ಯಾಯಾಲಯ ಆದೇಶದಲ್ಲಿ ವಿವರಿಸಿದೆ.

ಬ್ರಹ್ಮರಥೋತ್ಸವ

ಪ್ರಜಾವಾಣಿ ಚಿತ್ರ

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಬುಧವಾರ ಮಹಾಬಲೇಶ್ವರ ಬ್ರಹ್ಮರಥೋತ್ಸವ ನೆರವೇರಿತು

ಎನ್‌ಪಿಎಸ್ ಅನ್ವಯ: ನೋಟಿಸ್

ಬೆಂಗಳೂರು: 'ರಾಜ್ಯದ ಸರ್ಕಾರಿ ವೈದ್ಯಕೀಯ, ದಂತ ವೈದ್ಯ ಕಾಲೇಜುಗಳು ಮತ್ತು ಸೂಪರ್ ಸ್ಪೆಷಾಲಿಟಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ 2020ರ ಬದಲಿಗೆ 2006ರಿಂದಲೇ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಅನ್ವಯಿಸುವಂತೆ ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಾಧ್ಯಾಪಕ ಡಾ.ಮೊಹಮ್ಮದ್ ಆರಿಫ್ ಸೇರಿದಂತೆ ಸಂಸ್ಥೆಯ 45 ಮಂದಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

2020ರಲ್ಲಿ ಹೊರಡಿಸಲಾಗಿರುವ ಆದೇಶ ರದ್ದುಪಡಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಬಸ್ ಸಂಚಾರಕ್ಕೆ ಅಡ್ಡಿಯಿಲ್ಲ

ಒಂದನೇ ಪುಟದಿಂದ...

'ಅಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಲಾಗುವುದು' ಎಂದು ತಿಳಿಸಿದ್ದಾರೆ.

'ಬೇಡಿಕೆಗಳ ಈಡೇರಿಕೆಗಾಗಿ ಕಳೆದ ಆಗಸ್ಟ್‌ನಲ್ಲಿ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಹೈಕೋರ್ಟ್‌ನ ಸೂಚನೆಯ ಮೇರೆಗೆ ಮುಷ್ಕರ ಕೈಬಿಡಲಾಗಿತ್ತು. ಆ ನಂತರ ಮಾತುಕತೆ ನಡೆಸಿದರೂ 2024 ಜನವರಿ 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆ ಮಾಡಲು ಸರ್ಕಾರ ಒಪ್ಪಿಲ್ಲ. 39 ತಿಂಗಳ ಹಿಂಬಾಕಿ ನೀಡಬೇಕಿದ್ದು, 14 ತಿಂಗಳ ಹಿಂಬಾಕಿ ನೀಡಲಷ್ಟೇ ಒಪ್ಪಿದೆ. ಹಿಂಬಾಕಿ ಪೂರ್ಣ ನೀಡಬೇಕು. ಪ್ರತಿ ನಾಲ್ಕು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಮಾಡಬೇಕು ಎಂಬ ಒಪ್ಪಂದ ಮುರಿಯಬಾರದು. ಶೇ 25ರಷ್ಟು ವೇತನ ಹೆಚ್ಚಳ ಮಾಡಿ 2024ರಿಂದಲೇ ಜಾರಿ ಮಾಡಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ' ಎಂದು ಹೇಳಿದ್ದಾರೆ.

26 ತಿಂಗಳ ಹಿಂಬಾಕಿ ಬಿಡುಗಡೆ: ಸಚಿವ ರೆಡ್ಡಿ

ಬೆಂಗಳೂರು: ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದಂತೆ 38 ತಿಂಗಳ ಹಿಂಬಾಕಿಯ ಪೈಕಿ 26 ತಿಂಗಳವರೆಗಿನ ಹಿಂಬಾಕಿ ₹1,271.92 ಕೋಟಿ ಬಿಡುಗಡೆ ಮಾಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ವೇತನ ಪರಿಷ್ಕರಣೆ, ಹಿಂಬಾಕಿ ಬಗ್ಗೆ ಬುಧವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಈ ನಿರ್ಧಾರ ಮಾಡಲಾಗಿದೆ. ಶ್ರೀನಿವಾಸಮೂರ್ತಿ ನೇತೃತ್ವದ ಏಕ ಸದಸ್ಯ ಸಮಿತಿಯ ಶಿಫಾರಸಿನಂತೆ 14 ತಿಂಗಳ ಹಿಂಬಾಕಿ ನೀಡಲು ಹಿಂದೆಯೇ ಒಪ್ಪಿಗೆ ನೀಡಲಾಗಿತ್ತು. ಜೊತೆಗೆ 2020ರ ಜನವರಿಯಿಂದ ಡಿಸೆಂಬರ್‌ವರೆಗಿನ 12 ತಿಂಗಳ ಹಿಂಬಾಕಿಯನ್ನೂ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದಾರೆ.

ವೇತನ ಪರಿಷ್ಕರಣೆಯನ್ನು 2025ರ ಏಪ್ರಿಲ್1ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲು ಕಾರ್ಮಿಕ ಸಂಘಟನೆಗಳೊಂದಿಗೆ ಮಾತುಕತೆ, ಸಂಧಾನ ಪ್ರಕ್ರಿಯೆ ನಡೆಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಬಜೆಟ್‌ನಲ್ಲಿ ಅನುದಾನ ಮೀಸಲಿಡದೇ 2023ರ ಮಾರ್ಚ್‌ನಲ್ಲಿ ವೇತನ ಪರಿಷ್ಕರಣೆ ಮಾಡಿರುವುದು ವಿಳಂಬಕ್ಕೆ ಕಾರಣವಾಗಿದೆ ಎಂದು ವಿವರಿಸಿದ್ದಾರೆ.

ಕರ್ನಾಟಕ ಗೃಹ ಮಂಡಳಿ
Karnataka Housing Board — Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಚಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಕಾಮಗಾರಿಯ ಹೆಸರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ವಡೇರಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ (ಜಿ+4) ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.
Work Indent : KHB/2025-26/BD/WORK_INDENT 702 & IFT No.153/ 2025-26 Date: 11.02.2026. ಟೆಂಡರ್‌ಗಿಟ್ಟ ಮೊತ್ತ : ರೂ.6,99,64,202/-
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 13.03.2026 ಸಂಜೆ 4.00 ಗಂಟೆಗೆ
ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/ 080–22100077 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ./5723/ಆಕಾರ್/2025–26

ಕರ್ನಾಟಕ ಸರಕಾರ
ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ–581301
DISTRICT URBAN DEVELOPMENT CELL, D.C. OFFICE
UTTARA KANNADA DISTRICT, KARWAR-581301
Ph/Fax: 08382-221170 ಇ–ಮೇಲ್: ka.uttarakannada.dudc@gmail.com
ನಂ. ಡಿಯುಡಿಸಿ 1/LWM/ಸಿಆರ್/2025–26 ದಿನಾಂಕ: 17–02–2026

ಟೆಂಡರು ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ ನಗರಸಭೆ ಕಾರವಾರ ಮತ್ತು ಪಟ್ಟಣ ಪಂಚಾಯತ ಹೊನ್ನಾವರ ವ್ಯಾಪ್ತಿಯಲ್ಲಿರುವ ಸ್ವಚ್ಛ ಭಾರತ ಮಿಷನ್ 2.0 ಯೋಜನೆಯಡಿಯಲ್ಲಿ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದಲ್ಲಿ ಪಾರಂಪರಿಕ ತ್ಯಾಜ್ಯ ನಿರ್ವಹಣೆ (Legacy Waste) ವಿಲೇವಾರಿ ಮಾಡುವ ಕಾಮಗಾರಿಗಾಗಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ ಜಿಲ್ಲೆ ಇವರು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (http:/kppp.karnataka.gov.in) ಟೆಂಡರ್‌ಗಳನ್ನು ಸಲ್ಲಿಸುವುದು.
Indent No.DMA/2025-26/OW/WORK_INDENT 49966/Call-2.
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: 17–02–2026 ರಂದು 16.00 ಗಂಟೆ, ಆಕ್ಷೇಪಣೆ ಸಲ್ಲಿಸಲು ಹಾಗೂ ಪೂರ್ವಭಾವಿ ಸಭೆಯ ಕೊನೆಯ ದಿನಾಂಕ: 19–03–2026 ರಂದು 11.00 ಗಂಟೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20–03–2026 ರಂದು 17.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23–03–2026 ರಂದು 17.30 ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 26–03–2026 ರಂದು 11.00 ಗಂಟೆ.

ಸಹಿ/– ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ
DIPR/KWR/KSMCA/1105/ 25-26 dt. 17.02.2026

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಹೆಬ್ಬಾಳ, ಬೆಂಗಳೂರು – 560024.
Ph: 080-23412767, e-mail:commissionerahvs@gmail.com
ಸಂಖ್ಯೆ:ಆಪಸಂ/ವಿಎಂಎಸ್/ವಿವ–41/ವಾಹನ ಚಾಲಕರು/ಟೆಂಡರ್/2025–26 ದಿನಾಂಕ:18.02.2026

ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2025–26ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳಿಗೆ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಸಂಬಂಧ KPP Portal ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿಸಿದ ಮೊತ್ತ ರೂ.652.02 ಲಕ್ಷಗಳು.
ಪೂರ್ಣ ಟೆಂಡರ್ ದಾಖಲೆಯನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ:18.02.2026 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು KPP Portal ನಲ್ಲಿ ದಿನಾಂಕ:18.02.2026 ರಿಂದ 17.03.2026 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ KPP Portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–
ಉಪ ನಿರ್ದೇಶಕರು,
ಪಶುವೈದ್ಯಕೀಯ ಔಷಧಿ ಭಂಢಾರ,
ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಡಿಐಪಿಆರ್/ಸಿಪಿ/5732/ಸಿಎಲ್/2025–26

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು – 560024.
ಇ–ಮೇಲ್: commissionerahvs@gmail.com ಫೋನ್: 080–23412767
ನಂ: ಆಪಸಂ/ವಿಎಂಎಸ್/ವಿವ–39/ಖಾ.ವೀ.ನ/ಟೆಂಡರ್/2025–26 ದಿನಾಂಕ: 18–02–2026

ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2026–27 ನೇ ಸಾಲಿನಲ್ಲಿ ರಾಜ್ಯದಲ್ಲಿರುವ ವೀರ್ಯ ಸಂಸ್ಕರಣಾ ಕೇಂದ್ರಗಳಿಗೆ ಅವಶ್ಯವಿರುವ ಖಾಲಿ ವೀರ್ಯ ನಳಿಕೆಗಳನ್ನು ಖರೀದಿಸುವ ಸಲುವಾಗಿ ಕೆಪಿಪಿ ಪೋರ್ಟಲ್ ನ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಸಂಬಂಧ ಒಂದು ವರ್ಷದ ಅವಧಿಗೆ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿಸಿದ ಮೊತ್ತ ರೂ. 183.16 ಲಕ್ಷಗಳು.
ಪೂರ್ಣ ಟೆಂಡರ್ ದಾಖಲೆಗಳನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 18–02–2026 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ: 18–02–2026 ರಿಂದ 17–03–2026 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು ಪಶುವೈದ್ಯಕೀಯ ಔಷಧಿ ಭಂಢಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
DIPR/CP/5729/NR/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2025–26/2123 ದಿ:16.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–3 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ ಸಿ.ಎಂ.ಐ.ಡಿ.ಪಿ– ಯೋಜನೆಯಡಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ 2 ಕಾಮಗಾರಿಗಳಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ.51.29 ಲಕ್ಷ**, ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ. 95.21** ಲಕ್ಷಗಳಿರುತ್ತದೆ. ಟೆಂಡರ್‌ನ್ನು **ದಿನಾಂಕ: 16.02.2026** ರಿಂದ **ದಿನಾಂಕ: 24.02.2026 ರ ಸಂಜೆ 5.30** ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು **ದಿನಾಂಕ: 26.02.2026 ರ ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ದಿನಾಂಕ: 02.03.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು **"KPPP"** ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ
ಡಿಐಪಿಆರ್/ಬಳ್ಳಾರಿ/1018/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008
No.EE/MI&GWDDD/BGM/TND/AE/2025-26/5368 Date: 17-02-2026

ಅವಧಿ ವಿಸ್ತರಣೆ ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ–4)

ಈ ಕಛೇರಿ ಟೆಂಡರ ಪ್ರಕಟಣೆ No.EE/MI&GWDDD/ BGM/TND/AE/2025-26/5278 Dated:10-02-2026ರಲ್ಲಿ 4702 ಲೆಕ್ಕ ಶೀರ್ಷಿಕೆ ಕಾಮಗಾರಿಗಳಿಗಾಗಿ ಅಹ್ವಾನಿಸಲಾದ ಅಲ್ಪಾವಧಿ ಟೆಂಡರ ಪ್ರಕಟಣೆಗೆ ತಾಂತ್ರಿಕ ಕಾರಣಗಳಿಂದ ಈ ಕೆಳಗಿನಂತೆ ದಿನಾಂಕಗಳನ್ನು ಪರಿಷ್ಕರಿಸಲಾಗಿದೆ. (1 ಕಾಮಗಾರಿಗಳು ಮಾತ್ರ)
1. ಟೆಂಡರ ಸ್ವಿಕರಿಸುವ ಕೊನೆಯ ದಿನಾಂಕ:24–02–2026ರ ಸಂಜೆ 16–00ಘಂಟೆವರೆಗೆ. 2. ತಾಂತ್ರಿಕ ಬಿಡ್ ಭಾಗ–1 ದಿನಾಂಕ:25–02–2026 ರಂದು ತೆರೆಯಲಾಗುವುದು. (ಸಾಧ್ಯವಾದಲ್ಲಿ)
ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವದಿಲ್ಲ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-1869/KSMCA/2025-26

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009
ಸಂಖ್ಯೆ.ಕೆಆರ್‌ಐಡಿಎಲ್/ಎಸಿಟಿ/ಟಿಎನ್‌ಡಿ/ಎಫ್‌ಡಿ/2025–26 ದಿನಾಂಕ:18.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಆರ್‌ಐಡಿಎಲ್ ಸುಮಾರು ರೂ.436.00 ಕೋಟಿ ಹಣವನ್ನು ಒಂದು ವರ್ಷದ ಅವಧಿವರೆಗೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲು ಸಾರ್ವಜನಿಕ ವಲಯದ ಬ್ಯಾಂಕುಗಳು/ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು/ ಖಾಸಗಿ ವಲಯದ ಬ್ಯಾಂಕುಗಳಿಂದ ಇ–ಬಿಡ್ಡಿಂಗ್ ಮೂಲಕ ಟೆಂಡರುಗಳನ್ನು ಆಹ್ವಾನಿಸಿದೆ. ಇತರೆ ನಿಯಮಗಳು ಮತ್ತು ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್:**www.kppp.karnataka.gov.in** ನಲ್ಲಿ ನೋಡಬಹುದು. ಇ–ಪ್ರೊಕ್ ಸಹಾಯವಾಣಿ ಸಂಪರ್ಕ ಸಂ: 9240214000, 9240214001.
- ಇ–ಹರಾಜು ಪ್ರಕಟಣೆ ಪ್ರಕಟಿಸಿರುವ **ದಿನಾಂಕ: 18.02.2026**
- ಬಿಡ್ ಸಲ್ಲಿಸುವ ಕಡೆಯ **ದಿನಾಂಕ: 02.03.2026 ರಂದು ಮಧ್ಯಾಹ್ನ 3.00 ಗಂಟೆವರೆಗೆ.**
- ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 04.03.2026 ರಂದು ಮಧ್ಯಾಹ್ನ 3.00 ಗಂಟೆಗೆ.**
- ಇ–ಹರಾಜು ಪ್ರಾರಂಭದ **ದಿನಾಂಕ: 07.03.2026 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3.00 ಗಂಟೆ ವರೆಗೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಮುಖ್ಯ ಹಣಕಾಸು ಅಧಿಕಾರಿ
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09
ದೂರವಾಣಿ: 080–28015609, ಇ–ಮೇಲ್: cfo-1@kridl.net
ಸಹಿ/–ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್, ಬೆಂಗಳೂರು

ಕರ್ನಾಟಕ ಸರ್ಕಾರ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ದಾವಣಗೆರೆ ವಿಭಾಗ ಕಛೇರಿ, ದಾವಣಗೆರೆ.
ನಂ.ಕಕೊಅಮ/ಕಾಪಾಅ/ದಾವಿ/ಐ.ಎಫ್.ಟಿ–04/2025–26/ ದಿನಾಂಕ:18.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿ ಬರುವ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಪಟ್ಟಣದಲ್ಲಿ ಪಿ.ಎಂ.ಎ.ವೈ–ಹೆಚ್.ಎಫ್.ಎ ಯೋಜನೆಯಡಿಯಲ್ಲಿ ನಿರ್ಮಿಸುತ್ತಿರುವ 700 ಮನೆಗಳ ಪೈಕಿ 180 ಗುಂಪು ಮನೆಗಳನ್ನು ನಿರ್ಮಿಸಿರುವ ಪ್ರದೇಶದಲ್ಲಿ UGD. SEPTIC TANK & BOREWELL AND DRAIN ನಿರ್ಮಾಣ ಕಾಮಗಾರಿಗೆ ಲೆಕ್ಕ ಶೀರ್ಷಿಕೆ 5475–00–115–0–06 ರಡಿಯಲ್ಲಿ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ kppp.karnataka.gov.in ಮುಖಾಂತರ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಐಟಂವಾರು ಟೆಂಡನ್ನು ಕೆ.ಡಬ್ಲ್ಯೂ–4 ರ ನಿಯಮಾವಳಿಗಳಂತೆ ಟೆಂಡನ್ನು ಕರೆಯಲಾಗಿದೆ. ಅದರಂತೆ kppp.karnataka.gov.in ವೆಬ್‌ಸೈಟ್‌ನಲ್ಲಿ ದಿನಾಂಕ 05.03.2026 ಸಾಯಂಕಾಲ 4.00 ಗಂಟೆಯವರೆಗೆ Upload ಮಾಡಬಹುದಾಗಿರುತ್ತದೆ ಸದರಿ ಟೆಂಡರ್‌ನ್ನು ದಿನಾಂಕ 07.03.2026 ರ ಸಂಜೆ 11.00 ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಕಾಮಗಾರಿಯ ವಿವರ ಮತ್ತು ಇತರೆ ವಿಷಯಗಳನ್ನು kppp.karnataka.gov.in ವೆಬ್ ಸೈಟಿನಲ್ಲಿ ಪಡೆಯಬಹುದಾಗಿದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ವಿಭಾಗ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ. ಕಾಮಗಾರಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.
Indent No (1) KSDB/2025-26/OW/WORK INDENT431
Amount Put Tender:- 2,06,60,993/- EMD Amount:-3,09,915/-

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ದಾವಣಗೆರೆ ವಿಭಾಗ, ದಾವಣಗೆರೆ.
ವಾಸಾಇ/ಡಿವಿಜಿ/750/ ಕೆಎಸ್‌ಎಂಸಿಎ/2025–26

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಳಿ — ಸಮುದಾಯ ನಿರ್ಮಾಣದತ್ತ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಟೆಂಡರ್ ಪ್ರಕಟಣೆ ಸಂಖ್ಯೆ: **KHB/CE/AEF/TOWNSHIP-Housing Project/BM Kaval-Kengeri/KHB/2025-26/SE0332/Call-2, dated: 13.02.2026.**
ಕರ್ನಾಟಕ ಗೃಹ ಮಂಡಳಿಯ ವತಿಯಿಂದ **ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ. ಕಾವಲ್ ಮತ್ತು ಇತರ ಗ್ರಾಮಗಳಲ್ಲಿ ಉದ್ದೇಶಿತ ಅಂತರರಾಷ್ಟ್ರೀಯ ಮಟ್ಟದ ಟೌನ್‌ಶಿಪ್ ಹಾಗೂ ವಸತಿ ಯೋಜನೆ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (ಎಇಎಫ್) ನೇಮಕಾತಿಗಾಗಿ** ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ.
ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ : 21.02.2026 ಸಂಜೆ 4.00 ಗಂಟೆಯವರೆಗೆ.
ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ:
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511
Website: https://kppp.karnataka.gov.in

DIPR/CP/YC/5703/2025-26 ಸಹಿ/– ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್
KSMC
(ಕರ್ನಾಟಕ ಸರ್ಕಾರದ ಉದ್ಯಮ)
ರಿಜಿಸ್ಟರ್ಡ್ ಕಚೇರಿ: 5ನೇ ಮಹಡಿ, ಟಿ.ಟಿ.ಎಂ.ಸಿ, 'ಎ' ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿ ನಗರ, ಬೆಂಗಳೂರು–560 027, ಫ್ಯಾಕ್ಸ್ : 080–22213172
ದೂರವಾಣಿ: 080–22278813/14/15/16 ಜಾಲತಾಣ: https://ksmc.karnataka.gov.in
ಸಂಖ್ಯೆ: 149/ಕೆಎಸ್‌ಎಂಸಿಎಲ್/ಯಾಂ/ಕೆ.ಎಂ.ಎಂ/Dri-Machine/2025–26/3152 ದಿನಾಂಕ: 18.02.2026

ಇ–ಟೆಂಡರ್ ಆಹ್ವಾನ

ಮೈಸೂರು ಜಿಲ್ಲೆಯಲ್ಲಿರುವ ಸಂಸ್ಥೆಯ ಕಾರ್ಯ ಮ್ಯಾಗ್ನಸೈಟ್ ಗಣಿಗೆ ಹೊಸ Drilling Machine with AC cabin ಖರೀದಿಸಲು ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ವೇಳಾಪಟ್ಟಿ

ಟೆಂಡರ್ ದಾಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ https://kppp.karnataka.gov.in	18.02.2026
ಅಂತರ್ಜಾಲದಲ್ಲಿ ಆಕ್ಷೇಪಣೆ ಸಲ್ಲಿಸಲು ಕೊನೆ ದಿನಾಂಕ	20.02.2026, 11.00 ಗಂಟೆ ಬೆಳಿಗ್ಗೆ
ಪೂರ್ವಭಾವಿ ಸಭೆ ದಿನಾಂಕ ಪ್ರಧಾನ ಕಛೇರಿ ಬೆಂಗಳೂರು	ದಿನಾಂಕ: 23.02.2026, 11.30 ಬೆಳಿಗ್ಗೆ
ಟೆಂಡರ್ ದಾಸ್ತಾವೇಜುಗಳನ್ನು ಅಪ್ಲೋಡ್ ಮಾಡಲು ಕೊನೆಯ ದಿನಾಂಕ	04.03.2026 ಸಂಜೆ 5.00 ಗಂಟೆ
ಟೆಂಡರ್ ಅನ್ನು ತೆರೆಯುವ ದಿನಾಂಕ	06.03.2026, 11.00 ಗಂಟೆಗೆ ಬೆಳಿಗ್ಗೆ
ಇಎಂಡಿ ಮೊತ್ತ	ರೂ.1,74,000/–

ಇ–ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದು. ಹೆಚ್ಚಿನ ಸಹಾಯ ಬೇಕಾದಲ್ಲಿ ಸಹಾಯವಾಣಿ ಸಂಖ್ಯೆ: 080–46010000/68948777

ಸಹಿ/–
ಪ್ರಧಾನ ವ್ಯವಸ್ಥಾಪಕರು (ಆ&ಜಾ)
ವಾ.ಸಾ.ಸಂ.ಇ/ವಾಪ್ರ/5713/ಆಕಾರ್/2025–26

ನಗರಸಭೆ ಕಾರ್ಯಾಲಯ, ಜಮಖಂಡಿ
Website:www.jamkhandicity.mrc.gov.in Email ID: itstaff_ulb_jamkhandi@yahoo.co.in
ಕ್ರ.ಸಂ.:ನಸಜ/ಟೆಂಪ್ರ/2025–26 ದಿನಾಂಕ : 18–02–2026

ಕೇ.ಪಿ.ಪಿ.ಪಿ. ಪೋರ್ಟಲ್ ಟೆಂಡರ ಪ್ರಕಟಣೆ

ಜಮಖಂಡಿ ನಗರಸಭೆಯ ಸನ್ 2025–26ನೇ ಸಾಲಿನ CMIDP ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮಗಳು 2000 ರಂತೆ ಈ ಕೆಳಗೆ ಕಾಣಿಸಿದ ಇಂಡೆಂಟ ನಂ.ಗಳ ಕಾಮಗಾರಿಗಳಿಗೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕೇ.ಪಿ.ಪಿ.ಪಿ ಪೋರ್ಟಲ್ ಮುಖಾಂತರ KW-3 ದ್ವಿ–ಲಕೋಟೆಯಲ್ಲಿ ಟೆಂಡರ ಆಹ್ವಾನಿಸಲಾಗಿದೆ.ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ ಸಲ್ಲಿಸುವಕೇ.ಪಿ.ಪಿ.ಪೋರ್ಟಲ್ ವೆಬ್ ಸೈಟ್ ವಿಳಾಸ: https://kppp.karnataka.gov.in, ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 11/03/2026**ರ ಸಾಯಂಕಾಲ 4–00 ಗಂಟೆವರೆಗೆ. ಹೆಚ್ಚಿನ ಮಾಹಿತಿಯನ್ನು ಈ ಕಾರ್ಯಾಲಯದ ತಾಂತ್ರಿಕ ಶಾಖೆಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದರೆ ಕೇವಲ್ ಕೇ.ಪಿ.ಪಿ ಪೋರ್ಟಲ್‌ನಲ್ಲಿ ಮಾಡಲಾಗುವುದು. ಕಾಮಗಾರಿಗಳ ಇಂಡೆಂಟ್‌ಗಳ ವಿವರ ಈ ಕೆಳಗಿನಂತಿರುತ್ತದೆ.

ಕ್ರಸಂ	ಕಾಮಗಾರಿಗಳ ಇಂಡೆಂಟ್ ನಂ.	ಮೀಸಲಾತಿ
1	DMA/2025-26/RD/WORK_INDENT55246	ಸಾಮಾನ್ಯ
2	DMA/2025-26/RD/WORK_INDENT55247	ಸಾಮಾನ್ಯ
3	DMA/2025-26/RD/WORK_INDENT55248	ಪ.ಜಾತಿ
4	DMA/2025-26/RD/WORK_INDENT55249	ಕ್ಯಾಟಗಿರಿ 2–ಎ
5	DMA/2025-26/RD/WORK_INDENT55251	ಕ್ಯಾಟಗಿರಿ 2–ಎ
6	DMA/2025-26/RD/WORK_INDENT55253	ಸಾಮಾನ್ಯ

ಸಹಿ/– (ಶ್ರೀ ಜ್ಯೋತಿಗಿರೀಶ ಎಸ್.) ಪೌರಾಯುಕ್ತರು ನಗರಸಭೆ ಜಮಖಂಡಿ
ಸಹಿ/– (ಮಾನ್ಯ ಶ್ರೀ ಸಂಗಪ್ಪ) ಆಡಳಿತಾಧಿಕಾರಿಗಳು ನಗರಸಭೆ ಜಮಖಂಡಿ

Karnataka Government Secretariat
MS Building, Dr BR Ambedkar Veedhi
No: RD/383/RME/2025 Dated: 18.02.2026

Notification regarding engagement of Urban Town Planner and Urban Designer under the KWSRP

The World Bank-funded Karnataka Water Security and Resilience Program (KWSRP) is being implemented across the State. The overarching objective of the Program is to enhance disaster resilience through a combination of structural and non-structural measures. The initiative seeks to develop climate-resilient infrastructure to mitigate the impacts of floods and droughts, while also strengthening disaster risk governance and resilience mechanisms.
The Revenue Department (Disaster Management) Government of Karnataka, invites applications from qualified and experienced professionals for the following positions:
i. Chief/Lead Urban Town Planner/Environmental Planner (1 position).
ii. Chief/ Lead Urban Designer (1 position).
The detailed terms of reference, eligibility criteria, and other conditions for engagement of the above positions are available in the Terms of Reference (ToR) and may be seen on the KSNDMC website: **https://www.ksndmc.org/default.aspx.**
Note:
a. Applications, along with the relevant supporting documents, should be submitted by email to jsrdssp@gmail.com, latest by **04.03.2026.**
b. Incomplete applications will not be considered. The Revenue Department (Disaster Management) reserves the right to reject any application without assigning a reason.
c. The qualified candidates will be shortlisted and called for interview for final selection.
For any queries contact- The Joint Secretary, Revenue Department (KAT, SSP & PP), Ph: 080-2203 2010.

Sd/-
Joint Secretary to the Government
Revenue Department (KAT, SSP and PP)
DIPR/CP/AAA/5724/2025-26

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ತುಮಕೂರು ಉಪ ವಿಭಾಗ (ಪ್ರಾದೇಶಿಕ), ತುಮಕೂರು
ಇ–ಮೇಲ್: E-Mail:acftumkur@gmail.com
ಸಂಖ್ಯೆ–ಸ.ಅ.ಸಂ/ತುಉವಿ/ಮರುಇಟೆಂಡರ್/ಸಿಆರ್–07/2025–26/827
ದಿನಾಂಕ: 12.02.2026

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ CEPMIZ (KMERC) ಯೋಜನೆಗಳಡಿ ತುಮಕೂರು ಪ್ರಾದೇಶಿಕ ವಿಭಾಗ, ತುಮಕೂರು ಉಪ ವಿಭಾಗದ, ಗುಬ್ಬಿ ವಲಯದಲ್ಲಿ ಸಿಪಿಟಿ ಅಗೆಯುವಿಕೆ ಮತ್ತು ಬದುಗಳ ಮೇಲೆ ಅಗೇವಾ ಸಸ್ಯಗಳನ್ನು ನೆಡುವುದು, ನೆಡುತೋಪು ನಿರ್ಮಾಣ, ಮುಂಗಡ ಕಾಮಗಾರಿ ಮತ್ತು ನೆಡುತೋಪು ನಿರ್ಮಾಣ, ಹಳೆಯ ಶ್ರೀಗಂಧ ನೆಡುತೋಪು ನಿರ್ವಹಣೆ, ಪರ್ಕ್ಯುಲೇಷನ್ ಟ್ರೆಂಚಸ್, ಬೆಂಕಿ ಕಾವಲುಗಾರರ ನೇಮಕ, ಹುಲ್ಲುಗಾವಲೀಕರಣ, ಗಣಿ ರಸ್ತೆಗಳು ಮತ್ತು ಸವೆತ ಪೀಡಿತ ಖಾಲಿ ಪ್ರದೇಶಗಳಲ್ಲಿ ಮುಂಗಡ ಕಾಮಗಾರಿ ಮತ್ತು ನೆಡುತೋಪು ನಿರ್ಮಾಣ, ರಸ್ತೆ ಬದಿ ನೆಡುತೋಪು ನಿರ್ವಹಣೆ, ಮುಂಗಡ ಕಾಮಗಾರಿ ಮತ್ತು 8"*12" ಗಾತ್ರದ ಪಾಲಿಥೀನ್ ಚೀಲಗಳಲ್ಲಿ ಸಸಿಗಳನ್ನು ಬೆಳೆಸುವುದು, ಬೆಂಕಿ ರೇಖೆಗಳ ನಿರ್ವಹಣೆ, ಕಾವಲುಗಾರರ ನೇಮಕ ಮತ್ತು ಇನ್ನಿತರೆ ಕಾಮಗಾರಿಗಳನ್ನು ಕೈಗೊಳ್ಳಲು 2025–26ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೊಂದಾವಣೆಯಾಗಿರುವ ಗುತ್ತಿಗೆದಾರರಿಂದ ಪ್ರತ್ಯೇಕವಾಗಿ ಇ–ಟೆಂಡರ್‌ಗಳನ್ನು ದಾಖಲಿಸಲು ಕೋರಿ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟು 43 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.95,70,000/–ಗಳಿಗೆ ಇ.ಎಂ.ಡಿ ಮೊತ್ತ ರೂ.63,800/–ಗಳಾಗಿರುತ್ತದೆ ಮತ್ತು ಕನಿಷ್ಠ ಅಂದಾಜು ಮೊತ್ತ ರೂ.1,02,664/–ಗಳಿಗೆ ಇ.ಎಂ.ಡಿ. ಮೊತ್ತ ರೂ.2,567/–ಗಳಾಗಿರುತ್ತದೆ. ದಿನಾಂಕ: 21–02–2026ರ ಅಪರಾಹ್ನ 3–00 ಗಂಟೆಯವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ ದಿನಾಂಕ:23–02–2026ರಂದು ಅಪರಾಹ್ನ 3–00 ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪರಿಮಾಣ, ಇಎಂಡಿ ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ.
ವೆಬ್‌ಸೈಟ್ ವಿಳಾಸ– http://www. kppp.karnataka.gov.in.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ಉಪ ವಿಭಾಗ, ತುಮಕೂರು.
DIPR/TUM/446/ KSMCA/2025-26

ಚಿಟಿಕೆ ಸುದ್ದಿ

ಸಂಪಾಜೆಯಲ್ಲಿ ಮಳೆ

ಸುಳ್ಯ (ದಕ್ಷಿಣ ಕನ್ನಡ): ತಾಲ್ಲೂಕಿನ ಸಂಪಾಜೆಯಲ್ಲಿ ಬುಧವಾರ ಸಂಜೆ ಧಾರಾಕಾರ ಮಳೆ ಸುರಿದಿದ್ದು, ಈ ವರ್ಷದ ಮೊದಲ ಮಳೆ ಇಳೆಯನ್ನು ತಂಪುಗೊಳಿಸಿತು.

ಸಂಜೆ ಸುಮಾರು 10 ನಿಮಿಷ ಧಾರಾಕಾರ ಮಳೆ ಸುರಿಯಿತು. ಕೆಲ ದಿನಗಳಿಂದ ಸುಡು ಬಿಸಿಲು ಇತ್ತು.

ಡಾ.ಬೆಸಗರಹಳ್ಳಿ ರಾಮಣ್ಣ ಪ್ರಶಸ್ತಿಗೆ ಪ್ರವೇಶ ಆಹ್ವಾನ

ಮಂಡ್ಯ: ಡಾ.ಬೆಸಗರಹಳ್ಳಿ ರಾಮಣ್ಣ ವಾರ್ಷಿಕ ಕಥಾ ಸಂಕಲನ –2025ನೇ ಸಾಲಿನ ಪ್ರಶಸ್ತಿಗೆ ಲೇಖಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರಶಸ್ತಿ ₹50 ಸಾವಿರ ನಗದು ಬಹುಮಾನ, ಪ್ರಶಸ್ತಿ ಫಲಕ ಒಳಗೊಂಡಿದೆ.

ಬೆಸಗರಹಳ್ಳಿ ರಾಮಣ್ಣ

ಲೇಖಕರು ಪ್ರಥಮ ಮುದ್ರಣದ ಸಂಕಲನದ 3 ಪ್ರತಿಗಳನ್ನು 'ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ, ನಂ.15, 2ನೇ ಅಡ್ಡರಸ್ತೆ, ನಿಸರ್ಗ ಬಡಾವಣೆ, ಉಲ್ಲಾಳ ಆರ್‌ಟಿಒ ಕಚೇರಿ ಹತ್ತಿರ, ಬೆಂಗಳೂರು'– ಈ ವಿಳಾಸಕ್ಕೆ ಮಾರ್ಚ್ 15ರೊಳಗೆ ಕಳುಹಿಸಬೇಕು.

ಮಂಡ್ಯದಲ್ಲಿ ಜೂನ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಎಚ್. ಆರ್. ಸುಜಾತಾ ತಿಳಿಸಿದ್ದಾರೆ. ಮಾಹಿತಿಗೆ ಮೊ.ನಂ.99803 05837.

ಮಾಜಿ ದೇವದಾಸಿಯರ ಸಮೀಕ್ಷೆಗೆ ಆಗ್ರಹ

ಬಳ್ಳಾರಿ: 'ರಾಜ್ಯ ಸರ್ಕಾರ ಈಚೆಗೆ ನಡೆಸಿದ ಮಾಜಿ ದೇವದಾಸಿಯರ ಸಮೀಕ್ಷೆಗೆ ಎರಡು, ಮೂರನೇ ತಲೆಮಾರು ಪರಿಗಣಿಸಿಲ್ಲ' ಎಂದ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ' ಗೌರವಾಧ್ಯಕ್ಷ ಯು.ಬಸವರಾಜ ಆರೋಪಿಸಿದರು.

ಬಸವರಾಜ

'2007-08ರ ಗಣತಿ ಅಸಮರ್ಪಕವಾಗಿತ್ತು. ಹಿಂದಿನ ಗಣತಿಯಲ್ಲಿ ಬಿಟ್ಟುಹೋಗಿದ್ದವರ ಸಮೀಕ್ಷೆ ಜೊತೆಗೆ ಮೂರು ತಲೆಮಾರಿನವರನ್ನು ಪರಿಗಣಿಸಬೇಕು' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

'ಈಗ ಕೇವಲ 23,385 ಮಾಜಿ ದೇವದಾಸಿಯರನ್ನು ಗುರುತಿಸಲಾಗಿದೆ. 2007-08ರ ಗಣತಿ ಪಟ್ಟಿಯಲ್ಲಿದ್ದ ಅರ್ಧ ಜನರನ್ನು ಮಾತ್ರವೇ ಸಮೀಕ್ಷೆಗೆ ಪರಿಗಣಿಸಲಾಗಿದೆ. ಇದು ದೋಷಪೂರಿತ. ಸಮರ್ಪಕವಾಗಿ ಸಮೀಕ್ಷೆ ನಡೆಸಬೇಕು ಮತ್ತು ಅರ್ಹರಿಗೆ ಸವಲತ್ತುಗಳನ್ನು ತಲುಪಿಸಬೇಕು' ಎಂದು ಒತ್ತಾಯಿಸಿದರು.

ಕಾಳ್ಗಿಚ್ಚು: 'ಸೇನಾನಿ'ಗಳೆಡೆ ಅನಾದರ

ಅರಣ್ಯ ಅಧಿಕಾರಿಗಳ ವಿರುದ್ಧ ಬೇಸರ: ಸಚಿವರಿಗೆ ಪರಿಸರ ಪ್ರಿಯರ ಪತ್ರ

● ಉಮೇಶ ಭಟ್ಟ ಪಿ.ಎಚ್.

ಬೆಂಗಳೂರು: ಹುಲಿ ಸಂರಕ್ಷಿತ ಪ್ರದೇಶದ ಜತೆಗೆ ಪ್ರಮುಖ ಅರಣ್ಯಗಳಲ್ಲಿ ಬೇಸಿಗೆಯಲ್ಲಿ ಕಾಳ್ಗಿಚ್ಚು ನಿಯಂತ್ರಿಸುವ ಚಟುವಟಿಕೆಗಳನ್ನು ಅರಣ್ಯ ಇಲಾಖೆ ಆರಂಭಿಸಿದೆ. ಆದರೆ, ಬೆಂಕಿ ನಿಯಂತ್ರಿಸಲು ಕೆಲವು ವರ್ಷಗಳಿಂದ ಇಲಾಖೆಯೊಂದಿಗೆ ಕೈಜೋಡಿಸುತ್ತಾ ಬಂದಿರುವ ಪರಿಸರ ಪ್ರೇಮಿಗಳ ಸೇವೆ ಬಳಸಿಕೊಳ್ಳಲು ನಿರ್ಲಕ್ಷ್ಯ ಮಾಡುತ್ತಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

'ಬೆಂಕಿಯಿಂದ ಕಾಡನ್ನು ಸಂರಕ್ಷಿಸಲು ಪ್ರಯತ್ನ ಮಾಡುತ್ತಿರುವ ಅರಣ್ಯ ಇಲಾಖೆ ಜತೆಗೆ ನಾವು ಕೈಜೋಡಿಸುತ್ತ ಬಂದಿದ್ದೇವೆ. ನಮ್ಮದೇ ವಾಹನ, ತೈಲ ಬಳಕೆ ಮಾಡಿ ನೆರವು ನೀಡಲು ಸಿದ್ದರಿದ್ದೇವೆ. ಆದರೆ, ಇಲಾಖೆಯ ಕೆಲ ಅಧಿಕಾರಿಗಳ ಸಮನ್ವಯದ ಕೊರತೆಯಿಂದ ಈ ವರ್ಷ ಇದಕ್ಕೆ ಅಡ್ಡಿಯಾಗುತ್ತಿದೆ' ಎಂದು ಪರಿಸರ ಆಸಕ್ತ ಬಳಗದ ಪ್ರಮುಖರೊಬ್ಬರು ಬೇಸರ ವ್ಯಕ್ತಪಡಿಸಿದರು.

ಉದ್ಯಮಿಗಳು, ವ್ಯಾಪಾರಸ್ಥರು, ಎಂಜಿನಿಯರ್‌ಗಳು, ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರು ಪರಿಸರ, ಅರಣ್ಯದ ಬಗ್ಗೆ ಪ್ರೀತಿ ಬೆಳೆಸಿಕೊಂಡಿದ್ದು ಎರಡು ದಶಕದಿಂದಲೂ ಅರಣ್ಯಕ್ಕೆ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.

ಕೆಲವು ವರ್ಷಗಳ ಹಿಂದೆ ಬಂಡೀಪುರ ಹಾಗೂ ನಾಗರಹೊಳೆ ಅರಣ್ಯದಲ್ಲಿ ಭಾರಿ ಪ್ರಮಾಣದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಆಗ ಬೆಂಕಿ ನಂದಿಸಲು ಅರಣ್ಯ ಇಲಾಖೆ ಹರಸಾಹಸ ಪಟ್ಟಿತ್ತು. ಅಂತಹ ಸಮಯದಲ್ಲಿ ಕೆಲಸ ಮಾಡಲು ಇಲಾಖೆ ಸಿಬ್ಬಂದಿ ಜತೆಗೆ ಸ್ವಯಂ ಸೇವಕರ ನೆರವು, ವಾಹನಗಳ ಬಳಕೆಗೆ ಅವಕಾಶ ದೊರೆತರೆ ಹೊರೆ ತಗ್ಗಲಿದೆ ಎಂಬ ಉದ್ದೇಶದಿಂದ ಪರಿಸರ ಪ್ರಿಯರು ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.

ಇಲಾಖೆಯಿಂದ ಪತ್ರ: ಸಮಾನ ಆಸಕ್ತರೆಲ್ಲರೂ ಒಂದೆಡೆ ಸೇರಿ ತಮ್ಮ ಬಳಿ ಇರುವ ಜೀಪ್‌ಗಳ ಸೇವೆಯನ್ನು ನೀಡಲು ಮುಂದಾಗಿದ್ದಾರೆ. ಇದಕ್ಕಾಗಿ ಒಬ್ಬರು ಜೀಪ್‌ನೊಂದಿಗೆ ಕೆಲಸ ಮಾಡುವ ಇರಾದೆ ವ್ಯಕ್ತಪಡಿಸಿ ಪತ್ರ ಬರೆದಿದ್ದರು. ಇದಕ್ಕೆ ಇಲಾಖೆಯೂ ಪೂರಕವಾಗಿ ಸ್ಪಂದಿಸಿತ್ತು.

ಚಾಮರಾಜನಗರ ಜಿಲ್ಲೆಯ ಕಾವೇರಿ ವನ್ಯಜೀವಿಧಾಮ, ಬಿಳಿಗಿರಿರಂಗ ಹುಲಿ ಸಂರಕ್ಷಿತ ಪ್ರದೇಶ ಜತೆಗೆ ಬಂಡೀಪುರ ಹಾಗೂ ನಾಗರಹೊಳೆ ಹುಲಿ ಪ್ರದೇಶಗಳಲ್ಲಿ ಇವರ ಸೇವೆ ಬಳಕೆ ಮಾಡಿಕೊಳ್ಳಬಹುದು ಎನ್ನುವ ಪತ್ರ ನೀಡಲಾಗಿತ್ತು.

'ವನ್ಯಜೀವಿ ವಲಯಗಳಲ್ಲಿ ಇಲಾಖಾ ವಾಹನಗಳ ಜತೆಯಲ್ಲಿ ಹೆಚ್ಚುವರಿಯಾಗಿ ವಾಹನ ಇದ್ದಲ್ಲಿ ಅನುಕೂಲವಾಗಲಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ) ಅವರ ಆದೇಶಕ್ಕೆ ಅನುಗುಣವಾಗಿ ಅರಣ್ಯವನ್ನು ಬೆಂಕಿಯಿಂದ ರಕ್ಷಿಸಲು ಅಗತ್ಯ ಸಹಕಾರ ಪಡೆಯಲಾಗುವುದು. ಇದಕ್ಕಾಗಿ 4X4 ಜೀಪ್ ಗುಂಪಿನಿಂದ ವಾಹನಗಳ ಉಪಯೋಗವನ್ನು ಪಡೆಯಲಾಗುವುದು. ಇದರಿಂದ ಇಲಾಖೆಗೆ ಯಾವುದೇ ಆರ್ಥಿಕ ಹೊರೆ ಆಗುವುದಿಲ್ಲ. ಆದರೆ, ನಿಯಮಾವಳಿ ಪಾಲಿಸಬೇಕಾಗುತ್ತದೆ' ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಸಹಕಾರ ನೀಡಲಿ: ಕೋವಿಡ್ ಅವಧಿಯೂ ಸೇರಿದಂತೆ ಪ್ರತಿ ವರ್ಷ ಪತ್ರ ಪಡೆದು ಪರಿಸರ ಪ್ರಿಯರು ಮೂರ್ನಾಲ್ಕು ತಿಂಗಳು ಕೆಲಸ ಮಾಡಿದ್ದಾರೆ. ಈ ವರ್ಷ ಪತ್ರ ಸ್ವೀಕರಿಸಿದರೂ ಕೆಲವು ಕಡೆಗಳಲ್ಲಿ ಅಸಹಕಾರ ತೋರಿಸುತ್ತಿರುವ ಬಗ್ಗೆ ಅರಣ್ಯ ಸಚಿವರು ಹಾಗೂ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ.

'ಪ್ರಮುಖ ಅರಣ್ಯ ವಲಯಗಳ ವ್ಯಾಪ್ತಿಯ ಅಧಿಕಾರಿಗಳು ಹಿಂದೆ ಸಹಕಾರ ನೀಡುತ್ತಿದ್ದರು. ಅವರು ನೀಡಿದ ಎಲ್ಲ ಸೂಚನೆಗಳನ್ನು ಪಾಲಿಸಿ ಸೇವೆ ನೀಡಿದ್ದೇವೆ. ಈ ಬಾರಿ ಇಲಾಖೆ ಸಿಬ್ಬಂದಿಯಿಂದ ವಾಹನಗಳಿಗೆ ಬೇಡಿಕೆಯಿದ್ದರೂ ಕೆಲ ಅಧಿಕಾರಿಗಳು ಬೆಂಬಲ ನೀಡುತ್ತಿಲ್ಲ. ಮೊದಲೇ ತಿಳಿಸಿದರೆ ರಜೆ ಯೋಜಿಸಿಕೊಂಡು ಅರಣ್ಯ ಸಂರಕ್ಷಣೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಲಿದೆ. 500ಕ್ಕೂ ಹೆಚ್ಚು ಮಂದಿ ಜೀಪ್ ಮಾಲೀಕರು ಇದಕ್ಕೆ ಸಿದ್ದರಿದ್ದಾರೆ. ಇಲಾಖೆ ಹಿಂದಿನ ವರ್ಷಗಳಂತೆ ಗಟ್ಟಿಯಾಗಿ ನಿಂತರೆ ನಾವು ಇದಕ್ಕೆ ಸಿದ್ಧರಿದ್ದೇವೆ' ಎಂದು 4X4 ಬಳಗದ ಸದಸ್ಯರು ಹೇಳಿದರು.

ಕಾಡಿನ ಬೆಂಕಿ ಆರಿಸುವುದರಲ್ಲಿ ನಿರತರಾಗಿದ್ದ ಅರಣ್ಯ ರಕ್ಷಕ (ಸಂಗ್ರಹ ಚಿತ್ರ)



ಅರಣ್ಯ ಇಲಾಖೆ ಜತೆ ಸೇರಿ ಕೆಲಸ ಮಾಡಲು ಕೆಲವು ಷರತ್ತು ಆಧರಿಸಿ ಪತ್ರ ನೀಡಲಾಗುತ್ತದೆ. ಬೆಂಕಿ ನಿಯಂತ್ರಣಕ್ಕೆ ಹಲವರು ಸಹಕರಿಸಿದ್ದಾರೆ. ಸಮನ್ವಯದ ಕೊರತೆ ಹೋಗಲಾಡಿಸಲು ಪ್ರಯತ್ನಿಸಲಾಗುತ್ತಿದೆ

ಕುಮಾರ ಪುಷ್ಕರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಾಧಿಕಾರಿ(ವನ್ಯಜೀವಿ).

ಅರಣ್ಯ ಬೆಂಕಿ ತಡೆ: ತಗ್ಗಿದ ಅನುದಾನ ಪ್ರಮಾಣ

ಕೇಂದ್ರ ಪ್ರಾಯೋಜಿತ ಅರಣ್ಯ ಬೆಂಕಿ ತಡೆ ಮತ್ತು ನಿರ್ವಹಣೆ ಯೋಜನೆ ಅಡಿ ಶೇ 60ರಷ್ಟು ಕೇಂದ್ರ ಹಾಗೂ ಶೇ 40ರಷ್ಟು ರಾಜ್ಯದ ಅನುದಾನದಲ್ಲಿ ಕಾಡಿನ ಬೆಂಕಿ ನಿಗ್ರಹಿಸುವ ಚಟುವಟಿಕೆ ಅನುಷ್ಠಾನಗೊಳಿಸಲಾಗುತ್ತದೆ. ಪ್ರತಿ ಹುಲಿ ಸಂರಕ್ಷಿತ ಪ್ರದೇಶಗಳಿಗೆ ತಲಾ ₹1 ಕೋಟಿವರೆಗೂ ಅನುದಾನ ಸಿಗುತ್ತಿತ್ತು.

ಆದರೆ, ಕೇಂದ್ರ ಸರ್ಕಾರ ಹುಲಿ ಸಂರಕ್ಷಿತ ಪ್ರದೇಶಗಳಿಗೆ ನೀಡುತ್ತಿದ್ದ ಅನುದಾನವನ್ನು ಶೇ 50ರಷ್ಟು ಕಡಿತ ಮಾಡಿದ್ದು, ಇದರಲ್ಲಿ ಕಾಡಿನ ಬೆಂಕಿ ನಿರ್ವಹಣೆಯೂ ಸೇರಿದೆ. ಇದರಿಂದ ಈಗ ಈ ಚಟುವಟಿಕೆಗಳಿಗೆ ಅನುದಾನ ಕೊರತೆ ಆಗುತ್ತಿದೆ.

'ನಾಗರಹೊಳೆ ಹಾಗೂ ಬಂಡೀಪುರದಲ್ಲಿ ಪರಿಸರ ಪ್ರವಾಸೋದ್ಯಮದಿಂದ ಬರುತ್ತಿದ್ದ ಆದಾಯವನ್ನು ಫೌಂಡೇಷನ್ ಮೂಲಕ ಇಲ್ಲಿಯೇ ಬಳಸಲಾಗುತ್ತಿತ್ತು. ಮೂರು ತಿಂಗಳಿನಿಂದ ಸಫಾರಿ ಬಂದ್ ಆಗಿರುವುದರಿಂದ ಸ್ಥಳೀಯ ಅನುದಾನ ಲಭ್ಯತೆ ಪ್ರಮಾಣ ತಗ್ಗಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಕರ್ನಾಟಕದಲ್ಲಿ ಭೂಕಬಳಿಕೆ: ಆರೋಪ

ನವದೆಹಲಿ (ಪಿಟಿಐ): 'ಕರ್ನಾಟಕದಲ್ಲಿ ಕಾಂಗ್ರೆಸ್ ಭೂಕಬಳಿಕೆ ಮತ್ತು ಭ್ರಷ್ಟಾಚಾರ ನಡೆಸುತ್ತಿದೆ' ಎಂದು ಬಿಜೆಪಿ ಆರೋಪಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿಯ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ, ಮಾಧ್ಯಮ ವರದಿಯನ್ನು ಉಲ್ಲೇಖಿಸಿ, 'ಕರ್ನಾಟಕದಲ್ಲಿ ಆಡಳಿತ ಪಕ್ಷದ 100 ಕಚೇರಿಗಳ ನಿರ್ಮಾಣಕ್ಕಾಗಿ, ಸಿದ್ಧರಾಮಯ್ಯ ಸರ್ಕಾರವು 24 ಸರ್ಕಾರಿ ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ವರ್ಗಾಯಿಸಿದೆ' ಎಂದು ಆರೋಪಿಸಿದರು.

'ಕರ್ನಾಟಕದ ಜನರಿಗೆ ನಾಗರಿಕ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಮೀಸಲಿರಿಸಿದ್ದ ಅಂದಾಜು ₹50 ಕೋಟಿ ಮೊತ್ತದ 24 ನಿವೇಶನಗಳನ್ನು ರಾಜ್ಯ ಸರ್ಕಾರವು, ಆಡಳಿತ ಪಕ್ಷಕ್ಕೆ ಕೇವಲ ₹2 ಕೋಟಿಗೆ ಹಂಚಿಕೆ ಮಾಡಿದೆ. ಇದರದಲ್ಲಿ ₹48 ಕೋಟಿಯ ಭ್ರಷ್ಟಾಚಾರ ನಡೆದಿರುವುದು ಸ್ಪಷ್ಟವಾಗಿ ಕಣ್ಣಿಗೆ ಕಾಣಿಸುತ್ತದೆ' ಎಂದರು.

'ಮುಖ್ಯಮಂತ್ರಿ ಕುರ್ಚಿಗಾಗಿ ಗುದ್ದಾಟ ನಡೆಸಿರುವ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್, ಗಾಂಧಿ ಕುಟುಂಬವನ್ನು ಮೆಚ್ಚಿಸಲು, ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ವರ್ಗಾಯಿಸಿದ್ದಾರೆ. ರಾಹುಲ್ ಗಾಂಧಿ ಅವರ ಮೂಗಿನ ಕೆಳಗೆ ಭ್ರಷ್ಟಾಚಾರ ನಡೆಯುತ್ತಿದೆ' ಎಂದು ಆರೋಪಿಸಿದರು.

ಶಾಲಾ ಪ್ರವೇಶ: 6 ವರ್ಷ ಕಡ್ಡಾಯ

ಬೆಂಗಳೂರು: ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ಕನಿಷ್ಠ ವಯಸ್ಸು 2026 ಜೂನ್ 1ಕ್ಕೆ 6 ವರ್ಷ ಪೂರ್ಣಗೊಂಡಿರಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಖಚಿತಪಡಿಸಿದೆ.

2026–27ನೇ ಸಾಲಿನಲ್ಲಿ ಪ್ರವೇಶ ಪಡೆಯುವ ಮಕ್ಕಳಿಗೆ ಈ ನಿಯಮ ಅನ್ವಯವಾಗಲಿದ್ದು, ವಯೋಮಿತಿಯಲ್ಲಿ ಸಡಿಲಗೊಳಿಸದಿರಲು ಇಲಾಖೆ ನಿರ್ಧರಿಸಿದೆ. ಒಂದನೇ ತರಗತಿ ಪ್ರವೇಶ ಪಡೆಯುವ ಮಗುವಿಗೆ 6 ವರ್ಷ ಪೂರ್ಣಗೊಂಡಿರಬೇಕು ಎಂಬ ನಿಯಮ ಕಡ್ಡಾಯಗೊಳಿಸಿ ಇಲಾಖೆಯು 2022ರಲ್ಲೇ ಆದೇಶ ಹೊರಡಿಸಿತ್ತು. ಆದೇಶದಲ್ಲಿ ಯಾವ ವರ್ಷದಿಂದ ಸ್ಪಷ್ಟತೆ ಇರಲಿಲ್ಲ. ಹಾಗಾಗಿ, ಮತ್ತೊಂದು ಆದೇಶ ಹೊರಡಿಸಿ, ಈ ನಿಯಮ 2025–26ನೇ ಸಾಲಿನಿಂದ ಅನ್ವಯವಾಗುವುದು ಎಂದು ಸ್ಪಷ್ಟಪಡಿಸಿತ್ತು. ಪೋಷಕರ ಒತ್ತಾಯಕ್ಕೆ ಮಣಿದು ಕಳೆದ ವರ್ಷಕ್ಕಷ್ಟೇ ಸೀಮಿತಗೊಳಿಸಿ, ಕನಿಷ್ಠ ವಯೋಮಿತಿಯನ್ನು 5 ವರ್ಷ 5 ತಿಂಗಳಿಗೆ ನಿಗದಿ ಮಾಡಲಾಗಿತ್ತು.

2026–27ನೇ ಶೈಕ್ಷಣಿಕ ಸಾಲಿನಿಂದ ಎಲ್‌ಕೆಜಿ ಪ್ರವೇಶಕ್ಕೆ ಕನಿಷ್ಠ ವಯೋಮಿತಿ 4 ವರ್ಷ, ಯುಕೆಜಿ ಪ್ರವೇಶಕ್ಕೆ 5 ವರ್ಷ ಹಾಗೂ ಒಂದನೇ ತರಗತಿಗೆ 6 ವರ್ಷ ವಯೋಮಿತಿ ಕಡ್ಡಾಯಗೊಳಿಸಲಾಗಿದೆ.

ವಿಧಾನಸೌಧ: ಮಾಧ್ಯಮಕ್ಕೆ ಮೂಗುದಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಮುಂದೆ ಮಾಧ್ಯಮ ಪ್ರತಿನಿಧಿಗಳು ವಿಧಾನಸೌಧದ ಒಳಗೆ ನಿಗದಿತ ಸ್ಥಳದಲ್ಲಿ ಮಾತ್ರ ಹೇಳಿಕೆಗಳನ್ನು ಪಡೆಯಬೇಕು. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು, ಗಣ್ಯರು ವಿಧಾನಸೌಧ ಪ್ರವೇಶಿಸುವಾಗ ಅವರನ್ನು ಹಿಂಬಾಲಿಸಿ ವಿಡಿಯೊ ಹೇಳಿಕೆ ಪಡೆಯಲು ಅವಕಾಶ ಇಲ್ಲ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ಫರ್ಮಾನು ಹೊರಡಿಸಿದೆ.

ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ಬರೆದಿದ್ದ ಪತ್ರವನ್ನು ಉಲ್ಲೇಖಿಸಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರಿಗೆ ಡಿಪಿಎಆರ್ ಕಾರ್ಯದರ್ಶಿ ಈ ಕುರಿತು ಪತ್ರ ಬರೆದಿದ್ದಾರೆ.

ಪತ್ರದಲ್ಲಿ ಏನಿದೆ?: 'ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ಬರೆದಿರುವ ಪತ್ರದಲ್ಲಿನ ಕೋರಿಕೆಯ ಮೇರೆಗೆ ವಾರ್ತಾ ಮತ್ತು ಪ್ರಚಾರ ಇಲಾಖೆಯು ಶಿಫಾರಸು ಮಾಡುವ ಮಾಧ್ಯಮ ಪ್ರತಿನಿಧಿಗಳಿಗೆ ಮಾತ್ರ ಡಿಪಿಎಆರ್ (ಕಾರ್ಯಕಾರಿ) ಗುರುತಿನ ಚೀಟಿ ವಿತರಿಸುತ್ತಿದೆ. ಈ ಗುರುತಿನ ಚೀಟಿ ಹೊಂದಿರುವ ಎಲ್ಲ ಪತ್ರಿಕಾ ಮಾಧ್ಯಮ ಪ್ರತಿನಿಧಿಗಳು, ಭ ದ್ರ ತಾ ಹಿತದೃಷ್ಟಿಯಿಂದ ವಿಧಾನಸೌಧದ ಪಶ್ಚಿಮ ದ್ವಾರದ ಪೋರ್ಟಿಕೊ ಬಳಿ ನಿಗದಿಪಡಿಸಿರುವ ಸ್ಥಳದಲ್ಲಿ ಮಾತ್ರ ಹೇಳಿಕೆಗಳನ್ನು (ಬೈಟ್) ಪಡೆದುಕೊಳ್ಳಬೇಕು. ವಿಧಾನಸೌಧದ ಒಳಗೆ ಪ್ರವೇಶಿಸುವ ಸಂದರ್ಭದಲ್ಲಿ ಹೇಳಿಕೆಯನ್ನು ತೆಗೆದುಕೊಳ್ಳಲು, ಸಂದರ್ಶನ ನಡೆಸಲು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು, ಗಣ್ಯರನ್ನು ಹಿಂಬಾಲಿಸದಂತೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಬೇಕು' ಎಂದು ಪತ್ರದಲ್ಲಿ ಡಿಪಿಎಆರ್ ಕಾರ್ಯದರ್ಶಿ ತಿಳಿಸಿದ್ದಾರೆ.

ಪ್ರಜಾತಂತ್ರದ ಪವಿತ್ರ ಸ್ಥಳದಲ್ಲೇ ಮಾಧ್ಯಮಗಳಿಗೆ ನಿರ್ಬಂಧ ವಿಧಿಸುವುದು ಆತಂಕಕಾರಿ. ಪತ್ರಕರ್ತರ ಪ್ರವೇಶಕ್ಕೆ ಅಡ್ಡಿ ಮಾಡುವುದು ಜನರ ಧ್ವನಿಯನ್ನೇ ಕಟ್ಟಿ ಹಾಕುವ ಪ್ರಯತ್ನ

ವಿ.ಸುನಿಲ್‌ಕುಮಾರ್, ಬಿಜೆಪಿ ಶಾಸಕ

ಕರ್ನಾಟಕದಲ್ಲಿ ತುರ್ತುಪರಿಸ್ಥಿತಿ: ಅಶೋಕ

'ಸಿದ್ದರಾಮಯ್ಯ ಸರ್ಕಾರ ತನ್ನ ವೈಫಲ್ಯಗಳು, ಎಡವಟ್ಟು ಮತ್ತು ಭ್ರಷ್ಟಾಚಾರವನ್ನು ಮುಚ್ಚಿಟ್ಟುಕೊಳ್ಳುವ ಸಲುವಾಗಿ ಮಾಧ್ಯಮಗಳ ಮೇಲೆ ನಿಯಂತ್ರಣ ಹೇರಲು ಹೊರಟಿದೆ. ಈ ಮೂಲಕ ಪ್ರಜಾಪ್ರಭುತ್ವ ವಿರೋಧಿ, ಸರ್ವಾಧಿಕಾರಿ ಧೋರಣೆ ಪ್ರದರ್ಶನ ಮಾಡಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

'ನಿಮ್ಮ ಸರ್ವೋಚ್ಚ ನಾಯಕ ರಾಹುಲ್‌ಗಾಂಧಿ ಹೋದ ಬಂದಲ್ಲೆಲ್ಲ ಪ್ರದರ್ಶನ ಮಾಡುವ ಕೆಂಪು ಸಂವಿಧಾನ ಪುಸ್ತಕದಲ್ಲಿ ಮಾಧ್ಯಮಗಳಿಗೆ ಪತ್ರಿಕಾ ಸ್ವಾತಂತ್ರ್ಯ ಇಲ್ಲವೇ? ಅಥವಾ ಇತ್ತೀಚೆಗೆ ಮಾಧ್ಯಮಗಳು ಬಯಲು ಮಾಡಿದ ತಮ್ಮ ಅತ್ಯಾಪ್ತ ಸಚಿವ ಬೈರತಿ ಸುರೇಶ್ ಅವರ ಕಚೇರಿಯಲ್ಲಿ ನಡೆದ ಲಕ್ಷಾಂತರ ಮೌಲ್ಯದ ಆಭರಣ, ನಗದು ಕಳ್ಳತನದ ಪ್ರಕರಣಗಳು ಬಯಲಾಗುತ್ತವೆ ಎನ್ನುವ ಭಯವಿದೆಯೇ? ವಿಧಾನಸೌಧ ಕಾಂಗ್ರೆಸ್ ಪಕ್ಷದ ಕಚೇರಿ ಅಲ್ಲ. ಅದು ಪ್ರಜಾಸೌಧ, ಏಳು ಕೋಟಿ ಕನ್ನಡಿಗರಿಗೆ ಸೇರಿದ ಶಕ್ತಿ ಸೌಧ. ಅಲ್ಲಿ ಮಾಧ್ಯಮಗಳಿಗೆ ಬರಬೇಡಿ ಎಂದು ನಿಯಂತ್ರಣ ಮಾಡಲು ಯಾರಿಗೂ ಅಧಿಕಾರವಿಲ್ಲ' ಎಂದಿದ್ದಾರೆ.

ಪ್ರಜಾಪ್ರಭುತ್ವ ವಿರೋಧಿ: ವಿಜಯೇಂದ್ರ

'ಮಾಧ್ಯಮಗಳಿಗೆ ನಿರ್ಬಂಧ ಹೇರಿರುವುದು ಪ್ರಜಾಪ್ರಭುತ್ವ ವಿರೋಧಿ ನಡೆ. ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕು' ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು. 'ಪಾಕಿಸ್ತಾನ ಜಿಂದಾಬಾದ್ ಎಂದು ಜಯಘೋಷ ಕೂಗುವುದಕ್ಕೆ ಕಡಿವಾಣ ಹಾಕಲು, ಅಂಥ ದೇಶದ್ರೋಹಿಗಳನ್ನು ಒದ್ದು ಒಳಗೆ ಹಾಕಲು ಕಾಂಗ್ರೆಸ್ ಸರ್ಕಾರಕ್ಕೆ ಸಾಧ್ಯವಾಗಿಲ್ಲ' ಎಂದರು.

ಸಚಿವರ ಕಚೇರಿಯಲ್ಲಿ ಕಳ್ಳತನದ ನೆಪವೊಡ್ಡಿ ಈ ರೀತಿ ಮಾಧ್ಯಮಗಳಿಗೆ ನಿರ್ಬಂಧ ಹೇರಿದ್ದಾರೆ ಎಂದ ಅವರು, ಈ ಕುರಿತ ಆದೇಶವನ್ನು ತಕ್ಷಣ ಹಿಂಪಡೆಯುವಂತೆ ಅವರು ಆಗ್ರಹಿಸಿದರು.

ಸರ್ಕಾರದ ಸಾಮಾಜಿಕ ಬದ್ಧತೆಗೆ 'ಕೆಪಿಎಸ್' ಸಾಕ್ಷಿ: ಬಿಳಿಮಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದಿನ ಜಾಗತಿಕ ಅವಶ್ಯಗಳಿಗೆ ಅನುಗುಣವಾಗಿ ಉತ್ಕೃಷ್ಟ ಶಿಕ್ಷಣ ಹಾಗೂ ಮೂಲಸೌಕರ್ಯ ಒಳಗೊಂಡ ಒಂದು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ತೆರೆಯುತ್ತಿರುವುದು ಶಾಲಾ ಶಿಕ್ಷಣ ಇಲಾಖೆಯ ಸಾಮಾಜಿಕ ಬದ್ಧತೆಯನ್ನು ಸಾಬೀತುಪಡಿಸಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.

ಪುರುಷೋತ್ತಮ ಬಿಳಿಮಲೆ

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ಎರಡೂವರೆ ವರ್ಷಗಳಲ್ಲಿ ಶಾಲಾ ಶಿಕ್ಷಣ ಇಲಾಖೆ ಹಲವು ದೂರದೃಷ್ಟಿ ಯೋಜನೆಗಳನ್ನು ರೂಪಿಸಿದೆ. ಶಿಕ್ಷಣ ಕ್ಷೇತ್ರಕ್ಕೆ ಹೊಸ ದಿಕ್ಕನ್ನು ನೀಡಿದೆ. ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷಾ ವ್ಯವಸ್ಥೆಯಲ್ಲಿನ ಸುಧಾರಣೆಗಳು, 15 ಸಾವಿರ ಶಿಕ್ಷಕರ ನೇಮಕಾತಿ, ಶಾಲಾ ಆರಂಭಕ್ಕೂ ಮೊದಲೇ ಖಾಲಿ ಹುದ್ದೆಗಳಿಗೆ ಅತಿಥಿ ಶಿಕ್ಷಕರ ನೇಮಕಾತಿಯ ಕ್ರಮಗಳು ಮಹತ್ವದ ನಿರ್ಧಾರವಾಗಿವೆ ಎಂದು ಶ್ಲಾಘಿಸಿದ್ದಾರೆ.

ಕರ್ನಾಟಕ ಪಬ್ಲಿಕ್ ಶಾಲೆಗಳ ಸ್ಥಾಪನೆ ಐತಿಹಾಸಿಕ ನಿರ್ಧಾರ. ಕೌಶಲಾಭಿವೃದ್ಧಿಗೆ ಒತ್ತು ನೀಡುತ್ತಿರುವುದು ಮಕ್ಕಳ ಭವಿಷ್ಯದ ಉದ್ಯೋಗದ ಬುನಾದಿ. ಹಾಗೆಯೇ, ಪ್ರತಿ ಮಗುವು ಮಾತೃಭಾಷೆಯಲ್ಲಿ ಕಲಿತರೆ ಆತ್ಮವಿಶ್ವಾಸ, ಮೌಲ್ಯ ಹಾಗೂ ಸಾಮಾಜಿಕ ಜವಾಬ್ದಾರಿ ಇರುವ ನಾಗರಿಕನಾಗಿ ರೂಪುಗೊಳ್ಳಲು ಸಾಧ್ಯ. ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲರಾದ ಮಕ್ಕಳನ್ನು ಪೋಷಿಸುವ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಬೋಧನೆಗೆ ಒತ್ತು ನೀಡಬೇಕು. ಕನ್ನಡ ಕಲಿಕೆಗೆ ವಿಶೇಷ ನೀತಿ ರೂಪಿಸಬೇಕು ಎಂದು ಕೋರಿದ್ದಾರೆ.

ಇಂಗ್ಲಿಷ್ ಮಾಧ್ಯಮದ ಪ್ರಾಬಲ್ಯ, ಖಾಸಗಿ ಶಾಲೆಗಳ ಆಕರ್ಷಣೆ ಮತ್ತು ಪಾಲಕರ ಸಾಮಾನ್ಯ ತಪ್ಪು ಕಲ್ಪನೆಗಳಿಂದ ಅನುದಾನಿತ ಕನ್ನಡ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಕನ್ನಡ ಭಾಷೆಯನ್ನು ಉಳಿಸುವ ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಆರಂಭಿಸಲಾದ ಕನ್ನಡ ಶಾಲೆಗಳ ಬಲವರ್ಧನೆಗೆ ಸರ್ಕಾರ ಮುಂದಾಗಬೇಕು. 1995ರ ನಂತರ ಕನ್ನಡ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಪ್ರಕ್ರಿಯೆಯನ್ನೇ ಸ್ಥಗಿತಗೊಳಿಸಲಾಗಿದೆ. 1995–2000 ಅವಧಿಯಲ್ಲಿ ಆರಂಭವಾದ 1,464 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ತಗುಲುವ ವೆಚ್ಚ ಅಂದಾಜು ₹922.64 ಕೋಟಿ ಇದೆ. ಶಿಕ್ಷಣ ಇಲಾಖೆಯ ಈ ಪ್ರಸ್ತಾವಕ್ಕೆ ಸರ್ಕಾರ ಅನುಮೋದನೆ ನೀಡಿದರೆ ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಅನುಕೂಲವಾಗುತ್ತದೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಶತಮಾನ ಪೂರೈಸಿರುವ 3,200 ಸರ್ಕಾರಿ ಶಾಲೆಗಳಿಗೆ ಆಧುನಿಕತೆಗೆ ತಕ್ಕಂತೆ ಕಾಯಕಲ್ಪ ನೀಡಬೇಕು. ಶಾಲಾ ಆಸ್ತಿ ಸಂರಕ್ಷಣೆಗೆ ಕಾಲಮಿತಿ ನಿಗದಿ ಮಾಡಬೇಕು. ಅನುದಾನಿತ ಕನ್ನಡ ಮಧ್ಯಮ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಿಸಬೇಕು ಎಂಬ ಅಂಶಗಳನ್ನು ಒಳಗೊಂಡ ವರದಿಯನ್ನು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಚಿವ ಮಧು ಬಂಗಾರಪ್ಪ ಅವರಿಗೆ ನೀಡಿದ್ದು, ಬಜೆಟ್‌ನಲ್ಲಿ ಪರಿಗಣಿಸಬೇಕು ಎಂದು ಕೋರಿದ್ದಾರೆ.

ಪುಟ್ಟರಾಜ ಸಮ್ಮಾನ ಪ್ರಶಸ್ತಿಗೆ ಬಿ.ಎಸ್. ಮಠ ಆಯ್ಕೆ

ಧಾರವಾಡ: ನಗರದ ಪುಟ್ಟರಾಜ ಗವಾಯಿ ಪ್ರತಿಷ್ಠಾನದ ಪುಟ್ಟರಾಜ ಸಮ್ಮಾನ ಪ್ರಶಸ್ತಿಗೆ ವಯೋಲಿನ್ ವಾದಕ ಪಂಡಿತ ಬಿ.ಎಸ್.ಮಠ ಆಯ್ಕೆಯಾಗಿದ್ದಾರೆ.

ಬಿ.ಎಸ್.ಮಠ

ಪುರಸ್ಕಾರ ₹ 1 ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ.

ಮಾರ್ಚ್ 3ರಂದು ಹುಬ್ಬಳ್ಳಿಯಲ್ಲಿ ನಡೆಯುವ ಪುಟ್ಟರಾಜ ಗವಾಯಿಯವರ ಜನ್ಮದಿನೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

'ಅತಿಥಿ'ಗಳ ಪ್ರಮಾಣಪತ್ರಕ್ಕೆ ಎಸ್‌ಒಪಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಯುಜಿಸಿ ಮಾನ್ಯತೆ ವಿವಿ ಸರ್ಟಿಫಿಕೇಟ್ ಪರಿಗಣನೆ
- ಪಿಎಚ್.ಡಿಗಳ ನೈಜತೆಗೆ ವಿಶೇಷ ಗಮನ

ಬೆಂಗಳೂರು: ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲು ಕಾಲೇಜು ಶಿಕ್ಷಣ ಇಲಾಖೆ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಪ್ರಕಟಿಸಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜತೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಅಥವಾ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್) ತೇರ್ಗಡೆಯಾಗಿರಬೇಕು, ಪಿಎಚ್.ಡಿ ಪಡೆದಿರಬೇಕು ಎಂದು ವಿಶ್ವ ವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಯಮ ರೂಪಿಸಿತ್ತು. ಹಾಗಾಗಿ, 2025–26ನೇ ಸಾಲಿನಲ್ಲಿ ಯುಜಿಸಿ ಅರ್ಹತೆ ಪಡೆದಿದ್ದ ಅಭ್ಯರ್ಥಿಗಳನ್ನೇ ನೇಮಕ ಮಾಡಿಕೊಳ್ಳಲಾಗಿತ್ತು.

ನೇಮಕವಾದ ಹಲವು ಅತಿಥಿ ಉಪನ್ಯಾಸಕರು ಸಲ್ಲಿಸಿದ್ದ ಪಿಎಚ್.ಡಿ ಸೇರಿದಂತೆ ಇತರೆ ಪ್ರಮಾಣಪತ್ರಗಳು ನಕಲಿಯಾಗಿವೆ ಎಂಬ ದೂರುಗಳು ಕೇಳಿ ಬಂದ ಕಾರಣ ಎಲ್ಲ ಕಾಲೇಜುಗಳಲ್ಲೂ ಪ್ರಮಾಣಪತ್ರಗಳ ನೈಜತೆಯನ್ನು ದೃಢೀಕರಿಸಿಕೊಳ್ಳಲು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಎಸ್‌ಒಪಿ ಅಳವಡಿಸಿಕೊಳ್ಳಲು ಆದೇಶ ಹೊರಡಿಸಲಾಗಿದೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾನ್ಯತೆ ಪಡೆದ ವಿಶ್ವ ವಿದ್ಯಾಲಯಗಳಿಂದ ಪಡೆದ ಪ್ರಮಾಣ ಪತ್ರಗಳನ್ನಷ್ಟೇ ಪರಿಗಣಿಸಬೇಕು. ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು ಖಚಿತಪಡಿಸಿಕೊಳ್ಳಬೇಕು. ಪತ್ರ ವ್ಯವಹಾರಗಳನ್ನು ಗೋಪ್ಯವಾಗಿಡಬೇಕು. ಪಿಎಚ್.ಡಿಗಳ ನೈಜತೆಗೆ ವಿಶೇಷ ಗಮನಕೊಡಬೇಕು. ಆಯಾ ವಿಶ್ವವಿದ್ಯಾಲಯಗಳ ಪ್ರಕಟಣೆ, ಪಿಎಚ್.ಡಿ ಪ್ರವೇಶ, ಸಂಶೋಧನೆ, ಮಾರ್ಗದರ್ಶಕರ ವಿವರ ಸೇರಿದಂತೆ ಸಂಪೂರ್ಣ ಪ್ರಕ್ರಿಯೆಯ ವಿವರ ಕಲೆಹಾಕಬೇಕು. ನಕಲಿ ಎನ್ನುವುದು ಸಾಬೀತಾದರೆ ಅಂತಹ ಅತಿಥಿ ಉಪನ್ಯಾಸಕರನ್ನು ತಕ್ಷಣವೇ ಸೇವೆಯಿಂದ ಬಿಡುಗಡೆ ಮಾಡಬೇಕು. ಎಲ್ಲ ವಿವರಗಳನ್ನು ಕೇಂದ್ರ ಕಚೇರಿಗೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಜಾತ್ರಾ ಮಹೋತ್ಸವ

ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವ ಅಂಗವಾಗಿ ಬುಧವಾರ ಅದ್ದೂರಿ ರಥೋತ್ಸವ ನಡೆಯಿತು

2.84 ಕ್ವಿಂಟಲ್ ಶ್ರೀಗಂಧ ವಶ

ಸಂಡೂರು (ಬಳ್ಳಾರಿ ಜಿಲ್ಲೆ): ತಾಲ್ಲೂಕಿನ ಉತ್ತರ ಮತ್ತು ದಕ್ಷಿಣ ವಲಯಗಳ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಶ್ರೀಗಂಧವನ್ನು ಅಕ್ರಮ ಸಾಗಣೆ, ಮಾರಾಟಕ್ಕೆ ಸಂಬಂಧಿಸಿ ಅರಣ್ಯ ಇಲಾಖೆಯ ಅಧಿಕಾರಿಗಳು ₹ 15 ಲಕ್ಷ ಮೌಲ್ಯದ 2.89 ಕ್ವಿಂಟಲ್ ತೂಕದ ಶ್ರೀಗಂಧವನ್ನು ವಶಕ್ಕೆ ಪಡೆದಿದ್ದಾರೆ.

ಸುಶೀಲನಗರ ಗ್ರಾಮದ ಲೋಕೇಶ್ ನಾಯ್ಕ್ ಮತ್ತು ಕಿರಣ್ ಕುಮಾರ್ ಎಂಬ ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತರು ಆಂಧ್ರಪ್ರದೇಶದ ಸತ್ಯ ಸಾಯಿ ಜಿಲ್ಲೆಯ ರೋಲ್ಲ ಗ್ರಾಮದ ಖಾಸಗಿ ಸುಗಂಧದ ಕೈಗಾರಿಕೆಗೆ ಅಕ್ರಮವಾಗಿ ಶ್ರೀಗಂಧ ಸಾಗಿಸುತ್ತಿದ್ದರು. ಆಂಧ್ರಪ್ರದೇಶದ ಅರಣ್ಯ, ಕಂದಾಯ ಮತ್ತು ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ ವಾರ್ತೆ

ರಾಘವೇಂದ್ರ ರಾವ್



ಮಂಗಳೂರು: ಇಲ್ಲಿನ ಶ್ರೀನಿವಾಸ ವಿಶ್ವವಿದ್ಯಾಲಯದ ಕುಲಾಧಿಪತಿ ಎ.ರಾಘವೇಂದ್ರ ರಾವ್ (88) ಅವರು ಚೆನ್ನೈನಲ್ಲಿ ಮಂಗಳವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ ವಿಜಯಲಕ್ಷ್ಮಿ, ಪುತ್ರಿ ಪದ್ಮಿನಿ, ಪುತ್ರ ಶ್ರೀನಿವಾಸ್ ರಾವ್ ಇದ್ದಾರೆ. ಬುಧವಾರ ಅಂತ್ಯಕ್ರಿಯೆ ನೆರವೇರಿತು.

ಉಡುಪಿ ಜಿಲ್ಲೆಯ ಅಡ್ಕ ಗ್ರಾಮದಲ್ಲಿ ಜನಿಸಿದ್ದ ಅವರು ಶಿಕ್ಷಣ, ಆರೋಗ್ಯ, ಆತಿಥ್ಯ, ಹಣಕಾಸು ಮತ್ತು ಸಮಾಜಸೇವಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದರು. 1988ರಲ್ಲಿ ತಮ್ಮ ತಂದೆಯ ಸ್ಮರಣಾರ್ಥ ಎ.ಶಾಮರಾವ್ ಫೌಂಡೇಶನ್ ಸ್ಥಾಪಿಸಿ ಅದರಡಿ ಶ್ರೀನಿವಾಸ ಶಿಕ್ಷಣ ಸಂಸ್ಥೆಗಳ ಸಮೂಹವನ್ನು ಕಟ್ಟಿ ಬೆಳೆಸಿದ್ದರು.

ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿಯಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದರು.

ತುರ್ತು ಸ್ಪಂದನೆ ಮೊಬೈಲ್ ಸಂಖ್ಯೆಗೆ 'ಸ್ವಿಚ್ಡ್ ಆಫ್' ಟ್ಯೂನ್ ಇಟ್ಟ ಎಂಜಿನಿಯರ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಕುಡಿಯುವ ನೀರಿನ ಸಮಸ್ಯೆಗೆ ಸ್ಪಂದಿಸಲು ನೇಮಿಸಿದ 'ತುರ್ತು ಪರಿಹಾರ ತಂಡ'ದ ಎಂಜಿನಿಯರ್ ಒಬ್ಬರು ತಮ್ಮ ಅಧಿಕೃತ ಮೊಬೈಲ್ ಸಂಖ್ಯೆಗೆ 'ಸ್ವಿಚ್ಡ್ ಆಫ್' ಎಂಬ ಕಾಲರ್ ಟ್ಯೂನ್ ಸೆಟ್ ಮಾಡಿಕೊಂಡಿದ್ದಾರೆ! ಇದರಿಂದಾಗಿ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವ ಬದಲು ಕರೆ ಸ್ಥಗಿತಗೊಳಿಸುತ್ತಿದ್ದಾರೆ.

ನಗರದ 37, 45, 44 ವಾರ್ಡ್‌ಗಳಿಗೆ ನೆಟ್‌ವರ್ಕ್ ಎಂಜಿನಿಯರ್ ಆಗಿರುವ ಅನಿಲ ಎಂಬವರು ತಮ್ಮ ಮೊಬೈಲ್ ಸಂಖ್ಯೆ 99163 64899ಗೆ 'ಸ್ವಿಚ್ ಆಫ್' ಎಂಬ ಕಾಲರ್ ಟ್ಯೂನ್ ಸೆಟ್ ಮಾಡಿಕೊಂಡವರು.

ಅವರು ಫೋನ್ ಕರೆಯನ್ನು ಸ್ವೀಕರಿಸುವವರೆಗೂ ಸಾಮಾನ್ಯ ರಿಂಗಿಂಗ್ ಟೋನ್ ಬದಲಿಗೆ ಸಾರ್ವಜನಿಕರಿಗೆ ಈ ಕಾಲರ್ ಟ್ಯೂನ್ ಕೇಳಿಬರುತ್ತದೆ.

ಕಲಬುರಗಿ ನಗರದಲ್ಲಿ ಬೇಸಿಗೆ ವೇಳೆ ಕುಡಿಯುವ ನೀರಿನ ಕೊರತೆ ಆಗದಂತೆ ತುರ್ತಾಗಿ ಸ್ಪಂದಿಸಲು ಪಾಲಿಕೆಯು 'ತುರ್ತು ಪರಿಹಾರ ತಂಡ' ರಚಿಸಿದೆ.

ಸಮಸ್ಯೆ ಇದ್ದಲ್ಲಿ ಸಾರ್ವಜನಿಕರು ತಂಡದ ಅಧಿಕಾರಿಗಳು, ಸಿಬ್ಬಂದಿ ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಬೇಕು ಎಂದು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಕೆಯುಐಡಿಎಫ್‌ಸಿ)ದ ಯೋಜನಾ ಅನುಷ್ಠಾನ ಘಟಕದ ಅಧೀಕ್ಷಕ ಎಂಜಿನಿಯರ್ ಅವರು ಪ್ರಕಟಣೆ ಹೊರಡಿಸಿದ್ದರು.

ಅದರಂತೆ ಸಾರ್ವಜನಿಕರು ಎಂಜಿನಿಯರ್ ಅನಿಲ ಅವರಿಗೆ ಕರೆ ಮಾಡಿದರೆ, 'ಜಿಸ್ ನಂಬರ್‌ಸೇ ಆಫ್ ಸಂಪರ್ಕ ಕರ್ನಾ ಚಾಹತೆ ಹೈ, ಓ ಅಭಿ ಸ್ವಿಚ್ ಆಫ್ ಹೈ. ಕೃಪಯಾ ಕುಚ್ ಸಮಯ್ ಕೆ ಪಶ್ಚಾತ್ ಪ್ರಯಾಸ್ ಕರೆ' ಎಂದು ಹಿಂದಿ ಭಾಷೆಯಲ್ಲಿ ಟ್ಯೂನ್ ಕೇಳಿಬರುತ್ತಿದೆ. ಇದರಿಂದ ಹೆಚ್ಚಿನವರು ಕರೆ ಕಡಿತಗೊಳಿಸುತ್ತಿದ್ದಾರೆ.

'ಸಂದೇಶ ಕೇಳಿ ಮೊಬೈಲ್ ಸ್ವಿಚ್ಡ್ ಆಫ್ ಇದೆ ಎಂದುಕೊಂಡಿದ್ದೆವು. ಬಳಿಕ ವಿಚಾರಿಸಿದಾಗ, ಅದು ಅನಿಲ ಅವರ ಫೋನ್ ಕಾಲರ್‌ಟ್ಯೂನ್ ಎಂದು ತಿಳಿಯಿತು. ಕಾಲೊನಿಗೆ 15 ದಿನಗಳಿಂದ ಪಾಲಿಕೆ ನೀರು ಬರುತ್ತಿಲ್ಲ. ಜನರ ಜೀವನದ ಜೊತೆ ಅಧಿಕಾರಿಗಳು ಚೆಲ್ಲಾಟವಾಡುತ್ತಿದ್ದಾರೆ' ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ ಇಂದು

ಬೆಂಗಳೂರು: ಬಿಜೆಪಿಯ ವಿಶೇಷ ರಾಜ್ಯ ಕಾರ್ಯಕಾರಿಣಿ ಸಭೆ ಗುರುವಾರ ಇಲ್ಲಿನ ಅರಮನೆ ಮೈದಾನದಲ್ಲಿ ನಡೆಯಲಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಬುಧವಾರ ಅರಮನೆ ಮೈದಾನದಲ್ಲಿ ಕಾರ್ಯಕಾರಿಣಿಯ ಪೂರ್ವಸಿದ್ಧತೆ ಪರಿಶೀಲಿಸಿದ ಬಳಿಕ ಸುದ್ದಿಗಾರರಿಗೆ ವಿವರ ನೀಡಿದರು.

1,250 ಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ. ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಸಭೆಯನ್ನು ಉದ್ಘಾಟಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದಗೌಡ, ಜಗದೀಶ ಶೆಟ್ಟರ್, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಸಂಸದರು, ಶಾಸಕರು ಭಾಗವಹಿಸಲಿದ್ದಾರೆ ಎಂದರು.

ಪತ್ನಿ ಕೊಂದ ಇಸ್ರೊ ನಿವೃತ್ತ ಅಧಿಕಾರಿ

ಪತ್ನಿ ನೋಡಿಕೊಳ್ಳುವವರಿಲ್ಲ: ಕಾರಣ ಕೊಟ್ಟ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯ ಕುತ್ತಿಗೆ ಬಿಗಿದು ಕೊಲೆ ಮಾಡಿದ ಪತಿ, ಇಸ್ರೊ ಸಂಸ್ಥೆಯ ನಿವೃತ್ತ ಅಧಿಕಾರಿ ನಾಗಲೇಶ್ವರ ರಾವ್ (76) ಅವರನ್ನು ಆವಲಹಳ್ಳಿ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬೊಮ್ಮನಹಳ್ಳಿಯ ಅಪಾರ್ಟ್‌ಮೆಂಟ್ ನಿವಾಸಿ ಸಂಧ್ಯಾಶ್ರೀ(65) ಕೊಲೆಯಾದ ಮಹಿಳೆ.

ಆಂಧ್ರಪ್ರದೇಶದ ನಾಗಲೇಶ್ವರ ರಾವ್ 16 ವರ್ಷಗಳ ಹಿಂದೆ ನಿವೃತ್ತರಾಗಿದ್ದಾರೆ. ಅವರ ಪುತ್ರ ಅಮೆರಿಕದಲ್ಲಿ ಉದ್ಯೋಗದಲ್ಲಿದ್ದಾರೆ. ಮೂರು ವರ್ಷಗಳಿಂದ ಬೊಮ್ಮನಹಳ್ಳಿಯ ವಿರ್ಟುಸೊ ಅಪಾರ್ಟ್‌ಮೆಂಟ್‌ನಲ್ಲಿ ದಂಪತಿ ನೆಲಸಿದ್ದರು.

ಬುಧವಾರ ಬೆಳಿಗ್ಗೆ 10 ಗಂಟೆ ಸುಮಾರಿಗೆ ನಾಗಲೇಶ್ವರ್ ಅವರು ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಪತ್ನಿ ಸಂಧ್ಯಾಶ್ರೀ ಅವರ ಕುತ್ತಿಗೆಗೆ ಟವಲ್‌ನಿಂದ ಬಿಗಿದು ಕೊಲೆ ಮಾಡಿದ್ದಾರೆ. ನಂತರ, ಅಪಾರ್ಟ್‌ಮೆಂಟ್‌ನಲ್ಲಿರುವ ತಮ್ಮ ಸ್ನೇಹಿತರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಅಪಾರ್ಟ್‌ಮೆಂಟ್‌ನಲ್ಲಿದ್ದ ವೈದ್ಯರೊಬ್ಬರು ಬಂದು ಸಂಧ್ಯಾಶ್ರೀ ಅವರನ್ನು ಪರೀಕ್ಷಿಸಿದಾಗ ಮೃತಪಟ್ಟಿರುವುದು ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು. 'ಪತ್ನಿಯನ್ನು ಕೊಲೆ ಮಾಡಿರುವುದಾಗಿ ಆರೋಪಿ ಒಪ್ಪಿಕೊಂಡಿದ್ದಾರೆ. ಆದರೆ, ವಿಚಾರಣೆ ವೇಳೆ ಬೇರೆ ಬೇರೆ ಕಾರಣ ನೀಡುತ್ತಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ನಾನು ಸತ್ತರೆ ಪತ್ನಿಯನ್ನು ಯಾರು ನೋಡಿಕೊಳ್ಳುತ್ತಾರೆ? ಯಾರೂ ಸಂಬಂಧಿಕರು ಇಲ್ಲ? ಆಕೆಯ ಮುಂದಿನ ಜೀವನ ಹೇಗೆ? ಹೀಗಾಗಿ ಆಕೆಯನ್ನು ಕೊಲೆ ಮಾಡಿದ್ದೇನೆ' ಎಂದು ವಿಚಾರಣೆ ವೇಳೆ ನಾಗಲೇಶ್ವರ ರಾವ್ ಹೇಳಿದ್ದಾರೆ. ಮಾನಸಿಕ ಅಸ್ವಸ್ಥರಂತೆ ವರ್ತಿಸುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಧ್ಯಾಶ್ರೀ ಹಾಗೂ ನಾಗಲೇಶ್ವರ ರಾವ್

ಮಾನಸಿಕ ಕಾಯಿಲೆ

ನಿವೃತ್ತಿಯ ನಂತರ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದ ನಾಗಲೇಶ್ವರ ರಾವ್, ಚಿಕಿತ್ಸೆ ಪಡೆಯುತ್ತಿದ್ದರು. ಕೆಲವು ದಿನಗಳಿಂದ ಅವರು ಮಾತ್ರೆ ತೆಗೆದುಕೊಳ್ಳುವುದನ್ನು ನಿಲ್ಲಿಸಿದ್ದರು. ಇದರಿಂದ ಸಮಸ್ಯೆ ಗಂಭೀರವಾಗಿತ್ತು ಎಂದು ಮೂಲಗಳು ತಿಳಿಸಿವೆ.

ರಾಜ್ಯಸಭೆ: ಮಾ.16ಕ್ಕೆ ಚುನಾವಣೆ

ಹಿಗ್ಗಲಿದೆ ಎನ್‌ಡಿಎ ಮೈತ್ರಿ ಬಲ ಕುಗ್ಗಲಿದೆ 'ಇಂಡಿಯಾ' ಮೈತ್ರಿ ಬಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಏಪ್ರಿಲ್‌ನಲ್ಲಿ ತೆರವಾಗಲಿರುವ 10 ರಾಜ್ಯಗಳ 37 ರಾಜ್ಯಸಭಾ ಸ್ಥಾನಗಳ ಚುನಾವಣೆಗೆ ಭಾರತೀಯ ಚುನಾವಣಾ ಆಯೋಗ ಬುಧವಾರ ವೇಳಾಪಟ್ಟಿ ಪ್ರಕಟಿಸಿದ್ದು, ಮಾ.16ರಂದು ಮತದಾನ ನಡೆಯಲಿದೆ.

37 ಸ್ಥಾನಗಳಿಗೆ ಮತದಾನ

ಮಹಾರಾಷ್ಟ್ರ, ಬಿಹಾರ ಹಾಗೂ ಒಡಿಶಾ ವಿಧಾನಸಭಾ ಚುನಾವಣೆಗಳಲ್ಲಿ ಪ್ರಚಂಡ ಜಯ ಗಳಿಸಿರುವುದರಿಂದ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟವು ರಾಜ್ಯಸಭಾ ಚುನಾವಣೆಯಲ್ಲಿ ಗಣನೀಯ ಲಾಭ ಗಳಿಸಬಹುದು ಎಂದು ಹೇಳಲಾಗಿದೆ.

ಎನ್‌ಡಿಎ ಮೈತ್ರಿಕೂಟದ 15 ಸದಸ್ಯರು ಹಾಗೂ ಇಂಡಿಯಾ ಮೈತ್ರಿಕೂಟದ 19 ಸದಸ್ಯರ ಅವಧಿ ಏಪ್ರಿಲ್‌ನಲ್ಲಿ ಮುಗಿಯಲಿದೆ. ಎನ್‌ಡಿಎ 25 ಸ್ಥಾನಗಳಲ್ಲಿ ಗೆಲ್ಲುವುದು ಬಹುತೇಕ ಖಚಿತ. ಇಂಡಿಯಾ ಬಣವು 10 ಸ್ಥಾನಗಳನ್ನು ಗಳಿಸಬಹುದು.

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್, ಎನ್‌ಸಿಪಿ (ಎಸ್‌ಪಿ) ಹಾಗೂ ಶಿವಸೇನಾ (ಯುಬಿಟಿ) ಮೈತ್ರಿಕೂಟದ ನಾಲ್ವರು ಸದಸ್ಯರು ನಿವೃತ್ತರಾಗುತ್ತಿದ್ದಾರೆ. 2024ರ ವಿಧಾನಸಭಾ ಚುನಾವಣೆಯಲ್ಲಿ ಮೈತ್ರಿಕೂಟವು ಹೀನಾಯ ಪ್ರದರ್ಶನ ನೀಡಿತ್ತು. ಯಾವುದೇ ಪಕ್ಷವು ಸ್ವತಂತ್ರವಾಗಿ ಒಂದು ಸ್ಥಾನ ಗೆಲ್ಲುವಷ್ಟು ಶಾಸಕರನ್ನು ಹೊಂದಿಲ್ಲ. ಮೂರೂ ಪಕ್ಷಗಳು ಜತೆಗೂಡಿ ಸ್ಪರ್ಧಿಸಿದರಷ್ಟೇ ಒಂದು ಸ್ಥಾನ ಗೆಲ್ಲಬಹುದು. ಶರದ್ ಪವಾರ್ ಅವರು ಮೈತ್ರಿಕೂಟದಿಂದ ಮತ್ತೆ ಸ್ಪರ್ಧಿಸುವ ಇಚ್ಛೆ ವ್ಯಕ್ತಪಡಿಸಿದರೆ, ಆ ಸ್ಥಾನ ಅವರ ಪಾಲಾಗಲಿದೆ.

ಬಿಹಾರದಲ್ಲಿ ಐದು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಜೆಡಿಯು ಮತ್ತು ಆರ್‌ಜೆಡಿಯ ತಲಾ ಇಬ್ಬರು ಹಾಗೂ ಆರ್‌ಎಲ್‌ಎಂನ ಒಬ್ಬರು ನಿವೃತ್ತರಾಗುತ್ತಿದ್ದಾರೆ. ಬಿಜೆಪಿ ಹಾಗೂ ಜೆಡಿಯು ಆರಾಮವಾಗಿ ತಲಾ ಎರಡು ಸ್ಥಾನಗಳನ್ನು ಗೆಲ್ಲಲಿವೆ. ಆದರೆ, ಇಂಡಿಯಾ ಮೈತ್ರಿಕೂಟವು ಒಂದು ಸ್ಥಾನ ಗೆಲ್ಲಲು ಹೆಣಗಾಡಬೇಕಾಗುತ್ತದೆ. ಏಕೆಂದರೆ, ಶಾಸಕರ ಬಲಾಬಲದ ಆಧಾರದಲ್ಲಿ ಒಂದು ಸ್ಥಾನ ಗೆಲ್ಲಲು ಮೈತ್ರಿಕೂಟಕ್ಕೆ ಆರು ಮತಗಳ ಕೊರತೆ ಉಂಟಾಗಿದೆ.

ಒಡಿಶಾದಲ್ಲಿ ನಾಲ್ಕು ಸ್ಥಾನಗಳಲ್ಲಿ ಬಿಜೆಪಿ ಮೂರು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆಯಿದೆ. ನಾಲ್ಕನೇ ಸ್ಥಾನ ಬಿಜೆಡಿ ಪಾಲಾಗಬಹುದು. ಜಂಟಿ ಸ್ವತಂತ್ರ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಬಿಜೆಡಿ ಜತೆಗೆ ಮಾತುಕತೆ ನಡೆಸುವುದಾಗಿ ಕಾಂಗ್ರೆಸ್ ಹೇಳಿದೆ.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ನಾಲ್ಕು ಸ್ಥಾನಗಳನ್ನು ಉಳಿಸಿಕೊಳ್ಳಲು ಸಜ್ಜಾಗಿದ್ದರೆ, ಬಿಜೆಪಿ ಐದನೇ ಸ್ಥಾನ ಪಡೆಯುವ ಸಂಭವ ಇದೆ. ಕಳೆದ ಚುನಾವಣೆಯಲ್ಲಿ ಸಿಪಿಎಂ ಒಂದು ಸ್ಥಾನ ಗೆದ್ದಿತ್ತು. ಈ ಸಲ ಆ ಸ್ಥಾನವನ್ನು ಕಳೆದುಕೊಳ್ಳಲಿದೆ. ಸಿಪಿಎಂ ನೇತೃತ್ವದ ಎಡರಂಗವು ಪ್ರಸ್ತುತ ಪಶ್ಚಿಮ ಬಂಗಾಳದಿಂದ ಲೋಕಸಭಾ ಸದಸ್ಯರನ್ನು ಹೊಂದಿಲ್ಲ. ವಿಧಾನಸಭೆಯಲ್ಲಿಯೂ ಪ್ರಾತಿನಿಧ್ಯ ಹೊಂದಿಲ್ಲ.

ತಮಿಳುನಾಡಿನಲ್ಲಿ ನಾಲ್ಕು ಸ್ಥಾನಗಳನ್ನು ಉಳಿಸಿಕೊಳ್ಳಲು ಡಿಎಂಕೆ ಸಜ್ಜಾಗಿದೆ. ಇನ್ನೊಂದೆಡೆ, ಒಂದು ಸ್ಥಾನಕ್ಕಾಗಿ ಕಾಂಗ್ರೆಸ್ ಬೇಡಿಕೆ ಇಟ್ಟಿದೆ. ವಿಧಾನಸಭಾ ಚುನಾವಣೆಯ ಸೀಟು ಹಂಚಿಕೆ ಸಂಬಂಧ ಮೈತ್ರಿಕೂಟದಲ್ಲಿ ಬಿಕ್ಕಟ್ಟು ಉಂಟಾಗಿದೆ. ಇಂತಹ ಸನ್ನಿವೇಶದಲ್ಲಿ, ಕಾಂಗ್ರೆಸ್‌ನ ಬೇಡಿಕೆಗೆ ಡಿಎಂಕೆ ಒಪ್ಪುತ್ತದೆಯೇ ಎಂಬುದನ್ನು ಕಾದು ನೋಡಬೇಕು. ಎಐಎಡಿಎಂಕೆ ಮೈತ್ರಿಕೂಟ ಎರಡು ಸ್ಥಾನಗಳಲ್ಲಿ ಗೆಲ್ಲಲಿದೆ. ಇದರಲ್ಲಿ ಒಂದು ಸ್ಥಾನದ ಮೇಲೆ ಬಿಜೆಪಿ ಕಣ್ಣಿಟ್ಟಿದೆ. ಆದರೆ, ಎರಡನೇ ಸ್ಥಾನವನ್ನು ಪ್ರಸ್ತುತ ತಮಿಳು ಮಾನಿಲಾ ಕಾಂಗ್ರೆಸ್‌ನ ಜಿ.ಕೆ. ವಾಸನ್ ಹೊಂದಿದ್ದಾರೆ.

ಹರಿಯಾಣದಲ್ಲಿ ಬಿಜೆಪಿಯು ಎರಡು ಸ್ಥಾನಗಳಲ್ಲಿ ಒಂದನ್ನು ಕಳೆದುಕೊಳ್ಳಲಿದೆ. ಛತ್ತೀಸಗಢದಲ್ಲಿ ಕಾಂಗ್ರೆಸ್‌ಗೆ ಇದೇ ಪರಿಸ್ಥಿತಿ ಇದೆ. ತೆಲಂಗಾಣದಲ್ಲಿ ಕಾಂಗ್ರೆಸ್ ಮತ್ತು ಬಿಆರ್‌ಎಸ್ ತಲಾ ಒಂದು ಸ್ಥಾನ ಗೆಲ್ಲಲಿವೆ. ಕಾಂಗ್ರೆಸ್‌ನಿಂದ ಅಭಿಷೇಕ್ ಮನು ಸಿಂಘ್ವಿ ಅವರನ್ನು ಮರುನಾಮಕರಣ ಮಾಡುವ ಸಾಧ್ಯತೆಯಿದೆ.

ಚುನಾವಣಾ ವೇಳಾಪಟ್ಟಿ

ಫೆ.26	ಮಾರ್ಚ್ 5	ಮಾರ್ಚ್ 6	ಮಾರ್ಚ್ 16	ಮಾರ್ಚ್ 16
ಚುನಾವಣೆಗೆ ಅಧಿಸೂಚನೆ	ನಾಮಪತ್ರ ಸಲ್ಲಿಕೆಗೆ ಕೊನೆ ದಿನ	ನಾಮಪತ್ರ ಪರಿಶೀಲನೆ	ಮತದಾನ (ಬೆಳಿಗ್ಗೆ 9ರಿಂದ ಸಂಜೆ 4)	ಮತ ಎಣಿಕೆ (ಸಂಜೆ 5ರಿಂದ)

ಯಾವ ರಾಜ್ಯದಿಂದ ಎಷ್ಟು ಸದಸ್ಯರು ನಿವೃತ್ತಿ?

ಮಹಾರಾಷ್ಟ್ರ 7, ತಮಿಳುನಾಡು 6, ಬಿಹಾರ ಮತ್ತು ಪಶ್ಚಿಮ ಬಂಗಾಳ (ತಲಾ 5), ಒಡಿಶಾ (4), ಅಸ್ಸಾಂ (3), ತೆಲಂಗಾಣ, ಛತ್ತೀಸಗಢ ಮತ್ತು ಹರಿಯಾಣ (ತಲಾ 2) ಮತ್ತು ಹಿಮಾಚಲ ಪ್ರದೇಶ (1 ಸ್ಥಾನ).

*ಏಪ್ರಿಲ್ 7 ಮತ್ತು 9: ಹಾಲಿ ಸದಸ್ಯರ ಅವಧಿ ಮುಕ್ತಾಯ

ನಿವೃತ್ತರಾಗುತ್ತಿರುವ ಪ್ರಮುಖರು

- ಉಪಸಭಾಪತಿ ಹರಿವಂಶ್ (ಜೆಡಿಯು), ಕೇಂದ್ರ ಸಚಿವ ರಾಮದಾಸ್ ಆಠವಳೆ (ಆರ್‌ಪಿಐ-ಎ), ಶರದ್ ಪವಾರ್ (ಎನ್‌ಸಿಪಿ-ಎಸ್‌ಪಿ), ಅಭಿಷೇಕ್ ಮನು ಸಿಂಘ್ವಿ (ಕಾಂಗ್ರೆಸ್), ಎಂ. ತಂಬಿದೊರೆ (ಎಐಎಡಿಎಂಕೆ), ತಿರುಚ್ಚಿ ಶಿವ (ಡಿಎಂಕೆ), ಉಪೇಂದ್ರ ಕುಶ್ವಾಹ (ಆರ್‌ಎಲ್‌ಎಂ), ಸಾಕೇತ್ ಗೋಖಲೆ (ಟಿಎಂಸಿ).

ಯಾವ ಪಕ್ಷದಿಂದ ಎಷ್ಟು ಸದಸ್ಯರು ನಿವೃತ್ತಿ

ಎನ್‌ಡಿಎ ಮೈತ್ರಿಕೂಟ: ಬಿಜೆಪಿ-9, ಜೆಡಿಯು-2, ಆರ್‌ಪಿಐ, ಎಐಎಡಿಎಂಕೆ, ತಮಿಳು ಮನಿಲಾ ಕಾಂಗ್ರೆಸ್ ಮತ್ತು ಆರ್‌ಎಲ್‌ಎಂ; ತಲಾ 1.

ಇಂಡಿಯಾ ಮೈತ್ರಿಕೂಟ: ಕಾಂಗ್ರೆಸ್, ಡಿಎಂಕೆ ಮತ್ತು ತೃಣಮೂಲ ಕಾಂಗ್ರೆಸ್ (ತಲಾ 4), ಎನ್‌ಸಿಪಿ (ಎಸ್‌ಪಿ) ಮತ್ತು ಆರ್‌ಜೆಡಿ (ತಲಾ 2) ಮತ್ತು ಶಿವಸೇನಾ (ಯುಬಿಟಿ), ಸಿಪಿಐ(ಎಂ) ಮತ್ತು ಪಕ್ಷೇತರ (ತಲಾ 1).

- ಬಿಜೆಡಿ 2 • ಬಿಆರ್‌ಎಸ್ 1

ಪ್ರತಿಭಟನೆ ಮಧ್ಯೆ ಲಖನೌ ವಿ.ವಿಗೆ ಭಾಗವತ್ ಭೇಟಿ



ಮೋಹನ್ ಭಾಗವತ್

ಲಖನೌ (ಪಿಟಿಐ): ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಲಖನೌ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಸಂಶೋಧನಾರ್ಥಿಗಳೊಂದಿಗೆ ಬುಧವಾರ ಸಂವಾದ ನಡೆಸಿದರು.

ಭಾಗವತ್ ಭೇಟಿಯ ವಿರುದ್ಧ ಕಾಂಗ್ರೆಸ್ ವಿದ್ಯಾರ್ಥಿ ಘಟಕ ಎನ್‌ಎಸ್‌ಯುಐ ಪ್ರತಿಭಟಿಸಿತು. ಈ ಮಧ್ಯೆಯೂ ಅವರು ಚರ್ಚೆ ನಡೆಸಿದರು.

ಉತ್ತರ ಪ್ರದೇಶದ ಎನ್‌ಎಸ್‌ಯುಐನ ಉಪಾಧ್ಯಕ್ಷ ಅಹ್ಮದ್ ರಾಜಾ ಖಾನ್, 'ಆರ್‌ಎಸ್‌ಎಸ್ ಸಮಾಜವನ್ನು ಧ್ರುವೀಕರಿಸುತ್ತದೆ. ಜಾತ್ಯತೀತ ಮೌಲ್ಯಗಳ ಪ್ರಸರಣಕ್ಕೆ ಹೆಸರುವಾಸಿಯಾಗಿರುವ ವಿಶ್ವವಿದ್ಯಾಲಯಕ್ಕೆ ಆರ್‌ಎಸ್‌ಎಸ್ ಮುಖ್ಯಸ್ಥರ ಭೇಟಿಯು ಸರಿಯಲ್ಲ' ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಭಾಗಿಯಾದ ಐವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದರು.

'ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ವಶಕ್ಕೆ ಪಡೆಯಲಾಗಿತ್ತು. ಬಳಿಕ ಅವರನ್ನು ಬಿಡುಗಡೆ ಮಾಡಲಾಯಿತು' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ನಾನು ರಾಹುಲ್‌ವಾದಿಯಲ್ಲ'



ಮಣಿಶಂಕರ್ ಅಯ್ಯರ್

ನವದೆಹಲಿ (ಪಿಟಿಐ): 'ನಾನು 'ಗಾಂಧಿವಾದಿ', 'ನೆಹರೂವಾದಿ' ಮತ್ತು 'ರಾಜೀವ್‌ವಾದಿ', ಆದರೆ 'ರಾಹುಲ್‌ವಾದಿ' ಅಲ್ಲ. ಏಕೆಂದರೆ ರಾಹುಲ್ ನನಗಿಂತ ತುಂಬಾ ಕಿರಿಯರು. ರಾಜಕೀಯ ಜೀವನದಲ್ಲಿ ನನ್ನಿಂದ ಬಹಳ ದೂರದಲ್ಲಿದ್ದಾರೆ' ಎಂದು ಕಾಂಗ್ರೆಸ್ ಹಿರಿಯ ನಾಯಕ ಮಣಿಶಂಕರ್ ಅಯ್ಯರ್ ಬುಧವಾರ ಹೇಳಿದರು.

'ಹಾಗೆಯೇ ನಾನು 'ಇಂದಿರಾವಾದಿ' ಎಂದೂ ಹೇಳುವುದಿಲ್ಲ. ಏಕೆಂದರೆ ತುರ್ತು ಪರಿಸ್ಥಿತಿ ಹೇರಿಕೆ ಮೂಲಕ ಪ್ರಜಾಪ್ರಭುತ್ವವನ್ನು 18 ತಿಂಗಳು ನಿರಂಕುಶ ಪ್ರಭುತ್ವವಾಗಿ ಪರಿವರ್ತಿಸಿದ ಇಂದಿರಾ ಅವರನ್ನು ನಾನು ಒಪ್ಪುವುದಿಲ್ಲ' ಎಂದರು.

'ರಾಹುಲ್ ನನಗಿಂತ 30 ವರ್ಷ ಕಿರಿಯರಾಗಿರುವಾಗ ಮತ್ತು ಅವರೊಂದಿಗೆ ಕೆಲಸ ಮಾಡುವ ಅವಕಾಶವೂ ಸಿಗದಿದ್ದಾಗ 'ರಾಹುಲ್‌ವಾದಿ' ಎಂದು ಹೇಳಬೇಕು ಎಂದು ಹೇಗೆತಾನೆ ನಿರೀಕ್ಷಿಸಲು ಸಾಧ್ಯ' ಎಂದು ಪ್ರಶ್ನಿಸಿದರು.

'ಮಹಾತ್ಮ ಗಾಂಧಿ ಅವರು ನಮ್ಮನ್ನು ಎತ್ತಿಹಿಡಿದು, 'ನೀವು ನನ್ನ ಕಣ್ಣಿನಲ್ಲಿ ಸೂರ್ಯ ಮತ್ತು ಚಂದ್ರರಂತೆ ಕಾಣುತ್ತಿದ್ದೀರಿ' ಎಂದು ಹೇಳಿದಾಗ ನನಗೆ ಆರು ವರ್ಷ, ನನ್ನ ಸಹೋದರನಿಗೆ ನಾಲ್ಕು ವರ್ಷ. ಅಲ್ಲಿಂದ ನಾನು ಗಾಂಧಿವಾದಿಯಾದೆ. ನೆಹರೂ ಪ್ರಧಾನಿಯಾದಾಗ ನನಗೆ ಆರು ವರ್ಷ. ಅಲ್ಲಿಂದ 23 ವರ್ಷಗಳವರೆಗೆ ನೆಹರೂ ತತ್ತ್ವಗಳನ್ನು ಕೇಳುತ್ತಾ ಬೆಳೆದಿದ್ದೇನೆ. ಹೀಗಾಗಿ 'ನೆಹರೂವಾದಿ' ಎಂದು ಕರೆದುಕೊಳ್ಳುತ್ತೇನೆ' ಎಂದರು.

ಕೆರೆ ಬಫರ್ ವಲಯಕ್ಕೆ ಕತ್ತರಿ

ಒಂದನೇ ಪುಟದಿಂದ...

ಕೆಟಿಸಿಡಿಎ ಕಾಯ್ದೆ–2014ರ 12 ಪ್ರಕರಣದಲ್ಲಿ ತಿದ್ದುಪಡಿ ತರಲಾಗಿದ್ದು, ಕೆರೆಗಳ ಬಫರ್ ವಲಯವನ್ನು ಪರಿಷ್ಕರಿಸಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಫೆ.18ರಂದು ಅಧಿಸೂಚನೆ ಹೊರಡಿಸಿದೆ.

ಹೊಸ ಅಧಿಸೂಚನೆಯಂತೆ, ಸಾರ್ವಜನಿಕ ಸೌಕರ್ಯ ಸೇವೆಗಳಾದ ರಸ್ತೆಗಳು, ಸೇತುವೆಗಳು, ವಿದ್ಯುತ್ ಮಾರ್ಗಗಳು, ನೀರು ಸರಬರಾಜು ಮಾರ್ಗಗಳು, ನೆಲದಡಿಯ ಚರಂಡಿ ಮಾರ್ಗ, ಜಾಕ್‌ವೆಲ್ ಅಥವಾ ಪಂಪ್‌ಹೌಸ್, ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ), ಮಧ್ಯಂತರ ಕೊಳಚೆ ನೀರು ಪಂಪಿಂಗ್ ಘಟಕ (ಐಎಸ್‌ಪಿಎಸ್), ಕೊಚ್ಚೆನೀರು ಗುಂಡಿ (ವೆಟ್‌ವೆಲ್), ಕಿರು ಜಲನಾಲೆಗಳ ನಿರ್ಮಾಣಕ್ಕೆ ಬಫರ್ ವಲಯದ ನಿರ್ಬಂಧ ಇರುವುದಿಲ್ಲ. ಕೆಟಿಸಿಡಿಎ ಪೂರ್ವಾನುಮೋದನೆ ಮಾತ್ರ ಪಡೆಯಬೇಕು.

ಪರಿಷ್ಕರಿಸಿರುವ ಬಫರ್ ವಲಯದಲ್ಲಿ ವಾಣಿಜ್ಯ ಅಥವಾ ಮನರಂಜನೆ, ಕೈಗಾರಿಕೆ ಚಟುವಟಿಕೆಯನ್ನು ನಡೆಸುವಂತಿಲ್ಲ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

'ಜಾತಿ ಆಧಾರದಲ್ಲಿ ಸಂತ್ರಸ್ತರ ಗುರುತಿಸುವಿಕೆ ಪ್ರತಿಗಾಮಿ ನಡೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಯಾವುದೇ ಅಪರಾಧ ಕೃತ್ಯದ ಸಂತ್ರಸ್ತರನ್ನು ಅವರ ಜಾತಿ, ಪ್ರದೇಶ, ಲಿಂಗ ಮತ್ತು ಜನಾಂಗದ ಆಧಾರದಲ್ಲಿ ಗುರುತಿಸುವುದು ಸಲ್ಲ. ಇದು ಪ್ರತಿಗಾಮಿ ನಡೆಯಾಗಲಿದೆ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ತ್ರಿಪುರಾದ ಅಂಜೆಲ್ ಚಕ್ಮಾ ಅವರನ್ನು ಕಳೆದ ವರ್ಷ ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಹತ್ಯೆ ಮಾಡಿರುವುದಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ. ಜನಾಂಗೀಯ ವಿಚಾರವಾಗಿ ಚಕ್ಮಾ ಅವರನ್ನು ಹತ್ಯೆ ಮಾಡಲಾಗಿದ ಎಂದು ಆರೋಪಿಸಲಾಗಿದೆ.

ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಎಂ.ಪಾಂಚೋಲಿ ಅವರು ಇದ್ದ ಪೀಠವು, ಈ ವಿಚಾರವನ್ನು ಅಟಾರ್ನಿ ಜನರಲ್ ಮೂಲಕ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಪ್ರಸ್ತಾಪಿಸುವಂತೆ ಅರ್ಜಿದಾರರಿಗೆ ಸೂಚಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ಅರ್ಜಿದಾರ ಹಾಗೂ ವಕೀಲ ಅನೂಪ್ ಪ್ರಕಾಶ್ ಅವಸ್ಥಿ,'ಈ ವಿಚಾರವನ್ನು ಸಂಸತ್‌ನಲ್ಲಿ ಪ್ರಸ್ತಾಪಿಸಲಾಗಿತ್ತು. ಆದರೆ, ಜಾತಿ, ಪ್ರದೇಶ ಮತ್ತು ಜನಾಂಗದ ಆಧಾರದಲ್ಲಿ ಸಂತ್ರಸ್ತರನ್ನು ಗುರುತಿಸುವುದನ್ನು ತಡೆಯುವುದಕ್ಕೆ ಸೂಕ್ತ ವ್ಯವಸ್ಥೆ ರೂಪಿಸಲು ಸಂಸದರು ಒಲವು ತೋರಲಿಲ್ಲ' ಎಂದು ಪೀಠಕ್ಕೆ ತಿಳಿಸಿದರು.

'ಸಂತ್ರಸ್ತರ ಗುರುತಿನ ಆಧಾರದ ಮೇಲೆ ತಾರತಮ್ಯ ಮಾಡುವುದನ್ನು ತಡೆಯಲು ಹಾಗೂ ಈ ಕುರಿತ ದೂರುಗಳನ್ನು ನಿವಾರಿಸುವ ಸಂಬಂಧ ಎಲ್ಲ ರಾಜ್ಯಗಳಲ್ಲಿ ನೋಡಲ್ ಏಜೆನ್ಸಿ ಸ್ಥಾಪಿಸುವಂತೆ ನಿರ್ದೇಶನ ನೀಡಬೇಕು' ಎಂದು ಅವಸ್ಥಿ ಪೀಠಕ್ಕೆ ಮನವಿ ಮಾಡಿದರು.

'ಇಂತಹ ಏಜೆನ್ಸಿ ಅಥವಾ ವ್ಯವಸ್ಥೆಯನ್ನು ಸ್ಥಾಪಿಸುವುದು ಪರಿಹಾರವಾಗದು. ಪ್ರಾದೇಶಿಕ ಗುರುತಿನ ಆಧಾರದ ಮೇಲೆ ಮತ್ತಷ್ಟು ತಾರತಮ್ಯಗಳಿಗೆ ಇದು ದಾರಿ ಮಾಡಿಕೊಡಲಿದೆ. ಯಾವುದೇ ಅಪರಾಧ ಕೃತ್ಯವಿರಲಿ, ಅದರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು' ಎಂದು ಪೀಠ ಹೇಳಿತು.

'ಸುಪ್ರೀಂ' ಸುದ್ದಿಗಳು

'ನಿರ್ಬಂಧಗಳ ಕಾರಣ ಭಾರತಕ್ಕೆ ಮಲ್ಯ ವಾಪಸಾಗಲ್ಲ'

ಪ್ರಜಾವಾಣಿ ವಾರ್ತೆ

ಮುಂಬೈ: 'ದೇಶ ತೊರೆದಿರುವ ಉದ್ಯಮಿ ವಿಜಯ ಮಲ್ಯ ವಿರುದ್ಧ ಬ್ರಿಟನ್ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದು, ದೇಶ ತೊರೆಯದಂತೆ ನಿರ್ಬಂಧ ಹೇರಲಾಗಿದೆ. ಹೀಗಾಗಿ ನನ್ನ ಕಕ್ಷಿದಾರ ಭಾರತಕ್ಕೆ ಮರಳುವ ಕುರಿತು ನಿರ್ದಿಷ್ಟ ದಿನಾಂಕ ನಿಗದಿ ಮಾಡುವುದು ಸಾಧ್ಯ ಇಲ್ಲ' ಎಂದು ಮಲ್ಯ ಪರ ವಕೀಲರು ಬಾಂಬೆ ಹೈಕೋರ್ಟ್‌ಗೆ ಬುಧವಾರ ಹೇಳಿದರು.

'ತಮ್ಮ ವಿರುದ್ಧದ ಕಾನೂನು ಪ್ರಕ್ರಿಯೆಯನ್ನು ಲಂಡನ್‌ನಲ್ಲಿಯೇ ಕುಳಿತು ಪ್ರಶ್ನಿಸುವ ಬದಲು ಮಲ್ಯ ಅವರು ಭಾರತಕ್ಕೆ ಮರಳಬೇಕು' ಎಂದು ಹೈಕೋರ್ಟ್ ಇತ್ತೀಚೆಗೆ ಹೇಳಿತ್ತು. ಇದಕ್ಕೆ, ಮಲ್ಯ ಪರ ವಕೀಲರು ನ್ಯಾಯಾಲಯಕ್ಕೆ ಹೀಗೆ ಪ್ರತಿಕ್ರಿಯಿಸಿದ್ದಾರೆ.

'ಕೇಂದ್ರ ಸರ್ಕಾರದ ಕ್ರಮದಿಂದಾಗಿ ಮಲ್ಯ ಅವರ ಪಾಸ್‌ಪೋರ್ಟ್ ರದ್ದುಗೊಂಡಿದೆ. ಈ ಕಾರಣಕ್ಕೆ ಅವರು ಯಾವಾಗ ಭಾರತಕ್ಕೆ ಮರಳುತ್ತಾರೆ ಎಂದು ಹೇಳಲಾಗದು' ಎಂದು ಮಲ್ಯ ಪರ ವಕೀಲ ಅಮಿತ್ ದೇಸಾಯಿ ಹೇಳಿದರು.

ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಹಾಗೂ ನ್ಯಾಯಮೂರ್ತಿ ಗೌತಮ್ ಅಂಖಡ್ ಅವರ ಪೀಠ, 'ನೀವು ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದೀರಿ. ನಿಮ್ಮ ಕಕ್ಷಿದಾರ ನ್ಯಾಯಾಲಯಕ್ಕೆ ಹಾಜರಾಗುವುದಕ್ಕೆ ಮತ್ತೊಂದು ಅವಕಾಶ ನೀಡುತ್ತೇವೆ' ಎಂದು ಹೇಳಿ, ವಿಚಾರಣೆಯನ್ನು ಮುಂದೂಡಿತು.

ಮಮತಾ ಹಸ್ತಕ್ಷೇಪ: ವಿಚಾರಣೆ ಮಾರ್ಚ್ 18ಕ್ಕೆ

'ಐ-ಪ್ಯಾಕ್' ಕಚೇರಿಯಲ್ಲಿ ಜನವರಿ 8ರಂದು ಶೋಧ ನಡೆಸುವ ವೇಳೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಸ್ತಕ್ಷೇಪ ಮಾಡಿದ್ದರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಮಾರ್ಚ್ 18ಕ್ಕೆ ಮುಂದೂಡಿದೆ.

'ಇ.ಡಿ ಶೋಧದ ವೇಳೆ ಮಮತಾ ಬ್ಯಾನರ್ಜಿ ಅಡ್ಡಿಪಡಿಸಿದ್ದು ಅತಿ ಗಂಭೀರ ವಿಷಯ ಎಂದು ಸುಪ್ರೀಂ ಕೋರ್ಟ್ ಜನವರಿ 15ರಂದು ಹೇಳಿತ್ತು. ಇದರ ಬೆನ್ನಲ್ಲೇ, ಇ.ಡಿ ಅಧಿಕಾರಿಗಳ ವಿರುದ್ಧ ಪಶ್ಚಿಮ ಬಂಗಾಳ ಸರ್ಕಾರ ದಾಖಲಿಸಿದ್ದ ಎಫ್‌ಐಆರ್‌ಗೂ ನ್ಯಾಯಾಲಯವು ತಡೆ ನೀಡಿತ್ತು.

ಬುಧವಾರ ವಿಚಾರಣೆ ವೇಳೆ 'ಲೋಪ ಸರಿಪಡಿಸಿಕೊಂಡು ಇಂದೇ ಪ್ರತ್ಯುತ್ತರ ಸಲ್ಲಿಸಲಾಗುವುದು' ಎಂದು ಸರ್ಕಾರದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಪೀಠದ ಗಮಕ್ಕೆ ತಂದರು. ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ, ಕೆ.ವಿ ವಿಶ್ವನಾಥನ್ ಅವರು ವಿಚಾರಣೆಯನ್ನು ಮುಂದೂಡಿದರು.

ಐ-ಪ್ಯಾಕ್ ಕಚೇರಿ ಆವರಣದಲ್ಲಿ ದಾಳಿಗೆ ಅಡ್ಡಿಪಡಿಸಿದ ಆರೋಪದ ಮೇಲೆ ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಸರ್ಕಾರ, ಡಿಜಿಪಿ ರಾಜೀವ್ ಕುಮಾರ್ ಮತ್ತು ಇತರೆ ಅಧಿಕಾರಿಗಳ ವಿರುದ್ಧ ಸಿಬಿಐ ತನಿಖೆಗೆ ಇ.ಡಿ ಮನವಿ ಮಾಡಿದ್ದು, ಆರೋಪಿಗಳಿಗೆ ಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಐ-ಪ್ಯಾಕ್ ಕಚೇರಿ ಮೇಲೆ ಇ.ಡಿ ದಾಳಿಯ ಸಂದರ್ಭದ ಸಿ.ಸಿ.ಟಿ.ವಿ. ದೃಶ್ಯಾವಳಿಗಳನ್ನು ಸಂರಕ್ಷಿಸಿ ಇಡುವಂತೆಯೂ ಸುಪ್ರೀಂ ಕೋರ್ಟ್ ಪಶ್ಚಿಮ ಬಂಗಾಳ ಪೊಲೀಸರಿಗೆ ಸೂಚನೆ ನೀಡಿದೆ.

'ಪೈಜಾಮಾದ ದಾರ ಎಳೆಯುವುದೂ ಅತ್ಯಾಚಾರ ಯತ್ನಕ್ಕೆ ಸಮ'

ಸಂತ್ರಸ್ತೆಯ ಸ್ತನಗಳನ್ನು ಮುಟ್ಟುವುದು ಮತ್ತು ಪೈಜಾಮಾದ ದಾರವನ್ನು ಎಳೆಯುವುದು ಕೂಡ 'ಅತ್ಯಾಚಾರ ಯತ್ನ'ಕ್ಕೆ ಸಮಾನವಾದ ಕೃತ್ಯ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಈ ಮೂಲಕ, 'ಇಂಥ ವರ್ತನೆಯು ಅತ್ಯಾಚಾರ ಅಥವಾ ಅತ್ಯಾಚಾರ ಯತ್ನದ ಅಪರಾಧ ಆಗುವುದಿಲ್ಲ. ಅದು ಕೇವಲ ಅತ್ಯಾಚಾರಕ್ಕೆ ನಡೆಸಿದ ಸಿದ್ಧತೆ' ಎಂದಿದ್ದ ಅಲಹಾಬಾದ್ ಹೈಕೋರ್ಟ್‌ನ ವಿವಾದಾತ್ಮಕ ಆದೇಶವನ್ನು ರದ್ದು ಮಾಡಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ಎನ್.ವಿ.ಅಂಜಾರಿಯಾ ಅವರನ್ನು ಒಳಗೊಂಡ ನ್ಯಾಯಪೀಠವು, 'ಅಲಹಾಬಾದ್ ಹೈಕೋರ್ಟ್ ಆದೇಶದಲ್ಲಿ ನ್ಯಾಯತತ್ತ್ವವು ಸಮರ್ಪಕವಾಗಿ ಅನುಷ್ಠಾನವಾಗಿಲ್ಲ. ಅದು ದೋಷಪೂರಿತವಾಗಿದೆ. ಹೀಗಾಗಿ ಇಂಥ ಅಪ್ರಸ್ತುತ ಆದೇಶವನ್ನು ತಳ್ಳಿಹಾಕುವುದು ಸುಪ್ರೀಂ ಕೋರ್ಟ್ ಜವಾಬ್ದಾರಿ' ಎಂದು ಪ್ರತಿಪಾದಿಸಿದೆ.

ಬಳಿಕ ಪ್ರಕರಣದ ಇಬ್ಬರು ಆರೋಪಿಗಳ ವಿರುದ್ಧ ಪೋಕ್ಸೊ ಕಾಯ್ದೆಯಡಿಯಲ್ಲಿ ಅತ್ಯಾಚಾರ ಯತ್ನ ಪ್ರಕರಣವನ್ನು ಪುನಃ ದಾಖಲಿಸಲು ಸೂಚಿಸಿತು. ಕೃತ್ಯವು ಅತ್ಯಾಚಾರಕ್ಕೆ ನಡೆಸಿದ ಸಿದ್ಧತೆಯಷ್ಟೇ ಎಂದು ಹೇಳಿದ ಅಲಹಾಬಾದ್ ಹೈಕೋರ್ಟ್ ನಿರ್ಣಯವನ್ನು ಒಪ್ಪಲಾಗದು ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಚೀತಾ ಗಾಮಿನಿ ಮೂರು ಮರಿಗಳೊಂದಿಗೆ ಇದೆ – ಪಿಟಿಐ ಚಿತ್ರ

'ಗಾಮಿನಿ'ಗೆ 3 ಮರಿ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾದಿಂದ ತಂದಿದ್ದ ಚೀತಾ ಗಾಮಿನಿ, ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಮೂರು ಮರಿಗಳಿಗೆ ಜನ್ಮ ನೀಡಿದೆ. ಆ ಮೂಲಕ ಭಾರತದಲ್ಲಿರುವ ಒಟ್ಟಾರೆ ಚೀತಾಗಳ ಸಂಖ್ಯೆ 38ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಬುಧವಾರ ತಿಳಿಸಿದ್ದಾರೆ.

'ಚೀತಾಗಳನ್ನು ದಕ್ಷಿಣ ಆಫ್ರಿಕಾದಿಂದ ತಂದ ಮೂರು ವರ್ಷಗಳ ಬಳಿಕ ಕುನೊ ಉದ್ಯಾನದಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ. ಇದು ಕುನೊ ಮತ್ತು ಭಾರತಕ್ಕೆ ಹೆಮ್ಮೆಯ ಕ್ಷಣ. ಗಾಮಿನಿ ಮತ್ತು ಅದರ ಮೂರು ಮರಿಗಳು ಆರೋಗ್ಯಕರವಾಗಿ ಬೆಳೆದು, ದೇಶದ ಚೀತಾ ಸಂತತಿಯ ಬೆಳವಣಿಗೆ ಗತಿಯನ್ನು ವೇಗಗೊಳಿಸಲಿ' ಎಂದು ಯಾದವ್ ಅವರು ತಿಳಿಸಿದ್ದಾರೆ.

'ಭಾರತದಲ್ಲಿಯೇ ಜನಿಸಿದ ಚೀತಾಗಳ ಸಂಖ್ಯೆ 27ಕ್ಕೆ ಏರಿಕೆಯಾಗಿದೆ. ಇದು ಭಾರತದಲ್ಲಿ ಚೀತಾಗಳ ಸಂರಕ್ಷಣಾ ಪ್ರಯತ್ನದ ಯಶಸ್ಸಿನ ಸಂಕೇತವಾಗಿದೆ' ಎಂದು ಅವರು ಹೇಳಿದರು.

ಸಂಕ್ಷಿಪ್ತ ಸುದ್ದಿ

ಕಟ್ರಾ: ಶಂಕರಾಚಾರ್ಯ ದೇಗುಲಕ್ಕೆ ಶಂಕುಸ್ಥಾಪನೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಟ್ರಾದಲ್ಲಿ ನಿರ್ಮಾಣಗೊಳ್ಳಲಿರುವ ಆದಿ ಶಂಕರಾಚಾರ್ಯ ದೇಗುಲಕ್ಕೆ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಬುಧವಾರ ಶಂಕುಸ್ಥಾಪನೆ ನೆರವೇರಿಸಿದರು.

ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ಸೇರಿದಂತೆ ಕಟ್ರಾದ ಅಭಿವೃದ್ಧಿಗೆ ಅಗತ್ಯವಾದ ಹಲವು ಯೋಜನೆಗಳನ್ನು ಇದೇ ವೇಳೆ ಘೋಷಣೆ ಮಾಡಿದರು. '1967ರಲ್ಲಿ ರೂಪಿಸಲಾಗಿದ್ದ ದೇಗುಲ ನಿರ್ಮಾಣ ಯೋಜನೆಯು ಆರು ದಶಕಗಳ ಬಳಿಕ ಕಾರ್ಯರೂಪಕ್ಕೆ ಬರುತ್ತಿದೆ' ಎಂದು ಅಧಿಕಾರಿಗಳು ತಿಳಿಸಿದರು.

'ರಸ್ತೆ ಸಂಪರ್ಕವನ್ನು ಕೂಡ ಸುಧಾರಿಸಲಾಗುವುದು. ಭೂಮಿಕಾ ದೇಗುಲದ ಪುನರ್‌ನಿರ್ಮಾಣ ಮತ್ತು ಸುಧಾರಿತ ವ್ಯವಸ್ಥೆಗಳನ್ನು ಕಲ್ಪಿಸುವ ಪ್ರಸ್ತಾವವೂ ಇದೆ' ಎಂದು ಸಿನ್ಹಾ ಅವರುಹೇಳಿದರು.

'ದೇಶದಾದ್ಯಂತ ಇರುವ ಪ್ರಮುಖ ದೇವಿ ದೇಗುಲಗಳಿಗೆ ಸಂಬಂಧಿಸಿದ ವಸ್ತುಗಳ ಸಂಗ್ರಹಾಲಯ ನಿರ್ಮಿಸಲಾಗುವುದು. ಬೆಳಕು ಮತ್ತು ಧ್ವನಿ ತಂತ್ರಜ್ಞಾನದ ಮೂಲಕ ವಿಶೇಷ ಅನುಭವ ನೀಡುವ ವ್ಯವಸ್ಥೆಯನ್ನು ಮಾಡಲಾಗುವುದು' ಎಂದರು.

'ಭೋಲೇನಾಥರ ದರ್ಶನಕ್ಕಾಗಿ ಶಿವ ಖೋರಿಗೆ ತೆರಳುವ ಭಕ್ತರಿಗಾಗಿ ಕಟ್ರಾದಿಂದ ಹೆಲಿಕಾಪ್ಟರ್ ವ್ಯವಸ್ಥೆಯನ್ನು ಕಲ್ಪಿಸಲಾಗುವುದು' ಎಂದು ಹೇಳಿದರು.

ಶಸ್ತ್ರಚಿಕಿತ್ಸೆ: ದೃಷ್ಟಿ ಕಳೆದುಕೊಂಡ 10 ಮಂದಿ

ಲಖನೌ: ಉತ್ತರ ಪ್ರದೇಶದ ಗೋರಖಪುರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದವರ ಪೈಕಿ 10 ಮಂದಿ ದೃಷ್ಟಿಯನ್ನೇ ಕಳೆದುಕೊಂಡಿದ್ದಾರೆ. ಶಸ್ತ್ರಚಿಕಿತ್ಸೆಯ ಬಳಿಕ ರೋಗಿಗಳಲ್ಲಿ ಸೋಂಕು ಪತ್ತೆಯಾಗಿದ್ದು, ಅದರಿಂದಲೇ ದೃಷ್ಟಿ ಕಳೆದುಕೊಳ್ಳುವಂತಾಗಿದೆ ಎಂದು ಮೂಲಗಳು ತಿಳಿಸಿವೆ.

ಖಾಸಗಿ ಆಸ್ಪತ್ರೆಯೊಂದು ಇತ್ತೀಚೆಗೆ ಆಯೋಜಿಸಿದ್ದ ಕಣ್ಣು ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ಶಿಬಿರದಲ್ಲಿ ಸುಮಾರು 30 ಮಂದಿ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದರು.

ಈ ಪೈಕಿ ಹಲವರಿಗೆ ಶಸ್ತ್ರಚಿಕಿತ್ಸೆಯ ಬಳಿಕ ಕಣ್ಣು ನೋವು, ಕೀವು ಕಾಣಿಸಿಕೊಂಡಿದೆ. ನಂತರ ರೋಗಿಗಳು ಆಸ್ಪತ್ರೆಗೆ ಧಾವಿಸಿದ್ದು, ಅವರನ್ನು ಲಖನೌ ಹಾಗೂ ವಾರಾಣಸಿಗಳಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ.

ಶಸ್ತ್ರಚಿಕಿತ್ಸೆಗೆ ಬಳಸಿದ್ದ ಉಪಕರಣಗಳನ್ನು ಸೂಕ್ತವಾಗಿ ಶುದ್ಧೀಕರಿಸದ ಕಾರಣದಿಂದ ಶಸ್ತ್ರಚಿಕಿತ್ಸೆಯ ನಂತರ ರೋಗಿಗಳಲ್ಲಿ ಸೋಂಕು ಪತ್ತೆಯಾಗಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ತನಿಖೆಗೆ ಆದೇಶಿಸಲಾಗಿದೆ ಎಂದು ಗೋರಖಪುರದ ಮುಖ್ಯ ವೈದ್ಯಾಧಿಕಾರಿ (ಸಿಎಂಒ) ಡಾ. ರಾಜೇಶ್ ಝಾ ಹೇಳಿದ್ದಾರೆ. ಜತೆಗೆ ಶಸ್ತ್ರ ಚಿಕಿತ್ಸೆ ನಡೆದ ಘಟಕಕ್ಕೆ ಬೀಗ ಹಾಕಲಾಗಿದೆ.

ಈಗಾಗಲೇ 10 ಮಂದಿ ದೃಷ್ಟಿ ಕಳೆದುಕೊಂಡಿದ್ದು, ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದ ಇನ್ನೂ ಐದು ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ. ಹೀಗಾಗಿ ದೃಷ್ಟಿ ಕಳೆದುಕೊಂಡವರ ಸಂಖ್ಯೆ ಹೆಚ್ಚಾಗುವ ಆತಂಕವಿದೆ ಎಂದು ಮೂಲಗಳು ತಿಳಿಸಿವೆ.

'ಭಾರತದಿಂದ ಮಾಲ್ದೀವ್ಸ್‌ಗೆ ನೆರವು'

ಮಾಲೆ (ಪಿಟಿಐ): ಎರಡು ಹವಳ ದ್ವೀಪಗಳ ನಡುವೆ ಸಾರಿಗೆ ಸಂಪರ್ಕ ಪ್ರಾರಂಭಿಸಲು ಅಗತ್ಯವಿರುವ 12 ಹಡಗುಗಳ ಪೈಕಿ ಭಾರತವು ಮೊದಲನೇ ಹೈಸ್ಪೀಡ್ ಹಡಗು ನಿರ್ಮಾಣಕ್ಕೆ ಮಾಲ್ದೀವ್ಸ್‌ಗೆ ಸಹಾಯ ಮಾಡಿದೆ ಎಂದು ಸರ್ಕಾರ ಒಡೆತನದ ಪಿಎಸ್‌ಎಂ ನ್ಯೂಸ್ ವರದಿ ಮಾಡಿದೆ.

ಅಗತ್ಯ ಸಾರ್ವಜನಿಕ ಸೇವೆಗಳು ಮತ್ತು ಯೋಜನೆಗಳನ್ನು ಸ್ಥಾಪಿಸುವಲ್ಲಿ ಮಾಲ್ದೀವ್ಸ್‌ಗೆ ಬೆಂಬಲ ನೀಡುವ ಬದ್ಧತೆಯನ್ನು ಭಾರತ ಪುನರುಚ್ಚರಿಸಿದೆ ಎಂದು ಮಾಲ್ದೀವ್ಸ್‌ನಲ್ಲಿ ಭಾರತೀಯ ಹೈಕಮಿಷನರ್ ಜಿ.ಬಾಲಸುಬ್ರಮಣಿಯನ್ ಅವರು ತಿಳಿಸಿದ್ದಾರೆ ಎಂದು ಅದು ಹೇಳಿದೆ.

ಫಾಫು ಮತ್ತು ಧಾಲು ಹವಳ ದ್ವೀಪಗಳಿಗೆ ಜಲ ಸಂಪರ್ಕ ಕಲ್ಪಿಸುವ ಸೇವೆಗೆ ಚಾಲನೆ ನೀಡಿ ಮಾತನಾಡಿದ ಬಾಲಸುಬ್ರಮಣಿಯನ್ ಅವರು, 'ಉಭಯ ದೇಶಗಳ ನಡುವಿನ ಒಪ್ಪಂದದ ಭಾಗವಾಗಿ ಭಾರತವು ಮಾಲ್ದೀವ್ಸ್‌ಗೆ 12 ಹೈಸ್ಪೀಡ್ ಹಡಗುಗಳನ್ನು ಒದಗಿಸುತ್ತದೆ' ಎಂದು ತಿಳಿಸಿದರು.

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಟೆಂಡರ್ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದ ಹಾಗೂ ಪೂರ್ವಾರ್ಹತೆ ಪಡೆಯಲಿಚ್ಛಿಸುವ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆಪಿಪಿ ಪೋರ್ಟಲ್) ಮುಖಾಂತರ ಟೆಂಡರ್ ಕರೆಯಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು ಮತ್ತು ಸ್ಥಳ	ವರ್ಕ್ ಇಂಡೆಂಟ್ ಮತ್ತು ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)
1.	ನಿವೇಶನ ಮತ್ತು ಸೇವೆಗಳು ಯೋಜನೆ, ಬ್ಲಾಕ್–ಎ ಚುಂಚನಕುಪ್ಪೆ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.	Tender Reference No. KHB/2025-26/OW/ WORK_INDENT 706 & IFT No. 149/2025-26 Date: 06.02.2026	18,55,82,260/-
2.	ನಿವೇಶನ ಮತ್ತು ಸೇವೆಗಳು ಯೋಜನೆ, ಬ್ಲಾಕ್–ಬಿ ಚುಂಚನಕುಪ್ಪೆ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.	Tender Reference No. KHB/2025-26/OW/ WORK_INDENT 707 & IFT No. 150/2025-26 Date: 06.02.2026	30,38,71,920/-
3.	ನಿವೇಶನ ಮತ್ತು ಸೇವೆಗಳು ಯೋಜನೆ, ಬ್ಲಾಕ್–ಸಿ ಚುಂಚನಕುಪ್ಪೆ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.	Tender Reference No. KHB/2025-26/OW/ WORK_INDENT 708 & IFT No. 151/2025-26 Date: 06.02.2026	17,94,29,649/-

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 07–03–2026 ಸಂಜೆ 4.00 ಗಂಟೆಗೆ

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ:
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.
ದೂರವಾಣಿ: 080–22273511 Website: https://kppp.karnataka.gov.in

DIPR/CP/YC/5702/2025-26
ಸಹಿ/– ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
#2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560 009.
ದೂರವಾಣಿ ಸಂಖ್ಯೆ: 080–22265383., Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–83/2082/2025–26 ದಿನಾಂಕ:18.02.2026

ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಅನುಭವ ಹೊಂದಿರುವ ಕೆಸಿಇಐಯಲ್ಲಿ ನೋಂದಾಯಿತ ದರ್ಜೆ–2 ಮತ್ತು ಮೇಲ್ಪಟ್ಟ (ಎಲೆಕ್ಟ್ರಿಕಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಬೆಂಗಳೂರು ಜಿಲ್ಲೆ, ಕುಂಬಳಗೂಡು 1ನೇ ಮತ್ತು 2ನೇ ಹಂತ, ಅತ್ತಿಬೆಲೆ ಮತ್ತು ವೀರಸಂದ್ರ ಕೈಗಾರಿಕಾ ಪ್ರದೇಶಗಳಲ್ಲಿ ಬೀದಿ ದೀಪಗಳ ದುರಸ್ತಿ, ಕಾರ್ಯಾಚರಣೆ ಮತ್ತು ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ.

ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **06.03.2026, ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1

ವಾಸಾಸಂಇ/ವಾಪ್ರ/ಜಿಎ/5720/2025–26

ಕರ್ನಾಟಕ ಸರಕಾರ
ಜಿಲ್ಲಾ ಸರ್ಜನರ ಕಚೇರಿ, ಜಿಲ್ಲಾ ಆಸ್ಪತ್ರೆ, ಉಡುಪಿ–576101
ಕ್ರ.ಸಂ.ಸವಿ:05 ರಿಂದ 16/2025–26 ದಿನಾಂಕ: 16.02.2026

ಟೆಂಡರು ಅಧಿಸೂಚನೆ

ವಿಷಯ: ಜಿಲ್ಲಾ ಆಸ್ಪತ್ರೆ ಹಾಗೂ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ವಿವಿಧ ಟೆಂಡರುಗಳ ಅಧಿಸೂಚನೆ.
ಜಿಲ್ಲಾ ಆಸ್ಪತ್ರೆ ಹಾಗೂ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ಅವಶ್ಯಕತೆ ಇರುವ ಈ ಕೆಳಗಿನ ಟೆಂಡರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್ ಕ್ರಮಾಂಕ ಹಾಗೂ ದಿನಾಂಕ	ಟೆಂಡರ್ ವಿವರ	ಅಂದಾಜು ಮೊತ್ತ ರೂ. ಗಳಲ್ಲಿ	ಇಎಂಡಿ ಮೊತ್ತ ರೂ. ಗಳಲ್ಲಿ	ಟೆಂಡರ್ ಕೊನೆ ದಿನಾಂಕ ಮತ್ತು ಸಮಯ	ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ
1	ಸವಿ/05/25–26. 16.02.2026	ಲೇಖನ ಸಾಮಗ್ರಿ	25–ಲಕ್ಷ ಮಿತಿಯೊಳಗೆ	25,000	09.03.2026 4:30PM	11.03.2026 10:00AM
2	ಸವಿ/06/25–26. 16.02.2026	ಅಸ್ಪತ್ರೆ ಉಪಕರಣಗಳ ವಾರ್ಷಿಕ ನಿರ್ವಹಣೆ	25–ಲಕ್ಷ ಮಿತಿಯೊಳಗೆ	25,000	09.03.2026 4:30PM	11.03.2026 10:00AM
3	ಸವಿ/07/25–26. 16.02.2026	ಪಥ್ಯಾಹಾರ	50–ಲಕ್ಷ ಮಿತಿಯೊಳಗೆ	1,50,000/-	09.03.2026 4:30PM	11.03.2026 10:00AM
4	ಸವಿ/08/25–26. 16.02.2026	ಔಷಧಿ	50–ಲಕ್ಷ ಮಿತಿಯೊಳಗೆ	1,00,000/-	09.03.2026 4:30PM	11.03.2026 10:00AM
5	ಸವಿ/09/25–26. 16.02.2026	ಆಸ್ಪತ್ರೆಯ ಪರಿಕರ	50–ಲಕ್ಷ ಮಿತಿಯೊಳಗೆ	1,00,000/-	09.03.2026 4:30PM	11.03.2026 10:00AM
6	ಸವಿ/10/25–26. 16.02.2026	ರಕ್ತನಿಧಿ ರಾಸಾಯನಿಕ ಮತ್ತು ಪರಿಕರ	50–ಲಕ್ಷ ಮಿತಿಯೊಳಗೆ	1,00,000/-	09.03.2026 4:30PM	11.03.2026 10:00AM
7	ಸವಿ/11/25–26. 16.02.2026	ಪ್ರಯೋಗಶಾಲಾ ರಾಸಾಯನಿಕ ಮತ್ತು ಪರಿಕರ	50–ಲಕ್ಷ ಮಿತಿಯೊಳಗೆ	1,00,000/-	09.03.2026 4:30PM	11.03.2026 10:00AM
8	ಸವಿ/12/25–26. 16.02.2026	ವೈದ್ಯಕೀಯ ನಮೂನೆಗಳ ಮುದ್ರಣ	25–ಲಕ್ಷ ಮಿತಿಯೊಳಗೆ	25,000/-	09.03.2026 4:30PM	11.03.2026 10:00AM
9	ಸವಿ/13/25–26. 16.02.2026	ಟ್ಯಾಂಕರ್ ನೀರು	25–ಲಕ್ಷ ಮಿತಿಯೊಳಗೆ	25,000/-	09.03.2026 4:30PM	11.03.2026 10:00AM
10	ಸವಿ/14/25–26. 16.02.2026	ಆಕ್ಸಿಜನ್ ಪೂರೈಕೆ	25–ಲಕ್ಷ ಮಿತಿಯೊಳಗೆ	25,000/-	09.03.2026 4:30PM	11.03.2026 10:00AM
11	ಸವಿ/15/25–26. 16.02.2026	ನಾನ್–ಕ್ಲಿನಿಕಲ್, ಗ್ರೂಪ್–ಡಿ ಬಾಹ್ಯಮೂಲ ಸೇವೆಗಳು	75–ಲಕ್ಷ ಮಿತಿಯೊಳಗೆ	2,50,000/-	09.03.2026 4:30PM	11.03.2026 10:00AM
12	ಸವಿ/16/25–26. 16.02.2026	ಆರ್ಥೋ ಪರಿಕರ	50–ಲಕ್ಷ ಮಿತಿಯೊಳಗೆ	1,00,000/-	09.03.2026 4:30PM	11.03.2026 10:00AM

ಟೆಂಡರಿನ ಶರ್ತ ಮತ್ತಿತರ ವಿವರಗಳನ್ನು ದಿನಾಂಕ: 16.02.2026 ರಿಂದ ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಜಿಲ್ಲಾ ಸರ್ಜನ್,
ಜಿಲ್ಲಾ ಆಸ್ಪತ್ರೆ, ಉಡುಪಿ.

DIPR/UDP/KSMCA/725/25-26 dt. 18.02.2026

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಕರುಣೆಯನ್ನು ತೋರಿಸಿದವನೂ, ಅದನ್ನು ಪಡೆದವನೂ ಧನ್ಯರು.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಸ್ಮಾರ್ಟ್ ಕಾರ್ಡ್ ಹೆಸರಿನಲ್ಲಿ ಕುಚೇಷ್ಟೆ ಶಕ್ತಿ ಯೋಜನೆ ದುರ್ಬಲಗೊಳಿಸಬೇಡಿ

ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ಕಲ್ಪಿಸುವ ‘ಶಕ್ತಿ’ ಯೋಜನೆಯು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಅತ್ಯಂತ ಯಶಸ್ವಿ ಯೋಜನೆಗಳಲ್ಲಿ ಒಂದು. ಸಾಮಾಜಿಕ ಪ್ರಯೋಜನದ ಈ ಆರ್ಥಿಕ ಯೋಜನೆಯಿಂದಾಗಿ ಮಹಿಳೆಯರ ಆದಾಯ ಮತ್ತು ಉಳಿತಾಯ ಹೆಚ್ಚಾಗಿರುವುದನ್ನು ಹಲವು ಅಧ್ಯಯನಗಳು ಸ್ಪಷ್ಟಪಡಿಸಿವೆ. ‘ಶಕ್ತಿ’ ಯೋಜನೆಯ ಪ್ರಯೋಜನ ಪಡೆಯಲು ಆಧಾರ್ ಚೀಟಿ ತೋರಿಸಿ, ರಾಜ್ಯದ ಪ್ರಜೆ ಎಂಬುದನ್ನು ನಿರೂಪಿಸಿದರೆ ಸಾಕು ಎಂಬ ನಿಯಮ ಇದೆ. ಅದರಂತೆ ಮಹಿಳೆಯರೆಲ್ಲ ಆಧಾರ್ ಚೀಟಿ ತೋರಿಸಿ, ಉಚಿತ ಪ್ರಯಾಣದ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಆದರೆ, ಸರ್ಕಾರ ಈಗ ‘ಶಕ್ತಿ’ ಯೋಜನೆಯ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲು ಮುಂದಾಗಿದೆ. ಈ ಸ್ಮಾರ್ಟ್ ಕಾರ್ಡ್‌ನ ಅಗತ್ಯ ಸರ್ಕಾರಕ್ಕೆ ಏಕೆ ಕಾಡಿದೆಯೋ ಗೊತ್ತಿಲ್ಲ. ಹಣದ ಪೋಲು ಮತ್ತು ಫಲಾನುಭವಿಗಳ ಶೋಷಣೆಗೆ ಕಾರಣವಾಗುವ ತೀರ್ಮಾನವಿದು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ‘ಶಕ್ತಿ’ ಸ್ಮಾರ್ಟ್ ಕಾರ್ಡ್, ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್ (ಎನ್‌ಸಿಎಂಸಿ) ಕೂಡಾ ಆಗಿರುತ್ತದೆ. ಇದರಲ್ಲಿ ಪ್ರಯಾಣಿಕರ ಮಾಹಿತಿ ಇರುವ ಚಿಪ್ ಇರುತ್ತದೆ. ಮೆಟ್ರೊ ಸಹಿತ ಬೇರೆ ಸಾರಿಗೆಗಳಲ್ಲಿಯೂ ಬಳಕೆಯಾಗಲಿದೆ’ ಎಂದು ಯೋಜನೆಯ ಹೊಣೆಹೊತ್ತ ಅಧಿಕಾರಿಗಳು ಸಮರ್ಥನೆ ನೀಡಿದ್ದಾರೆ. ‘ಶಕ್ತಿ’ ಯೋಜನೆಯನ್ನು ನಗರ ಪ್ರದೇಶಗಳ ಮಹಿಳೆಯರು ಮಾತ್ರ ಬಳಸುತ್ತಿಲ್ಲ, ಬದಲಿಗೆ ರಾಜ್ಯದ ಪ್ರತಿಯೊಂದು ಹಳ್ಳಿಯ ಮಹಿಳೆಯರೂ ಬಳಸುತ್ತಿದ್ದಾರೆ. ಅವರಿಗೆ ಬೇಕಾಗಿರುವುದು ಹತ್ತಿರದ ಪಟ್ಟಣಕ್ಕೆ ಹೋಗಿ ವ್ಯಾಪಾರ ಮಾಡಲು ಇಲ್ಲವೇ ಕಾರ್ಮಿಕ ಬಲದಲ್ಲಿ ಭಾಗೀದಾರರಾಗಲು ಉಚಿತ ಪ್ರಯಾಣದ ಅವಕಾಶ. ಅದು ಈಗಾಗಲೇ ಸಿಗುತ್ತಿದೆ. ಸ್ಮಾರ್ಟ್ ಕಾರ್ಡ್‌ನಿಂದ ಅಂಥವರಿಗೇನೂ ಪ್ರಯೋಜನವಿಲ್ಲ. ಬೆಂಗಳೂರಿನಂತಹ ಮಹಾನಗರದಲ್ಲಿ ಮೆಟ್ರೊದಲ್ಲಿ ಪ್ರಯಾಣಿಸುವ ಮಹಿಳೆಯರು ತಮಗೆ ಅಗತ್ಯವಾದ ಮೊಬಿಲಿಟಿ ಕಾರ್ಡ್‌ಗಳನ್ನು ಖರೀದಿ ಮಾಡುತ್ತಾರೆ. ಬಸ್‌ನಲ್ಲಿ ಪ್ರಯಾಣ ಮಾಡುವವರಿಗೆ ಅಂತಹ ಕಾರ್ಡ್‌ನ ಅಗತ್ಯ ಏನಿದೆ?

‘ಶಕ್ತಿ’ ಯೋಜನೆಯ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್ ಪರಿಚಯಿಸಲು ಸರ್ಕಾರ ಮುಂದಾಗಿದೆ. ಇದು ಫಲಾನುಭವಿಗಳಿಗೆ ತೊಂದರೆ ಕೊಡುವ ಹಾಗೂ ತೆರಿಗೆ ಹಣ ಪೋಲು ಮಾಡುವ ಯೋಜನೆ.

‘ಶಕ್ತಿ’ ಯೋಜನೆಯಡಿ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ನಿತ್ಯ ಸರಾಸರಿ 75.68 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ಬೇರೆ ರಾಜ್ಯಗಳ ಮಹಿಳೆಯರು ಸಂಚರಿಸಿದರೆ ಗೊತ್ತಾಗುವುದಿಲ್ಲ; ಸ್ಮಾರ್ಟ್ ಕಾರ್ಡ್ ಬಂದರೆ ಇದಕ್ಕೆ ಕಡಿವಾಣ ಬೀಳಲಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ. ಆಧಾರ್ ಚೀಟಿಯಲ್ಲಿ ವಿಳಾಸ ಇದ್ದೇ ಇರುತ್ತದೆ. ಈಗ ಸರ್ಕಾರ ಕೊಡಲು ಉದ್ದೇಶಿಸಿರುವ ಸ್ಮಾರ್ಟ್ ಕಾರ್ಡ್‌ಗಳನ್ನು ಎಲೆಕ್ಟ್ರಾನಿಕ್ ಟಿಕೆಟ್ ಮಷಿನ್‌ನಲ್ಲಿ ಸ್ವೈಪ್ ಮಾಡುವ ಅವಧಿಯಲ್ಲಿಯೇ ವಿಳಾಸವನ್ನು ಪರಿಶೀಲಿಸಲು ಸಾಧ್ಯ. ಸ್ಮಾರ್ಟ್ ಕಾರ್ಡ್‌ಗಳಲ್ಲಿ ಫಲಾನುಭವಿಗಳ ವಯಸ್ಸು, ವಿಳಾಸ ಸಹಿತ ಎಲ್ಲ ಮಾಹಿತಿ ಇರುವುದರಿಂದ ‘ಶಕ್ತಿ’ ಯೋಜನೆಯಡಿ ಪ್ರಯಾಣಿಸಿದವರಲ್ಲಿ ಮಕ್ಕಳೆಷ್ಟು, ಹಿರಿಯರೆಷ್ಟು, ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಸಾಮಾನ್ಯ ವರ್ಗದ ಮಹಿಳೆಯರು ಎಷ್ಟು ಎಂಬ ಅಂಕಿ-ಅಂಶಗಳು ನಿಖರವಾಗಿ ಸಿಗಲಿವೆ ಎಂಬ ಸಮರ್ಥನೆಯನ್ನೂ ನೀಡಲಾಗುತ್ತಿದೆ. ರಾಜ್ಯದ ಮಹಿಳೆಯರಿಗೆ ಯಾವುದೇ ಜಾತಿ-ವರ್ಗ, ಶ್ರೇಣಿಯನ್ನು ನೋಡದೆ ಈ ಯೋಜನೆಯನ್ನು ಘೋಷಿಸಲಾಗಿದೆ. ಹೀಗಾಗಿ ಈ ಅಂಕಿ-ಅಂಶಗಳ ವಿಭಾಗೀಕರಣ ಅನಗತ್ಯವಾಗಿದೆ. ಸ್ಮಾರ್ಟ್ ಕಾರ್ಡ್‌ಗೆ ಸಂಬಂಧಿಸಿದ ಯಾವ ವಾದವೂ ಹುರುಳಿಲ್ಲ. ಸರ್ಕಾರದ ಖಜಾನೆಗೆ ಇದೊಂದು ಅನಗತ್ಯ ಖರ್ಚಿನ ಬಾಬತ್ತಾದರೆ, ಭ್ರಷ್ಟರಿಗೆ ದುಡ್ಡು ಮಾಡಲು ಮತ್ತೊಂದು ಅವಕಾಶ. ಗ್ರಾಮಾಂತರ ಪ್ರದೇಶಗಳ ಮಹಿಳೆಯರ ಪಾಲಿಗೆ ಎಲ್ಲಿ ಉಚಿತ ಪ್ರಯಾಣದ ಅವಕಾಶ ಕೈತಪ್ಪುವುದೋ ಎಂಬ ಆತಂಕವನ್ನೂ ಈ ಘೋಷಣೆ ತಂದೊಡ್ಡಿದೆ. ಸ್ಮಾರ್ಟ್ ಕಾರ್ಡ್‌ಗಳನ್ನು ಉಚಿತವಾಗಿ ವಿತರಿಸಲಾಗುವುದು ಎಂದು ಸರ್ಕಾರ ಹೇಳಿದೆಯಾದರೂ ಇಂತಹ ಕಾರ್ಡ್ ಪಡೆಯಲು ದುರ್ಬಲರು ಎಷ್ಟೊಂದು ತೊಂದರೆ ಅನುಭವಿಸಬೇಕಾಗುತ್ತದೆ ಮತ್ತು ಅವರನ್ನು ಹೇಗೆಲ್ಲ ಶೋಷಿಸಲಾಗುತ್ತದೆ ಎಂಬುದು ಗೊತ್ತಿಲ್ಲದ ಸಂಗತಿ ಏನಲ್ಲ. ಈ ಕಾರ್ಡ್ ಹೆಸರಿನಲ್ಲಿ ಲಕ್ಷಾಂತರ ಮಂದಿಯನ್ನು ಯೋಜನೆಯ ವ್ಯಾಪ್ತಿಯಿಂದ ಹೊರದಬ್ಬುವ ಹುನ್ನಾರವೂ ಇದ್ದಂತಿದೆ. ‘ಶಕ್ತಿ’ ಯೋಜನೆಯಿಂದ ಮಹಿಳೆಯರು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯ ಹರಿಕಾರರಾಗಿದ್ದು, ಆಗಿರುವ ಸಕಾರಾತ್ಮಕ ಪರಿಣಾಮವನ್ನು ಹಲವು ಪ್ರದೇಶಗಳಲ್ಲಿ ಕಾಣಬಹುದಾಗಿದೆ. ತಮ್ಮ ಸುತ್ತಲಿನ ಗಡಿರೇಖೆಗಳನ್ನು ಮಹಿಳೆಯರು ದಾಟಿದ್ದಾರೆ. ಪ್ರಯಾಣವು ಅವರ ಮುಂದೆ ಹೊಸ ಜಗತ್ತುಗಳನ್ನು, ಹೊಸ ಅನುಭವಗಳನ್ನು ತೆರೆದಿಟ್ಟಿದೆ. ಈ ಯೋಜನೆಯು ಮಹಿಳೆಯರಲ್ಲಿ ಸ್ವಾತಂತ್ರ್ಯದ ಭಾವವನ್ನೂ ಮೂಡಿಸಿದೆ. ಈ ಸ್ವಾತಂತ್ರ್ಯವನ್ನು ಕಸಿಯುವ ಕೆಲಸ ಸ್ಮಾರ್ಟ್ ಕಾರ್ಡ್‌ನಿಂದ ಆಗಬಾರದು. ಅನಗತ್ಯವಾಗಿರುವ ಈ ಕಾರ್ಡ್ ವಿತರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಅವಕಾಶ ನೀಡಬಾರದು.

ಚುರುಮುರಿ... ಚಾಟಿ

ಅಡುಗೆಮನೇಲಿ ನಾಯಕರು!

ಪ್ರತಿ ಮನೆಯಲ್ಲೂ ದೇಶ ಮುನ್ನಡೆಸುವ ಶಕ್ತಿ ಇರುವ ಒಬ್ಬರು ಇರುತ್ತಾರೆ. ಆದರೆ ಅವರು ಅಡುಗೆ ಮಾಡುತ್ತಿರುತ್ತಾರೆ!

ಅಣೇಕಟ್ಟೆ ವಿಶ್ವನಾಥ್, ಜೀವನ ಕೌಶಲ ಫೆಸಿಲಿಟೇಟರ್, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಆರ್‌ಎಸ್‌ಎಸ್ ಆದಾಯ ಮೂಲದ ಬಗ್ಗೆ ಪ್ರಶ್ನೆ ಎತ್ತಿದ್ದೇ ತಡ, ಬಿಜೆಪಿಯ ಸಂಘಪ್ಪಗಳು ಸ್ಪರ್ಧೆಗೆ ಬಿದ್ದವರಂತೆ ಮಾತನಾಡುತ್ತಿದ್ದಾರೆ. ಈ ಮೂಲಕ ಆರ್‌ಎಸ್‌ಎಸ್ ಹಾಗೂ ಬಿಜೆಪಿಗೆ ಸಂಬಂಧವಿಲ್ಲ ಎಂಬ ಮೋಹನ್ ಭಾಗವತರ ಹೇಳಿಕೆ ಶತಮಾನದ ಸುಳ್ಳು ಎಂಬುದನ್ನು ಬಿಜೆಪಿಯವರೇ ನಿರೂಪಿಸುತ್ತಿದ್ದಾರೆ. ಆರ್‌ಎಸ್‌ಎಸ್ ಚಿವುಟಿದರೆ, ಬಿಜೆಪಿ ಅಳುವುದೇಕೆ?

ಪ್ರಿಯಾಂಕ್ ಖರ್ಗೆ, ಐಟಿ–ಬಿಟಿ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 19-2-2001

• ಶಾಸಕರ ಮೇಲೆ ಹಲ್ಲೆ ಯತ್ನ

ಬೈಂದೂರು, ಫೆ. 18– ಬೈಂದೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ. ಗೋಪಾಲ ಪೂಜಾರಿ ಅವರಿದ್ದ ಕಾರನ್ನು ನಿನ್ನೆ ಸಂಜೆ ಸಮೀಪದ ನಾವುಂದ ಗ್ರಾಮದಲ್ಲಿ ಕೆಲವರು ತಡೆದು ಹಲ್ಲೆ ನಡೆಸುವ ಪ್ರಯತ್ನ ನಡೆಸಿದ್ದಾರೆ.

ಈ ಪರಿಸರದಲ್ಲಿ ನಡೆಯುತ್ತಿರುವ ಮೀನು ಕಾರ್ಖಾನೆ ಸ್ಥಗಿತಗೊಳಿಸಲು ಒತ್ತಾಯಿಸಿದರು. ಕಾರ್ಖಾನೆಯವರು ಉಚ್ಚ ನ್ಯಾಯಾಲಯದ ತಡೆಯಾಜ್ಞೆ ತಂದಿರುವುದರಿಂದ ಯಾವುದೇ ಕ್ರಮ ಅಸಾಧ್ಯ ಎಂದು ಶಾಸಕರು ಹೇಳಿದರು. ಇದಕ್ಕೆ ಒಪ್ಪದ ಗುಂಪು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಾರನ್ನು ಗುದ್ದಿ, ತಮ್ಮ ಮೇಲೂ ಹಲ್ಲೆ ಯತ್ನ ಮಾಡಿ ಅವಮಾನಕರ ರೀತಿಯಲ್ಲಿ ವರ್ತಿಸಿದ್ದಾರೆಂದು ಪೊಲೀಸರಲ್ಲಿ ದೂರು ದಾಖಲಾಗಿದೆ.

• ಕೊಪ್ಪ, ಎನ್‌ಆರ್‌ಪುರದಲ್ಲಿ ಮಂಗನ ಕಾಯಿಲೆ

ಚಿಕ್ಕಮಗಳೂರು, ಫೆ. 18– ಜಿಲ್ಲೆಯ ನರಸಿಂಹರಾಜಪುರ, ಕೊಪ್ಪ ತಾಲ್ಲೂಕುಗಳ ಐದಾರು ಗ್ರಾಮಗಳಲ್ಲಿ ಸುಮಾರು 50 ಮಂದಿಗೆ ಮಂಗನ ಕಾಯಿಲೆ ಕಾಣಿಸಿಕೊಂಡಿದ್ದು ಜನರು ಆತಂಕಕ್ಕೆ ಒಳಗಾಗಿದ್ದಾರೆ.

75 ವರ್ಷಗಳ ಹಿಂದೆ

ಸೋಮವಾರ, 19-2-1951

• ಒಳಜಗಳಗಳು ಬೇಡ: ನೆಹರೂ

ಕಾನಪುರ, ಫೆ. 18– ಕಾಂಗ್ರೆಸ್ಸಿಗರು ಪರಸ್ಪರ ದ್ವೇಷಾಸೂಯೆ, ಸಣ್ಣಪುಟ್ಟ ಜಗಳಗಳನ್ನು ತ್ಯಜಿಸಿ, ಕಾಂಗ್ರೆಸ್ ಸಂಸ್ಥೆಯನ್ನು ಅದು ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಸಾಧಿಸಿದ್ದಂತಹ ಮಹತ್ತರ ಸ್ಥಾನಕ್ಕೇರಿಸಲು ಒಗ್ಗಟ್ಟಿನಿಂದಲೂ ನಿಸ್ಪೃಹತೆಯಿಂದಲೂ ದುಡಿಯಬೇಕೆಂದು ಮಹಾ ಪ್ರಧಾನಿ ನೆಹರೂರವರು ಕಾನಪುರದ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ತಿಳಿಸಿದರು.

ನೆಹರೂ ಮುಂದುವರಿದು ‘ಸದ್ಯಕ್ಕೆ ದೇಶದಲ್ಲಿ ಕಾಂಗ್ರೆಸ್ಸಿಗೆ ಬದಲಾಗಿ ಆ ಸ್ಥಾನವನ್ನು ವಹಿಸಲು ಶಕ್ತಿಯುಳ್ಳ ಸಂಸ್ಥೆ ಬೇರೊಂದಿಲ್ಲ. ನಮಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ಆ ಮಹಾತ್ಮನ ಹೆಸರಿಗೆ ಕಳಂಕ ತರದಂತೆ ನಮ್ಮ ಸಂಸ್ಥೆಯನ್ನು ಬೆಳೆಸಬೇಕು’ ಎಂದರು.

‘ಸ್ವಾತಂತ್ರ್ಯ ತಂದ ಕಾಂಗ್ರೆಸ್ಸಿನ ಕೆಲಸವಿನ್ನೂ ಮುಗಿದಿಲ್ಲ. ದೀನದಲಿತರ ಉದ್ಧಾರವೇ ಆ ಕಾರ್ಯ. ಈ ಕೆಲಸ ಸಾಧಿಸಲು ಎಲ್ಲರೂ ಉತ್ಸಾಹಪೂರಿತ ಒಗ್ಗಟ್ಟಿನಿಂದ ದುಡಿಯಬೇಕು. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಿಗೆ ಹೆಚ್ಚು ಗಮನವೀಯಬೇಕು’ ಎಂದು ತಿಳಿಸಿದರು.

ಊರುಗೋಲು ಶಾಪ ಕಳೆದೀತೆ?

ಪಡಸಾಲೆ

ರಘುನಾಥ ಚ.ಹ.

> ಗಾಂಧೀಜಿಯ ಊರುಗೋಲಿನ ತವರು ಕರ್ನಾಟಕ! ಈ ತವರುನೆಲದಲ್ಲೇ, ಗಾಂಧೀಜಿ ಮತ್ತು ಅವರ ಕೋಲು ಜಾಹೀರಾತಿನ ಸರಕಾಗಿ ಬಳಕೆಯಾದವು. ‘ದಂಡಿ ಯಾತ್ರೆ’ಗೆ ಸಾಕ್ಷಿಯಾದ ಕೋಲು, ಆಧುನಿಕ ಭಾರತದ ಸೈದ್ಧಾಂತಿಕ ‘ದಂಡ’ಯಾತ್ರೆಗೆ ಸಂಕೇತವೂ ಆಯಿತು. ಈ ಪ್ರಹಸನಕ್ಕೆ ಕಾರಣರಾದವರು ಪ್ರಾಯಶ್ಚಿತ್ತ ಮಾಡಿಕೊಳ್ಳುವ ಹೊಣೆಗಾರಿಕೆ ಪ್ರದರ್ಶಿಸುವರೆ?

‘ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ’ (ಮನರೇಗಾ) ಜಾಗದಲ್ಲಿ ‘ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಆಜೀವಿಕ ಮಿಷನ್’ (ಗ್ರಾಮೀಣ್) (ವಿಬಿ ಜಿ ರಾಮ್) ಜಾರಿಗೆ ತರಲು ಹೊರಟಿರುವ ಕೇಂದ್ರ ಸರ್ಕಾರದ ನಿರ್ಧಾರದ ನೆಪದಲ್ಲಾದರೂ ನಮ್ಮ ರಾಜಕಾರಣಿಗಳಿಗೆ ಗಾಂಧೀಜಿಯ ನೆನಪಾಗಿರುವುದು ಆಶಾದಾಯಕ ಸಂಗತಿ. ಯೋಜನೆಯನ್ನು ವಿರೋಧಿಸುವವರು ಹಾಗೂ ಸಮರ್ಥಿಸಿಕೊಳ್ಳುವವರು, ಇಬ್ಬರಿಗೂ ಗಾಂಧಿಯೇ ಬೇಕು! ಭಾರತದ ರಾಜಕಾರಣ ಬಾಪುವಿನಿಂದ ಎಷ್ಟು ದೂರ ಓಡಿದರೂ, ಅದು ಮತ್ತೆ ಯಾವುದೋ ಬಿಂದುವಿನಲ್ಲಿ ಗಾಂಧೀಜಿಯನ್ನು ಸಮೀಪಿಸುತ್ತಿರುತ್ತದೆ. ಗಾಂಧಿ ಮತ್ತು ಅಂಬೇಡ್ಕರ್ ದೇಶದ ರಾಜಕಾರಣಕ್ಕೆ ಗತಿಯೂ ಹೌದು, ಮತಿಯೂ ಹೌದು. ಅನ್ಯಥಾ ಶರಣಂ ನಾಸ್ತಿ.

ಗಾಂಧೀಜಿಯನ್ನು ಕೇಂದ್ರವಾಗಿಟ್ಟುಕೊಂಡು ಕರ್ನಾಟಕದಲ್ಲಿ ‘ಮನರೇಗಾ’ ರಾಜಕಾರಣ ಪಡೆದುಕೊಂಡ ಸ್ವರೂಪ ಕುತೂಹಲಕರವಾದುದು. ಯೋಜನೆಯನ್ನು ಬದಲಿಸಲು ಹೊರಟ ಬಿಜೆಪಿಯನ್ನು ಟೀಕಿಸಲು, ಕಾಂಗ್ರೆಸ್ ಜಾಹೀರಾತಿನಲ್ಲಿ ಗಾಂಧೀಜಿ ಬಳಕೆಯಾದರು. ಇದಕ್ಕೆ ಪ್ರತಿಯಾಗಿ ಬಿಜೆಪಿ, ಕಾಂಗ್ರೆಸ್ ನಾಯಕರನ್ನು ಹೊಡೆಯಲು ಗಾಂಧೀಜಿ ತಮ್ಮ ಕೋಲು ಎತ್ತಿರುವಂತೆ ಜಾಹೀರಾತು ಪ್ರಕಟಿಸಿತು. ಮಹಾತ್ಮನ ಕೈಯ ಕೋಲಿಗೆ ಹಿಂಸೆ ಆರೋಪಿಸಿತು. ಈ ಜಾಹೀರಾತು ಗಾಂಧೀಜಿ ಅಹಿಂಸಾತತ್ತ್ವಕ್ಕೆ ವಿರುದ್ಧವಾದುದು; ಹಿಂಸೆಯ ಬಿಂಬವಾಗಿ ಬಳಸಿಕೊಳ್ಳುವ ಮೂಲಕ ಮಹಾತ್ಮನಿಗೆ ಅವಮಾನ ಎಸಗಲಾಗಿದೆ ಎಂದು ಅನೇಕರು ಟೀಕಿಸಿದರು. ಈ ಟೀಕೆ ಸರಿಯಾದುದೇ. ಆದರೆ, ಈ ಅವಿವೇಕವನ್ನು ಟೀಕಿಸುವ ಮುನ್ನ, ರಾಜಕೀಯ ಟೀಕೆಯ ಜಾಹೀರಾತಿಗೆ ಗಾಂಧೀಜಿಯನ್ನು ಯಾರಾದರೂ ಬಳಸಿಕೊಳ್ಳಬಹುದೇ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಮಾತುಮಾತಿಗೂ ಗಾಂಧೀಜಿಯ ಹಿಂದೆ ಆಸರೆ ಪಡೆಯುವ ಕಾಂಗ್ರೆಸ್, ರಾಷ್ಟ್ರಪಿತನನ್ನೇ ರಾಜಕೀಯ ಜಾಹೀರಾತಿನ ಭಾಗವಾಗಿಸಿದ್ದು ಅನೈತಿಕವಲ್ಲದೆ ಬೇರೇನಲ್ಲ. ಗಾಂಧಿ ತಾತ್ತ್ವಿಕತೆಯನ್ನು ಅವಮಾನಿಸಲು ಬಿಜೆಪಿಗೆ ಅವಕಾಶ ಕಲ್ಪಿಸಿದ್ದೇ ಕಾಂಗ್ರೆಸ್.

ಗಾಂಧೀಜಿಯ ಊರುಗೋಲನ್ನು ಲಾಠಿಯಂತೆ ಚಿತ್ರಿಸಿರುವ ಬಿಜೆಪಿ ನಾಯಕರ ಕೃತ್ಯ ಕೆಲವರಿಗೆ ಅಪರಾಧವಾಗಿ ಕಂಡಿದೆ. ಇದನ್ನು ಇನ್ನೊಂದು ರೀತಿಯಲ್ಲಿ ನೋಡಬಹುದು. ಕೋಲಿರುವುದೇ ಹೊಡೆಯಲು, ಬೆದರಿಸಲು ಎಂದು ನಂಬಿರುವವರಿಗೆ ಗಾಂಧೀಜಿಯ ಕೈಯ ಕೋಲು ಭಿನ್ನವಾಗಿ ಕಾಣುವುದು ಸಾಧ್ಯವಿಲ್ಲ. ಕೋಲು ಅಹಿಂಸೆಯ ಸಂಕೇತವೂ ಆಗಬಹುದೆನ್ನುವ ನೀತಿಪಾಠ ಅವರು ಕಲಿತ ಶಾಲೆಯಲ್ಲಿ, ಶಾಖೆಯಲ್ಲಿ ಇರಲಿಕ್ಕಿಲ್ಲ. ಹಾಗಾಗಿ ಮಹಾತ್ಮನ ಕೋಲು ಅವರಿಗೆ ಲಾಠಿಯಂತೆ ಕಂಡಿರುವುದರಲ್ಲಿ ಅಸಹಜವೇನಲ್ಲ. ‘ಬಡಿ’ಯುವುದಷ್ಟೇ ಬಡಿಗೆಯ ಕೆಲಸ ಎಂದು ನಂಬಿದವರಿಗೆ ಕೋಲು ಒಂದು ಆಯುಧ. ಗಾಂಧೀಜಿ ಊರುಗೋಲನ್ನು ಲಾಠಿ ಆಗಿಸಿರುವವರು ಗುರ್ತಿಸಿಕೊಂಡಿರುವ ಪಕ್ಷ ಹಾಗೂ ಪಂಥ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿರಲಿಲ್ಲ. ಇವರ ದೇಶಪ್ರೇಮ ಹಾಗೂ ರಾಷ್ಟ್ರೀಯತೆಯ ಪರಿಕಲ್ಪನೆ ಸ್ವಾತಂತ್ರ್ಯಾನಂತರದ್ದು; ಬಿಜೆಪಿಯ ತಾರಾವರ್ಚಸ್ಸಿನ ನಾಯಕಿ ಕಂಗನಾ ರನಾವತ್ ಪ್ರಕಾರ ದೇಶಕ್ಕೆ ಸ್ವಾತಂತ್ರ್ಯ ದೊರಕಿದ್ದೇ 2014ರಲ್ಲಿ. ಇನ್ನು ಬಿಜೆಪಿಯ ತಾತ್ತ್ವಿಕತೆಯನ್ನು ಅಮ್ಮನಂತೆ ಪೋಷಿಸುವ ಸಂಘ ನೂರು ವರ್ಷಗಳನ್ನು ಕಂಡಿದೆಯಾದರೂ, ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಅದರ ಲಾಠಿ ಮೌನವಾಗಿತ್ತು. ಸ್ವಾತಂತ್ರ್ಯದ ಸ್ಮೃತಿಗಳಿಗೇ ಬೆನ್ನುಹಾಕಿದ ಸಂಘಟನೆಗೆ ಅಹಿಂಸೆ ಮತ್ತು ಸತ್ಯಾಗ್ರಹದ ಹಂಗು ಇರುತ್ತದೆಂದು ನಿರೀಕ್ಷಿಸಬಾರದು. ಇಂಥ ಪರಂಪರೆಯೊಂದಿಗೆ ಗುರ್ತಿಸಿಕೊಳ್ಳುವವರಿಗೆ, ಒಂದಾನೊಂದು ಕಾಲದ ಸ್ವಾತಂತ್ರ್ಯ ಚಳವಳಿಯ ಅಂತರ್ಜಲವಾದ ಅಹಿಂಸೆ, ಸತ್ಯಾಗ್ರಹಗಳ ಬಗ್ಗೆ ಹೇಗಾದರೂ ತಿಳಿಯಬೇಕು?

ಗಾಂಧೀಜಿಯ ಕೋಲು ಆಸರೆಗೆ ಒದಗುವಂತಹದ್ದು; ಮನುಷ್ಯ ಎಡವದಿರುವಂತೆ ಮಾಡುವ ಊರುಗೋಲು, ಸಂಜೆ ಬೆಳಕಿನ ಹಿರಿಯರ ಪಾಲಿನ ಮೂರನೇ ಕಾಲು. ಆತ್ಮವಿಶ್ವಾಸ, ಸ್ವಾವಲಂಬನೆಯ ಸಂಕೇತ. ಅರಿತೋ ಅರಿಯದೆಯೋ ಬಿಜೆಪಿ ನಾಯಕರು ಗಾಂಧೀಜಿಯ ಊರುಗೋಲಿಗೆ ಕೈಹಾಕಿದ್ದಾರೆ. ರಾಮನ ಸ್ಪರ್ಶದಿಂದ ಕಲ್ಲು ಕರಗಿ ಹೆಣ್ಣಾದಂತೆ, ಗಾಂಧೀಜಿ ಕೋಲಿನ ಸ್ಪರ್ಶದಿಂದ ಬಿಜೆಪಿ ನಾಯಕರಿಗೆ ಶಾಪವಿಮೋಚನೆಯೇನಾದರೂ ಆಗಬಹುದೆ? ಆದೀತೆಂದು ನಿರೀಕ್ಷಿಸುವುದು ಕಷ್ಟ. ಏಕೆಂದರೆ, ಒಂದೂವರೆ ದಶಕದ ಹಿಂದೆ ಸ್ವಾತಂತ್ರ್ಯ ಪಡೆದ ಇವರು ಗಾಂಧೀಜಿಯ ಕೋಲನ್ನಷ್ಟೇ ಮುಟ್ಟಿದವರಲ್ಲ; ಮಹಾತ್ಮನ ಪಾಲಿನ ಪ್ರೇಮಮೂರ್ತಿಯಾದ ರಾಮನ ಧನುಸ್ಸಿಗೂ ಕೈಹಾಕಿದವರು. ಸೀತೆ ಲಕ್ಷ್ಮಣ ಹನುಮರನ್ನು ಗ್ರೂಪ್ ಫೋಟೊದಿಂದ ಹೊರಕಳುಹಿಸಿ, ರಾಮನನ್ನಷ್ಟೇ ಉಳಿಸಿಕೊಂಡು, ಅವನ ಕೈಗೆ ಬಿಲ್ಲು ಕೊಟ್ಟಿದ್ದಾರೆ. ಇವರ ಪಾಲಿಗೆ, ರಾಮನ ಬಿಲ್ಲಾದರೂ ಅಷ್ಟೇ, ಗಾಂಧೀಜಿಯ ಕೋಲಾದರೂ ಅಷ್ಟೇ: ಅವುಗಳಿರುವುದೇ ದಂಡಿಸಲಿಕ್ಕೆ. ರಾಮನ ಧನುಸ್ಸು ಮುಟ್ಟಿದಾಗ ಆಗದ ಶಾಪವಿಮೋಚನೆ ಮಹಾತ್ಮನ ಊರುಗೋಲಿನಿಂದ ಆದೀತೆ?

ಗಾಂಧೀಜಿ ಊರುಗೋಲಿನ ಬಗ್ಗೆ ನಡೆದ ಚರ್ಚೆಯ ಸಂದರ್ಭದಲ್ಲಿ, ಆ ಕೋಲಿಗೂ ಕರ್ನಾಟಕಕ್ಕೂ ಇರುವ ನಂಟು ಕೆಲವರಿಗೆ ನೆನಪಾಯಿತು. ಆ ನೆನಪು, ಗಾಂಧೀಜಿ ಕೈಯಲ್ಲಿನ ಕೋಲಿಗೂ ಕನ್ನಡದ ಮೊದಲ ರಾಷ್ಟ್ರಕವಿ ಮಂಜೇಶ್ವರದ ಗೋವಿಂದ ಪೈ ಅವರಿಗೂ ಇರುವ ನಂಟಿಗೆ ಸಂಬಂಧಿಸಿದ್ದು. ಕಾಕಾ ಕಾಲೇಲ್ಕರ್ ಎನ್ನುವ ವಿದ್ವಾಂಸ ಹಾಗೂ ಸ್ವಾತಂತ್ರ್ಯ ಚಳವಳಿಕಾರ ಪೈ ಅವರ ಆಪ್ತಮಿತ್ರ. ಗೋವಿಂದ ಪೈ ಕುಟುಂಬದ ಹಿರಿಯರು ಬಳಸುತ್ತಿದ್ದ ಊರುಗೋಲು ಕಾಲೇಲ್ಕರ್ ಅವರಿಗೆ ಉಡುಗೊರೆ ರೂಪದಲ್ಲಿ ದೊರೆತಿದೆ. 1930ರಲ್ಲಿ ಗಾಂಧೀಜಿ ‘ದಂಡಿ ಯಾತ್ರೆ’ ಕೈಗೊಂಡಾಗ, ಕಾಲೇಲ್ಕರ್ ಅವರು ತಮ್ಮ ಬಳಿಯಿದ್ದ ಕೋಲನ್ನು ಮಹಾತ್ಮನಿಗೆ ನೀಡಿದರಂತೆ. 24 ದಿನಗಳ ಕಾಲ ನಡೆದ ಸುಮಾರು 390 ಕಿ.ಮೀ.ಗಳ ಕಾಲ್ನಡಿಗೆಯ ಆ ಯಾತ್ರೆಯಲ್ಲಿ ಗಾಂಧೀಜಿಗೆ ಆಸರೆಯಾದುದು ಅದೇ ಕೋಲು. ಮಹಾತ್ಮನ ಮೂಲಕ ಆ ಕೋಲಿಗೂ ವಿಶ್ವಪ್ರಸಿದ್ಧಿ ದೊರೆಯಿತು. ಹೀಗೆ, ಮಹಾತ್ಮನ ಕೈಯಲ್ಲಿನ ಕರ್ನಾಟಕದ ನಂಟಿನ ಕೋಲಿಗೆ ಸಂಬಂಧಿಸಿದಂತೆ ವರ್ತಮಾನದಲ್ಲಿನ ಜಗ್ಗಾಟ ಕರ್ನಾಟಕದಲ್ಲೇ ನಡೆದಿದೆ!

ಗೋವಿಂದ ಪೈ ಅವರಿಗೆ ಗಾಂಧೀಜಿಯ ಬಗೆಗೆ ಅಸದಳ ಪ್ರೇಮ, ಗೌರವ. ಗಾಂಧಿ ಹತ್ಯೆಯಾದಾಗ, ‘ಇನ್ನಿನಿಸು ನೀ, ಮಹಾತ್ಮಾ, ಬದುಕಬೇಕಿತ್ತು!’ ಎಂದವರು ಕಾವ್ಯಕಂಬನಿ ಮಿಡಿದಿದ್ದರು. ‘ಮಹಾತ್ಮನ ಆತ್ಮಕ್ಕೆ’ ಎನ್ನುವ ಮತ್ತೊಂದು ಕವಿತೆಯಲ್ಲಿ, ‘ನಿನ್ನೊಲವೂರದೆಡೆ ಜಗದೊಳಿಲ್ಲ’ ಎನ್ನುತ್ತಾರೆ. ಮರಣವೃಕ್ಷದೊಳಗಣ ಅಮೃತಫಲದ ರೂಪದಲ್ಲಿ ಕಂಡ ‘ಶಿಲುಬೇರಿದ ಕ್ರಿಸ್ತ’ನ ಅಂಶವನ್ನು ಕವಿ ಬಾಪುವಿನಲ್ಲೂ ಕಾಣುತ್ತಾರೆ. ‘ಕೃಷ್ಣ, ಮಾವೀರ, ಗೌತಮ, ಯೇಸುವೀ ನಾಲ್ವ/ ರವತಾರಿಗಳ ಧಾತುವಿಂದಾಯ್ದು ನಿನ್ನ/ ಸೃಜಿಸಿದಾ ಪ್ರಕೃತಿ ಸೃಜಿಸುವಳೆ ನಿನ್ನನು ಹೋಲ್ವ/ ನೀ ಭಾರತದೊಳೇ ಕ್ಷಿತಿಯೊಳನ್ಯನನ್ನ?’ ಎನ್ನುವ ಮೂಲಕ ಗಾಂಧಿಗೆ ಪರ್ಯಾಯವಿಲ್ಲದಿರುವುದನ್ನು ಸೂಚಿಸುತ್ತಾರೆ. ಬಾಪುವಿನಲ್ಲಿ ಗೋವಿಂದ ಪೈಗಳು ಕಾಣುವ ಅವತಾರಿಗಳ ಪಟ್ಟಿಯಲ್ಲಿ ಮಹಾತ್ಮನಿಗೆ ಅತಿ ಪ್ರಿಯನಾದ ರಾಮನಿಲ್ಲ! ಹಾಗೆಂದು ಕವಿ ರಾಮನನ್ನು ಬಾಪುವಿನಿಂದ ಬೇರ್ಪಡಿಸಿಲ್ಲ; ಆಧಾರವಾಗಿಸಿದ್ದಾರೆ. ‘ಸತ್ಯವೆ ಗಡಾ ನಿನ್ನ ಗುರಿ, ಪ್ರೀತಿ ಗಡ ದಾರಿ’ ಎನ್ನುವ ಕವಿ, ಪದ್ಯದಲ್ಲಿ ಊರುಗೋಲಿನ ಬಗ್ಗೆಯೂ ಮಾತನಾಡುತ್ತಾರೆ: ‘ರಾಮನಾಮವೆ ನಿನ್ನ ನಡೆವೂರುಗೋಲು.’ ನಮ್ಮ ನೋಟಕ್ಕೆ ಗಾಂಧೀಜಿಯ ಕೈಯಲ್ಲಿನ ಊರುಗೋಲು ಕಾಣುವುದು. ಆ ಕೋಲನ್ನು ಕೊಟ್ಟ ಕವಿಗೆ, ಮಹಾತ್ಮನ ವ್ಯಕ್ತಿತ್ವಕ್ಕೆ ಆಸರೆಯಾದ ಊರುಗೋಲು ಕಾಣಿಸುವುದು.

ಸ್ವತಂತ್ರ ಭಾರತದ ನಾಂದಿವರ್ಷವಾಗಿ 2014ನ್ನು ಪ್ರತಿಪಾದಿಸುವ ಭಾರತಪುತ್ರರ ಸ್ಥಿತಿ ನೋಡಿ: ಅವರಿಗೆ ಸತ್ಯ, ಅಹಿಂಸೆ ಸವಕಲು ಪದಗಳು. ಅವರಿಗೆ ಪೈಸೆ ತಿಳಿದಿದೆಯೇ ಹೊರತು, ಕವಿ ಪೈ ಅಲ್ಲ. ರಾಮನಾಮ ಊರುಗೋಲೂ ಆಗಬಲ್ಲದು ಎನ್ನುವುದನ್ನು ಅವರು ಕಲ್ಪಿಸಿಕೊಳ್ಳಲಾರರು. ಹಾಗಾಗಿ, ಅವರು ಗಾಂಧಿ ಎನ್ನುವ ರೂಪಕಕ್ಕೆ, ಮಹಾತ್ಮನ ತಾತ್ತ್ವಿಕತೆಗೆ ಅಪಚಾರ ಎಸಗಿದಲ್ಲಿ ಅದನ್ನು ಅಜ್ಞಾನ ಎಂದು ಭಾವಿಸಬೇಕೇ ಹೊರತು, ಅಪರಾಧ ಎಂದಲ್ಲ. ಆದರೆ, ಈ ತತ್ತ್ವ ಕಾಂಗ್ರೆಸ್‌ಗೆ ಹೊಂದುವುದಿಲ್ಲ. ಗಾಂಧೀಜಿ ಬೆಳೆಸಿದ ಪಕ್ಷದಲ್ಲಿ ಗುರ್ತಿಸಿಕೊಂಡವರು, ಸ್ವಾತಂತ್ರ್ಯ ಚಳವಳಿಯ ಯಶಸ್ಸಿನ ವಾರಸುದಾರರು, ಗಾಂಧೀಜಿ ತತ್ತ್ವಗಳ ಹಕ್ಕುದಾರರೂ ಹೌದು. ಇಂಥವರು ಗಾಂಧಿಯನ್ನು ಜಾಹೀರಾತು ಸರಕಾಗಿಸುವುದು ಅಕ್ಷಮ್ಯ.

ಕಾಂಗ್ರೆಸ್‌ನ ಗಾಂಧಿಪ್ರೇಮಕ್ಕೀಗ ಅಗ್ನಿಪರೀಕ್ಷೆಯ ಸಮಯ. ಅವರ ಗಾಂಧಿಪ್ರೇಮ ನೈಜವಾಗಿದ್ದಲ್ಲಿ, ಅವರೀಗ ಕನಿಷ್ಠ ಒಂದು ದಿನದ ಮಟ್ಟಿಗಾದರೂ ಉಪವಾಸ ಸತ್ಯಾಗ್ರಹ ಕೈಗೊಳ್ಳಬೇಕು. ಆ ಉಪವಾಸ, ಮಹಾತ್ಮನನ್ನು ಈ ಸ್ಥಿತಿಗೆ ತಂದಿರುವಲ್ಲಿ ತಮ್ಮ ಪಾಲೂ ಇರುವುದನ್ನು ಒಪ್ಪಿಕೊಂಡು ಮಾಡಿಕೊಳ್ಳುವ ಪ್ರಾಯಶ್ಚಿತ್ತ ಆಗಿರುವಂತೆ, ಗಾಂಧೀಜಿಯ ಅಹಿಂಸಾ ರೂಪಕಕ್ಕೆ ಧಕ್ಕೆ ತಂದವರ ವಿರುದ್ಧದ ಸಾತ್ವಿಕ ಪ್ರತಿಭಟನೆಯೂ ಆಗಬಲ್ಲದು. ಗಾಂಧೀಜಿಯ ಕೋಲಿನಿಂದ ಶಾಪವಿಮೋಚನೆ ಆಗಬೇಕಾದ ತುರ್ತು ಬಿಜೆಪಿಗಿಂತಲೂ ಕಾಂಗ್ರೆಸ್‌ಗೇ ಹೆಚ್ಚಾಗಿದೆ. ಗಾಂಧೀಜಿಗೆ ರಾಮನಾಮ ಊರುಗೋಲಾದಂತೆ, ಬಹುತ್ವ ಭಾರತವನ್ನು ಹಂಬಲಿಸುವವರಿಗೆ ಗಾಂಧಿಯ ತಾತ್ತ್ವಿಕತೆಯೇ ಊರುಗೋಲಾಗಬೇಕಾಗಿದೆ.

ವಾಚಕರ ವಾಣಿ

ಅಕ್ರಮಗಳಿಗೆ ಗಣಿ ಇಲಾಖೆಯ ಕುರುಡು

ಕಳೆದ ಒಂದೂವರೆ ದಶಕದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆಯ ವಿಚಾರ ಸದ್ದು ಮಾಡಿರಲಿಲ್ಲ. ಇತ್ತೀಚೆಗೆ, ಕೇಂದ್ರ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮದ (ಎನ್‌ಎಂಡಿಸಿ) ಗಣಿಯಲ್ಲೇ ಅಕ್ರಮ ನಡೆದಿರುವುದು, ಸದ್ಯ ಅಸ್ತಿತ್ವದಲ್ಲಿರುವ ಕಾನೂನು, ನೀತಿ–ನಿಯಮಾವಳಿಗಳನ್ನೇ ಪ್ರಶ್ನೆ ಮಾಡುವಂತಿದೆ. ರಾಜ್ಯ, ಹೊರರಾಜ್ಯದ ಪ್ರಭಾವಿಗಳ ಕಾರ್ಖಾನೆಗಳಿಗೆ ಅದಿರು ಹೋಗಿರುವುದನ್ನು ಪೊಲೀಸ್ ಇಲಾಖೆಯೂ ಕ್ಷಿಪ್ರಗತಿಯಲ್ಲಿ ಪತ್ತೆ ಹಚ್ಚಿದೆ. ಅರಣ್ಯ ಇಲಾಖೆ ಕೂಡ ಪ್ರತ್ಯೇಕ ತನಿಖೆ ನಡೆಸುತ್ತಿದೆ. ಇಲ್ಲಿ ಎದ್ದು ಕಾಣುತ್ತಿರುವುದು ಗಣಿ ಇಲಾಖೆಯ ಅದಕ್ಷತೆ. ಈ ಪ್ರಕರಣ ನೇರವಾಗಿ ಗಣಿ ಇಲಾಖೆಗೆ ಸಂಬಂಧಿಸಿದ್ದಾದರೂ, ಗಣಿ ಇಲಾಖೆ ಒಂದು ಪಿಸಿಆರ್ ದಾಖಲಿಸಿದ್ದು ಬಿಟ್ಟರೆ ಈವರೆಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಗಣಿ ಇಲಾಖೆ ಎಷ್ಟು ಮೈಮರೆಯುತ್ತದೆಯೋ ಬಳ್ಳಾರಿಯ ಸಂಪತ್ತು ಅಷ್ಟೂ ಕರಗುತ್ತದೆ ಎಂಬುದನ್ನು ಸರ್ಕಾರ ಮನಗಾಣಬೇಕು.

ಶ್ರೀಶೈಲ ಆಲದಳ್ಳಿ, ಸಂಡೂರು

ಪಟ್ಟದ ಪಗಡೆಯಾಟ; ಬಡಪಾಯಿ ಕೂಸು

ರಾಜ್ಯ ಸರ್ಕಾರ ಇನ್ನೂ ಕಂಟಕದಿಂದ ಪಾರಾದಂತೆ ಕಾಣಿಸುತ್ತಿಲ್ಲ. ಸಿದ್ದರಾಮಯ್ಯ ಅವರು ಐದು ವರ್ಷ ನಾನೇ ಮುಖ್ಯಮಂತ್ರಿ ಎಂಬ ಹೇಳಿಕೆಗಳನ್ನು ಮಾಧ್ಯಮದವರ ಮುಂದೆ ನೀಡುತ್ತಿದ್ದರೂ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪಟ್ಟದ ಪಗಡೆಯಾಟ ನಿಲ್ಲಿಸುತ್ತಿಲ್ಲ. ಈ ಇಬ್ಬರು ನಾಯಕರ ಕುರ್ಚಿ ಕಿತ್ತಾಟದಲ್ಲಿ ರಾಜ್ಯ ಅಭಿವೃದ್ಧಿ ಕಾಣದೆ ಬಸವಳಿದಿದೆ. ಈಗ ಎಲ್ಲರ ಚಿತ್ತ ಮತ್ತೆ ಬಜೆಟ್ ಮೇಲಿದೆ. ಗಂಡ ಹೆಂಡಿರ ಜಗಳದ ನಡುವೆ ಕೂಸು ಬಡವಾದಂತೆ ಇಬ್ಬರು ನಾಯಕರ ಕಿತ್ತಾಟ ಆಯವ್ಯಯದ ಮೇಲೆ ಪರಿಣಾಮ ಬೀರುವಂತಾಗಬಾರದು. ಈ ಮುಸುಕಿನ ಗುದ್ದಾಟ ಆದಷ್ಟು ಬೇಗ ಕೊನೆಗೊಳ್ಳುವುದು ರಾಜ್ಯದ ಹಿತದೃಷ್ಟಿಯಿಂದ ಅಗತ್ಯ.

ನಾಗಾರ್ಜುನ ಹೊಸಮನಿ, ಕಲಬುರಗಿ

ಕೆಎಂಎಫ್: ವಿವೇಚನೆಯಿಂದ ಗೌರವ

ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಸಂಬಂಧಿಸಿದ ವಿಮರ್ಶೆಗಳಿಗೆ ‘ಕೆಎಂಎಫ್’ ಕಿವುಡಾದಂತೆ ನಡೆದುಕೊಳ್ಳುತ್ತಿದೆ. ಗ್ರಾಹಕರು ಹಾಗೂ ವೈದ್ಯರೂ ಸೇರಿದಂತೆ ಹಲವರು ನಂದಿನಿ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಮಾತನಾಡುತ್ತಿದ್ದಾರೆ. ಈ ಅಭಿಪ್ರಾಯಗಳ ಬಗ್ಗೆ ಸ್ಪಷ್ಟನೆ ಕೊಡುವುದು, ಗೊಂದಲ ಪರಿಹರಿಸುವುದು ಕೆಎಂಎಫ್ ಕರ್ತವ್ಯ. ಆದರೆ, ಗುಣಮಟ್ಟದ ಬಗ್ಗೆ ಅನುಮಾನ ವ್ಯಕ್ತಪಡಿಸಿದವರ ವಿರುದ್ಧ ಕಾನೂನುಕ್ರಮ ತೆಗೆದುಕೊಳ್ಳುತ್ತೇವೆ ಎಂದು ಕೆಎಂಎಫ್ ಬೆದರಿಸುತ್ತಿದೆ. ತಾವು ಖರೀದಿಸಿ ಬಳಸುವ ಉತ್ಪನ್ನಗಳ ಬಗ್ಗೆ ಮಾತನಾಡುವಷ್ಟು, ಸ್ವತಂತ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಷ್ಟು ಸ್ವಾತಂತ್ರ್ಯ ಗ್ರಾಹಕರಿಗಿಲ್ಲವೆ? ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿ ಗ್ರಾಹಕರನ್ನು ವಿವೇಚನೆಯಿಂದ ಗೆಲ್ಲಬೇಕೇ ಹೊರತು, ಅಧಿಕಾರದ ದರ್ಪದಿಂದ ಅಲ್ಲ ಎಂಬುದನ್ನು ಸಂಸ್ಥೆಯ ಆಡಳಿತವರ್ಗ ತಿಳಿಯಬೇಕು.

ದಿವಾಕರ್ ಡಿ., ಕೆ ಹೊಸ್ನಲಗೆರೆ

ಸ್ಮಾರಕ ಸಂರಕ್ಷಣೆ ಆದ್ಯತೆ ವಿಷಯವಾಗಲಿ

ಐತಿಹಾಸಿಕ ಸ್ಮಾರಕಗಳ ಶಿಲ್ಪಕಲಾ ಕೌಶಲ್ಯಕ್ಕೆ ಕರ್ನಾಟಕ ಹೆಸರಾಗಿದೆ. ನಮ್ಮ ಹಿಂದಿನ ಅರಸರು, ಶಿಲ್ಪಕಲಾವಿದರು ಗುಡಿ, ಕೋಟೆ, ರಾಜಧಾನಿಗಳನ್ನು ಕಟ್ಟಿ ನಮಗೆ ಬಳುವಳಿಯಾಗಿ ಉಳಿಸಿ ಹೋಗಿದ್ದಾರೆ. ಯಾವುದೇ ರಾಜ್ಯದ ಗರ್ವಕ್ಕೆ ಕಾರಣ ಆಗಬಹುದಾದ ಈ ಅಮೂಲ್ಯ ಸ್ಮಾರಕಗಳು ಅವನತಿ ಹೊಂದುತ್ತಿವೆ. ಇವನ್ನು ಕಾಪಾಡುವತ್ತ ನಮ್ಮ ಗಮನವು ಹರಿಯಬೇಕು. ಸ್ಮಾರಕಗಳ ಸಂರಕ್ಷಣೆಯ ಬಗ್ಗೆ ಶಿಲ್ಪಕಲಾ ಅಕಾಡೆಮಿಯು ಗಮನಹರಿಸಬೇಕು. ಶ್ರವಣಬೆಳಗೊಳ, ಬೇಲೂರು, ಹಳೆಬೀಡು, ಹಂಪಿ, ವಿಜಾಪುರ, ಬೀದರ್, ಮುಂತಾದ ಕಡೆಗಳಲ್ಲಿನ ಚಾರಿತ್ರಿಕ ಸ್ಮಾರಕಗಳು ನಾಡಿಗೆ ಹೆಮ್ಮೆ ತರುವಂತಿವೆ. ಅವುಗಳ ಸ್ಥಿತಿಗತಿ ಬಗ್ಗೆ ಅಕಾಡೆಮಿ ಅಧ್ಯಯನ ನಡೆಸಿ ಸರ್ಕಾರದ ಗಮನಸೆಳೆಯಲಿ. ಸ್ಮಾರಕಗಳ ಸಂರಕ್ಷಣೆಯಲ್ಲಿ ಜನಸಾಮಾನ್ಯರೂ ಸ್ವಯಂ ಪ್ರೇರಣೆಯಿಂದ ಭಾಗಿಯಾಗಲಿ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಸೌಹಾರ್ದ ಪಸರಿಸಲಿ, ರಕ್ಷಣಾವೆಚ್ಚ ತಗ್ಗಲಿ

ಭಾರತ ಸರ್ಕಾರವು ಫ್ರಾನ್ಸ್ ದೇಶದಿಂದ ಖರೀದಿಸುತ್ತಿರುವ ರಫೇಲ್ ಯುದ್ಧ ವಿಮಾನಕ್ಕೆ ತಗಲುತ್ತಿರುವ ವೆಚ್ಚವು ಭಾರತದ ದೊಡ್ಡ ರಾಜ್ಯಗಳ ಜನಸಾಮಾನ್ಯರ ವಾರ್ಷಿಕ ಬಜೆಟ್ ಗಾತ್ರಕ್ಕೆ ಸವಾಲು ಎಸೆಯುವಂತಿದೆ. ಸಮಾಜದಲ್ಲಿ ಆರ್ಥಿಕ ಸಮಸ್ಯೆಗಳು ಹಾಗೂ ಸಾಮಾಜಿಕ ತಾರತಮ್ಯ ಹಾಗೆಯೇ ಉಳಿದಿದೆ. ಹಾಗಾಗಿ, ಆಂತರಿಕ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಒತ್ತು ನೀಡಬೇಕು. ನೆರೆ ರಾಷ್ಟ್ರಗಳೊಂದಿಗೆ ಶಾಂತಿ, ಸ್ನೇಹ, ಸಹೋದರತ್ವ ಸಂಪಾದಿಸಿ ರಕ್ಷಣಾವೆಚ್ಚ ತಗ್ಗಿಸಿ, ಆ ಹಣವನ್ನು ಸಾರ್ವಜನಿಕ ಸಂಚಾರ ವ್ಯವಸ್ಥೆ ಬಲಪಡಿಸಲು ಸರ್ಕಾರ ಬಳಸಲಿ.

ಪ್ರಶಾಂತ್ ಕೆ.ಸಿ., ಚಾಮರಾಜನಗರ

ಹಂಪಿ ಉತ್ಸವ: ಅದೇ ರಾಗ, ಅದೇ ಹಾಡು

ಹಂಪಿ ಉತ್ಸವ ಮೂರು ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಆದರೆ, ಮತ್ತದೇ ಹಳೆಯ ಮುಖಗಳ ಮೂಲಕ ಉತ್ಸವ ಬೇಸರ ತರಿಸಿತು. ವಿಜಯ್ ಪ್ರಕಾಶ್, ಅರ್ಜುನ್ ಜನ್ಯ, ಅನುಶ್ರೀ ಮುಂತಾದವರನ್ನು ಹೊರತುಪಡಿಸಿ ಉತ್ಸವ ನಡೆಸಲು ಸಾಧ್ಯವಿಲ್ಲವೆ? ಕೋಟಿಗಟ್ಟಲೆ ಹಣ ಖರ್ಚು ಮಾಡುವ ಉತ್ಸವ ಹೊಸ ಪ್ರತಿಭೆಗಳನ್ನು ಯಾಕೆ ಒಳಗೊಳ್ಳುವುದಿಲ್ಲ? ಒಂದೇ ಬಗೆಯ ಹಾಡು–ಸಂಗೀತ, ಒಂದೇ ಬಗೆಯ ನೃತ್ಯ, ಏಕತಾನತೆಯ ನಿರೂಪಣೆಯಿಂದ ಹಂಪಿ ಉತ್ಸವ ಜೀವಂತಿಕೆ ಕಳೆದುಕೊಳ್ಳುತ್ತಿದೆ. ಉತ್ಸವವನ್ನು ಸೃಜನಶೀಲಗೊಳಿಸುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಇಲ್ಲದೆ ಹೋದಲ್ಲಿ ಹಂಪಿ ಉತ್ಸವದ ನೆಪದಲ್ಲಿ ಒಂದಷ್ಟು ಜನರನ್ನು ಪೋಷಿಸುವ ಕೆಲಸವಷ್ಟೇ ನಡೆಯುತ್ತದೆ.

ಜಂಬೂಗೌಡ, ಹಂಪಿ

ಚುರುಮುರಿ

ನಿಯತ್ತಿನ ನಾಯಿ!

• ಗುರು ಪಿ.ಎಸ್.

‘ಶಿವನೆ ನಿನ್ನಾಟ ಬಲ್ಲವರ್ಯಾರ್ಯಾರೋ, ಹರನೆ ನಿನ್ನಾಟ ಬಲ್ಲವರ್ಯಾರ್ಯಾರೋ... ಶಿವ! ಶಿವ, ಶಿವ, ಶಿವ...’ ಹಾಡುತ್ತಾ ಮನೆಯೊಳಗೆ ಹೋದೆ.

‘ಶಿವರಾತ್ರಿ ಮುಗಿದ ಮೇಲೂ ಶಿವನ ಸ್ಮರಣೆ ಮಾಡ್ತಿದೀರಿ, ಏನ್ ಸಮಾಚಾರ’ ಕೇಳಿದಳು ಹೆಂಡತಿ.

‘ನಾನು ಹಾಡ್ತಿರೋದು ಸಂಕಷ್ಟಹರ ಶಿವನ ಬಗ್ಗೆ ಅಲ್ಲ, ಸಂಕಷ್ಟದಲ್ಲಿರುವ ಶಿವನ ಬಗ್ಗೆ...’

‘ನೀವು ನೋಡಿದ್ರೆ ಹಾಡು ಹಾಡ್ತಾ ಎಂಜಾಯ್ ಮಾಡ್ತಿದೀರಿ... ನ್ಯೂಸ್ ಪೇಪರ್ ನೋಡಿದ್ರೆ ಬರೀ ನಾಯಿ, ನಾಯಿ ಬಾಲ, ಬೀದಿ ನಾಯಿ, ನಿಯತ್ತಿನ ನಾಯಿ ಅನ್ನೋ ಸುದ್ದಿಗಳೇ ಕಾಣ್ತಿವೆಯಲ್ಲ...’ ಪೇಪರ್ ಓದುತ್ತಾ ಕೇಳಿದಳು.

‘ಹೌದು, ನಾನೂ ನೋಡಿದೆ. ನಾಯಿ ತನ್ನ ಬಾಲಾನ ಅಲ್ಲಾಡಿಸಬೇಕು, ಬಾಲವೇ ನಾಯಿಯನ್ನ ಅಲ್ಲಾಡಿಸಬಾರದು ಅನ್ನೋ ಸ್ಟೇಟ್ಮೆಂಟ್ ಓದಿದೆ. ಇಲ್ಲಿ ಯಾರು ಬಾಲ, ಯಾರು ನಾಯಿ?’

‘ಇನ್ಯಾರು, ಹೈಕಮಾಂಡ್ ನಾಯಿ, ಶಾಸಕರು ಬಾಲ ಅಂತ ಅರ್ಥ’.

‘ಓಹ್, ಹಾಗಾದರೆ ಎಲ್ಲರೂ ಸೇರಿ ಹೈಕಮಾಂಡ್ ಅನ್ನೇ ನಾಯಿ ಅಂದಂಗಾಯ್ತು’ ನಕ್ಕೆ.

‘ಅದು ಹಾಗಿರಲಿ. ನಾಯಿ ಅಂದಾಗೆಲ್ಲ, ನಿಯತ್ತು ಅನ್ನೋ ಪದವನ್ನೂ ರಾಜಕಾರಣಿಗಳು ಬಳಸ್ತಿದ್ದಾರೆ. ಅದೇ ನನಗೆ ಆಶ್ಚರ್ಯ. ಇನ್ನು, ಇರೋ ನಾಯಿಗಳಲ್ಲೇ ನಮ್ ಬೀದಿ ನಾಯಿಗಳ್ಯಾವು, ಪಕ್ಕದ ಬೀದಿ ನಾಯಿಗಳ್ಯಾವು ಅನ್ನೋ ಚರ್ಚೆಯೂ ಶುರುವಾಗಿದೆ’ ಎಂದಳು.

‘ಈ ವೆಬ್‌ಸೈಟ್‌ನಲ್ಲಿ ಮತ್ತೊಂದು ಸುದ್ದಿ ಇದೆ ನೋಡು, ಬಿಬಿಎಂಪಿಯಿಂದ ಬೀದಿ ನಾಯಿಗಳಿಗೆ ಚಿಕನ್ ರೈಸ್ ಕೊಡ್ತಾರಂತೆ...’

‘ಏಯ್, ಮಾರಾಯ್ರೇ! ಅದು ಹಳೆಯ ಸುದ್ದಿ. ಬೇರೆ ಬೇರೆ ಎರಡು ಸುದ್ದಿ ಒಟ್ಟೊಟ್ಟಿಗೆ ಓದಿ ನನಗೆ ಕನ್‌ಫ್ಯೂಸ್ ಮಾಡಬೇಡ್ರೀ...’ ಎನ್ನುತ್ತಾ, ‘ಈ ಸುದ್ದಿ ಇಂಪಾರ್ಟೆಂಟ್ ಇದೆ ನೋಡಿ. ಆಡಳಿತ ಪಕ್ಷದ ಕೆಲವು ಶಾಸಕರೆಲ್ಲ ಆಸ್ಟ್ರೇಲಿಯಾ ಟೂರ್‌ಗೆ ಹೋಗ್ತಿದಾರಂತೆ. ಯಾಕ್ ಇರಬಹುದು ರೀ...’

‘ಹಾಂ... ಆಸ್ಟ್ರೇಲಿಯಾ ಟಿ20 ಕ್ರಿಕೆಟ್ ವಿಶ್ವಕಪ್‌ನಿಂದ ಹೊರಗೆ ಬಿತ್ತಲ್ಲ. ಆ ಹೀನಾಯ ಪ್ರದರ್ಶನಕ್ಕೆ ಕಾರಣ ಏನು ಅಂತ ಕೇಳೋಕೆ ಹೋಗ್ತಿದಾರಂತೆ’ ಎಂದೆ ವ್ಯಂಗ್ಯವಾಗಿ.

ಸಂಗತ

ಜೆಫ್ರಿ ಎಪ್‌ಸ್ಟೈನ್: ಕೆಟ್ಟ ವ್ಯವಸ್ಥೆಯ ಸಂಕೇತ

ಸಮಾಜಕ್ಕೆ ಕೇಡುಕಿನ ರೂಪದಲ್ಲಿ ಪರಿಣಮಿಸುವ ವ್ಯಕ್ತಿಯೊಬ್ಬ ರೂಪುಗೊಳ್ಳುವಲ್ಲಿ ವ್ಯವಸ್ಥೆಯ ಪಾತ್ರವೂ ಇರುತ್ತದೆ. ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ ಅಗತ್ಯ.

• ನಡಹಳ್ಳಿ ವಸಂತ್

ಜೆಫ್ರಿ ಎಪ್‌ಸ್ಟೈನ್‌ನ ಕುಕೃತ್ಯಗಳ ಬಗೆಗೆ ಅಮೆರಿಕದ ನ್ಯಾಯಾಂಗ ಇಲಾಖೆ ಸಂಗ್ರಹಿಸಿರುವ ದಾಖಲೆಗಳಲ್ಲಿ ಇನ್ನೂ ಅರ್ಧದಷ್ಟನ್ನು ಬಿಡುಗಡೆ ಮಾಡಲಾಗಿಲ್ಲ ಎನ್ನಲಾಗುತ್ತಿದೆ. ಯಾವುದೇ ವ್ಯಕ್ತಿಯೂ ಹುಟ್ಟಿನಿಂದಲೇ ಕ್ರಿಮಿನಲ್ ಆಗಿರಲು ಸಾಧ್ಯವಿಲ್ಲ, ಒಂದು ವ್ಯವಸ್ಥೆ ವ್ಯಕ್ತಿಯನ್ನು ರೂಪುಗೊಳಿಸುತ್ತದೆ ಎನ್ನುವುದನ್ನು ಇವತ್ತು ಮನೋವಿಜ್ಞಾನಿಗಳು, ನರವಿಜ್ಞಾನಿಗಳು ಮತ್ತು ಸಮಾಜಶಾಸ್ತ್ರಜ್ಞರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಹಾಗಾಗಿ ಈ ದಾಖಲೆಗಳಲ್ಲಿ ಯಾರೆಲ್ಲರ ಹೆಸರಿದೆ ಎನ್ನುವುದಕ್ಕಿಂತ, ಒಬ್ಬ ಜೆಫ್ರಿ ಎಪ್‌ಸ್ಟೈನ್ ಹೇಗೆ ಸೃಷ್ಟಿಯಾದ ಎನ್ನುವುದು ನಮಗೆಲ್ಲ ಮುಖ್ಯವಾದ ಪ್ರಶ್ನೆಯಾಗಬೇಕು.

ಅಧಿಕಾರ ನಮ್ಮ ಮಿದುಳನ್ನು ಮತ್ತು ಅದರ ಕಾರ್ಯಕ್ಷಮತೆಯನ್ನು ಹೇಗೆ ಬದಲಾಯಿಸುತ್ತದೆ ಎನ್ನುವುದರ ಕುರಿತಾಗಿ ನರವಿಜ್ಞಾನಿಗಳು ಸಾಕಷ್ಟು ಅಧ್ಯಯನ ಮಾಡುತ್ತಿದ್ದಾರೆ. ಅಧಿಕಾರ ಎಂದರೆ ಬರೀ ರಾಜಕೀಯ ಅಧಿಕಾರ ಆಗಬೇಕಾಗಿಲ್ಲ. ಹಣ, ಧರ್ಮ, ಜಾತಿ, ಮೈಬಣ್ಣ, ವಿದ್ಯೆ, ಜೀವನದಲ್ಲಿ ದೊರೆಯುವ ಅವಕಾಶಗಳು, ಹೀಗೆ ಸಾಕಷ್ಟು ಅಂಶಗಳು ಅಧಿಕಾರದ ನಶೆಯನ್ನು ಏರಿಸಬಹುದು. ಜಾಗತೀಕರಣಗೊಂಡಿರುವ ಇವತ್ತಿನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹಣ ಎಲ್ಲಕ್ಕಿಂತ ಹೆಚ್ಚಿನ ಅಧಿಕಾರದ ನಶೆಯನ್ನು ತುಂಬುತ್ತಿದೆ.

ಅಧಿಕಾರದ ನಶೆಯಲ್ಲಿರುವವರ ಮಿದುಳನ್ನು ಸ್ಕ್ಯಾನಿಂಗ್ ಯಂತ್ರಗಳ ಮೂಲಕ ಅಧ್ಯಯನ ಮಾಡಿದಾಗ ನರವಿಜ್ಞಾನಿಗಳಿಗೆ ಆಶ್ಚರ್ಯಕರ ಬದಲಾವಣೆಗಳು ಕಂಡುಬಂದವು. ಮಾನವರ ಮಿದುಳಿನಲ್ಲಿ ‘ಮಿರರ್ ನ್ಯೂರಾನ್’ ಎನ್ನುವ ವಿಶಿಷ್ಟ ಜೀವ ಕೋಶಗಳಿರುತ್ತವೆ. ಅವುಗಳು ಎದುರಿಗಿರುವ ವ್ಯಕ್ತಿಯ ನೋವು–ಕಷ್ಟಗಳನ್ನು ಪ್ರತಿಫಲಿಸಿ ನಮ್ಮೊಳಗೆ ಸಹಾನುಭೂತಿಯನ್ನು ಮೂಡಿಸುತ್ತವೆ. ಆಗ ಮಾತ್ರ ನಾವು ಮಾನವೀಯವಾಗಿ ವರ್ತಿಸಲು ಸಾಧ್ಯ. ಆದರೆ ಅಧಿಕಾರದ ನಶೆಯಲ್ಲಿರುವವರ ಮಿದುಳಿನಲ್ಲಿ ಮಿರರ್ ನ್ಯೂರಾನ್‌ಗಳು ನಿಷ್ಕ್ರಿಯವಾಗಿರುತ್ತವೆ ಎಂದು ಕೆನಡಾದ ಮ್ಯಾಕ್‌ಮಾಸ್ಟರ್ ವಿಶ್ವವಿದ್ಯಾನಿಲಯದಲ್ಲಿ ನಡೆದ ಸಂಶೋಧನೆಗಳು ತೋರಿಸಿವೆ. ಹಾಗಾಗಿಯೇ ಹಸುಳೆಗಳ ಕಣ್ಣೀರು ಕೂಡ ಇಂತಹವರ ಪೈಶಾಚಿಕತೆಯನ್ನು ತಡೆಯಲಾರವು. ಸಮಾಜ ಹೆಚ್ಚಿನ ಹಣಗಳಿಸುವುದನ್ನು ಯಶಸ್ಸು ಎಂದು ಕರೆದರೆ, ನರವಿಜ್ಞಾನ ಹಣದಿಂದ ಬರುವ ಅಧಿಕಾರಭಾವ ಮಿದುಳಿಗೆ ಹಾನಿಕರ ಎನ್ನುತ್ತದೆ.

ಇಷ್ಟೇ ಅಲ್ಲ, ಹಣ ಸೇರುತ್ತಾ ಹೋದಂತೆ ಅದನ್ನು ಹೆಚ್ಚಿಸುತ್ತಲೇ ಹೋಗುವ ಅತೃಪ್ತಿ ಮತ್ತು ಕಳೆದುಕೊಳ್ಳುವ ಭಯ ಅಭದ್ರತೆಗಳು ಕೂಡ ನಮ್ಮೊಳಗೆ ಸೃಷ್ಟಿಯಾಗುತ್ತವೆ. ಹಾಗಾಗಿ, ಬಂಡವಾಳಶಾಹಿಗಳಿಗೆ ಎಲ್ಲವೂ ಹಣಗಳಿಸುವ ಮಾರ್ಗವಾಗಿ ಮಾತ್ರ ಗೋಚರಿಸುತ್ತವೆ. ಒಂದು ಅಪ್ಪಟ ಸ್ನೇಹ, ಬಾಂಧವ್ಯ, ಕಲೆ, ಸಾಹಿತ್ಯ, ಸಂಗೀತ ಮುಂತಾದ ಯಾವುದೇ ಭಾವಪ್ರಚೋದಕ ಕ್ರಿಯೆಗಳು ಇವರಿಗೆ ದೌರ್ಬಲ್ಯವಾಗಿ ಕಾಣುತ್ತವೆ. ಇಂಥವರು ಅಂತರಂಗದಲ್ಲಿ ಏಕಾಂಗಿ ಆಗಿರುತ್ತಾರೆ ಮತ್ತು ಹೆಚ್ಚಿನ ಹಣ ಮಾತ್ರ ಇವರ ಏಕಾಕಿತನವನ್ನು ನೀಗಿಸುವ ದಾರಿಯಾಗುತ್ತದೆ. ಇದರಿಂದಾಗಿ ನಿಧಾನವಾಗಿ ಇವರ ಕ್ರೌರ್ಯ ಹೆಚ್ಚುತ್ತಲೇ ಹೋಗುತ್ತದೆ ಎನ್ನುವುದು ಕೂಡ ಅಮೆರಿಕದ ಬರ್ಕ್‌ಲಿ ವಿಶ್ವವಿದ್ಯಾನಿಲಯದ ಅಧ್ಯಯನಗಳಲ್ಲಿ ಕಂಡುಬಂದಿದೆ.

ಇವತ್ತಿನ ಪ್ರಜಾಪ್ರಭುತ್ವಗಳು ಹೆಸರಿಗೆ ಮಾತ್ರ ‘ಪ್ರಜೆಗಳ ಆಡಳಿತ’ ಎನ್ನಿಸಿಕೊಂಡಿವೆ. ಪರದೆಯ ಹಿಂದಿನಿಂದ ಹಣವಂತರು ಪ್ರಪಂಚದ ಎಲ್ಲಾ ದೇಶಗಳ ರಾಜಕೀಯ ಅಧಿಕಾರವನ್ನು ನಿಯಂತ್ರಣದಲ್ಲಿ ಇರಿಸಿಕೊಂಡಿದ್ದಾರೆ. ನ್ಯಾಯಾಂಗ ಕೂಡ ತನ್ನ ಪಾವಿತ್ರ್ಯ ಉಳಿಸಿಕೊಂಡಿಲ್ಲ. ಹಾಗಾಗಿ ಶ್ರೀಮಂತರ ಎಲ್ಲಾ ಕುಕೃತ್ಯಗಳು ಕಾನೂನಿನ ಹಿಡಿತದಿಂದ ಸುಲಭವಾಗಿ ತಪ್ಪಿಸಿಕೊಳ್ಳುತ್ತವೆ. ಅದಿಲ್ಲದಿದ್ದರೆ 2005ರಲ್ಲಿಯೇ ಎಪ್‌ಸ್ಟೈನ್ ವಿರುದ್ಧ ಮೊದಲ ದೂರು ದಾಖಲಾಗಿದ್ದರೂ, 2019ರಲ್ಲಿ ಅವನು ಸಾಯುವವರೆಗೂ ತನ್ನ ಪ್ರಭಾವವನ್ನು ಉಳಿಸಿಕೊಳ್ಳುವುದು ಹೇಗೆ ಸಾಧ್ಯ? ಇಂತಹ ಶ್ರೀಮಂತರು ಅತ್ಯಂತ ದುಬಾರಿ ವಕೀಲರನ್ನು ನೇಮಿಸಿಕೊಂಡು ಕಾನೂನಿನ ಸಣ್ಣಪುಟ್ಟ ಕುಂದುಗಳನ್ನು ಬಳಸಿಕೊಂಡು ಸುರಕ್ಷಿತವಾಗಿರುತ್ತಾರೆ. ಅಮೆರಿಕದಂತಹ ದೇಶದಲ್ಲಿ ಶಿಕ್ಷೆಯನ್ನು ಚೌಕಾಸಿ ಮಾಡಿ ಕಡಿಮೆ ಮಾಡಿಸಿಕೊಳ್ಳುವ ವ್ಯವಸ್ಥೆಗೆ ‘ಪ್ಲೀ ಬಾರ್ಗೈನ್’ ಎನ್ನುವ ಗೌರವದ ಹೆಸರಿನಿಂದ ಅವಕಾಶ ನೀಡಲಾಗಿದೆ. ಈ ಎಲ್ಲ ಅಂಶಗಳು ಶ್ರೀಮಂತರಲ್ಲಿ ವ್ಯವಸ್ಥೆಯನ್ನು ಧಿಕ್ಕರಿಸಿ ಕಾನೂನುಬಾಹಿರವಾಗಿ ಮತ್ತು ಅನೈತಿಕವಾಗಿ ತಮ್ಮ ಗುರಿಯನ್ನು ಸಾಧಿಸಿಕೊಳ್ಳುವ ದುರಹಂಕಾರವನ್ನು ತುಂಬುತ್ತಾ ಬಂದಿದೆ.

ಇನ್ನೊಂದು ಕಡೆ ತೀವ್ರವಾಗಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ ಹೆಚ್ಚಿನ ಜನರನ್ನು ಹತಾಶೆ, ಅಸಹಾಯಕತೆಗಳತ್ತ ನೂಕುತ್ತಿದೆ. ಇಂತಹವರನ್ನು ಹಣ, ಸ್ಥಾನಮಾನ, ಸುಖ ಜೀವನದ ಆಸೆಗಳತ್ತ ಸೆಳೆಯುವುದು ಸುಲಭ. ಜೀವಿಸುವ ಅನಿವಾರ್ಯತೆಗಾಗಿ ಕೆಲವರು ಬಲಿಪಶುಗಳಾದರೆ, ಹೆಚ್ಚಿನ ಹಣದ ಆಸೆಗೆ ಇನ್ನು ಕೆಲವರು ಬಲಿಪಶುಗಳಾಗಲು ಸಿದ್ಧರಾಗಬಹುದು. ಅಂದರೆ, ಬಲಿಪಶುಗಳನ್ನು ಉತ್ಪನ್ನ ಮಾಡುವ ಒಂದು ಅಗೋಚರ ಸಮಾನಾಂತರ ವ್ಯವಸ್ಥೆ ಕೂಡ ಇವತ್ತಿನ ಆರ್ಥಿಕ ನೀತಿಗಳಿಂದ ಸೃಷ್ಟಿಯಾಗುತ್ತಿದೆ. ಹೀಗೆ ಬಲಿಪಶುಗಳಾಗಲು ಸಿದ್ಧವಾಗಿರುವ ದೊಡ್ಡ ಜನಸಮೂಹ ಮತ್ತು ಬಲಿ ಪಡೆದುಕೊಳ್ಳಲು ಕಾಯುತ್ತಿರುವ ಶ್ರೀಮಂತ ವರ್ಗ ಇವೆರಡೂ ಸೇರಿ ಒಬ್ಬ ಜೆಫ್ರಿ ಎಪ್‌ಸ್ಟೈನ್‌ನನ್ನು ಸೃಷ್ಟಿ ಮಾಡಿದೆ. ಇಂತಹ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸದಿದ್ದರೆ ಮತ್ತೆ ಮತ್ತೆ ಜೆಫ್ರಿ ಎಪ್‌ಸ್ಟೈನ್‌ಗಳು ಸೃಷ್ಟಿಯಾಗುವುದನ್ನು ತಡೆಯುವುದಾದರೂ ಹೇಗೆ?

ನಮ್ಮ ದೇಶದ ರಾಮ್‌ರಹೀಮ್, ಆಸಾರಾಮ್ ಬಾಪು, ಪ್ರಜ್ವಲ್ ರೇವಣ್ಣ ಅಂತಹವರು ಸೃಷ್ಟಿಯಾಗಿರುವುದು ಕೂಡ ಇಂತಹ ವ್ಯವಸ್ಥೆಯಿಂದಲೇ ಎನ್ನುವುದನ್ನು ಗಮನದಲ್ಲಿ ಇಡಬೇಕು. ಎಪ್‌ಸ್ಟೈನ್‌ಗಳನ್ನು ತಯಾರಿಸುತ್ತಿರುವ ಕಾರ್ಖಾನೆಗಳನ್ನು ಮುಚ್ಚದಿದ್ದರೆ ಮತ್ತೆಮತ್ತೆ ಅಂಥವರು ಹುಟ್ಟಿಕೊಳ್ಳುತ್ತಲೇ ಹೋಗುವುದನ್ನು ತಡೆಯಲಾಗದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯದ ಕರಾವಳಿ ಮತ್ತು ಮಲೆನಾಡಿನ ಕೊಂಡಿಯಾಗಿರುವ ಆಗುಂಬೆ ಘಾಟಿಯಲ್ಲಿ ಹಾದು ಹೋಗುವ ಕಿರಿದಾದ ರಾಷ್ಟ್ರೀಯ ಹೆದ್ದಾರಿಯನ್ನು ವಿಸ್ತರಿಸಲು ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಮುಂದಾಗಿದೆ. ಪಾದಚಾರಿ ಮಾರ್ಗ ಸಹಿತ ದ್ವಿಪಥ ಹೆದ್ದಾರಿ ಅಥವಾ ಸುರಂಗ ಮಾರ್ಗ ನಿರ್ಮಾಣದ ಕಾರ್ಯಸಾಧ್ಯತೆ ಬಗ್ಗೆ ಅಧ್ಯಯನ ನಡೆಸಿ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಟೆಂಡರ್ ಕರೆದಿದೆ. ಆಗುಂಬೆಯಲ್ಲಿ ಸುರಂಗ ನಿರ್ಮಾಣ ಪರಿಸರಕ್ಕೆ ಮಾರಕವಾಗಬಹುದು ಎಂದು ಪರಿಸರವಾದಿಗಳು ಎಚ್ಚರಿಸಿದ್ದಾರೆ. ಉಡುಪಿ–ಶಿವಮೊಗ್ಗ ಜಿಲ್ಲೆಗಳ ನಡುವೆ ಸುಗಮ ಸಂಚಾರಕ್ಕೆ ರಸ್ತೆ ಅಭಿವೃದ್ಧಿ ಅಗತ್ಯ ಎಂದು ಜನಪ್ರತಿನಿಧಿಗಳು ವಾದಿಸುತ್ತಿದ್ದಾರೆ. ಈ ವಿಚಾರವು ಪರಿಸರ ಮತ್ತು ಅಭಿವೃದ್ಧಿ ನಡುವಿನ ಚರ್ಚೆಯನ್ನು ಹುಟ್ಟುಹಾಕಿದೆ

ಆಗುಂಬೆ ಘಾಟಿಯಲ್ಲಿನ ಹಿಮ್ಮುರಿ ತಿರುವುಗಳ ವಿಹಂಗಮ ನೋಟ: ಪ್ರಜಾವಾಣಿ ಚಿತ್ರ/ ಫಕ್ರುದ್ದೀನ್ ಎಚ್.

• ಪ್ರವೀಣ್ ಕುಮಾರ್ ಪಿ.ವಿ.

ಪರಿಸರ Vs ಅಭಿವೃದ್ಧಿ

ಆಗುಂಬೆ ಘಾಟಿಯಲ್ಲಿ ಸುರಂಗ ಮಾರ್ಗ: ಸೂಕ್ಷ್ಮ ಪರಿಸರಕ್ಕೆ ಧಕ್ಕೆಯ ಆತಂಕ

ರಾಷ್ಟ್ರೀಯ ಹೆದ್ದಾರಿ 169 ಎ. ಉಡುಪಿ ಜಿಲ್ಲೆಯನ್ನು ಶಿವಮೊಗ್ಗ ಜಿಲ್ಲೆ ಜೊತೆ ಬೆಸೆಯುತ್ತದೆ. ಪಶ್ಚಿಮ ಘಟ್ಟದ ಮೂಲಕ ಹಾದು ಹೋಗುವ ಈ ಹೆದ್ದಾರಿ ಆಗುಂಬೆ ಘಾಟಿ ಮೂಲಕ ಸಾಗುತ್ತದೆ. ರಸ್ತೆಯು ಆಗುಂಬೆ ಘಾಟಿ ಭಾಗದಲ್ಲಿ ತೀರಾ ಕಿರಿದಾಗಿದೆ. ಇಲ್ಲಿನ ರಸ್ತೆ ಕೆಲವೆಡೆ 5 ಮೀಟರ್‌ಗಳಷ್ಟೂ ಅಗಲವಿಲ್ಲ. 14 ಹಿಮ್ಮುರಿ (ಹೇರ್‌ಪಿನ್) ತಿರುವುಗಳನ್ನು ಹೊಂದಿರುವ ಈ ಘಾಟಿಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ಇಲ್ಲ. ಪ್ರಯಾಣಿಕರು ಲಘು ವಾಹನಗಳ ಮೂಲಕ ಅಥವಾ ಮಿನಿ ಬಸ್‌ಗಳ ಮೂಲಕ ಮಾತ್ರ ಸಂಚರಿಸಬಹುದಷ್ಟೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಿಂದ ಆರಂಭಗೊಳ್ಳುವ ಈ ಘಾಟಿಯು ಜಿಲ್ಲೆಯನ್ನು ಚಿಕ್ಕಮಗಳೂರು ಜಿಲ್ಲೆ ಮತ್ತು ಕರಾವಳಿ ಜೊತೆಗೆ ಸಂಪರ್ಕಿಸುವ ಪ್ರಮುಖ ಕೊಂಡಿಯಾಗಿದೆ. ಆಗುಂಬೆ ಘಾಟಿಯಲ್ಲಿ ಪ್ರತಿದಿನ 10 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತವೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಿಂದ ಆಗುಂಬೆವರೆಗಿನ 31 ಕಿ.ಮೀ ಉದ್ದದ ರಸ್ತೆಯನ್ನು ದ್ವಿಪಥವನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ. ಹೆಬ್ರಿಯಿಂದ ಉಡುಪಿವರೆಗಿನ 32 ಕಿ.ಮೀ ಉದ್ದದ ರಸ್ತೆಯ ಚತುಷ್ಪಥ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ ಎನ್ನುತ್ತವೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ (ಎನ್‌ಎಚ್‌ಎಐ) ಮೂಲಗಳು.

ಮೇಗರವಳ್ಳಿಯಿಂದ ಆಗುಂಬೆ ನಡುವೆ ಸುಮಾರು ಮೂರು ಕಿ.ಮೀ ಉದ್ದದ ರಸ್ತೆಯನ್ನು ದ್ವಿಪಥಗೊಳಿಸುವ ಕಾಮಗಾರಿ ಅರಣ್ಯ ಇಲಾಖೆಯ ಅನುಮತಿ ವಿಳಂಬದ ಕಾರಣದಿಂದಾಗಿ ಇನ್ನೂ ಅನುಷ್ಠಾನವಾಗಿಲ್ಲ. ಆಗುಂಬೆಯಿಂದ ಸೋಮೇಶ್ವರವರೆಗಿನ 10 ಕಿ.ಮೀ ಉದ್ದದ ಆಗುಂಬೆ ಘಾಟಿಯ ಭಾಗ ಹಾಗೂ ಸೋಮೇಶ್ವರದಿಂದ ಹೆಬ್ರಿವರೆಗಿನ 10.6 ಕಿ.ಮೀ ಉದ್ದದ ರಸ್ತೆ ಇನ್ನೂ ವಿಸ್ತರಣೆ ಆಗಿಲ್ಲ. ವಿಸ್ತರಣೆಗೆ ಬಾಕಿ ಇರುವ ಸುಮಾರು 20 ಕಿ.ಮೀ ಉದ್ದದ ರಸ್ತೆಯು ದಟ್ಟ ಕಾನನದೊಳಗೆ ಹಾದುಹೋಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಈ ಘಾಟಿಯನ್ನು ಬಳಸುವ ಕಾರು ಮತ್ತಿತರ ವಾಹನಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಮಳೆಗಾಲದಲ್ಲಿ ಭೂಕುಸಿತ ಉಂಟಾದಾಗ, ಮರಗಳು ಬಿದ್ದಾಗ, ವಾಹನಗಳು ಕೆಟ್ಟು ನಿಂತಾಗಲೆಲ್ಲ ಆಗುಂಬೆ ಘಾಟಿಯಲ್ಲಿ ವಾಹನ ದಟ್ಟಣೆ ಸಮಸ್ಯೆ ಎದುರಾಗುವುದು ಮಾಮೂಲಿ. ಘಾಟಿಯಲ್ಲಿ ವಾಹನ ದಟ್ಟಣೆ ಉಂಟಾದಾಗ ಕೆಲವೊಮ್ಮೆ ಈ ಮಾರ್ಗದಲ್ಲಿ ವಾಹನಗಳ ಸಾಲು ಕಿಲೋಮೀಟರ್‌ಗಟ್ಟಲೆ ಬೆಳೆಯುತ್ತದೆ. ಇಲ್ಲಿ ರಸ್ತೆಯೂ ಕಿರಿದಾಗಿರುವುದರಿಂದ ಸಂಚಾರವನ್ನು ಸಹಜ ಸ್ಥಿತಿಗೆ ತರಲು ಹರಸಾಹಸ ಪಡಬೇಕಾಗುತ್ತದೆ.

ತೀರಾ ಕಡಿದಾಗಿರುವ, ದಟ್ಟವಾದ ನಿತ್ಯಹರಿದ್ವರ್ಣದ ಕಾಡುಗಳಿಂದ ಆವೃತವಾಗಿರುವ ಈ ಘಾಟಿಯಲ್ಲಿ ರಸ್ತೆ ವಿಸ್ತರಣೆಗೆ ಇರುವ ಅವಕಾಶಗಳು ಕಡಿಮೆ. ಆಗುಂಬೆ ಘಾಟಿಯ 14 ತಿರುವುಗಳ ಸಂಖ್ಯೆಯನ್ನು ಕಡಿತಗೊಳಿಸುವ ಪ್ರಸ್ತಾವವಿತ್ತು. ಭಾರಿ ಸಂಖ್ಯೆಯಲ್ಲಿ ಮರಗಳನ್ನು ಕಡಿಯಬೇಕಾಗುತ್ತದೆ ಎಂಬ ಕಾರಣಕ್ಕೆ ಆ ಪ್ರಸ್ತಾವ ಕಾರ್ಯಸಾಧುವಲ್ಲ ಎಂಬ ನಿರ್ಧಾರಕ್ಕೆ ಪ್ರಾಧಿಕಾರ ಬಂದಿತ್ತು. ಆಗುಂಬೆ ಘಾಟಿಯ ಸೂಕ್ಷ್ಮ ಪರಿಸರ ವ್ಯವಸ್ಥೆಗೆ ಹೆಚ್ಚಿನ ಹಾನಿ ಆಗದಂತೆ ರಸ್ತೆ ಅಭಿವೃದ್ಧಿ ಮಾಡಲು ಸುರಂಗ ಮಾರ್ಗ ನಿರ್ಮಿಸುವ ಬಗ್ಗೆ ಚರ್ಚೆ ಹಿಂದಿನಿಂದಲೂ ನಡೆಯುತ್ತಿದೆ.

ಚರ್ಚೆ ಮತ್ತೆ ಮುನ್ನೆಲೆಗೆ: ಈ ಹೆದ್ದಾರಿಯಲ್ಲಿ 30.75ನೇ ಕಿ.ಮೀಯಿಂದ (ಆಗುಂಬೆ) 51.60 ಕಿ.ಮೀ (ಹೆಬ್ರಿ) ನಡುವೆ (20.85 ಕಿ.ಮೀ) ಪಾದಚಾರಿ ಮಾರ್ಗ ಒಳಗೊಂಡ ದ್ವಿಪಥ ರಸ್ತೆ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಲು ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ₹2.33 ಕೋಟಿ ಮೊತ್ತದ ಟೆಂಡರ್ ಕರೆದಿರುವುದು ಸುರಂಗ ಮಾರ್ಗದ ಚರ್ಚೆ ಮತ್ತೆ ಮುನ್ನೆಲೆಗೆ ಬರುವಂತೆ ಮಾಡಿದೆ. ಡಿಪಿಆರ್ ವ್ಯಾಪ್ತಿಯು ನಿರ್ದಿಷ್ಟವಾಗಿ ಸುರಂಗ ವಿನ್ಯಾಸ ತಜ್ಞರು ಮತ್ತು ಹಿರಿಯ ಭೂ-ಭೌತಶಾಸ್ತ್ರಜ್ಞರ ತೊಡಗಿಸಿಕೊಳ್ಳುವಿಕೆ ಒಳಗೊಂಡಿದೆ; ಸುರಂಗ ಮಾರ್ಗ ನಿರ್ಮಾಣದ ಆಯ್ಕೆಯ ಕಾರ್ಯಸಾಧ್ಯತೆ ಪರೀಕ್ಷಿಸಲು, ವಿವರವಾದ ಭೂ-ತಾಂತ್ರಿಕ ಪರಿಶೀಲನೆಗೂ ಅವಕಾಶ ಕಲ್ಪಿಸಲಾಗಿದೆ.

ಪರಿಸರವಾದಿಗಳ ಆತಂಕ: ಇದರ ಬೆನ್ನಲ್ಲೇ, ಪರಿಸರ ಕಾರ್ಯಕರ್ತರು ಕಳವಳ ವ್ಯಕ್ತಪಡಿಸಿದ್ದು, ಆಗುಂಬೆ ಘಾಟಿಯಲ್ಲಿ ಸುರಂಗ ಕೊರೆದಿದ್ದೇ ಆದರೆ, ಅದು ಭೂಕುಸಿತಕ್ಕೆ ಕಾರಣವಾಗಬಲ್ಲುದು ಎಂದಿದ್ದಾರೆ.

‘ಆಗುಂಬೆ ಘಾಟಿ ಸೋಮೇಶ್ವರ ವನ್ಯಜೀವಿಧಾಮದೊಳಗೆ ಹಾದುಹೋಗಿದೆ. ಈ ಘಾಟಿ ರಸ್ತೆಯ ಇಕ್ಕೆಲಗಳಲ್ಲೂ ದಟ್ಟ ಕಾನನವಿದ್ದು, ಅದು ಕಾಳಿಂಗ ಸರ್ಪ, ಸಿಂಹಬಾಲದ ಸಿಂಗಳೀಕ ಸೇರಿದಂತೆ ಹಲವು ಅಪರೂಪದ ಜೀವವೈವಿಧ್ಯದ ಆವಾಸಸ್ಥಾನ. ಇಲ್ಲಿ ಹುಟ್ಟುವ, ಹರಿಯುವ ಸಣ್ಣಪುಟ್ಟ ತೊರೆಗಳು ಘಟ್ಟದ ಕೆಳಗಿನ ನದಿಗಳನ್ನು ವರ್ಷಪೂರ್ತಿ ಜೀವಂತವಾಗಿಟ್ಟಿದೆ. ಇಲ್ಲಿ ಕಡಿದಾದ ಬೆಟ್ಟಗಳ ಇರುವಿಕೆಯ ಕಾರಣಕ್ಕೆ ತೀರ್ಥಹಳ್ಳಿ, ಶೃಂಗೇರಿ, ಕೊಪ್ಪ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಳೆ ಬರುತ್ತದೆ. ಈ ನಿಸರ್ಗ ಸಂಪತ್ತು ಒದಗಿಸುವ ಪರಿಸರ ಸೇವೆ ಜನಸಮುದಾಯದ ಜೀವನೋಪಾಯಕ್ಕೆ ಅಮೂಲ್ಯವಾದುದು’ ಎನ್ನುತ್ತಾರೆ ಪರಿಸರ ಕಾರ್ಯಕರ್ತ ನಾಗರಾಜ ಕೂವೆ.

‘ಮಳೆಗಾಲದಲ್ಲಿ ಆಗುಂಬೆ ಘಾಟಿಯಲ್ಲಿ ಪದೇ ಪದೇ ಭೂಕುಸಿತ ಸಂಭವಿಸುತ್ತಿದೆ. ಅಲ್ಲಿ ರಸ್ತೆ ವಿಸ್ತರಣೆಗಾಗಿ ಅಕ್ಕಪಕ್ಕದ ಗುಡ್ಡಗಳನ್ನು ಕಡಿದರೆ ಭೂಕುಸಿತ ಮತ್ತಷ್ಟು ಜಾಸ್ತಿ ಆಗಲಿದೆ. ಕೆಲವು ತಿರುವುಗಳಲ್ಲಿ ರಸ್ತೆ ವಿಸ್ತರಣೆ ಮಾಡಲು ಬೇಕಾಗುವಷ್ಟು ಜಾಗವೂ ಇಲ್ಲ. ಅಲ್ಲಿ ಜೆಸಿಬಿ, ಹಿಟಾಚಿಯಂತಹ ಭಾರಿ ಯಂತ್ರಗಳನ್ನು ಬಳಸಿ ಕಾಮಗಾರಿ ನಡೆಸುವುದು ಅವೈಜ್ಞಾನಿಕ. ಅದರ ಬದಲು ಈಗ ಇರುವ ರಸ್ತೆಗೆ ಪ್ರತಿವರ್ಷ ಡಾಂಬರು ಹಾಕಿ ಚೆನ್ನಾಗಿ ನಿರ್ವಹಣೆ ಮಾಡುವುದು ಜನರಿಗೂ ಇಲ್ಲಿನ ವನ್ಯಜೀವಿಗಳಿಗೂ ಒಳ್ಳೆಯದು. ಆಗುಂಬೆ ಘಾಟಿಯಂತಹ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ರಸ್ತೆ ವಿಸ್ತರಣೆಯಂತಹ ಅವೈಜ್ಞಾನಿಕ ಯೋಜನೆಗಳಿಗೆ ರಾಜ್ಯ ಸರ್ಕಾರ ಅವಕಾಶ ಕೊಡಬಾರದು. ಸುರಂಗ ಮಾರ್ಗಕ್ಕೆ ಡಿಪಿಆರ್ ತಯಾರಿಸಲು ವನ್ಯಜೀವಿ ವಿಭಾಗ ಬಿಡಬಾರದು’ ಎಂಬುದು ಅವರ ಆಗ್ರಹ.

ಪೂರಕ ಮಾಹಿತಿ: ವೆಂಕಟೇಶ್ ಜಿ.ಎಚ್.

ಆಗುಂಬೆ ವೈಶಿಷ್ಟ್ಯ

- ಪಶ್ಚಿಮ ಘಟ್ಟದ ಪ್ರಮುಖ ಪ್ರದೇಶ, ಅಪರೂಪದ ಜೀವ ವೈವಿಧ್ಯ, ಪರಿಸರ ಸೂಕ್ಷ್ಮ ತಾಣ
- ಸಮುದ್ರ ಮಟ್ಟದಿಂದ 2,700 ಅಡಿಗಳಷ್ಟು ಎತ್ತರದಲ್ಲಿರುವ ಪ್ರದೇಶ
- ಅತಿ ಹೆಚ್ಚು ಮಳೆಯಾಗುವ ಪ್ರದೇಶ ಎಂಬ ಹೆಗ್ಗಳಿಕೆ
- ಕಾಳಿಂಗ ಸರ್ಪ, ಸಿಂಹಬಾಲ ಸಿಂಗಳೀಕಗಳ ಆವಾಸ
- ರುದ್ರ ರಮಣೀಯ ಪ್ರಕೃತಿ ಸೌಂದರ್ಯ, ನಯನ ಮನೋಹರ ಸೂರ್ಯಾಸ್ತಕ್ಕೆ ಹೆಸರುವಾಸಿ

20.85 ಕಿ.ಮೀ
ಅಭಿವೃದ್ಧಿಗೆ ಗುರುತಿಸಲಾದ ಹೆದ್ದಾರಿಯ ಉದ್ದ

₹2.33 ಕೋಟಿ
ಡಿಪಿಆರ್ ಸಿದ್ಧಪಡಿಸಲು ನಿಗದಿಪಡಿಸಿರುವ ವೆಚ್ಚ

10,000 ಕ್ಕೂ ಹೆಚ್ಚು
ಆಗುಂಬೆ ಘಾಟಿಯಲ್ಲಿ ಪ್ರತಿ ದಿನ ಸಂಚರಿಸುವ ವಾಹನಗಳು

ಆಗುಂಬೆ ಘಾಟಿಯ ಹಿಮ್ಮುರಿ ತಿರುವು

ಆತಂಕ ಏನೇನು?

- ಸುರಂಗ ನಿರ್ಮಾಣದಿಂದ ಭೂಪದರಕ್ಕೆ ಹಾನಿಯಾಗಬಹುದು
- ಭೂಕುಸಿತದ ಸಮಸ್ಯೆ ತೀವ್ರವಾಗಬಹುದು
- ಕಾಮಗಾರಿಯಿಂದ ಅರಣ್ಯ ನಾಶದ ಜೊತೆಗೆ ಪ್ರಾಣಿ ಸಂಕುಲಕ್ಕೂ ತೊಂದರೆ

ಜೀವವೈವಿಧ್ಯದ ಮೇಲೆ ಪರಿಣಾಮ

ಆಗುಂಬೆ ಘಾಟಿಯ ಸೂಕ್ಷ್ಮ ಪರಿಸರದಲ್ಲಿ ಸುರಂಗ ಮಾರ್ಗ, ದ್ವಿಪಥ ರಸ್ತೆ, ಪಾದಚಾರಿ ಮಾರ್ಗ ನಿರ್ಮಿಸಿದರೆ, ಅದರ ದುಷ್ಪರಿಣಾಮಗಳನ್ನು ಇಲ್ಲಿನ ಸಮೃದ್ಧ ಜೀವವೈವಿಧ್ಯ ಹಾಗೂ ಘಟ್ಟದ ಮೇಲಿನ ಮತ್ತು ಕೆಳಗಿನ ರೈತರು ಎದುರಿಸಬೇಕಾಗುತ್ತದೆ. ಇಲ್ಲಿನ ಸೂಕ್ಷ್ಮ ಭೂರಚನೆ, ಮಣ್ಣಿನ ಗುಣಗಳನ್ನು ಗಮನಿಸಿದಾಗ ಇಲ್ಲಿ ಸುರಂಗ ಮಾರ್ಗದ ಹೆಸರಿನಲ್ಲಿ ಭೂಮಿ ಕೊರೆಯುವುದು ಮೂರ್ಖತನ. ಭಾರಿ ಯಂತ್ರಗಳನ್ನು ಬಳಸಿ ಭೂಮಿಯನ್ನು ಕೊರೆಯುವುದರಿಂದ, ಈ ಪ್ರದೇಶದಲ್ಲಿ ಭೂಕುಸಿತ ನಿಶ್ಚಿತ. ಆವಾಸ ಸ್ಥಾನ ನಾಶವಾದರೆ ಭವಿಷ್ಯದಲ್ಲಿ ಕಾಳಿಂಗ ಸರ್ಪಗಳು ಜನವಸತಿ ಪ್ರದೇಶಗಳತ್ತ ಮುಖಮಾಡುತ್ತವೆ. ಆನೆ, ಕಾಟಿ, ಹುಲಿಗಳಂತೆ ಅವುಗಳ ವರ್ತನೆಗಳಲ್ಲೂ ಬದಲಾವಣೆ ಆಗಬಹುದು. ಇದರಿಂದ ಮಾನವ–ಕಾಳಿಂಗ ಸರ್ಪ ಸಂಘರ್ಷ ಹುಟ್ಟಬಹುದು.

ನಾಗರಾಜ ಕೂವೆ, ಪರಿಸರ ಕಾರ್ಯಕರ್ತ

ಸಮಸ್ಯೆಗಳಿಗೆ ಹೆದ್ದಾರಿ ವಿಸ್ತರಣೆ ಪರಿಹಾರ

ಆಗುಂಬೆ ಘಾಟಿಯು ಕರಾವಳಿಯೊಂದಿಗೆ ಮಧ್ಯಕರ್ನಾಟಕ ಹಾಗೂ ಮಲೆನಾಡನ್ನು ಬೆಸೆಯುವ ರಾಜಮಾರ್ಗ. ನಿತ್ಯ ಇಲ್ಲಿ ಸಾವಿರಾರು ವಾಹನಗಳು ಓಡಾಡುತ್ತವೆ. ಆಸ್ಪತ್ರೆಗೆ ರೋಗಿಗಳು, ಕರಾವಳಿ ಭಾಗಕ್ಕೆ ಆಹಾರ ಸಾಮಗ್ರಿ, ತರಕಾರಿ, ಹಣ್ಣು ಪೂರೈಕೆಯ ಜೊತೆಗೆ ಅಲ್ಲಿಂದ ಮತ್ಸ್ಯ ಹಾಗೂ ಪೆಟ್ರೋಲಿಯಂ ಉತ್ಪನ್ನಗಳು ಇತ್ತ ಕಡೆ ಬರುತ್ತಿವೆ. ಪ್ರಮುಖ ಧಾರ್ಮಿಕ ಕೇಂದ್ರಗಳ ಜೊತೆಗೆ ಕೇರಳ–ಕರ್ನಾಟಕದ ಸಂಪರ್ಕದ ಕೊಂಡಿಯೂ ಹೌದು. ವರ್ಷದಿಂದ ವರ್ಷಕ್ಕೆ ಈ ಮಾರ್ಗದಲ್ಲಿ ವಾಹನ ದಟ್ಟಣೆ ಹೆಚ್ಚುತ್ತಿದ್ದು, ಅದೇ ರೀತಿ ಭೂ ಕುಸಿತವೂ ಸಂಭವಿಸುತ್ತಿರುತ್ತದೆ. ಮಳೆಗಾಲದಲ್ಲಿ ವಾಹನ ಸಂಚಾರ ಸ್ಥಗಿತಗೊಳ್ಳುತ್ತದೆ. ಹೀಗಾಗಿ ಅಲ್ಲಿನ ಸಮಸ್ಯೆ ನಿವಾರಣೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಎರಡು ಅವಕಾಶಗಳನ್ನು ಅವಲೋಕಿಸುತ್ತಿದೆ. ಅದರ ಭಾಗವಾಗಿ ಘಾಟಿಯ ಈಗಿನ ಕಿರಿದಾದ ರಸ್ತೆಯನ್ನು ವಿಸ್ತರಿಸಲು ಹಾಗೂ ಸುರಂಗ ಮಾರ್ಗ ನಿರ್ಮಾಣದ ಬಗ್ಗೆ ಡಿಪಿಆರ್ ತಯಾರಿಸಲು ಈಗ ಟೆಂಡರ್ ಕರೆದಿದೆ. ರಸ್ತೆಯ ವಿಸ್ತರಣೆ, ಸುರಂಗ ಮಾರ್ಗ ಇವೆರಡರಲ್ಲಿ ಯಾವುದು ಸೂಕ್ತ ಆಯ್ಕೆ ಎಂಬುದರ ಬಗ್ಗೆ ತಜ್ಞರ ವರದಿ ಆಧರಿಸಿ ನಂತರ ಕ್ರಮ ಕೈಗೊಳ್ಳಲಿದೆ.

ಬಿ.ವೈ.ರಾಘವೇಂದ್ರ, ಶಿವಮೊಗ್ಗ ಸಂಸದ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಟಿ20 ವಿಶ್ವಕಪ್‌ನಲ್ಲಿ ಆಡುತ್ತಿರುವ ಭಾರತ ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಅಲಿ ಅಘಾ ಅವರತ್ತ ಕೈ ಚಾಚಿರುವಂತೆ ಕಾಣುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಫೆಬ್ರುವರಿ 15ರಂದು ಎರಡು ತಂಡಗಳ ನಡುವಿನ ಪಂದ್ಯದ ವೇಳೆ ಸಲ್ಮಾನ್ ಅವರ ಕೈ ಕುಲುಕಲು ಸೂರ್ಯಕುಮಾರ್ ಅವರು ಮುಂದಾದರೂ, ಸಲ್ಮಾನ್ ಅವರು ನಿರಾಕರಿಸಿದರು ಎಂದು ಚಿತ್ರವನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಚಿತ್ರವನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ ಇದೇ ಚಿತ್ರವನ್ನು ಹಲವರು ಇಂಥದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ಮುಂದುವರಿದು, ಚಿತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರ ಮೇಲೆ ಜೆಮಿನಿ ವಾಟರ್ ಮಾರ್ಕ್ ಇರುವುದು ಕಂಡಿತು. ಚಿತ್ರವು ಕೃತಕ ಬುದ್ಧಿಮತ್ತೆ (ಎಐ) ನಿರ್ಮಿತ ಎನ್ನುವ ಸೂಚನೆಗಳು ಸಿಕ್ಕವು. ಚಿತ್ರವನ್ನು ಹೈವ್ ಮಾಡರೇಷನ್ ಎನ್ನುವ ಎಐ ಪತ್ತೆ ಸಾಧನದ ಮೂಲಕ ಪರೀಕ್ಷಿಸಿದಾಗ, ಇದು ಎಐ ನಿರ್ಮಿತ ಡೀಪ್‌ಫೇಕ್ ಚಿತ್ರವಾಗಿರುವ ಸಾಧ್ಯತೆ ಶೇ 99.9ರಷ್ಟು ಎನ್ನುವುದು ತಿಳಿಯಿತು. ಈ ಬಗ್ಗೆ ಗೂಗಲ್ ಸರ್ಚ್‌ನಲ್ಲಿ ಹುಡುಕಾಟ ನಡೆಸಿದಾಗ, 2025ರಲ್ಲಿ ನಡೆದ ಏಷ್ಯಾ ಕಪ್ ಪಂದ್ಯಾವಳಿಯ ನಂತರ ಎರಡೂ ತಂಡಗಳ ನಡುವೆ ಕೈ ಕುಲುಕುವ ಪರಿಪಾಟ ನಿಂತಿದೆ ಎನ್ನುವ ಮಾಹಿತಿ ಸಿಕ್ಕಿತು. ಎಐ ಚಿತ್ರವನ್ನು ಹಂಚಿಕೊಳ್ಳುವ ಮೂಲಕ ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಪಿ.ಚಂದ್ರಿಕಾ

ಮಾನುಷ ಪ್ರಯತ್ನ

ಮರಳುಗಾಡಿನಲ್ಲಿ ಗುರು ಶಿಷ್ಯರು ನಡೆಯುತ್ತಿದ್ದರು. ಇಬ್ಬರಿಗೂ ಬಾಯಾರಿಕೆ. ಶಿಷ್ಯ ಹೇಳಿದ, ‘ನೀರು ಸಿಕ್ಕಿಬಿಟ್ಟರೆ ಸಾಕು ಎನ್ನಿಸುತ್ತಿದೆ’ ಎಂದು. ಆಗ ಗುರು ಹೇಳಿದ, ‘ಮುಂದೆ ಸಿಗಬಹುದು’. ಶಿಷ್ಯ ಆತಂಕದಿಂದ, ‘ಮುಂದಿನದಿರಲಿ ಈಗ ನೀರು ಸಿಗದಿದ್ದರೆ ಜೀವ ಹೋಗಬಹುದಲ್ಲವೆ?’ ಎಂದ. ಗುರು, ‘ನೀನು ಬೇಕೆಂದು ಬಯಸುತ್ತ ಹೋದರೆ ನೀರಡಿಕೆ ಜಾಸ್ತಿಯಾಗುತ್ತದೆ. ಗೊತ್ತು ಇದು ಕಷ್ಟದ ಕಾಲ, ಮನಸ್ಸನ್ನು ದೇವರೆಡೆಗೆ ತಿರುಗಿಸು. ಅವನ ದಯೆಯಿದ್ದರೆ ಮುಂದೆ ಎಲ್ಲವೂ ಸರಿಯಾಗುತ್ತದೆ’ ಎಂದ.

ಹೀಗೆ ಇಬ್ಬರೂ ಮುಂದೆ ನಡೆಯುತ್ತಿರುವಾಗ ಒಂದು ದೊಡ್ಡ ಕಳ್ಳರ ಗುಂಪು ಎದುರಿಗೆ ಬಂದಿತು. ಅವರ ಬಗಲಲ್ಲಿ ಚರ್ಮದ ಚೀಲಗಳಲ್ಲಿ ನೀರು ತುಂಬಿತ್ತು. ಶಿಷ್ಯ ಓಡಿ ಹೋಗಿ ಅವರನ್ನು ಕೇಳಿದ, ‘ನೀವು ನೀರು ಕೊಡದೆ ಹೋದರೆ ನನ್ನ ಜೀವ ಹೋಗುತ್ತದೆ ದೊಡ್ಡ ಮನಸ್ಸು ಮಾಡಿ’ ಎಂದು. ಆ ಕಳ್ಳರ ನಾಯಕ, ‘ಪ್ರತಿಫಲ ಇಲ್ಲದೆ ನಾವು ಏನನ್ನೂ ಮಾಡಲಾರೆವು. ನಿಮ್ಮ ಬಳಿ ಏನಿದೆ ಎಲ್ಲವನ್ನೂ ಕೊಟ್ಟುಬಿಡಿ’ ಎಂದ. ಆಗ ಶಿಷ್ಯ, ‘ನಾವು ಭಿಕ್ಷೆ ಬೇಡಿ ಊಟ ಮಾಡುವವರು ನಿಮಗೆ ಕೊಡುವಂಥದ್ದು ನಮ್ಮಲ್ಲಿ ಏನಿರುತ್ತದೆ?’ ಎಂದ. ಕಳ್ಳ ನಗುತ್ತಾ, ‘ಇದೆ, ನೀರು ಕೊಡುವೆ. ನಿನ್ನ ಪ್ರಾಣವನ್ನು ಕೊಡುವೆಯಾ?’ ಎಂದ. ಬೆಚ್ಚಿಬಿದ್ದ ಶಿಷ್ಯ, ‘ನೀರಿನಷ್ಟೇ ಮುಖ್ಯ ನನ್ನ ಪ್ರಾಣ. ಪ್ರಾಣದಿಂದಿದ್ದರೆ ನೀರನ್ನು ಹುಡುಕಬಹುದು’ ಎಂದ. ಆದರೆ ಗುರು ಅವರೆದುರು ಬೊಗಸೆಯೊಡ್ಡಿ, ‘ನನ್ನ ಜೀವವನ್ನು ಕೊಡುವೆ, ನೀರನ್ನು ಕೊಡಿ’ ಎಂದು ಬೇಡಿದ. ಆಗ ಶಿಷ್ಯನೆಂದ, ‘ಗುರುವೇ ನೀರು ಕುಡಿದಾಕ್ಷಣ ಜೀವ ತೆಗೆಯುತ್ತಾರೆ. ಯೋಚಿಸಿ ಮುಂದೆ ನೀರು ಸಿಗಬಹುದಲ್ಲವಾ?’ ಎಂದು. ಆಗ ಗುರುವೆಂದ, ‘ಈಗ ನೀರು ಮುಖ್ಯ, ಜೀವ ಅಲ್ಲ’.

ಕಳ್ಳ ಅಚ್ಚರಿಯಿಂದ ಗುರುವಿಗೆ, ‘ಸಾವಿಗೂ ನೀನು ಹೆದರುವುದಿಲ್ಲವಾ’ ಎಂದು ಪ್ರಶ್ನಿಸಿದ. ‘ಹೇಗಾದರೂ ಸಾವು ನಿಶ್ಚಿತ ಎಂದಾದ ಮೇಲೆ ನೀರು ಕುಡಿದು ತೃಪ್ತಿಯಾಗಿ ಸಾಯುವೆ. ಮೊದಲು ನೀರು ಕೊಡು ನಂತರ ನಿನಗೆ ಹೇಗೆ ಇಷ್ಟವೋ ಹಾಗೆ ಮಾಡು’ ಎಂದ. ಕಳ್ಳನ ಮನಸ್ಸು ಕರಗುತ್ತದೆ. ಅವನು, ‘ನಿನ್ನ ಜೀವ ತೆಗೆದುಕೊಂಡು ನಾನೇನು ಮಾಡಬಲ್ಲೆ? ಸುಮ್ಮನೆ ಪರೀಕ್ಷೆ ಮಾಡಲು ಹೇಳಿದೆ. ತಗೋ ಮುಂದೆ ಎಲ್ಲಾದರೂ ಸಿಕ್ಕೆ ಸಿಗುತ್ತದೆ ತುಂಬಿಸಿಕೊಳ್ಳುವೆ’ ಎಂದು ಒಂದು ಚೀಲದಲ್ಲಿದ್ದ ನೀರನ್ನು ಕುಡಿಯಲು ಕೊಟ್ಟು ಹೊರಟು ಹೋಗುತ್ತಾನೆ. ಅತ್ಯಂತ ಕರುಣೆಯಿಂದ ಗುರು, ಶಿಷ್ಯನಿಗೆ ಮೊದಲು ನೀರನ್ನು ಕೊಟ್ಟ. ಅವನ ವಿವೇಕದಿಂದ ಇಬ್ಬರ ಜೀವವೂ ಉಳಿಯಿತು.

ಭಾವುಕನಾದ ಶಿಷ್ಯನಿಗೆ ಗುರು ಹೇಳಿದ, ‘ಒಂದು ಹೆಜ್ಜೆ ಮುಂದೆ ಇಡದೆ ಯಾವ ಅವಕಾಶವೂ ಬಾಗಿಲು ತೆರೆಯುವುದಿಲ್ಲ. ಕಷ್ಟದ ಹೊತ್ತಿನಲ್ಲಿ ವಿವೇಕ ಕೆಲಸ ಮಾಡಬೇಕು. ಅತಿ ಬುದ್ಧಿವಂತಿಕೆ, ಮುಂದಾಲೋಚನೆ ಯಾವುದೂ ಅಲ್ಲ... ದೇವರ ಕರುಣೆಯ ಕಣ್ಣು ನಮ್ಮ ಮೇಲೆ ಇರುತ್ತದೆ. ಅಲ್ಪ ಪ್ರಯತ್ನವೂ ನಮ್ಮ ಗುರಿಯನ್ನು ಸಾಧಿಸುತ್ತದೆ. ಪ್ರಯತ್ನವಿಲ್ಲದೆ ಸುಮ್ಮನೆ ನೋಡುಗರಾಗಿ ಹೊರಗೇ ಉಳಿದುಬಿಟ್ಟರೆ ಏನೂ ಸಂಭವಿಸುವುದಿಲ್ಲ' ಎಂದ. ಪ್ರಯತ್ನ ಮಾಡಬೇಕು ಅದು ಮಾತ್ರವೇ ನಮ್ಮನ್ನು ಕಷ್ಟದ ದೊಡ್ಡ ಸುಳಿಯಿಂದ ಕಾಪಾಡಿ ದಡಕ್ಕೆ ಮುಟ್ಟಿಸುತ್ತದೆ.

ಪದಬಂಧ 6320

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ವಾದ ನಡೆಯುತ್ತಿದ್ದಾಗಲೇ ಈ ಭಾಷಾಂತರ! (4)
3.ರಾಯರಿಗೆ ಅಬಾರಿಯಾಗಿರುವ ರಾಜಪ್ರತಿನಿಧಿ (4)
5.ಮಣಿ ಧರಿಸಿರುವ ಚಲುವೆ (3)
6.ಯಮನ ಬಳಿ ಕಳೆದ ಕಾಲ (3)
8.ನಗರದಲ್ಲಿ ಕೇಳಿಸಿದ ಚರ್ಮವಾದ್ಯ (3)
9.ಕಿರುಗೆಜ್ಜೆ ಇಲ್ಲಿ ತಿರುವುಮುರುವಾಗಿದೆ (3)
10.ಚಂದಾಹಣವಿದು (3)
11.ವರ ನೀಡಿದ ವಿಸ್ತಾರ ಹೇಳಿಕೆ (3)
12.ಪೂಜಾ ವೇಳೆಯಲ್ಲಿ ನೀರು ತುಂಬಿದ ಚೊಂಬು (3)
14.ಜಲದೊಳಗಿನ ಸಂಕೀರ್ಣ! (3)
16.ನೆಮ್ಮದಿ ಈ ರೀತಿ ಬಂದಿದೆ (4)
17.ಪರದೆಯ ಹಿಂದಿರುವ ಗುಟ್ಟು (4)

ಮೇಲಿಂದ ಕೆಳಕ್ಕೆ
1.ಬಟ್ಟೆಗಳನ್ನು ಮಡಿಮಾಡುವವನು (3)
2.ದರಬಾರಿನಲ್ಲಿ ವಿಧಿಸಿದ ಬೆಲೆ (2)
3.ರಾಜನ ಹೆಂಡತಿ (2)
4.ದುರಸ್ತಿಯನ್ನು ಹೀಗೆನ್ನಿ (3)
7.ಮೃತ್ಯುದೇವತೆಯ ಆಳು (5)
8.ನಯವಾದ ಮಾತಿನಲ್ಲೇ ಮೋಸ ಮಾಡಿದವ (5)
11.ಸರಸದ ವಿರುದ್ಧ ಪದ (3)
13.ಅಕ್ಕರೆಯಿಂದ ತಿನ್ನಿಸಿದ ಸಿಹಿ (3)
14.ಜವಾನನ ಸುತ್ತ ನೆರೆದಿರುವ ಮಂದಿ (2)
15.ಮರಕ್ಕೆ ಹಬ್ಬಿದ ಬಳ್ಳಿ (2)

6319ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಡಿಪಾಯ 3.ಆಯವ್ಯಯ
5.ಮಡದಿ 6.ಮರುಳ
7.ಗಹನ 9.ತಲ್ಲೀನ
11.ವಿರಾಮ 12.ಮಸೂರ
14.ಯಥೋಚಿತ 15.ವಿದೂಷಕ

ಮೇಲಿಂದ ಕೆಳಕ್ಕೆ:
1.ಅನುರಾಗ 2.ಯಮ 3.ಆದಿ
4.ಯಮಳ 6.ಮಡಿವಂತ
8.ನವಸುಮ 10.ನಳಪಾಕ
11.ವಿದಾಯ 12.ಮತ 13.ರವಿ

ಸುಡೊಕು 6704

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			6			5	
2					5			
		1	2			4		9
		2					4	
4								5
	1		3		2		7	
	2			1		8		
1			8					4
	8			3	7		1	

6703 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

19 ಫೆಬ್ರುವರಿ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ದ್ವಿತೀಯ ಗಂ 15-59 ನಕ್ಷತ್ರ: ಪೂರ್ವಾಭಾದ್ರ ಗಂ. 20-52 ಯೋಗ: ಸಿದ್ಧ ಗಂ. 20-43 ಕರಣ: ಕೌಲವ ಗಂ 15-59 ಕುಂಭ ಮಾಸದ 07 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 , ಸೂರ್ಯೋದಯ : 06-55 ಸೂರ್ಯಾಸ್ತ : 06-34 ಮುಸ್ಲಿಂ ದಿನಾಂಕ : 1 ರಂಜಾನ್ ದಿನ ವಿಶೇಷ : ರಾಮಕೃಷ್ಣ ಪರಮಹಂಸರ ಜನ್ಮದಿನ, ಶಿವಾಜಿ ಜಯಂತಿ, ರಂಜಾನ್ ಮೊದಲ ದಿನ, **ಅದೃಷ್ಟ ಸಂಖ್ಯೆ :** 10, 2

ಮೇಷ: ಔಷಧಿಗಳು ಅಡ್ಡ ಪರಿಣಾಮ ಬೀರುವಂತಾಗಬಹುದು. ಆದ್ದರಿಂದ ವೈದ್ಯರ ಸಲಹೆ ಇಲ್ಲದೆ ಔಷಧಿಗಳನ್ನು ಸೇವಿಸಬೇಡಿ. ಸಮಸ್ಯೆ, ದುಃಖವು ಎಲ್ಲರ ಜೀವನದಲ್ಲೂ ಇರುತ್ತದೆ. ಅದಕ್ಕಾಗಿ ಚಿಂತಿಸಬೇಡಿ.

ವೃಷಭ: ಕೌಟುಂಬಿಕ ಸಮಸ್ಯೆಗಳಿಗೆ ಎದುರುತ್ತರ ನೀಡದಿರುವುದು ಅತ್ಯುನ್ನತ ಪರಿಹಾರವೆಂದು ಅನುಭವಕ್ಕೆ ಬರುತ್ತದೆ. ಆರ್ಥಿಕವಾಗಿ ಸಾಕಷ್ಟು ಸಂಪಾದನೆಯಾಗುವುದರಿಂದ ಅನಿವಾರ್ಯದ ಖರ್ಚಿಗೇನೂ ಯೋಚನೆ ಇರುವುದಿಲ್ಲ.

ಮಿಥುನ: ದಿನಸಿ ವರ್ತಕರು ಆರ್ಥಿಕತೆಯಲ್ಲಿ ದುರ್ಬಲವಾಗಬಹುದು. ಎಚ್ಚರವಹಿಸಿ. ವಕೀಲೀ ವೃತ್ತಿಯನ್ನು ಅಭ್ಯಾಸಿಸುವವರಿಗೆ ಪಾಪ-ಪ್ರಜ್ಞೆ ಕಾಡಲಿದೆ. ಅವಿವಾಹಿತ ಹೆಣ್ಣುಮಕ್ಕಳಿಗೆ ಸಂಬಂಧವೊಂದು ಕೂಡಿ ಬರಲಿದೆ.

ಕರ್ಕಾಟಕ: ಸಮೀಪವರ್ತಿಗಳ ಸಲಹೆ ಸಹಕಾರದಿಂದ ವ್ಯಾಪಾರ ವಹಿವಾಟುಗಳಲ್ಲಿನ ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ಸಣ್ಣಪುಟ್ಟ ಅಡಚಣೆಗಳು ಕೆಲಸ ಕಾರ್ಯಗಳಿಗೆ ಅಡ್ಡಿಯಾಗಲಾರದು.

ಸಿಂಹ: ಪುಣ್ಯಸಂಪಾದನೆಗಾಗಿ ತಾಯಿಯೊಂದಿಗೆ ತೀರ್ಥಯಾತ್ರೆ ಕೈಗೊಳ್ಳುವ ಆಸೆ ಈಡೇರುವ ಲಕ್ಷಣಗಳು ಕಂಡುಬರಲಿವೆ. ಕಾರ್ಯ ಸಾಧನೆಗೆ ತೋರಿ ಬರುವ ಅಡ್ಡಿ ಆತಂಕಗಳು ನಿವಾರಣೆಯಾಗಲಿವೆ.

ಕನ್ಯಾ: ಆತ್ಮೀಯರಂತೆ ಮುಖವಾಡ ಹೊಂದಿರುವ ಅಕ್ಕ-ಪಕ್ಕದ ಹಿತಶತ್ರುಗಳ ಬಣ್ಣ ನಿಮ್ಮೆದುರು ಬಯಲಾಗಲಿದೆ. ನಿಮ್ಮ ಕಾರ್ಯರಂಗದಲ್ಲಿ ಹೊಸತನಕ್ಕೆ ಯೋಜನೆಯನ್ನು ರೂಪಿಸಬಹುದು.

ತುಲಾ: ಮುಂದಿನ ಕೆಲಸ ಹಾಗೂ ವೃತ್ತಿ ಜೀವನದ ಬಗ್ಗೆ ಗಂಭೀರ ಆಲೋಚನೆ ಮಾಡುವುದು ಮುಖ್ಯ. ಸಮಸ್ಯೆ ಬಗೆಹರಿಸಲು ಜಾಣತನ ತೋರುವಿರಿ. ಕೆಲವರಿಗೆ ಹಿರಿಯರ ಮಾರ್ಗದರ್ಶನ ಬೇಕೆನಿಸಲಿದೆ.

ವೃಶ್ಚಿಕ: ವಿಭಿನ್ನ ರೀತಿಯ ಮತ್ತು ಅತಿ ಕ್ಲಿಷ್ಟಕರ ಕೆಲಸವೊಂದನ್ನು ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ. ಈ ಕೆಲಸ ಮಾಡುವುದರಿಂದ ಸಾಕಷ್ಟು ಗೌರವವನ್ನು, ಹೆಸರನ್ನು ತರಲಿದೆ.

ಧನು: ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕ ಒತ್ತಡದ ಜೊತೆಯಲ್ಲಿ ಅಧಿಕ ಲಾಭ ದೊರಕಲಿದೆ. ಗುರುವಿನ ಮಾರ್ಗದರ್ಶನದಂತೆ ನಡೆಯುವ ಕೆಲಸದಲ್ಲಿ ಸರ್ವತೋಮುಖವಾದ ಅಭಿವೃದ್ಧಿ ಹೊಂದುವಿರಿ.

ಮಕರ: ವಸ್ತ್ರ ವಿನ್ಯಾಸಗಾರರಿಗೆ, ಚಿತ್ರಕಲೆ, ಕಥೆ-ಕವನಗಳನ್ನು ಬರೆಯುವವರಿಗೆ ನಿಮ್ಮ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ. ಎಲ್ಲರೊಂದಿಗೆ ವಿಷಯ ವಿನಿಮಯದಿಂದ ಗೊಂದಲಗಳಿಗೆ ಉತ್ತರ ಸಿಗಲಿದೆ.

ಕುಂಭ: ಸೋದರರೊಡನೆ ಅಥವಾ ದಾಯಾದಿಗಳೊಡನೆ ಇದ್ದ ಕಲಹಗಳು ನಿರ್ಮೂಲವಾಗಿ ಶುಭವಾಗಲಿದೆ. ಮುದ್ರಣ ವೃತ್ತಿಯವರು ತಪ್ಪಿಲ್ಲದೇ ಕಾರ್ಯ ನಿರ್ವಹಿಸುವುದರಿಂದ ಉತ್ತಮ ಲಾಭ ಬರುವುದು.

ಮೀನ: ಉನ್ನತ ಶಿಕ್ಷಣ ಮುಂದುವರಿಸಲು ಬಂಧುಗಳ ಸಹಾಯ ಹಸ್ತ ಅಥವಾ ವಾಸ್ತವ್ಯದ ವ್ಯವಸ್ಥೆ ಅಪೇಕ್ಷಿಸಬಹುದು. ವ್ಯವಹಾರಿಕವಾದ ಸುಖ ಸಂಪತ್ತು ಅಧಿಕ ಮಟ್ಟದಲ್ಲಿ ಇದ್ದರೂ ಭವಿಷ್ಯದ ಚಿಂತೆಯು ನಿದ್ದೆಗೆಡಿಸುತ್ತದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,725
ಇಂದಿನ ಅಂತ್ಯ: 25,819
ದಿನದ ಕನಿಷ್ಠ: 25,645
93

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹590
12 ಕ್ಕೆ ₹85
ಮೈಸೂರು: 100 ಕ್ಕೆ ₹592

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹501-790
ದ್ವಿತಳಿ (ಬಿ.ವಿ) ₹495-996

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹209
ಆರ್‌ಎಸ್‌ಎಸ್-5 ₹203.50
ಗುಡ್ ಲಾಟ್ ₹191.50

ಮುದ್ರೆ-ಮನೆ ಕಾಫಿ (50 ಕೆ.ಜಿಗೆ)
ಎಪಿ ₹23,000
ಎಸಿ ₹12,750
ಆರ್‌ಪಿ ₹18,250
ಆರ್‌ಸಿ ₹9,900

ರೈತನ ಮಗನನ್ನು ಮದುವೆಯಾಗುವ ಹೆಣ್ಣುಮಗಳಿಗೆ ಸರ್ಕಾರಿ ಕೆಲಸದಲ್ಲಿ ಶೇ 20 ಮೀಸಲಾತಿ: ರೈತ ಸಂಘದ ಒತ್ತಾಯ ಸರಿಯೇ?

ಸರಿ ತಪ್ಪು ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

‘ಸದನದಲ್ಲಿ ವಿಡಿಯೊ ಸೆಲ್ಫಿ ರೆಕಾರ್ಡ್ ನಿಷೇಧ’

ಶಿಲ್ಲಾಂಗ್ (ಪಿಟಿಐ): ಶಾಸಕರು ಸದನದಲ್ಲಿ ಸೆಲ್ಫಿ ವಿಡಿಯೊ ರೆಕಾರ್ಡ್ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುವುದನ್ನು ಮೇಘಾಲಯ ವಿಧಾನಸಭೆಯ ಅಧ್ಯಕ್ಷ ಥಾಮಸ್ ಎ. ಸಂಗ್ಮಾ ಬುಧವಾರ ನಿಷೇಧಿಸಿದ್ದಾರೆ.

ಅರ್ಥವ್ಯವಸ್ಥೆಗೆ ಲಕ್ಷ ಕೋಟಿ ಮೌಲ್ಯ

ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಿಂದ ಮಾಹಿತಿ

ಪ್ರಜಾವಾಣಿ ವಾರ್ತೆ

ಮುಂಬೈ: 2026ರಿಂದ 2047ರ ನಡುವೆ ಭಾರತವು ತನ್ನ ಅರ್ಥ ವ್ಯವಸ್ಥೆಗೆ ಅಂದಾಜು 26 ಟ್ರಿಲಿಯನ್ ಡಾಲರ್‌ನಷ್ಟು (₹2,358 ಲಕ್ಷ ಕೋಟಿ) ಮೌಲ್ಯವನ್ನು ಸೇರ್ಪಡೆ ಮಾಡುವ ಅಂದಾಜು ಇದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

‘ಅರ್ಥ ವ್ಯವಸ್ಥೆಯಲ್ಲಿನ ಈ ಬಗೆಯ ಬೆಳವಣಿಗೆಯು ಹಿಂದೆಂದೂ ಕಾಣದಂಥದ್ದು, ಇದು ಜಗತ್ತಿನ ಇತರ ಯಾವುದೇ ದೇಶದಲ್ಲಿಯೂ ಕಾಣಲು ಸಿಗಲಿಕ್ಕಿಲ್ಲ’ ಎಂದು ಗೋಯಲ್ ಅವರು ಜಾಗತಿಕ ಆರ್ಥಿಕ ಸಹಕಾರ (ಜಿಇಸಿ) ಸಮಾವೇಶದಲ್ಲಿ ಹೇಳಿದ್ದಾರೆ.

‘ಆರ್ಥಿಕವಾಗಿ ಏಕಾಂಗಿಯಾಗಿಸುವ ಕಾಲಘಟ್ಟ ಮುಗಿದಿದೆ. ಹೀಗಾಗಿಯೇ ನಾವು ಪಾಲುದಾರಿಕೆ ಮಾಡಿಕೊಳ್ಳುತ್ತಿದ್ದೇವೆ, ನಮ್ಮ ಸ್ನೇಹವನ್ನು ಹೆಚ್ಚಿಸುತ್ತಿದ್ದೇವೆ, ಶಕ್ತಿವಂತನ ಸ್ಥಾನದಲ್ಲಿ ನಿಂತು ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದ್ದೇವೆ. ನಾಲ್ಕು ವರ್ಷಗಳಲ್ಲಿ ಒಂಬತ್ತು ಇಂತಹ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ, ಇನ್ನೂ ಒಂದು ಒಪ್ಪಂದ ಆಗಲಿದೆ’ ಎಂದು ಅವರು ತಿಳಿಸಿದ್ದಾರೆ.

‘ಮುಕ್ತ ವ್ಯಾಪಾರ ಒಪ್ಪಂದ ಅಂದರೆ ನಮ್ಮ ಪಾಲಿಗೆ ಭಾರತದ ಭವಿಷ್ಯದ ಪಾಲುದಾರ ಆಗುವಂತೆ ಆಹ್ವಾನ ನೀಡುವುದು, ಜಗತ್ತಿನಲ್ಲಿ ನಾಲ್ಕನೆಯ ಅತಿದೊಡ್ಡ ಅರ್ಥ ವ್ಯವಸ್ಥೆಯನ್ನು ಇಂದು ಹೊಂದಿರುವ ಭಾರತವನ್ನು 2027–28ರ ಹೊತ್ತಿಗೆ ಮೂರನೆಯ ಅತಿದೊಡ್ಡ ಅರ್ಥ ವ್ಯವಸ್ಥೆಯನ್ನಾಗಿಸುವ ಪಯಣದಲ್ಲಿ ಭಾಗಿಯಾಗಲು ಆಹ್ವಾನಿಸುವುದು. ಈ ಪಯಣದಲ್ಲಿ ಭಾಗಿಯಾಗಲು ಜಗತ್ತು ಬಯಸುತ್ತಿದೆ. ಮುಕ್ತ ಮನಸ್ಸು ಹೊಂದಿರುವ, ವಿಶ್ವಾಸಾರ್ಹತೆ ಸಂಪಾದಿಸಿರುವ ಭಾರತವು ಪ್ರಾಮಾಣಿಕವಾಗಿ ಮುಂದೆ ಬರುವ ಯಾವುದೇ ಪಾಲುದಾರರನ್ನು ಸ್ವಾಗತಿಸಲು ಸಿದ್ಧವಿದೆ’ ಎಂದಿದ್ದಾರೆ.

ಅಭಿವೃದ್ಧಿ ಹೊಂದಿರುವ 39 ದೇಶಗಳ ಜೊತೆ ಭಾರತವು ಈಗ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆ ಪೂರ್ಣಗೊಳಿಸಿದೆ ಎಂದು ಅವರು ತಿಳಿಸಿದ್ದಾರೆ. ಈ ಎಲ್ಲ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿ ರೈತರ ಹಿತಾಸಕ್ತಿಯನ್ನು ಪೂರ್ಣವಾಗಿ ರಕ್ಷಿಸಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ದೇಶದ ಎಂಎಸ್‌ಎಂಇ ವಲಯದ ಉದ್ದಿಮೆಗಳ ಬೆಳವಣಿಗೆಯನ್ನು ಖಾತರಿಪಡಿಸಿ, ದೇಶದ ಮೀನುಗಾರರನ್ನು ರಕ್ಷಿಸಿ, ದೇಶದ ಉದ್ಯೋಗಗಳನ್ನು ಕಾಪಾಡಿಕೊಂಡು ಈ ಎಫ್‌ಟಿಎಗಳು ಜವಳಿ, ಪಾದರಕ್ಷೆ ಮತ್ತು ಚರ್ಮದ ಉತ್ಪನ್ನಗಳಿಗೆ ಮಾರುಕಟ್ಟೆ ದೊರಕಿಸಿಕೊಟ್ಟಿವೆ ಎಂದು ಗೋಯಲ್ ಪ್ರತಿಪಾದಿಸಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಭಾಗ್ಯಮ್ಮ, ಊರು ತಿಳಿಸಿಲ್ಲ

- **ಪ್ರಶ್ನೆ: ನನ್ನ ವಯಸ್ಸು 60 ವರ್ಷ. ನನ್ನ ತಂದೆಯವರು ಖಾಸಗಿ ಬಡಾವಣೆ ನಿರ್ಮಿಸುವ ಸಂಘದಿಂದ 30X40 ಅಳತೆಯ ನಿವೇಶನವನ್ನು 1982ರ ಮೇ 14ರಂದು ಖರೀದಿಸಿ ದಾಖಲಿಸಿಕೊಂಡಿರುತ್ತಾರೆ. ನನ್ನ ತಂದೆಯವರು ಈ ಸ್ವಯಾರ್ಜಿತ ಆಸ್ತಿಯನ್ನು 2006ರ ಫೆಬ್ರುವರಿ 04ರಂದು ದಾನಪತ್ರದ ಮೂಲಕ ನನ್ನ ಹೆಸರಿಗೆ ನೋಂದಣಿ ಮಾಡಿರುತ್ತಾರೆ. ಈ ನಿವೇಶನದ ಅನುಸೂಚಿ ಬೆಲೆ ಸುಮಾರು ₹1.50 ಲಕ್ಷ.**

ನನ್ನ ಹೆಸರಿಗೆ ಈ ಆಸ್ತಿ ವರ್ಗಾವಣೆ ಆದ ನಂತರ ನಾನು ಕಂದಾಯ ಕಟ್ಟುತ್ತಾ ಬರುತ್ತಿದ್ದೇನೆ. ನನ್ನ ಆರೋಗ್ಯ ಸಮಸ್ಯೆಯ ಕಾರಣದಿಂದ ಹಣದ ಅಗತ್ಯ ಉಂಟಾಗಿ ಇದನ್ನು ಸುಮಾರು ₹39.40 ಲಕ್ಷಕ್ಕೆ ಕಳೆದ ಆಗಸ್ಟ್‌ನಲ್ಲಿ ಮಾರಾಟ ಮಾಡಿದ್ದೇನೆ. ನಾನು ರಿಯಲ್ ಎಸ್ಟೇಟ್ ಏಜೆಂಟರಿಗೆ ಸುಮಾರು ₹2 ಲಕ್ಷ ಕಮಿಷನ್ ಕೊಟ್ಟಿದ್ದು, ನನಗೆ ₹37.40 ಲಕ್ಷ ಬಂದಿರುತ್ತದೆ. ಈ ಮೊತ್ತವನ್ನು ಬ್ಯಾಂಕ್‌ನಲ್ಲಿ ಎಫ್.ಡಿ ಆಗಿ ಇಟ್ಟಿದ್ದೇನೆ. ನಾನು ಈ ಹಣವನ್ನು ಉಪಯೋಗಿಸಿ ಯಾವುದೇ ಹೊಸ ಮನೆ ಅಥವಾ ನಿವೇಶನ ಕೊಳ್ಳುವ ಯೋಜನೆ ಮಾಡಿಲ್ಲ.

ನನ್ನ ಪ್ರಶ್ನೆ ಏನೆಂದರೆ, ಈ ನಿವೇಶನ ಮಾರಾಟಕ್ಕೆ ಸಂಬಂಧಿಸಿ ಬಂಡವಾಳ ವೃದ್ಧಿ ತೆರಿಗೆ ಎಷ್ಟು ಕಟ್ಟಬೇಕಾಗಬಹುದು? ಅಥವಾ ಈ ತೆರಿಗೆ ಉಳಿತಾಯ ಮಾಡಲು ಯಾವ ಖಾತೆಯಲ್ಲಿ ಎಷ್ಟು ಹಣ ತೊಡಗಿಸಬೇಕು? ಹಾಗೂ ಇದಕ್ಕೆ ಉತ್ತಮ ಬಡ್ಡಿ ಬರಬಹುದೇ? ನನ್ನ ಖರ್ಚಿಗೆ ಬಡ್ಡಿ ಆದಾಯದ ಅಗತ್ಯ ಇದೆ. ಈ ಬಗ್ಗೆ ತಿಳಿಸಿ.

ಉತ್ತರ: ನಿಮ್ಮ ತಂದೆಯವರು 1982ರಲ್ಲಿ ಖರೀದಿಸಿದ ಹಾಗೂ 2006ರಲ್ಲಿ ದಾನಪತ್ರದ ಮೂಲಕ ನಿಮ್ಮ ಹೆಸರಿಗೆ ವರ್ಗಾಯಿಸಿದ ನಿವೇಶನವನ್ನು 2025ರ ಆಗಸ್ಟ್‌ನಲ್ಲಿ ಮಾರಾಟ ಮಾಡಿರುತ್ತೀರಿ. ಈ ಮಾರಾಟ ಆದಾಯ ತೆರಿಗೆ ಕಾಯ್ದೆಯ ಪ್ರಕಾರ ದೀರ್ಘಾವಧಿ ಬಂಡವಾಳ ಲಾಭ ತೆರಿಗೆ ವ್ಯಾಪ್ತಿಗೆ ಬರುತ್ತದೆ. ದಾನವಾಗಿ ಪಡೆದ ಆಸ್ತಿಯ ವಿಚಾರದಲ್ಲಿ, ಮೂಲ ಮಾಲೀಕರ ಖರೀದಿ ದಿನಾಂಕವನ್ನೇ ನಂತರದ ಹಂತದ ಮಾಲೀಕತ್ವದ ಅವಧಿಗೆ ಪರಿಗಣಿಸಲಾಗುತ್ತದೆ. ಹೀಗಾಗಿ 1982ರಿಂದಲೇ ಮಾಲೀಕತ್ವದ ಅವಧಿ ಪರಿಗಣನೆಗೆ ಬರುತ್ತದೆ. ಲಾಭ ಪರಿಗಣನೆ ಮಾಡುವಾಗ 2001ರ ಏಪ್ರಿಲ್ 1ರ ಮಾರುಕಟ್ಟೆ ಮೌಲ್ಯವನ್ನು ಮೂಲ ವೆಚ್ಚವಾಗಿ ಪರಿಗಣಿಸಿ ಆ ಮೌಲ್ಯಕ್ಕೆ ಸೂಚ್ಯಂಕೀಕರಣ ಅನ್ವಯ ಮಾಡುವ ಅವಕಾಶ ಇದೆ. ನಿಮಗೆ ಬಂದ ಮೊತ್ತದಿಂದ ಏಜೆಂಟ್ ಕಮಿಷನ್ ಮೊತ್ತವನ್ನು ಕಡಿತಗೊಳಿಸಿ, ಉಳಿದ ಮೊತ್ತ ಹಾಗೂ 2001ರ ಏಪ್ರಿಲ್ 1ರ ಮಾರುಕಟ್ಟೆ ಮೌಲ್ಯ ಇವುಗಳ ವ್ಯತ್ಯಾಸ ನಿವ್ವಳ ಬಂಡವಾಳ ಲಾಭ ಆಗಿರುತ್ತದೆ. ಇದರಂತೆ ತೆರಿಗೆ ದರ ಶೇ 20 ಆಗಿರುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಏಜೆಂಟ್ ಕಮಿಷನ್ ಮೊತ್ತ ಬ್ಯಾಂಕ್ ಮುಖಾಂತರ ಪಾವತಿ ಮಾಡಿದ್ದಾಗಿರಬೇಕು. ನಗದು ವ್ಯವಹಾರಕ್ಕೆ ಈ ರಿಯಾಯಿತಿ ಇಲ್ಲ.

ನಿಮ್ಮ ನಿವೇಶನ 2024ರ ಜುಲೈ 24ಕ್ಕೆ ಮೊದಲೇ ಖರೀದಿ ಹಾಗೂ ವರ್ಗಾವಣೆ ಆಗಿರುವ ಕಾರಣ, ಸೂಚ್ಯಂಕೀಕರಣವಿಲ್ಲದೆ, 2001 ಏಪ್ರಿಲ್ 1ರ ಮಾರುಕಟ್ಟೆ ಮೌಲ್ಯ ಆಧರಿಸಿ ಕೂಡ ತೆರಿಗೆ ಪಾವತಿಸುವ ಅವಕಾಶ ಇದೆ. ಇಲ್ಲಿ ಬಂದ ಲಾಭದ ಮೇಲೆ ಶೇ 12.5ರಷ್ಟು ತೆರಿಗೆ ದರದಲ್ಲಿ ತೆರಿಗೆ ಅನ್ವಯಿಸುತ್ತದೆ. ನಿಮಗೆ ಯಾವುದು ತೆರಿಗೆ ಉಳಿತಾಯ ಮಾಡುವ ಸೂಕ್ತ ವಿಧಾನವೋ ಅದನ್ನು ಆಯ್ಕೆ ಮಾಡಬಹುದು.

ನೀವು ಹೊಸ ಮನೆ ಖರೀದಿಸುವ ಉದ್ದೇಶವಿಲ್ಲದಿದ್ದರೆ, ಸೆಕ್ಷನ್ 54ಇಸಿ ಅಡಿಯಲ್ಲಿ ಸರ್ಕಾರ ಅನುಮೋದಿಸಿದ ಬಾಂಡ್‌ಗಳಲ್ಲಿ, ಉದಾಹರಣೆಗೆ ಹುಡ್ಕೊ, ಐಆರ್‌ಎಫ್‌ಸಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಥವಾ ಗ್ರಾಮೀಣ ವಿದ್ಯುದೀಕರಣ ನಿಗಮದ ಬಾಂಡ್‌ಗಳಲ್ಲಿ, ಗರಿಷ್ಠ ₹50 ಲಕ್ಷದವರೆಗೆ ಮಾರಾಟವಾದ ಆರು ತಿಂಗಳೊಳಗೆ ಹೂಡಿಕೆ ಮಾಡುವ ಅವಕಾಶ ಇದೆ. ಆದರೆ ಬರುವ ಲಾಭದ ಮೊತ್ತವನ್ನು ಮಾತ್ರ ಇಂತಹ ಬಾಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ಸಾಕು. ಇವುಗಳಿಗೆ ಸಾಮಾನ್ಯವಾಗಿ ನಿಗದಿತ ಬಡ್ಡಿದರ ಲಭ್ಯವಿದ್ದು, ಅವು ಐದು ವರ್ಷ ಲಾಕ್-ಇನ್ ಅವಧಿಯನ್ನು ಹೊಂದಿರುತ್ತವೆ. ಇದಕ್ಕೆ ಬಡ್ಡಿಯೂ ಬರುತ್ತಿರುತ್ತದೆ. ಹೀಗಾಗಿ ಬಂಡವಾಳ ತೆರಿಗೆಯೂ ಅನ್ವಯಿಸುವುದಿಲ್ಲ. ಉಳಿದ ಹಣವನ್ನು ಬ್ಯಾಂಕ್ ನಿಶ್ಚಿತ ಠೇವಣಿ ಅಥವಾ ಹಿರಿಯ ನಾಗರಿಕರಿಗೆ ಲಭ್ಯವಿರುವ ಹೆಚ್ಚಿನ ಬಡ್ಡಿದರ ಯೋಜನೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ನಿಮ್ಮ ನಿಯಮಿತ ಬಡ್ಡಿ ಆದಾಯದ ಅಗತ್ಯವೂ ಪೂರೈಸಬಹುದು ಮತ್ತು ತೆರಿಗೆ ಹೊರೆ ಸಹ ಕಾನೂನುಬದ್ಧವಾಗಿ ನಿಯಂತ್ರಣದಲ್ಲಿರುತ್ತದೆ.

ಆದರೆ ನಿಮ್ಮ ನಿವೇಶನವನ್ನು ಮಾರಾಟ ಮಾಡಿ ಈಗಾಗಲೇ 6 ತಿಂಗಳು ಕಳೆದಿರುವುದು ನಿಮ್ಮ ಈ ಅವಕಾಶಕ್ಕೆ ತೊಂದರೆಯಾಗಬಹುದು. ಈ ಬಗ್ಗೆ ಹೆಚ್ಚಿನ ಸಮಾಲೋಚನೆ ನಡೆಸಿ, ಮಾಹಿತಿ ಪಡೆದುಕೊಳ್ಳಿ. ಹೀಗಾಗಿ ಮೊದಲ ಹಂತದಲ್ಲಿ ಮೇಲಿನ ಎರಡು ತೆರಿಗೆ ಪದ್ಧತಿಗಳ ಅಡಿ ಯಾವುದು ಸೂಕ್ತವೋ ಅದನ್ನು ಆರಿಸಿಕೊಳ್ಳಿ. ನಿಮ್ಮ ಪೂರ್ಣ ಮಾಹಿತಿಯೊಂದಿಗೆ ನುರಿತ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಶಾಂತಿ

ಶ್ರೀ ಬಿ. ನಾಗರಾಜ್
ನಮ್ಮ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಬಿ. ನಾಗರಾಜ್ ರವರು 17–02–26ರಂದು ವಿಧಿವಶರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.
ಆಡಳಿತ ಮಂಡಳಿ ಮತ್ತು ಸಿಬ್ಬಂದಿವರ್ಗ
ಕಬ್ಬಿಣ ಮತ್ತು ಉಕ್ಕು ಕೈಗಾರಿಕಾ ಬಳಕೆದಾರರ ಸಹಕಾರ ಸಂಘ ನಿಯಮಿತ,
ರಾಜಾಜಿನಗರ, ಬೆಂಗಳೂರು.

ಮುಂಬೈ ಧಾರಣೆ (ಶೇಂಗಾ)
18-02-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1750 (1760)
ಒಂದು ವಾರದ ಡೆಲಿವರಿ	1745 (1755)
ಪಾಮ್ ವಾರದ ಡೆಲಿವರಿ	1288 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1490 (1490)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,53,000 (1,51,000)
ಬೆಳ್ಳಿ ಕೆ.ಜಿಗೆ	2,41,500 (2,32,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ವಿಚಾರಣೆ ಎದುರಿಸಲಿರುವ ಮಾರ್ಕ್ ಜುಕರ್‌ಬರ್ಗ್

ಲಾಸ್ ಏಂಜಲೀಸ್ (ಎಪಿ): ಮೆಟಾದಂಥ ಕಂಪನಿಗಳು ಪುಟ್ಟ ಮಕ್ಕಳನ್ನು ತಮ್ಮ ಮಾರುಕಟ್ಟೆಯ ಕೇಂದ್ರವಾಗಿಸಿಕೊಂಡು, ಅವರನ್ನು ತಮ್ಮ ಉತ್ಪನ್ನಗಳಿಗೆ ವ್ಯಸನಿಗಳಾಗುವಂತೆ ಮಾಡುತ್ತಿವೆ. ಇದರಿಂದ ಮಕ್ಕಳು ಮಾನಸಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ಆರೋಪಿಸಿ ಮಹಿಳೆಯೊಬ್ಬರು ಹೂಡಿದ್ದ ದಾವೆ ಸಂಬಂಧ ಮೆಟಾದ ಸಿಇಒ ಮಾರ್ಕ್ ಜುಕರ್‌ಬರ್ಗ್ ಅವರು ಸಾಕ್ಷ್ಯ ಹೇಳಲಿದ್ದಾರೆ.

ಕ್ಯಾಲಿಫೋರ್ನಿಯಾದ 20 ವರ್ಷದ ಈ ಮಹಿಳೆಯನ್ನು ಕೆ.ಜಿ.ಎಂ ಎಂಬ ಹೆಸರಿನಲ್ಲಿ ಗುರುತಿಸಲಾಗುತ್ತಿದೆ. ಇದೇ ವಿಚಾರಕ್ಕೆ ಸಂಬಂಧಿಸಿ ಅಮೆರಿಕದ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಇರುವ ನೂರಾರು ಪ್ರಕರಣಗಳನ್ನು ಕ್ರೋಡೀಕರಿಸಿ, ಮಹಿಳೆ ಪ್ರಕರಣವನ್ನೇ ಮುಖ್ಯವಾಗಿಟ್ಟುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಬುಧವಾರ ಜುಕರ್‌ಬರ್ಗ್ ಅವರ ವಿಚಾರಣೆ ನಡೆಯಲಿದೆ.

ಮಹಿಳೆಯು ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಸ್ನ್ಯಾಪ್, ಟಿಕ್‌ಟಾಕ್ ಮತ್ತು ಯುಟ್ಯೂಬ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಟಿಕ್‌ಟಾಕ್ ಮತ್ತು ಸ್ನ್ಯಾಪ್ ಕಂಪನಿಗಳು ವಿಚಾರಣೆ ಪ್ರಕ್ರಿಯೆ ಆರಂಭಕ್ಕೂ ಮುನ್ನವೇ ಮಹಿಳೆಯೊಂದಿಗೆ ಸಂಧಾನ ಮಾಡಿಕೊಂಡಿವೆ. ಮೆಟಾ ಮತ್ತು ಗೂಗಲ್ ಕಂಪನಿಗಳು ಮಾತ್ರವೇ ಈಗ ವಿಚಾರಣೆ ಎದುರಿಸಲಿವೆ.

ಈ ಹಿಂದೆ ಇಂಥದ್ದೇ ಪ್ರಕರಣವೊಂದರಲ್ಲಿ ವಿಚಾರಣೆ ವೇಳೆ ಕೇಳಲಾದ ಪ್ರಶ್ನೆಗೆ ಉತ್ತರಿಸುತ್ತಾ, ಜುಕರ್‌ಬರ್ಗ್ ಅವರು ದುಃಖತಪ್ತ ಪೋಷಕರ ಬಳಿ ಕ್ಷಮೆಯಾಚಿಸಿದ್ದರು. ನೂರಾರು ಪ್ರಕರಣಗಳನ್ನು ಕ್ರೋಡೀಕರಿಸಿಕೊಂಡು ವಿಚಾರಣೆ ನಡೆಸುತ್ತಿರುವುದರಿಂದ ಈ ಪ್ರಕರಣದ ತೀರ್ಪು ಪರಿಣಾಮಕಾರಿಯಾಗಿರಲಿದೆ. ತೀರ್ಪಿನ ವ್ಯಾಪ್ತಿಯ ಕಾರಣಕ್ಕೆ ಹೆಚ್ಚು ಪ್ರರಿಣಾಮಕಾರಿ ಆಗಿರಲಿದೆ ಎನ್ನಲಾಗಿದೆ.

ಪಾಕಿಸ್ತಾನ: ಧರಣಿ ಹಿಂಪಡೆದ ವಿಪಕ್ಷ ಮೈತ್ರಿಕೂಟ

ಇಸ್ಲಾಮಾಬಾದ್ (ಪಿಟಿಐ): ಜೈಲಿನಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಆರೋಗ್ಯದ ಕುರಿತು ಕಳವಳ ವ್ಯಕ್ತಪಡಿಸಿ ಪಾಕಿಸ್ತಾನದ ವಿಪಕ್ಷಗಳ ಮೈತ್ರಿಕೂಟವು ಹಮ್ಮಿಕೊಂಡಿದ್ದ ಧರಣಿ ಹೋರಾಟವನ್ನು ಬುಧವಾರ ಕೊನೆಗೊಳಿಸಿತು.

ಇಮ್ರಾನ್ ಆರೋಗ್ಯ ಸಮಸ್ಯೆಯನ್ನು ಎತ್ತಿ ಹಿಡಿಯುವ ತಮ್ಮ ಉದ್ದೇಶ ಈಡೇರಿದೆ. ಹೀಗಾಗಿ ಪ್ರತಿಭಟನೆಯನ್ನು ಅಂತ್ಯಗೊಳಿಸಲಾಗುತ್ತಿದೆ ಎಂದು ಪಕ್ಷಗಳ ನಾಯಕರು ತಿಳಿಸಿದರು.

ಇಮ್ರಾನ್ ಖಾನ್ ಅವರ ತಹ್ರೀಕ್–ಎ–ಇನ್ಸಾಫ್ (ಪಿಟಿಐ) ಹಾಗೂ ಟಿಟಿಎಪಿ ಮೈತ್ರಿ ಪಕ್ಷಗಳು, ಇಸ್ಲಾಮಾಬಾದ್, ಸಂಸತ್ ಆವರಣ ಹಾಗೂ ಖೈಬರ್ ಪಖ್ತುಂಕ್ವಾದಲ್ಲಿ ಶುಕ್ರವಾರ ಧರಣಿ ಆರಂಭಿಸಿದವು. ಇಮ್ರಾನ್ ಅವರ ಬಲಗಣ್ಣಿನ ಗೋಚರತೆಯು ಸ್ವಲ್ಪ ಹೆಚ್ಚಾಗಿದೆ ಎಂದು ವಿಪಕ್ಷ ನಾಯಕ ನಾಸಿರ್ ಅಬ್ಬಾಸ್ ಅವರು ಹೇಳಿದರು.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1740 (1750)
ಸೋಯಾ (ರಿಫೈನ್ಡ್)	₹1360 (1360)
ಸೂರ್ಯಕಾಂತಿ (ರಿಫೈನ್ಡ್)	₹1590 (1590)
ಪಾಮೋಲಿನ್	₹1290 (1290)

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1500-2000
ಮಧ್ಯಮ	₹1000-1400
ಸಣ್ಣ	₹400-800

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ			
ಚೆಟ್ಟೆ	30199-51009	ಬಿಳಿಗೋಟು	27389-38209	ಬಿಳಿಗೋಟು	30099-43399
ಚಾಲಿ	47899-51899	ಚಾಲಿ	43579-50000	ಚಾಲಿ	41928-49599
ಚಿಪ್ಪು	30569-39999	ಕೋಕ	23119-35899	ಕೆಂಪುಗೋಟು	23899-37499
ಕೋಕ	15099-35999	ಹೊಸಚಾಲಿ	41209-48789	ರಾಶಿ	49411-58272
ಫ್ಯಾಕ್ಟರಿ	10189-28170	ಕೆಂಪುಗೋಟು	28619-43689	**ಶಿವಮೊಗ್ಗ**	
ಹೊಸಚಾಲಿ	43089-49599	ರಾಶಿ	49899-55099	ಸರಕು/ಹಸ	52700-100340
ಪುತ್ತೂರು		ತಟ್ಟಿಬೆಟ್ಟೆ	37500-42869	ಬೆಟ್ಟೆ	52610-66410
ಕೋಕ	20000-37000	**ಶಿರಸಿ**		ರಾಶಿಇಡಿ	47199-58300
ಹೊಸತು	26000-48500	ಬೆಟ್ಟೆ	42299-54010	ಗೊರಬಲು	19152-43169
ಹಳತು	50000-55000				

TRAVEL CORNER

ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್
ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ರಿಯಾಯಿತಿ ದರದಲ್ಲಿ ಪ್ರವಾಸಗಳು–2026
✆ 99000 99252 / 98800 79588
ಕೈಲಾಸ ಮಾನಸ ಸರೋವರ ಯಾತ್ರೆ
14 ದಿನಗಳ ಮಹೋನ್ನತ ಯಾತ್ರೆ
6 ದಿನಗಳ ಬಾಲಿ
11 ದಿನಗಳ ವಿಯೆಟ್ನಾಮ್–ಕಾಂಬೋಡಿಯಾ
6 ದಿನಗಳ ದುಬೈ–ಅಬುಧಾಬಿ–ಶಾರ್ಜ
8 ದಿನಗಳ ಭೂತಾನ್ ಸ್ಪೆಷಲ್
8 ದಿನಗಳ ನೇಪಾಳ–ಮುಕ್ತಿನಾಥ ಯಾತ್ರೆ (ವಿಮಾನದಲ್ಲಿ)
7/11 ದಿನಗಳ ಸಿಂಗಾಪುರ–ಮಲೇಶಿಯ–ಥೈಲ್ಯಾಂಡ್

ಪ್ರಧಾನಿಯಿಂದ ಉದ್ಘಾಟನೆ, ಮ್ಯಾಕ್ರನ್, ಗುಟೆರಸ್ ಸೇರಿ ಹಲವರು ಭಾಗಿ

ಎ.ಐ ಶೃಂಗಸಭೆಗೆ ಇಂದು ಚಾಲನೆ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ಕ್ಷೇತ್ರದಲ್ಲಿ ಭಾರತವನ್ನು ಮುಂಚೂಣಿಯ ಸ್ಥಾನದಲ್ಲಿ ನಿಲ್ಲಿಸುವ ಗುರಿ ಹೊಂದಿರುವ ‘ಎ.ಐ ಇಂಪ್ಯಾಕ್ಟ್ ಶೃಂಗಸಭೆ –2026’ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಉದ್ಘಾಟಿಸಲಿದ್ದಾರೆ.

‘ಭಾರತ ಮಂಟಪ’ದಲ್ಲಿ ಆಯೋಜನೆಯಾಗಿರುವ ಈ ಶೃಂಗಕ್ಕೆ ಬರುವ ವಿವಿಧ ದೇಶಗಳ ನಾಯಕರನ್ನು ಪ್ರಧಾನಿ ಅವರು ಸ್ವಾಗತಿಸಲಿದ್ದಾರೆ ಎಂದು ಪ್ರಧಾನಿ ಕಚೇರಿಯು ಬುಧವಾರ ಹೇಳಿಕೆಯಲ್ಲಿ ತಿಳಿಸಿದೆ.

ಶೃಂಗಸಭೆಯ ಅಂಗವಾಗಿ ಆಯೋಜಿಸಿರುವ ‘ಎಕ್ಸ್‌ಪೋ’ಗೆ ಪ್ರಧಾನಿ ಅವರು ಸೋಮವಾರ ಚಾಲನೆ ನೀಡಿದ್ದರು. ಕಳೆದ ಎರಡು ದಿನಗಳಲ್ಲಿ ವಿವಿಧ ಗೋಷ್ಠಿಗಳು ನಡೆದಿದ್ದವು.

ಪ್ರಧಾನಿ ಮೋದಿ ಅಲ್ಲದೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಂಟೋನಿಯೊ ಗುಟೆರಸ್ ಸೇರಿದಂತೆ ಹಲವು ನಾಯಕರು ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಲಿದ್ದಾರೆ ಎಂದು ಪ್ರಕಟಣೆ ಹೇಳಿದೆ.

ಉದ್ಘಾಟನಾ ಸಮಾರಂಭದ ಬಳಿಕ ಪ್ರಧಾನಿ ಅವರು ಇತರ ನಾಯಕರೊಂದಿಗೆ ‘ಎ.ಐ ಇಂಪ್ಯಾಕ್ಟ್ ಎಕ್ಸ್‌ಪೋ’ಗೆ ಭೇಟಿ ನೀಡಲಿದ್ದು, ಅಲ್ಲಿ ವಿವಿಧ ದೇಶಗಳ ಪೆವಿಲಿಯನ್‌ಗೆ ತೆರಳಿ ಎ.ಐ ತಂತ್ರಜ್ಞಾನದ ಹೊಸ ಆವಿಷ್ಕಾರಗಳನ್ನು ವೀಕ್ಷಿಸಲಿದ್ದಾರೆ.

ಅನಂತರ ಮಧ್ಯಾಹ್ನ 12ರ ಸುಮಾರಿಗೆ ನಡೆಯಲಿರುವ ‘ನಾಯಕರ ಅಧಿವೇಶನ’ದಲ್ಲಿ ಪಾಲ್ಗೊಳ್ಳಲಿದ್ದಾರೆ. ಆಡಳಿತ, ಮೂಲಸೌಕರ್ಯ ಮತ್ತು ಅಂತರರಾಷ್ಟ್ರೀಯ ಸಹಕಾರ ಸೇರಿದಂತೆ ಎ.ಐ ಕುರಿತು ರಾಷ್ಟ್ರೀಯ ಮತ್ತು ಜಾಗತಿಕ ಆದ್ಯತೆಗಳನ್ನು ರೂಪಿಸಲು ನಡೆಯುವ ಚರ್ಚೆಯಲ್ಲಿ ವಿವಿಧ ದೇಶಗಳ ನಾಯಕರು ಮತ್ತು ಸಚಿವರು ಭಾಗವಹಿಸುವರು.

ಸಂಜೆ 5.30ಕ್ಕೆ ಸಿಇಒಗಳ ದುಂಡುಮೇಜಿನ ಸಭೆಯಲ್ಲೂ ಪ್ರಧಾನಿ ಭಾಗವಹಿಸುವರು. ಹೂಡಿಕೆ, ಸಂಶೋಧನೆಯಲ್ಲಿ ಸಹಕಾರ ಮತ್ತು ಎ.ಐ ವ್ಯವಸ್ಥೆಗಳ ನಿಯೋಜನೆಗೆ ಸಂಬಂಧಿಸಿದ ಚರ್ಚೆಯಲ್ಲಿ ಜಾಗತಿಕ ತಂತ್ರಜ್ಞಾನ ಮತ್ತು ಉದ್ಯಮ ಸಂಸ್ಥೆಗಳ ಸಿಇಒಗಳು ಪಾಲ್ಗೊಳ್ಳುವರು. ಪ್ರಧಾನಿ ಅವರು ಇದೇ ವೇಳೆ ವಿವಿಧ ದೇಶಗಳ ನಾಯಕರ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಸರ್ಬಿಯಾದ ಅಧ್ಯಕ್ಷ ಅಲೆಕ್ಸಾಂಡರ್ ವೊಚಿಚ್ ಅವರನ್ನು ಬುಧವಾರ ಭೇಟಿ ಮಾಡಿದರು —ಪಿಟಿಐ ಚಿತ್ರ

ಪ್ರಧಾನಿ ಮೋದಿ, ಸರ್ಬಿಯಾ ಅಧ್ಯಕ್ಷ ಭೇಟಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸರ್ಬಿಯಾದ ಅಧ್ಯಕ್ಷ ಅಲೆಕ್ಸಾಂಡರ್ ವೊಚಿಚ್ ಅವರನ್ನು ಬುಧವಾರ ಭೇಟಿ ಮಾಡಿದರು. ರಕ್ಷಣೆ, ತಯಾರಿಕೆ, ರಸಗೊಬ್ಬರ ಸೇರಿದಂತೆ ಹಲವು ಕ್ಷೇತ್ರಗಳಿಗೆ ಸಂಬಂಧಿಸಿ ಎರಡೂ ದೇಶಗಳ ಸಹಕಾರವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಬಗ್ಗೆ ಇಬ್ಬರು ನಾಯಕರು ಚರ್ಚಿಸಿದರು.

ಇಲ್ಲಿ ನಡೆಯುತ್ತಿರುವ ‘ಎಐ ಇಂಪ್ಯಾಕ್ಟ್ ಶೃಂಗಸಭೆ’ಯ ಎಕ್ಸ್‌ಪೋದಲ್ಲಿ ಇಬ್ಬರೂ ನಾಯಕರು ಭೇಟಿಯಾಗಿ ಮಾತುಕತೆ ನಡೆಸಿದರು. ‘ಬಹಳ ವರ್ಷಗಳಿಂದ ಭಾರತ ಮತ್ತು ಸರ್ಬಿಯಾವು ಬಹಳ ಹತ್ತಿರದಿಂದ ಕೆಲಸ ಮಾಡಿವೆ. ಮುಂದಿನ ದಿನಗಳಲ್ಲಿ ನಾವು ಇನ್ನಷ್ಟು ಸಹಕಾರದೊಂದಿಗೆ ಕೆಲಸ ಮಾಡುತ್ತೇವೆ ಎಂಬ ನಂಬಿಕೆ ಇದೆ’ ಎಂದು ಪ್ರಧಾನಿ ಮೋದಿ ‘ಎಕ್ಸ್’ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

‘ಭಾರತವು ನಮಗೆ ಅತ್ಯಂತ ಮಹತ್ವದ ಪಾಲುದಾರ ದೇಶ. ನಮ್ಮ ದೇಶದಲ್ಲಿ ಇನ್ನಷ್ಟು ಹೂಡಿಕೆ ಮಾಡುವಂಥ ಆರ್ಥಿಕ ಸಹಕಾರ ಹೆಚ್ಚಿಸಿಕೊಳ್ಳಲು ನಾವು ಬಯಸುತ್ತೇವೆ. ನಮ್ಮ ಸರ್ಬಿಯನ್ ಎಕ್ಸ್‌ಪೋದಲ್ಲಿ ಪಾಲ್ಗೊಳ್ಳಲು ಭಾರತವು ಬಯಸುತ್ತಿರುವುದು ನಮಗೆ ಸಂತೋಷ ತಂದಿದೆ’ ಎಂದು ಅಲೆಕ್ಸಾಂಡರ್ ವೊಚಿಚ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ರೋಬೊಶ್ವಾನ’ ಪ್ರದರ್ಶನ

ಒಂದನೇ ಪುಟದಿಂದ...

ವಿ.ವಿ ಪ್ರತಿನಿಧಿಗಳು ಶೃಂಗದಲ್ಲಿ ‘ಒರಾಯನ್’ ಹೆಸರಿನ ‘ರೋಬೊಶ್ವಾನ’ ಪ್ರದರ್ಶಿಸಿದ್ದಾರೆ. ಆದರೆ ಚೀನಾ ನಿರ್ಮಿತ ‘ಯುನಿಟ್ರೀ ಜಿಒ2’ ಹೆಸರಿನ ರೋಬೊ ಅದಾಗಿತ್ತು. ‘ರೋಬೊಶ್ವಾನ’ ಚೀನಾ ನಿರ್ಮಿತ ಎಂಬುದು ಬಹಿರಂಗವಾಗುತ್ತಿದ್ದಂತೆಯೇ ವಿ.ವಿಯು ಸಾಮಾಜಿಕ ಮಾಧ್ಯಮಗಳಲ್ಲಿ ಟೀಕೆಗೆ ಗುರಿಯಾಗಿದೆ.

ವಿ.ವಿಯ ಉತ್ಕೃಷ್ಟತಾ ಕೇಂದ್ರದ ಭಾಗವಾಗಿರುವ ಪ್ರತಿನಿಧಿಯೊಬ್ಬರು ರೋಬೊ ವೈಶಿಷ್ಟ್ಯಗಳನ್ನು ವಿವರಿಸುವ ಮತ್ತು ಅದನ್ನು ಗಲ್ಗೋಟಿಯಾಸ್ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದೆ ಎಂದು ಹೇಳಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಕ್ಷಮೆಯಾಚಿಸಿದ ವಿ.ವಿ: ಎ.ಐ ಶೃಂಗ ಸಭೆಯಲ್ಲಿ ಗೊಂದಲ ಉಂಟು ಮಾಡಿರುವುದಕ್ಕೆ ಸಂಘಟಕರ ಕ್ಷಮೆಯಾಚಿಸುವುದಾಗಿ ಗಲ್ಗೋಟಿಯಾಸ್ ವಿ.ವಿ ತಿಳಿಸಿದೆ.

‘ಶೃಂಗಸಭೆಯಲ್ಲಿ ನಮ್ಮ ವಿ.ವಿಯ ಪೆವಿಲಿಯನ್ ಅನ್ನು ನಿರ್ವಹಿಸಿದವರಿಗೆ ಸರಿಯಾಗಿ ಮಾಹಿತಿ ಇರಲಿಲ್ಲ. ಅವರಿಗೆ ಆ ಉತ್ಪನ್ನದ ತಂತ್ರಜ್ಞಾನದ ಬಗ್ಗೆ ತಿಳಿದಿರಲಿಲ್ಲ. ಮಾಧ್ಯಮಗಳೊಂದಿಗೆ ಮಾತನಾಡುವ ಅಧಿಕಾರ ಇಲ್ಲದಿದ್ದರೂ, ಕ್ಯಾಮೆರಾ ಮುಂದೆ ಮಾತನಾಡುವ ಉತ್ಸಾಹದಲ್ಲಿ ತಪ್ಪಾದ ಮಾಹಿತಿ ನೀಡಿದ್ದಾರೆ’ ಎಂದು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದೆ.

‘ಇದರ ಹೊಣೆಗಾರಿಕೆಯನ್ನು ನಾನು ಹೊರುತ್ತೇನೆ. ರೋಬೊ ಬಗ್ಗೆ ವಿವರಿಸುವಾಗ ವಿಷಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಸಾಧ್ಯವಾಗಿಲ್ಲ. ನಾನು ಸರಿಯಾಗಿ ಸಂವಹನ ನಡೆಸಬೇಕಿತ್ತು’ ಎಂದು ವಿ.ವಿ ಪ್ರಾಧ್ಯಾಪಕಿ ನೇಹಾ ಸಿಂಗ್ ಹೇಳಿದ್ದಾರೆ.

‘ರೋಬೊಟ್ ಅನ್ನು ತಯಾರಿಸಿದ ಕಂಪನಿಯ ಹೆಸರು ಅದರಲ್ಲಿ ಬರೆಯಲಾಗಿದೆ. ನಾವು ಆ ಹೆಸರನ್ನು ಬದಲಿಸಿಲ್ಲ. ಹೀಗಿರುವಾಗ ಅದನ್ನು ನಾವು ಅಭಿವೃದ್ಧಿಪಡಿಸಿದ್ದೇವೆ ಎಂದು ಹೇಳಲು ಹೇಗೆ ಸಾಧ್ಯ?’ ಎಂದಿದ್ದಾರೆ.

> **ಈ ರೀತಿಯ ಮೋಸದ ಮಾರ್ಗಗಳ ಮೂಲಕವೂ ಪ್ರಧಾನಿ ಮೋದಿ ಅವರಿಗೆ ಪ್ರಚಾರ ನೀಡುವುದು ಎ.ಐ. ಶೃಂಗದ ಉದ್ದೇಶವೇ?**
> **ಸಾಕೇತ್ ಗೋಖಲೆ,** ಟಿಎಂಸಿ ರಾಜ್ಯಸಭಾ ಸದಸ್ಯ

‘ನಾಚಿಕೆಗೇಡಿನ ಸಂಗತಿ’

‘ಮೋದಿ ಸರ್ಕಾರವು ಎ.ಐ ಗೆ ಸಂಬಂಧಿಸಿದಂತೆ ಭಾರತವನ್ನು ಜಾಗತಿಕ ಮಟ್ಟದಲ್ಲಿ ನಗೆಪಾಟಲಿಗೀಡಾಗುವಂತೆ ಮಾಡಿದೆ. ಚೀನಾದ ರೋಬೊಗಳನ್ನು ತಮ್ಮದೇ ಎಂದು ಹೇಳಿ ಪ್ರದರ್ಶಿಸಲಾಗುತ್ತಿದೆ. ಇದು ನಿಜಕ್ಕೂ ನಾಚಿಕೆಗೇಡಿನ ಸಂಗತಿ’ ಎಂದು ಕಾಂಗ್ರೆಸ್ ಪಕ್ಷ ‘ಎಕ್ಸ್’ನಲ್ಲಿ ಸರ್ಕಾರವನ್ನು ಟೀಕಿಸಿದೆ.

‘ಎ.ಐ ನಿಯಂತ್ರಣ ವಿಶ್ವಸಂಸ್ಥೆ ಕೆಲಸವಲ್ಲ’

ವಿಶ್ವಸಂಸ್ಥೆ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವನ್ನು ನಿಯಂತ್ರಿಸುವುದು ಕೇವಲ ವಿಶ್ವಸಂಸ್ಥೆಯ ಕೆಲಸವಲ್ಲ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಹೇಳಿದ್ದಾರೆ.

‘ಎಲ್ಲಾ ದೇಶಗಳು, ಸರ್ಕಾರಗಳು, ಖಾಸಗಿ ವಲಯಗಳು ಹಾಗೂ ನಾಗರಿಕ ಸಮಾಜದ ಭಾಗವಹಿಸುವಿಕೆಯೊಂದಿಗೆ ವಿಶ್ವಸಂಸ್ಥೆಯಲ್ಲಿ ವಾರ್ಷಿಕ ಜಾಗತಿಕ ಸಂವಾದವನ್ನು ಆಯೋಜಿಸಲಾಗುತ್ತಿದೆ’ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964322833, 9742133993

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

General

ಸೈಟ್ ತೆಗೆದುಕೊಳ್ಳುವಂತವರು ಸೈಟ್ ಮಾರಾಟಗಾರರು ಮನೆ ತೆಗೆದುಕೊಳ್ಳುವಂತವರು ಮನೆ ಮಾರಾಟಗಾರರು ಬಡವರಿಗೆ ಮನೆ ಕಟ್ಟಿ ಕೊಡಲು ಸಹಾಯ ಮಾಡಲಾಗುವುದು ಮತ್ತು 10 ಲಕ್ಷ, 25 ಲಕ್ಷ, 50 ಲಕ್ಷ ಚೀಟಿ ಹಾಕುವಂತವರು ಸಂಪರ್ಕಿಸಿ. ಬೆಂಗಳೂರು 9036957018.

ಪ್ರವಾಸ

Travel

04.05.2026 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 21.03.2026 04.04.2026 ಭೂತಾನ್ 8 ದಿನಗಳು. 27.04.2026 ಶ್ರೀಲಂಕಾ 7ದಿನಗಳು. 23.03.2026 ಕಾಶಿ,ಗಯಾ,ಅಯೋಧ್ಯ 7ದಿನಗಳು. 04.04.2026 ಅಸ್ಸಾಂ,ಮೇಘಾಲಯ 9ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

★ಶ್ರೇಯಸ್ ಟೂರ್ಸ್★ 22.03.2026 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯಪ್ರವಾಸ.08.03.2026 4ದಿನಗಳು ರಾಮೇಶ್ವರಂ ಕನ್ಯಾಕುಮಾರಿ,ಮಧುರೈ,ಇತರೆ. 22.03.2026 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಂಚಲಿಂಗ್. 21.03.2026 7ದಿನಗಳು ಆಸ್ಸಾಂ,ಮೇಘಾಲಯ, ಕಾಜಿರಂಗ.8073824856 9206979202

7 ದಿನಗಳ ಸಿಂಗಾಪುರ್ ಮಲೇಶಿಯಾ. 13 ದಿನಗಳ ಚಾರ್ ಧಾಮ್‌ಯಾತ್ರೆ. 10 ದಿನಗಳ ನೇಪಾಳ,ಮುಕ್ತಿನಾಥ. 7 ದಿನಗಳ ಕಾಶಿಯಾತ್ರೆ. 8 ದಿನಗಳ ಗ್ಯಾಂಗ್ ಟಾಕ್ ಡಾರ್ಜಲಿಂಗ್. 8 ದಿನಗಳ ಅಸ್ಸಾಂ,ಮೇಘಾಲಯ. 6 ದಿನಗಳ ಕಾಶ್ಮೀರ್ ಪ್ರವಾಸ. ಸಂಪರ್ಕಿಸಿ. ನಂದಿ ಹಾಲಿಡೇಸ್ ಬಸವನಗುಡಿ ಬೆಂಗಳೂರು.04. 9980270467 9740228186

Holiday Package Tours

ಭಾರತೀಯ ರೈಲ್ವೆಯ ಪ್ರವಾಸಿ ರೈಲು ವೈಷ್ಣೋದೇವಿ, ಅಮೃತಸರ, ಹರಿದ್ವಾರ, ಮಥುರಾ ಪ್ರವಾಸಕ್ಕೆ 13 ದಿನಗಳ ಪ್ರವಾಸವನ್ನು ಏರ್ಪಡಿಸಿದೆ. ಇದು ಏಪ್ರಿಲ್ 11 ರಂದು ಬೆಂಗಳೂರಿನಿಂದ ಪ್ರಾರಂಭವಾಗುತ್ತದೆ, 3AC ಊಟ ಮತ್ತು ವಸತಿಯೊಂದಿಗೆ 48,700 ರೂ . ಬುಕಿಂಗ್‌ಗಾಗಿ 7305858585 / (www.tourtimes.in) ಸಂಪರ್ಕಿಸಿ .

ಭಾರತ–ಅಮೆರಿಕ ಮಧ್ಯೆ ಕೇಬಲ್

ಒಂದನೇ ಪುಟದಿಂದ...

ಇದರ ಜೊತೆಯಲ್ಲೇ, 800 ಜಿಲ್ಲೆಗಳಲ್ಲಿನ ಎರಡು ಕೋಟಿ ಸರ್ಕಾರಿ ನೌಕರರಿಗೆ 18 ಭಾಷೆಗಳಲ್ಲಿ ನೆರವು ಒದಗಿಸುವ ಸುರಕ್ಷಿತ ಮೂಲಸೌಕರ್ಯ ಕಲ್ಪಿಸುವ ಕೆಲಸವನ್ನು ‘ಗೂಗಲ್ ಕ್ಲೌಡ್’ ಮಾಡಲಿದೆ ಎಂದು ಅವರು ಇಲ್ಲಿ ಮಾಧ್ಯಮ ಕಾರ್ಯಕ್ರಮವೊಂದರಲ್ಲಿ ತಿಳಿಸಿದ್ದಾರೆ.

‘ನಮ್ಮ ಜೀವಮಾನದಲ್ಲಿ ಕಾಣುತ್ತಿರುವ ಅತ್ಯಂತ ದೊಡ್ಡದಾದ ಸ್ಥಿತ್ಯಂತರ ಎ.ಐ ಮೂಲಕ ಆಗುತ್ತಿದೆ. ಭಾರತದಂತಹ ದೇಶಗಳಿಗೆ ಇದು ಹೊಸ ಅವಕಾಶಗಳನ್ನು ಸೃಷ್ಟಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ’ ಎಂದಿದ್ದಾರೆ.

ವಿದ್ಯಾರ್ಥಿಗಳು ಹಾಗೂ ವೃತ್ತಿಬದುಕನ್ನು ಪ್ರವೇಶಿಸುತ್ತಿರುವವರನ್ನು ಗುರಿಯಾಗಿಸಿಕೊಂಡ ‘ಗೂಗಲ್ ಎಐ ವೃತ್ತಿಪರ ಪ್ರಮಾಣಪತ್ರ’ ಯೋಜನೆಯನ್ನು ಪಿಚೈ ಅನಾವರಣ ಮಾಡಿದ್ದಾರೆ.

ರಷ್ಯಾ, ಉಕ್ರೇನ್ ಶಾಂತಿ ಮಾತುಕತೆ

ಜಿನೀವಾ (ಪಿಟಿಐ): ಅಮೆರಿಕದ ಮಧ್ಯಸ್ಥಿಕೆಯಲ್ಲಿ ಜಿನೀವಾದಲ್ಲಿ ನಡೆಯುತ್ತಿರುವ ಶಾಂತಿ ಮಾತುಕತೆಯ ಎರಡನೆಯ ದಿನವಾದ ಬುಧವಾರ ಉಕ್ರೇನ್ ಮತ್ತು ರಷ್ಯಾದ ರಾಜತಾಂತ್ರಿಕ ಪ್ರತಿನಿಧಿಗಳು, ಉಭಯ ದೇಶಗಳ ನಡುವಿನ ಮಿಲಿಟರಿ ಮತ್ತು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಚರ್ಚೆ ನಡೆಸಿದರು.

ಅಮೆರಿಕದ ಒಸಿಸಿಆರ್‌ಪಿ ಎಂಬ ಎನ್‌ಜಿಒ ವರದಿ • ಜೈರಾಮ್ ರಮೇಶ್ ಮಾಹಿತಿ

‘ಅದಾನಿ ಆಪ್ತರಿಂದಲೇ ಷೇರು ಖರೀದಿ’

ನವದೆಹಲಿ (ಪಿಟಿಐ): ‘ವಿವಿಧ ಹೆಜ್ ಫಂಡ್ (ಖಾಸಗಿ ಹೂಡಿಕೆ ನಿಧಿ) ಮೂಲಕ ದೊಡ್ಡ ಮೊತ್ತದ ಬೇನಾಮಿ ಹಣ ಬಳಸಿಕೊಂಡು ಅದಾನಿ ಸಮೂಹ ಕಂಪನಿಗಳ ಷೇರುಗಳನ್ನು ಅದಾನಿ ಅವರ ಇಬ್ಬರು ಆಪ್ತರೇ ಖರೀದಿಸಿದ್ದಾರೆ’ ಎಂದು ‘ಆರ್ಗನೈಸ್ಡ್ ಕ್ರೈಂ ಆ್ಯಂಡ್ ಕರಪ್ಷನ್ ರಿಪೋರ್ಟಿಂಗ್ ಪ್ರಾಜೆಕ್ಟ್’ (ಒಸಿಸಿಆರ್‌ಪಿ) ಎಂಬ ಅಮೆರಿಕ ಮೂಲದ ಸರ್ಕಾರೇತರ ಸಂಸ್ಥೆ (ಎನ್‌ಜಿಒ) ವರದಿ ಮಾಡಿದೆ.

ಈ ವರದಿಯನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ. ‘ಅದಾನಿ ಅವರ ಬಹಳ ಆಪ್ತರಾದ ಚೀನಾದ ಚಾಂಗ್ ಚುಂಗ್ ಲಿಂಗ್ ಮತ್ತು ಯುಎಇನ ನಾಸೆರ್ ಅಲಿ ಶಾಬಾನ್ ಅಲಿ ಅವರು ಬೇನಾಮಿ ಹಣದ ಮೂಲಕ ಅದಾನಿ ಸಮೂಹದ ಷೇರುಗಳನ್ನು ಖರೀದಿಸಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ’ ಎಂದು ರಮೇಶ್ ಹೇಳಿದರು.

> **ಅದಾನಿ ಸಮೂಹಕ್ಕೆ ಸೇರಿದ ಯಾವುದೇ ‘ಹಗರಣ’ವನ್ನು ತನಿಖೆಗೆ ಒಳಪಡಿಸದಂತೆ, ನಮ್ಮ ಆಗ್ರಹವನ್ನು ಕೇಳಿಸಿಕೊಳ್ಳದೆ, ಎಲ್ಲದಕ್ಕೂ ಅಡ್ಡಲಾಗಿ ಪ್ರಧಾನಿ ಮೋದಿ ಅವರು ಕಲ್ಲುಬಂಡೆಯಂತೆ ನಿಂತಿದ್ದಾರೆ**
> **ಜೈರಾಮ್ ರಮೇಶ್,** ಕಾಂಗ್ರೆಸ್ ಮುಖಂಡ

‘ಈ ಇಬ್ಬರು ಉದ್ಯಮಿಗಳು 3 ಬಿಲಿಯನ್ ಡಾಲರ್ (ಸುಮಾರು ₹27,205 ಕೋಟಿ) ಮೊತ್ತದ ಷೇರುಗಳನ್ನು 2023ರವರೆಗೂ ಖರೀದಿಸಿದ್ದಾರೆ. ಈ ಬಗ್ಗೆ ಈ ಇಬ್ಬರು ಉದ್ಯಮಿಗಳೇ ಸ್ವಿಟ್ಜರ್ಲೆಂಡ್‌ನ ಬ್ಯಾಂಕ್‌ವೊಂದರ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ. ನಾವು ಅಂದಾಜು ಮಾಡಿದ್ದಕ್ಕಿಂತ ಹೆಚ್ಚಿನ ಮೌಲ್ಯದ ಷೇರುಗಳನ್ನು ಈ ಇಬ್ಬರೂ ಖರೀದಿಸಿದ್ದಾರೆ’ ಎಂದರು.

‘ಕಂಪನಿಯೊಳಗಿನವರು ಅದೇ ಕಂಪನಿಯ ಷೇರುಗಳನ್ನು ಖರೀದಿಸುವುದು, ಕಂಪನಿಯೊಂದರ ಷೇರುಗಳನ್ನು ಸಾರ್ವಜನಿಕರು ಇಂತಿಷ್ಟು ಖರೀದಿಸಬಹುದು ಎನ್ನುವ ಕನಿಷ್ಠ ಪ್ರಮಾಣವನ್ನು ಕಡಿತ ಮಾಡಿ ನಿಯಮ ಉಲ್ಲಂಘಿಸಿರುವುದು– ಈ ನಿಯಮಬಾಹಿರ ವ್ಯವಹಾರಗಳನ್ನು ಅದಾನಿ ಕಂಪನಿ ಮಾಡಿದೆ. ಈ ಬಗ್ಗೆ ಅದಾನಿ ಸಮೂಹದ ಮೇಲಿರುವ 24 ಪ್ರಕರಣಗಳ ಪೈಕಿ 22 ಪ್ರಕರಣಗಳ ತನಿಖೆಯನ್ನು ಸೆಬಿಯು ಬಾಕಿ ಉಳಿಸಿಕೊಂಡಿದೆ’ ಎಂದರು.

‘ಈ ಎಲ್ಲದರ ಕುರಿತು ಎರಡು ತಿಂಗಳಲ್ಲಿ ತನಿಖೆ ಪೂರ್ಣಗೊಳಿಸಿ ಎಂದು ಸುಪ್ರೀಂ ಕೋರ್ಟ್ 2023ರ ಮಾರ್ಚ್ 2ರಂದು ಸೆಬಿಗೆ ಸೂಚಿಸಿತ್ತು. ಈಗ ಮೂರು ವರ್ಷ ಕಳೆದಿದೆ. ತನಿಖೆಯಲ್ಲಿ ಯಾವುದೇ ಪ್ರಗತಿ ಕಂಡಿಲ್ಲ’ ಎಂದು ರಮೇಶ್ ದೂರಿದರು.

‘ಮೆಜೆಸ್ಟಿಕ್‌–2’ ಮಾರ್ಚ್‌ನಲ್ಲಿ ತೆರೆಗೆ

ಭರತ್ ಕುಮಾರ್, ಮಾಲಾಶ್ರೀ

ದರ್ಶನ್ ಅಭಿನಯದ ‘ಮೆಜೆಸ್ಟಿಕ್’ ಚಿತ್ರ ಸೂಪರ್ ಹಿಟ್ ಆಗಿತ್ತು. ಈ ಚಿತ್ರ ತೆರೆಕಂಡು 20 ವರ್ಷಗಳ ಬಳಿಕ ಆ ಮೆಜೆಸ್ಟಿಕ್ ಹೇಗಿದೆ ಎಂಬ ಕಥೆಯನ್ನು ಹೊಂದಿರುವ ‘ಮೆಜೆಸ್ಟಿಕ್‌–2’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಾಮು ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿರುವ ಚಿತ್ರ ಮಾರ್ಚ್‌ನಲ್ಲಿ ತೆರೆಗೆ ಬರಲಿದೆ. ಚಿತ್ರದಲ್ಲಿ ಭರತ್ ಕುಮಾರ್‌ಗೆ ಸಂಹಿತಾ ವಿನ್ಯಾ ಜೋಡಿಯಾಗಿದ್ದಾರೆ.

‘ಮೆಜೆಸ್ಟಿಕ್’ ಅತ್ಯಂತ ಪ್ರಭಾವಶಾಲಿ ಶೀರ್ಷಿಕೆ. ದರ್ಶನ್ ಅವರ ಮೊದಲ ಸಿನಿಮಾ. ಅದರ ಮುಂದುವರಿಕೆ ಕಥೆಯಲ್ಲಿ ನನಗೆ ಅವಕಾಶ ಸಿಕ್ಕಿರುವುದು ಖುಷಿಯ ವಿಷಯ. ಚಿತ್ರಕ್ಕಾಗಿ ಸಾಕಷ್ಟು ಶ್ರಮ ಹಾಕಿರುವೆ. ಸಾಕಷ್ಟು ದಿನ ಮೆಜೆಸ್ಟಿಕ್‌ನಲ್ಲಿ ಸುತ್ತಾಡಿ, ಅಲ್ಲಿನ ಪ್ರಪಂಚವನ್ನು ಅರ್ಥ ಮಾಡಿಕೊಂಡು ಪಾತ್ರಕ್ಕೆ ಸಿದ್ಧನಾಗಿದ್ದೆ. ಸಾಕಷ್ಟು ಅಡತಡೆಗಳನ್ನು ದಾಟಿ ಚಿತ್ರ ಬಿಡುಗಡೆ ಹಂತಕ್ಕೆ ಬಂದಿದೆ. ದರ್ಶನ್ ಜೈಲಿನಲ್ಲಿ ಇಲ್ಲದಿದ್ದರೆ ಬಹುಶಃ ಇವತ್ತು ನಮ್ಮ ಜೊತೆಗಿದ್ದು ಬೆಂಬಲಿಸುತ್ತಿದ್ದರು. ಅವರ ಆಶೀರ್ವಾದ ನಮ್ಮ ಮೇಲಿದೆ’ ಎಂದರು ಭರತ್.

ಅಮ್ಮ ಎಂಟರ್‌ಪ್ರೈಸಸ್ ಮೂಲಕ ಹೆಚ್.ಆನಂದಪ್ಪ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ‘ನಾಲ್ಕು ಸಲ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದೇನೆ. ಆದರೆ ಒಂದು ಸಿನಿಮಾ ಆ ಎಲ್ಲ ಸೋಲುಗಳಿಗಿಂತ ಹೆಚ್ಚು ಅನುಭವ ನೀಡಿದೆ. ಸಿನಿಮಾವನ್ನು ಈ ಹಂತಕ್ಕೆ ತರಲು ಸಾಕಷ್ಟು ಸಾಹಸಪಟ್ಟಿದ್ದೇವೆ. ಕಾರ್ಯಕ್ರಮಕ್ಕೆ ನಿರ್ದೇಶಕರು ಯಾಕೆ ಬಂದಿಲ್ಲ, ಚಿತ್ರಕ್ಕೆ ಏನೆಲ್ಲ ತೊಂದರೆಯಾಯಿತು ಎಂಬುದನ್ನು ಸಿನಿಮಾ ಬಿಡುಗಡೆ ಬಳಿಕ ಮಾತನಾಡುವೆ’ ಎಂದರು ನಿರ್ಮಾಪಕ.

ಶ್ರುತಿ, ಮಾಲಾಶ್ರೀ, ಪೆಟ್ರೋಲ್ ಪ್ರಸನ್ನ, ಕೋಟೆ ಪ್ರಭಾಕರ್ ಮುಂತಾದವರು ಚಿತ್ರದಲ್ಲಿದ್ದಾರೆ. ವಿನು ಮನಸು ಸಂಗೀತ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಸಂದೀಪ್ ಶಿವಶಂಕರ್, ರಿಷಿ ರಾಮನ್, ಮಿಂಚು ಜೋಶಿ, ವಿಷ್ಣು ರಾಮನ್

‘ಐ ಸಿ ಯು’ ಎಂದ ಹೊಸಬರು

ಚಿತ್ರರಂಗಕ್ಕೆ ಬರುವವರಿಗೆ ಮೊದಲ ಹೆಜ್ಜೆ ಕಿರುಚಿತ್ರ ನಿರ್ಮಾಣ. ಹೀಗೆ ಸ್ಯಾಂಡಲ್‌ವುಡ್‌ಗೆ ಕಾಲಿಡುವ ಕನಸಿನೊಂದಿಗೆ ಮೈಸೂರಿನ ಹುಡುಗರ ತಂಡವೊಂದು ಸಿದ್ಧಪಡಿಸಿರುವ ‘ಐ ಸಿ ಯು’ ಹಾಗೂ ‘ಮಂಡಲ’ ಕಿರುಚಿತ್ರಗಳ ವಿಶೇಷ ಪ್ರದರ್ಶನ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು.

ಹುಡುಗ, ಹುಡುಗಿಯ ಪ್ರೇಮ ಸಂಬಂಧದಲ್ಲಿ ಎದುರಾಗುವ ಸಮಸ್ಯೆಗಳು, ಅದಕ್ಕೆ ಪರಿಹಾರವನ್ನು ಹೇಳುವ ‘ಐ ಸಿ ಯು’ ಕಿರುಚಿತ್ರವನ್ನು ಮಿಂಚು ಜೋಶಿ ನಿರ್ದೇಶಿಸಿ, ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ‘ನಾನು ಈ ಹಿಂದೆ ಪರಂವಃ ಸಂಸ್ಥೆಯ ‘ಸಕುಟುಂಬ ಸಮೇತ’ ಹಾಗೂ ‘ಇಬ್ಬನಿ ತಬ್ಬಿದ ಇಳೆಯಲಿ’ ಚಿತ್ರಗಳ ನಿರ್ದೇಶನ ತಂಡದಲ್ಲಿ ಕೆಲಸ ಮಾಡಿದ್ದೆ. ಪೂರ್ಣ ಪ್ರಮಾಣದ ಸಿನಿಮಾ ಮಾಡಲು ಪೂರ್ವತಯಾರಿ ಎಂಬಂತೆ ಈ ಕಿರುಚಿತ್ರ ಮಾಡಿದ್ದೇವೆ. ಮುಂಬೈ, ಮೈಸೂರಿನಲ್ಲಿ ಚಿತ್ರೀಕರಣ ಮಾಡಿದ್ದೇವೆ. ಈಗಿನ ಕಾಲದ ಹುಡುಗ–ಹುಡುಗಿಯರ ಮನಸ್ಥಿತಿಯನ್ನು ಪ್ರತಿಬಿಂಬಿಸುವ ಕಥೆಯಿದು. ವಿವಿಧ ಚಿತ್ರೋತ್ಸವಗಳಿಗೆ ಕಳುಹಿಸುವ ಆಲೋಚನೆಯಿದೆ’ ಎಂದರು ಮಿಂಚು.

ಈ ಕಿರುಚಿತ್ರಕ್ಕೆ ರವೀಂದ್ರ ಜೋಶಿ ನಿರ್ಮಾಣವಿದ್ದು, ವಿಷ್ಣು ರಾಮನ್, ರಿಷಿ ರಾಮನ್ ಹಾಗೂ ಸಂದೀಪ್ ಶಿವಶಂಕರ್ ನಟಿಸಿದ್ದಾರೆ.

ರಿಷಿ ರಾಮನ್ ನಿರ್ದೇಶಿಸಿ, ನಟಿಸಿರುವ ‘ಮಂಡಲ’ ಮನೋವೈಜ್ಞಾನಿಕ ಥ್ರಿಲ್ಲರ್ ಕಥೆಯನ್ನು ಹೊಂದಿದ್ದು, ಮತಿವಿಕಲ್ಪ, ಆನುವಂಶಿಕ ಆಘಾತ ಮತ್ತು ಭಾವನಾತ್ಮಕ ಹಿಂಸೆಯ ಸುತ್ತ ಸಾಗುತ್ತದೆ. ರಾಮನ್ ಪ್ರೊಡಕ್ಷನ್ಸ್ ನಿರ್ಮಾಣದ ಈ ಕಿರುಚಿತ್ರದಲ್ಲಿ ಅನಾಮಿಕ ದತ್ತ, ಪ್ರಜ್ವಲ್ ಕುಮಾರ್ ಹಾಗೂ ಮಾನಸ ರಾಜ್ ಗೌಡ ನಟಿಸಿದ್ದಾರೆ. ‘ನಾನು ಬರ್ಲಿನ್‌ನಲ್ಲಿ ಸಿನಿಮಾ ಸಂಬಂಧಿ ತರಬೇತಿ ಪಡೆಯುತ್ತಿದ್ದೇನೆ. ಅಲ್ಲಿ ಚಿತ್ರೀಕರಿಸಿದ ಕಿರುಚಿತ್ರವಿದು. ಮೈಸೂರಿನಲ್ಲಿ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿದೆವು’ ಎಂದರು ರಿಷಿ ರಾಮನ್.

‘ಪಬ್ಬಾರ್’ನಲ್ಲಿ ಹೀಗಿದ್ದಾರೆ ಅಯ್ಯಪ್ಪ!

ಅಯ್ಯಪ್ಪ

‘ಶಾಖಾಹಾರಿ’ ಸಿನಿಮಾ ಮೂಲಕ ಗಮನಸೆಳೆದ ನಿರ್ದೇಶಕ ಸಂದೀಪ್ ಸುಂಕದ್ ನಿರ್ದೇಶನದ ‘ಪಬ್ಬಾರ್’ನಲ್ಲಿ ನಟ ಅಯ್ಯಪ್ಪ ಪಿ.ಶರ್ಮ ಪೊಲೀಸ್ ಅಧಿಕಾರಿಯಾಗಿ ಬಣ್ಣಹಚ್ಚಿದ್ದಾರೆ.

ಅಯ್ಯಪ್ಪ ಅವರ ಪಾತ್ರದ ಲುಕ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದ್ದು, ಇದೇ ಮೊದಲ ಬಾರಿಗೆ ತಮ್ಮ ಗಡ್ಡ, ಮೀಸೆಗೆ ಕತ್ತರಿ ಹಾಕಿದ್ದಾರೆ. ಧೀರೆನ್ ಆರ್.ರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ ಈ ಸಿನಿಮಾವನ್ನು ಗೀತಾ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿದೆ. ಇದೊಂದು ಕ್ರೈಂ, ಅಡ್ವೆಂಚರಸ್ ಥ್ರಿಲ್ಲರ್ ಸಿನಿಮಾವಾಗಿದ್ದು, ಹಿಮಾಚಲ ಪ್ರದೇಶದ ಶಿಮ್ಲಾ ಬಳಿಯ ‘ಪಬ್ಬಾರ್’ ನದಿ ಈ ಚಿತ್ರದ ಕಥೆಯ ಕೇಂದ್ರಬಿಂದುವಾಗಿದೆ. ಹೀಗಾಗಿಯೇ ಚಿತ್ರಕ್ಕೆ ‘ಪಬ್ಬಾರ್’ ಎಂಬ ಶೀರ್ಷಿಕೆ ಇಡಲಾಗಿದೆ.

ಅಯ್ಯಪ್ಪ ‘ಪಬ್ಬಾರ್’ ಸಿನಿಮಾದಲ್ಲಿ ಖಡಕ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. ಅಯ್ಯಪ್ಪ 14 ವರ್ಷದ ಬಳಿಕ ತಮ್ಮ ತಲೆಕೂದಲು ಹಾಗೂ ಗಡ್ಡಕ್ಕೆ ಕತ್ತರಿ ಹಾಕಿದ್ದಾರೆ. ಉದ್ದ ಗಡ್ಡ ಬಿಟ್ಟು ತಮ್ಮ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಅವರೀಗ ಸಿನಿಮಾದ ಪಾತ್ರಕ್ಕಾಗಿ ಹೊಸ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದ ನಾಯಕ ಒಬ್ಬ ಪೊಲೀಸ್ ಅಧಿಕಾರಿಯಾಗಿದ್ದು, ಆತನ ಎರಡು ಪಯಣಗಳು ಕಥೆಯಲ್ಲಿದೆ. ‘ಟಗರು ಪಲ್ಯ’ ಖ್ಯಾತಿಯ ನಟಿ ಅಮೃತ ಪ್ರೇಮ್ ಚಿತ್ರದಲ್ಲಿ ನಾಯಕಿಯಾಗಿ ನಟಿಸುದ್ದಾರೆ.

‘ಮೂರ್ಖರ ಮಾತು ಕೇಳಿ ಸಬ್ಸಿಡಿ ನಿಲ್ಲಿಸಬೇಡಿ’

ರಾಜೇಂದ್ರ ಸಿಂಗ್ ಬಾಬು

ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಅವರ ನಿರ್ದೇಶನದ ‘ವೀರ ಕಂಬಳ’ ಚಿತ್ರ ಕನ್ನಡ ಹಾಗೂ ತುಳು ಭಾಷೆಗಳಲ್ಲಿ ಫೆ.27ರಂದು ತೆರೆಕಾಣಲಿದ್ದು, ಸಿನಿಮಾದ ಟ್ರೇಲರ್ ಅನ್ನು ಇತ್ತೀಚೆಗೆ ಸಂಗೀತ ನಿರ್ದೇಶಕ ಹಂಸಲೇಖ ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ರಾಜೇಂದ್ರ ಸಿಂಗ್ ಬಾಬು, ‘ಚಿತ್ರರಂಗ ಸಂಕಷ್ಟದಲ್ಲಿದೆ. ಸರ್ಕಾರ ಸಬ್ಸಿಡಿಯನ್ನು ತೆಗೆಯಲಿದೆ ಎನ್ನುವ ವದಂತಿ ಇದೆ. ಸಿದ್ದರಾಮಯ್ಯ ಅವರು ಸಬ್ಸಿಡಿ ತೆಗೆಯಲು ಬಿಡುವುದಿಲ್ಲ ಎನ್ನುವ ನಂಬಿಕೆ ಇದೆ. ಮೂರ್ಖರ ಮಾತು ಕೇಳಿ ಸಬ್ಸಿಡಿ ನಿಲ್ಲಿಸಬೇಡಿ. ನಾನು ನಾಲ್ಕು ಮನೆ ಕಳೆದುಕೊಂಡಿದ್ದೇನೆ, ರವಿಚಂದ್ರನ್ ಐದು ಮನೆ ಕಳೆದುಕೊಂಡಿದ್ದಾರೆ. ಹೀಗೆ ಮನೆ ಕಳೆದುಕೊಳ್ಳುತ್ತಾ ಹೋಗಬೇಕು. ಚಿತ್ರರಂಗವನ್ನು ಉದ್ಯಮ ಮಾಡುವುದರಿಂದ ಪ್ರದರ್ಶಕರಿಗಷ್ಟೇ ಸಹಾಯವಾಗಲಿದೆ. ಸಬ್ಸಿಡಿ ನಿಲ್ಲಿಸಿದರೆ ಗಿರೀಶ ಕಾಸರವಳ್ಳಿ, ಶೇಷಾದ್ರಿ, ಬರಗೂರು ರಾಮಚಂದ್ರಪ್ಪ, ನಾಗಾಭರಣ ಮುಂತಾದವರು ಹೊಸ ಯೋಚನೆಗಳನ್ನೇ ನಿಲ್ಲಿಸಿಬಿಡುತ್ತಾರೆ’ ಎಂದರು.

‘ಬೆಂಗಳೂರು ಕಥೆಗಳನ್ನೇ ಮಾಡಿಕೊಂಡು ನಾವು ಕರ್ನಾಟಕವನ್ನು ಮರೆಯುತ್ತಿದ್ದೇವೆ. ಬೆಂಗಳೂರಿನ ವ್ಯಾಮೋಹ ಬಿಟ್ಟು ಹೊರಗೆ ಹೋದರೆ ಒಳ್ಳೊಳ್ಳೆಯ ಕಥೆಗಳು ಸಿಗುತ್ತವೆ. ನಮ್ಮ ಮಣ್ಣಿನ ಕಥೆಯೇ ಇಂದು ಚಿತ್ರಮಂದಿರಗಳಲ್ಲಿ ಓಡುತ್ತವೆ. ಪ್ಯಾನ್ ಇಂಡಿಯಾ ಕಥೆಗಳು ಓಡಲ್ಲ’ ಎಂದರು.

‘ವೀರ ಕಂಬಳ’ ಸಿನಿಮಾವನ್ನು ವಿನಿತ ವಿಜಯ್ ಕುಮಾರ್ ರೆಡ್ಡಿ ಹಾಗೂ ಅರುಣ್ ರೈ ತೊಡಾರ್ ನಿರ್ಮಾಣ ಮಾಡಿದ್ದಾರೆ.

ಕಡಲತೀರ ರಕ್ಷಣೆಗೆ ನೌಕಾಪಡೆ ಸದಾ ಸಿದ್ಧ: ರಾಷ್ಟ್ರಪತಿ ಮುರ್ಮು

ದ್ರೌಪದಿ ಮುರ್ಮು

ವಿಶಾಖಪಟ್ಟಣ (ಪಿಟಿಐ): ಭಾರತೀಯ ನೌಕಾಪಡೆಯು ದೇಶದ ಕಡಲತೀರವನ್ನು ರಕ್ಷಿಸುವಲ್ಲಿ ಸದಾ ಸನ್ನದ್ಧವಾಗಿರುತ್ತದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಹೇಳಿದರು.

ಆಂಧ್ರ ಪ್ರದೇಶದ ವಿಶಾಖಪಟ್ಟಣ ಸಮುದ್ರ ತೀರದಲ್ಲಿ ಯುದ್ಧನೌಕೆಯಲ್ಲಿ ನಡೆದ ‘ಇಂಟರ್‌ನ್ಯಾಷನಲ್ ಫ್ಲೀಟ್ ರಿವ್ಯೂ’ (ಐಎಫ್‌ಆರ್) ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಮುರ್ಮು ಅವರು ಮಾತನಾಡಿದರು.

ಜಗತ್ತಿನ ನೌಕಾಪಡೆಗಳೊಂದಿಗೆ ಉತ್ತಮ ಸಂಬಂಧ, ಸ್ನೇಹ, ಆತ್ಮವಿಶ್ವಾಸ ಹಾಗೂ ನಂಬಿಕೆಯ ಸೇತುವೆಯನ್ನು ನಿರ್ಮಿಸುವಲ್ಲಿ ಭಾರತೀಯ ನೌಕಾಪಡೆಯು ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಿದರು.

ಮಣಿಪುರ: ಬಂಡುಕೋರರ ಸೆರೆ

ಇಂಫಾಲ (ಪಿಟಿಐ): ಮಣಿಪುರದ ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಇಬ್ಬರು ಬಂಡುಕೋರರನ್ನು ಬಂಧಿಸಲಾಗಿದೆ ಎಂದು ಬುಧವಾರ ಪೊಲೀಸರು ತಿಳಿಸಿದ್ದಾರೆ.

ಪೀಪಲ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ಲೆಫ್ಟಿನೆಂಟ್ ಎಂದು ಘೋಷಿಸಿಕೊಂಡಿದ್ದ ವ್ಯಕ್ತಿಯನ್ನು ಮಂಗಳವಾರ ಬಂಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ನಡೆದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಪಿಎಲ್‌ಎ ಸದಸ್ಯನನ್ನು ಬಂಧಿಸಲಾಗಿದೆ ಮತ್ತು ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಜರಾತ್: ₹4 ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡನೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್ ಸರ್ಕಾರ ಬುಧವಾರ ₹4.08 ಲಕ್ಷ ಕೋಟಿ ಗಾತ್ರದ 2026–27ನೇ ಸಾಲಿನ ಆಯವ್ಯಯವನ್ನು ಮಂಡಿಸಿತು. ಕಳೆದ ಆಯವ್ಯಯಕ್ಕೆ ಹೋಲಿಸಿದರೆ ಈ ವರ್ಷ ಬಜೆಟ್ ಗಾತ್ರ ಶೇ 10.2ರಷ್ಟು ಹೆಚ್ಚಾಗಿದೆ.

‘ಒಲಿಂಪಿಕ್ಸ್‌ಗೆ ಅಹಮದಾಬಾದ್ ಸನ್ನದ್ಧ’ ಎಂಬ ಉದ್ಘೋಷ ಹಾಗೂ ಪ್ರವಾಸೋದ್ಯಮದ ಉತ್ತೇಜನಕ್ಕಾಗಿ ‘ಗುಜರಾತ್‌ನಲ್ಲೇ ವಿವಾಹವಾಗಿ’ ಎಂಬ ಅಭಿಯಾನದ ಘೋಷಣೆ, ಗಾಂಧಿನಗರದಲ್ಲಿ ನಮೋ ಕೇಂದ್ರ ಗ್ರಂಥಾಲಯ ಸ್ಥಾಪನೆಗೆ ₹100 ಕೋಟಿ ಒದಗಿಸಿರುವುದು ಈ ಬಾರಿಯ ವಿಶೇಷ.

ಗುಜರಾತ್‌ನ ಹಣಕಾಸು ಸಚಿವ ಕಾನುಭಾಯ್ ದೇಸಾಯಿ ಅವರು ವಿಧಾನಸಭೆಯಲ್ಲಿ ಕಳೆದ ಬಾರಿಗಿಂತ ₹37,803 ಕೋಟಿ ಹೆಚ್ಚು ಗಾತ್ರದ ಬಜೆಟ್ ಮಂಡಿಸಿದರು. ಆನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಯಾವುದೇ ಹೊಸ ತೆರಿಗೆ ವಿಧಿಸದ ಮತ್ತು ಹೆಚ್ಚಿಸದ ಸಮತೋಲಿತ ಆಯವ್ಯಯ ಇದು’ ಎಂದರು.

ಕ್ರೀಡಾ ಮೂಲಸೌಕರ್ಯ ಸೃಷ್ಟಿಸಲು ₹1331 ಕೋಟಿ ಅನುದಾನ ನೀಡಲಾಗಿದೆ. ಅಹಮದಾಬಾದ್ ನಗರವನ್ನು ಒಲಿಂಪಿಕ್ಸ್‌ಗೆ ಸಜ್ಜುಗೊಳಿಸಲು ₹500 ಕೋಟಿ ಒದಗಿಸಲಾಗಿದೆ.

2030ರ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು 2036ರ ಒಲಿಂಪಿಕ್ಸ್ ತಯಾರಿಗಾಗಿ ವಿಶ್ವದರ್ಜೆಯ ಕ್ರೀಡಾ ಮೂಲಸೌಕರ್ಯ ಮತ್ತು ಆಧುನಿಕ ಸಾರಿಗೆ ಸೌಕರ್ಯ ಕಲ್ಪಿಸುವುದಕ್ಕಾಗಿ ಪ್ರತ್ಯೇಕ ನಿಧಿ ಮೀಸಲಿಡಲಾಗಿದೆ.

ವಿಶ್ವಮಟ್ಟದ ಹಾಕಿ ಕ್ರೀಡಾಂಗಣಕ್ಕೆ ₹90 ಕೋಟಿ, ಅಥ್ಲೀಟ್‌ಗಳ ತರಬೇತಿಗಾಗಿ ಸುಸಜ್ಜಿತ ಕ್ರೀಡಾ ಕೇಂದ್ರ ನಿರ್ಮಾಣಕ್ಕೆ ₹100 ಕೋಟಿ ಮೀಸಲಿಡಲಾಗಿದೆ.

ಮಧ್ಯಪ್ರದೇಶ: ‘ಮಹಿಳಾ ಕೇಂದ್ರಿತ’ ಬಜೆಟ್

ಭೋಪಾಲ್ (ಪಿಟಿಐ): ಮಹಿಳಾ ಸಬಲೀಕರಣ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗಾಗಿ ₹1.27 ಲಕ್ಷ ಕೋಟಿ ಮೀಸಲಿಟ್ಟಿರುವ, ಹೊಸ ತೆರಿಗೆ ಹೊರೆ ಇಲ್ಲದ ಒಟ್ಟು ₹4.38 ಲಕ್ಷ ಕೋಟಿ ವೆಚ್ಚದ 2026–27ನೇ ಸಾಲಿನ ಬಜೆಟ್ ಅನ್ನು ಬುಧವಾರ ಮಧ್ಯಪ್ರದೇಶದ ಹಣಕಾಸು ಸಚಿವ ಜಗದೀಶ್ ದೇವ್ಡಾ ಮಂಡಿಸಿದರು.

‘ರಾಜ್ಯದ ಜನರ ಮೇಲೆ ಸಾಲದ ಹೊರೆ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ’ ಎಂದು ವಿರೋಧ ಪಕ್ಷದ ಮುಖಂಡರು ಬಜೆಟ್ ಬಗ್ಗೆ ಪ್ರತಿಕ್ರಿಯಿಸಿದ್ದಾರೆ.

ಒಟ್ಟಾರೆ ಬಜೆಟ್ ಅನ್ನು ‘ಜ್ಞಾನಿ’ (ಜಿವೈಎಎನ್‌ಐಐ) ಮಾದರಿಯಲ್ಲಿ ಸಿದ್ಧಪಡಿಸಲಾಗಿದೆ. ಜಿ–ಗರೀಬ್ ಕಲ್ಯಾಣ್, ವೈ–ಯುವ ಶಕ್ತಿ, ಎ–ಅನ್ನದಾತ, ಎನ್–ನಾರಿಶಕ್ತಿ ಮತ್ತು ಐಐ– ಇಂಡಸ್ಟ್ರಿ ಮತ್ತು ಇನ್‌ಫ್ರಾಸ್ಟ್ರಕ್ಚರ್ ಕ್ಷೇತ್ರಗಳಿಗೆ ಆದ್ಯತೆ ನೀಡಿ ₹3 ಲಕ್ಷ ಕೋಟಿ ಅನುದಾನ ಮೀಸಲಿಡಲಾಗಿದೆ.

ಬಂಡೀಪುರ, ನಾಗರಹೊಳೆ ಸಫಾರಿ ಮತ್ತೆ ಶುರು

ಒಂದನೇ ಪುಟದಿಂದ...

ಅಲ್ಲದೇ, ಪರಿಸರ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸುವ ಷರತ್ತಿನೊಂದಿಗೆ ಆರಂಭಿಸಲಾಗುವುದು. ವನ್ಯಜೀವಿ–ಮಾನವ ಸಂಘರ್ಷ ತಡೆಯಲು ಸೂಕ್ತ ಸಿಬ್ಬಂದಿಯನ್ನು ಸೂಕ್ಷ್ಮ ಪ್ರದೇಶಗಳಲ್ಲಿ ನಿಯೋಜಿಸಲು ಸಮ್ಮತಿಸಲಾಗಿದೆ ಎಂದರು.

ಜಿಪಿಎಸ್–ಡ್ಯಾಷ್ ಕ್ಯಾಮ್ ಬಳಕೆ: ಸಫಾರಿ ವಾಹನಗಳನ್ನು ಕತ್ತಲಾದ ಬಳಿಕ ಹಾಗೂ ಹೆಚ್ಚುವರಿ ಅವಧಿಗೆ ಓಡಿಸುವುದು ಸೇರಿ ಎಲ್ಲ ಬಗೆಯ ದುರ್ಬಳಕೆ ತಡೆಗಟ್ಟಲು ಎರಡು ತಿಂಗಳಲ್ಲಿ ಎಲ್ಲ ಸಫಾರಿ ವಾಹನಗಳಿಗೆ ಎಂಜಿನ್ ಸಂಪರ್ಕಿತ ಜಿಪಿಎಸ್ ಮತ್ತು ಡ್ಯಾಷ್ ಕ್ಯಾಮ್ ಅಳವಡಿಸಬೇಕು ಎಂದು ಸೂಚಿಸಲಾಗಿದೆ ಎಂದು ಖಂಡ್ರೆ ತಿಳಿಸಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಒಟ್ಟು ವಿಸ್ತೀರ್ಣ 1,036 ಚದರ ಕಿ.ಮೀ ಇದೆ. ಇದರಲ್ಲಿ ಪ್ರವಾಸೋದ್ಯಮ ವಲಯ ಕ್ಷೇತ್ರ ಶೇ 8ರಷ್ಟು ಎಂದರೆ ಕೇವಲ 80 ಚದರ ಕಿ.ಮೀ. ಅದೇ ರೀತಿ ನಾಗರಹೊಳೆಯ ಒಟ್ಟು ವಿಸ್ತೀರ್ಣ 844 ಚದರ ಕಿ.ಮೀ. ಪರಿಸರ ಪ್ರವಾಸೋದ್ಯಮ ವಲಯ ಕೇವಲ 63 ಚದರ ಕಿ.ಮೀ, ಅಂದರೆ ಶೇ 7.5ರಷ್ಟು ಮಾತ್ರ. ಆದ್ದರಿಂದ ಹುಲಿಗಳು ಕಾಡಿನಿಂದ ನಾಡಿಗೆ ಬರುತ್ತಿರುವುದಕ್ಕೆ ಸಫಾರಿಯೇ ಕಾರಣ ಎಂದು ಹೇಳಲು ವೈಜ್ಞಾನಿಕ ಆಧಾರವಿಲ್ಲ ಎಂದು ಹಿರಿಯ ಅಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ ಎಂದು ವಿವರಿಸಿದರು.

ಶೇ 50 ರಷ್ಟು ಸಫಾರಿ ವಾಹನ ಬಳಕೆ: ಬಂಡೀಪುರ, ಬಿಆರ್‌ಟಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಮತ್ತು ಮಲೆಮಹದೇಶ್ವರ ವನ್ಯಜೀವಿ ಧಾಮದಲ್ಲಿ ಮುಂಚೂಣಿ ಸಿಬ್ಬಂದಿ ಕೊರತೆ ಮತ್ತು ವಾಹನದ ಅಗತ್ಯದ ಬಗ್ಗೆ ಚರ್ಚಿಸಲಾಗಿದೆ. ಹುಲಿ ಸಂರಕ್ಷಿತ ಪ್ರದೇಶದಲ್ಲಿ ನವೆಂಬರ್ 7ಕ್ಕೆ ಮುನ್ನ ಸಫಾರಿಯಲ್ಲಿ ಬಳಕೆ ಆಗುತ್ತಿದ್ದ ವಾಹನಗಳ ಪೈಕಿ ಪ್ರಥಮ ಹಂತದಲ್ಲಿ ಶೇ 50ರಷ್ಟು ವಾಹನಗಳನ್ನು ಮಾತ್ರ ಬಳಕೆ ಮಾಡಲು ನಿರ್ಧರಿಸಲಾಗಿದೆ. ಉಳಿದ ಶೇ 50ರಷ್ಟು ವಾಹನ ಮತ್ತು ಸಿಬ್ಬಂದಿಯನ್ನು ಅರಣ್ಯದಂಚಿನ ಗ್ರಾಮಗಳ ಬಳಿ ಗಸ್ತು ಹೆಚ್ಚಿಸಲು ಬಳಸುವ ಮೂಲಕ ವನ್ಯಜೀವಿಗಳು ನಾಡಿಗೆ ಬರುವುದನ್ನು ತಡೆಯಲು ಬಳಸಲಾಗುವುದು ಎಂದರು.

ಎನ್‌ಟಿಸಿಎಗೆ ತಿಳಿಸಿಯೇ ಹುಲಿ ಸೆರೆ

‘ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ರಾಜ್ಯದಲ್ಲಿ ಹುಲಿಗಳನ್ನು ಸೆರೆ ಹಿಡಿಯುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದೆ ಎಂದು ಮಾಧ್ಯಗಳಲ್ಲಿ ವರದಿಯಾಗಿದೆ. ಆದರೆ, ನಮ್ಮ ಇಲಾಖೆ ಪ್ರತಿಯೊಂದು ಹುಲಿಯನ್ನು ಹಿಡಿಯುವಾಗಲೂ ಎನ್‌ಟಿಸಿಎ ಪ್ರಮಾಣಿತ ಮಾನದಂಡ ಅನುಸರಿಸಿದೆ. ಈ ಉದ್ದೇಶಕ್ಕೆ ಸಮಿತಿ ರಚಿಸಿ, ಸಮಿತಿಯ ಶಿಫಾರಸಿನಂತೆ ಹುಲಿ ಸೆರೆ ಕಾರ್ಯಾಚರಣೆ ನಡೆಸಲಾಗಿದೆ’ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಸಫಾರಿ ಅವಧಿ ಇಳಿಕೆ

‘ಬಂಡೀಪುರದಲ್ಲಿ ನವೆಂಬರ್‌ವರೆಗೆ ನಡೆಯುತ್ತಿದ್ದ ಟ್ರಿಪ್, ಸಮಯ ಮತ್ತು ವಾಹನ ಸಂಖ್ಯೆಯಲ್ಲಿ ಕಡಿತ ಮಾಡಿ ಪುನರಾರಂಭಕ್ಕೆ ಸಮ್ಮತಿಸಲಾಗಿದೆ. ಈ ಹಿಂದೆ ಬಂಡೀಪುರದಲ್ಲಿ 8 ಗಂಟೆ ಸಫಾರಿ ನಡೆಯುತ್ತಿತ್ತು. ಈಗ ಅದನ್ನು 5 ಗಂಟೆಗೆ ತಗ್ಗಿಸಲಾಗಿದೆ. ಅದೇ ರೀತಿ ಸುಂಕದಕಟ್ಟೆಯಲ್ಲಿ 6 ಗಂಟೆ ಹಾಗೂ ನಾಗರಹೊಳೆಯಲ್ಲಿ 4 ಗಂಟೆ ಮಾತ್ರ ಸಫಾರಿಗೆ ಮೊದಲ ಹಂತದಲ್ಲಿ ಅನುಮತಿ ನೀಡಲಾಗಿದೆ’ ಎಂದು ಖಂಡ್ರೆ ಹೇಳಿದರು.

ಐಟಿಎಫ್ ಟೆನಿಸ್: ಶ್ರೀವಲ್ಲಿ ಮುನ್ನಡೆ

ಪ್ರಜಾವಾಣಿ ವಾರ್ತೆ

ಭಾರತದ ಶ್ರೀವಲ್ಲಿ ಭಮಿಡಿಪಾಟಿ — ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಬೆಂಗಳೂರು: ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಅವರು ಬುಧವಾರ ಶ್ರಮಪಟ್ಟು 7–6 (6), 6–4 ರಿಂದ ಮಾಲ್ಟಾದ ಫ್ರಾನ್ಸೆಸ್ಕಾ ಕರ್ಮಿ ಅವರನ್ನು ಸೋಲಿಸಿ ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಎರಡನೇ ಸುತ್ತಿಗೆ ಮುನ್ನಡೆದರು.

ವಿಶ್ವ ಕ್ರಮಾಂಕದಲ್ಲಿ 543ನೇ ಸ್ಥಾನದಲ್ಲಿರುವ ಶ್ರೀವಲ್ಲಿ ತವರಿನಲ್ಲಿ ಆಡುವ ಲಾಭದ ಜೊತೆಗೆ, ತಮ್ಮ ಪ್ರಬಲ ಸರ್ವ್‌ಗಳ ಮೇಲೆ ನಂಬಿಕೆಯಿರಿಸಿ, 336ನೇ ಕ್ರಮಾಂಕದ ಕರ್ಮಿ ಅವರನ್ನು ಸೋಲಿಸಿದರು. ಶ್ರೀವಲ್ಲಿ ಈ ಟೂರ್ನಿಗೆ ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದರು.

ಎಸ್.ಎಂ.ಕೃಷ್ಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ರಶ್ಮಿಕಾ ನೇರ ಸೆಟ್‌ಗಳ ಜಯಪಡೆದರೆ, ಭಾರತ ಇನ್ನಿಬ್ಬರು ಆಟಗಾರ್ತಿಯರಾದ ಮಾಯಾ ರಾಜೇಶ್ವರನ್ ರೇವತಿ ಮತ್ತು ವೈದೇಹಿ ಚೌಧರಿ ಹೊರಬಿದ್ದರು.

24 ವರ್ಷ ವಯಸ್ಸಿನ ಶ್ರೀವಲ್ಲಿ ಅವರ ಆರಂಭ ಉತ್ತಮವಾಗಿರಲಿಲ್ಲ. ಅವರಿಗಿಂತ ಒಂದು ವರ್ಷ ಕಿರಿಯವರಾದ ಕರ್ಮಿ ಮೊದಲ ಸೆಟ್‌ನಲ್ಲಿ 4–2 ಮುನ್ನಡೆ ಪಡೆದಿದ್ದರು. ಆದರೆ ಮಹತ್ವದ ಏಳನೇ ಗೇಮ್‌ನಲ್ಲಿ ಸರ್ವ್ ಉಳಿಸಿಕೊಂಡ ಶ್ರೀವಲ್ಲಿ ಅವರು ವಿಶ್ವಾಸ ವೃದ್ಧಿಸಿಕೊಂಡರು. ನಂತರ ಅವರು ಎದುರಾಳಿಯ ಸರ್ವ್ ಮುರಿದು 4–4ರಲ್ಲಿ ಸಮಮಾಡಿಕೊಂಡರು.

ಇಬ್ಬರು ಸಮಬಲದ ಹೋರಾಟ ನಡೆಸಿದರು. ಆದರೆ ಟೈಬ್ರೇಕರ್‌ನಲ್ಲಿ ಶ್ರೀವಲ್ಲಿ ಕೈಮೇಲಾಯಿತು. ಟೈಬ್ರೇಕರ್‌ನ ಯಶಸ್ಸು ಹೈದರಾಬಾದಿನ ಆಟಗಾರ್ತಿಯಲ್ಲಿ ಉತ್ಸಾಹ ಮೂಡಿಸಿದ್ದು, ಎರಡನೇ ಸೆಟ್‌ನಲ್ಲಿ ವ್ಯಕ್ತವಾಯಿತು. ಎದುರಾಳಿಯನ್ನು ಅನೇಕ ಬಾರಿ ಒತ್ತಡಕ್ಕೆ ಸಿಲುಕಿಸಿ ಪಂದ್ಯ ಗೆದ್ದರು.

ಶ್ರೀವಲ್ಲಿ ಅವರ ಮುಂದಿನ ಎದುರಾಳಿ, ಮೂರನೇ ಶ್ರೇಯಾಂಕದ ಹಾನೆ ವಾಂಡೆವಿಂಕೆಲ್. ವಿಶ್ವ ಕ್ರಮಾಂಕದಲ್ಲಿ 124ನೇ ಶ್ರೇಯಾಂಕ ಹೊಂದಿರುವ ಬೆಲ್ಜಿಯಮ್‌ನ ಹಾನೆ 6–1, 6–2 ರಿಂದ ತೈಪೆಯ ಯಾ–ಸುವಾನ್ ಅವರನ್ನು ಹಿಮ್ಮೆಟ್ಟಿಸಿದರು.

‘ನಿರ್ಣಾಯಕ ಸಂದರ್ಭದಲ್ಲಿ ಉತ್ತಮ ಆಟ ಹೊರಬಂದಿದ್ದು ಪಂದ್ಯ ನನ್ನ ಕಡೆ ವಾಲಿಸಿತು’ ಎಂದು ಶ್ರೀವಲ್ಲಿ ಪಂದ್ಯದ ನಂತರ ಪ್ರತಿಕ್ರಿಯಿಸಿದರು.

ಇದಕ್ಕೆ ಮೊದಲು, ಐದನೇ ಶ್ರೇಯಾಂಕದ ಪೊಲಿನಾ ಇಯಾಟ್ಸೆಂಕೊ (ರಷ್ಯಾ) ಅವರು 6–1, 1–6, 6–0 ಯಿಂದ ಮಾಯಾ ರೇವತಿ ಅವರನ್ನು ಸೋಲಿಸಿದರು. ರಷ್ಯಾದ ಆಟಗಾರ್ತಿ ವಿಶ್ವ ಕ್ರಮಾಂಕದಲ್ಲಿ 160ನೇ ಸ್ಥಾನದಲ್ಲಿದ್ದಾರೆ.

ಭಾರತದ ಮತ್ತೊಬ್ಬ ಆಟಗಾರ್ತಿ, ವಿಶ್ವ ಕ್ರಮಾಂಕದಲ್ಲಿ 475ನೇ ಸ್ಥಾನದಲ್ಲಿರುವ ವೈದೇಹಿ ಚೌಧರಿ ಅವರು ಆಸ್ಟ್ರೇಲಿಯಾದ ತಲಿಯಾ ಗಿಬ್ಸನ್ ಎದುರು ಸೋಲನುಭವಿಸಿದರು. ಈ ಟೂರ್ನಿಯಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ತಲಿಯಾ 6–4, 6–0 ಯಿಂದ ಜಯಗಳಿಸಿದರು.

ಪಂಕಜ್ ಅಡ್ವಾನಿಗೆ ಕಿರೀಟ

ಪಂಕಜ್ ಅಡ್ವಾನಿ

ಬೆಂಗಳೂರು: ದಿಗ್ಗಜ ಆಟಗಾರ ಪಂಕಜ್ ಅಡ್ವಾನಿ ಅವರು ಚೊಚ್ಚಲ ಆವೃತ್ತಿಯ ಲಿಬೆರ್‌ವಿನ್ ಚಾಂಪಿಯನ್ಸ್ ಕಪ್ ಸ್ಕ್ವಾಷ್ ಟೂರ್ನಿಯ ಕಿರೀಟ ಗೆದ್ದುಕೊಂಡರು. ಅವರು, ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ಬುಧವಾರ ನಡೆದ ಫೈನಲ್‌ನಲ್ಲಿ 6–3ರಿಂದ ಕಮಲ್ ಚಾವ್ಲಾ ಅವರನ್ನು ಮಣಿಸಿದರು.

ಇದಕ್ಕೆ ಮೊದಲು ನಡೆದ ಸೆಮಿಫೈನಲ್‌ನಲ್ಲಿ ಅಡ್ವಾನಿ ಅವರು 1–4ರ ಹಿನ್ನಡೆಯಿಂದ ಚೇತರಿಸಿಕೊಂಡು 5–4ರಿಂದ ಲಕ್ಷ್ಮಣ್ ರಾವತ್ ವಿರುದ್ಧ ಅಮೋಘ ಜಯ ಸಾಧಿಸಿದರು. ಈ ಪಂದ್ಯದಷ್ಟೇ ರೋಚಕವಾಗಿದ್ದ ಇನ್ನೊಂದು ಸೆಮಿಫೈನಲ್‌ನಲ್ಲಿ ಕಮಲ್ ಅವರು 5–4ರಿಂದ ಸೌರವ್ ಕೊಠಾರಿ ಅವರನ್ನು ಮಣಿಸಿದ್ದರು.

ಭಾರತಕ್ಕೆ ಸರಣಿ ಜಯದ ಮೇಲೆ ಕಣ್ಣು

ಹರ್ಮನ್‌ಪ್ರೀತ್

ಕೆನ್‌ಬೆರಾ (ಪಿಟಿಐ): ಮಳೆಯಿಂದ ಮೊಟಕುಗೊಂಡ ಮೊದಲ ಪಂದ್ಯದಲ್ಲಿ ಬೌಲರ್‌ಗಳ ಉತ್ತಮ ಪ್ರದರ್ಶನದಿಂದ ಗಳಿಸಿದ ಗೆಲುವು ಭಾರತ ಮಹಿಳಾ ತಂಡದಲ್ಲಿ ಉತ್ಸಾಹ ಮೂಡಿಸಿದೆ. ಗುರುವಾರ ನಡೆಯಲಿರುವ ಟಿ20 ಸರಣಿಯ ಎರಡನೇ ಪಂದ್ಯದಲ್ಲೂ ಆಸ್ಟ್ರೇಲಿಯಾ ವಿರುದ್ಧ ಗೆದ್ದು, ಒಂದು ಪಂದ್ಯ ಉಳಿದಿರುವಂತೆ ಸರಣಿಯನ್ನು ಕೈವಶ ಮಾಡಿಕೊಳ್ಳುವ ಗುರಿಯಲ್ಲಿ ಭಾರತ ತಂಡವಿದೆ.

ಮಧ್ಯಮ ವೇಗದ ಬೌಲರ್ ಅರುಂಧತಿ ರೆಡ್ಡಿ ನಾಲ್ಕು ವಿಕೆಟ್‌ಗಳನ್ನು ಪಡೆದು ಆತಿಥೇಯ ತಂಡದ ಕುಸಿತಕ್ಕೆ ಕಾರಣರಾಗಿದ್ದರು. ಆಸ್ಟ್ರೇಲಿಯಾ ತಂಡಕ್ಕೆ ಪೂರ್ಣ 20 ಓವರುಗಳನ್ನೂ ಆಡಲು ಸಾಧ್ಯವಾಗದೇ 133 ರನ್‌ಗಳಿಗೆ ಆಲೌಟ್ ಆಗಿತ್ತು. ಭಾರತ 5.1 ಓವರುಗಳಲ್ಲೇ 50 ರನ್ ಬಾರಿಸಿದ್ದಾಗ ಮಳೆಯಾಯಿತು. ಡಕ್‌ವರ್ತ್ ಲೂಯಿಸ್ ನಿಯಮದಡಿ ಭಾರತ 21 ರನ್‌ಗಳ ಜಯ ಸಾಧಿಸಿತ್ತು.

ಭಾರತದ ಹೆಚ್ಚಿನ ಆಟಗಾರ್ತಿಯರು ಮಹಿಳಾ ಕ್ರಿಕೆಟ್ ಲೀಗ್‌ನಲ್ಲಿ ಆಡಿ ಸಾಕಷ್ಟು ಸಿದ್ಧತೆ ನಡೆಸಿರುವುದರಿಂದ ತಂಡ ವಿಶ್ವಾಸದಲ್ಲಿದೆ.

ಭಾರತ ಗುರುವಾರದ ಪಂದ್ಯದಲ್ಲೂ ಶಫಾಲಿ ವರ್ಮಾ ಅವರಿಂದ ಉತ್ತಮ ಆರಂಭ ನಿರೀಕ್ಷಿಸುತ್ತಿದೆ. ಅವರ ಜತೆಗೆ ಅನುಭವಿಗಳಾದ ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ, ಜೆಮಿಮಾ ರಾಡ್ರಿಗಸ್ ಅವರನ್ನು ಹೊಂದಿರುವ ಬ್ಯಾಟಿಂಗ್ ಪಡೆ ಪ್ರಬಲವಾಗಿದೆ. ಮೂರು ಪಂದ್ಯಗಳ ಟಿ20 ಸರಣಿಯ ನಂತರ ಭಾರತ ವನಿತೆಯರ ತಂಡ ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ಬಳಿಕ ಏಕೈಕ ಟೆಸ್ಟ್ ಪಂದ್ಯ ಆಡಿ ಪ್ರವಾಸ ಕೊನೆಗೊಳಿಸಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.45 (ಭಾರತದ ಕಾಲಮಾನ)

ಕ್ವಾರ್ಟರ್‌ಫೈನಲ್‌ಗೆ ರಾಜ್ಯ ವನಿತೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಭಾ ಸತೀಶ್ ನಾಯಕತ್ವದ ಕರ್ನಾಟಕ ತಂಡವು ಬಿಸಿಸಿಐ ಸೀನಿಯರ್ ಮಹಿಳಾ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಬುಧವಾರ 46 ರನ್‌ಗಳಿಂದ ಪುದುಚೇರಿ ತಂಡಕ್ಕೆ ಮಣಿಯಿತು. ಆದರೂ, ಎ ಗುಂಪಿನಿಂದ ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಮುಂಬೈ ಎದುರು ಸೋಮವಾರ ಸೋತಿದ್ದ ಶುಭಾ ಪಡೆಯು ಗುಂಪು ಹಂತದ ತನ್ನ ಕೊನೆಯ ಪಂದ್ಯದಲ್ಲಿ ಗೆಲುವಿನ ಹಳಿಗೆ ಮರಳುವ ವಿಶ್ವಾಸದಲ್ಲಿತ್ತು. ಆದರೆ, ಆಲ್‌ರೌಂಡ್ ಪ್ರದರ್ಶನ ತೋರಿದ ಪುದುಚೇರಿ ತಂಡವು ಗೆಲುವಿನೊಂದಿಗೆ ಅಭಿಯಾನ ಮುಗಿಸಿತು. ಎ ಗುಂಪಿನಲ್ಲಿ ಕರ್ನಾಟಕ ಹಾಗೂ ಉತ್ತರ ಪ್ರದೇಶ ತಂಡಗಳು ತಲಾ 20 ಅಂಕ ಹೊಂದಿದ್ದರೂ, ನೆಟ್ ರನ್‌ರೇಟ್ ಆಧಾರದಲ್ಲಿ ಶುಭಾ ಪಡೆ ಎಂಟರ ಘಟ್ಟ ಪ್ರವೇಶಿಸಿತು.

ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಪುದುಚೇರಿ ತಂಡಕ್ಕೆ ಆರಂಭ ಆಟಗಾರ್ತಿ ಯುವಶ್ರೀ (85; 96ಎ) ಹಾಗೂ ಮೂರನೇ ಕ್ರಮಾಂಕದ ಆಟಗಾರ್ತಿ ದಿವ್ಯಾ ಜ್ಞಾನಾನಂದ (65; 87ಎ) ಆಸರೆಯಾದರು. ಇವರಿಬ್ಬರ ಅರ್ಧಶತಕಗಳ ಬಲದಿಂದ ಪುದುಚೇರಿ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗೆ 253 ರನ್ ಪೇರಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ರಾಜ್ಯ ತಂಡವು ನಿಯಮಿತವಾಗಿ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿಕೊಂಡಿತು. ಕೊನೆಯಲ್ಲಿ ಶ್ರೇಯಾ ಎಸ್. ಚವಾಣ್ (ಔಟಾಗದೇ 54) ಹೋರಾಟ ತೋರಿದರಾದರೂ, ಅವರಿಗೆ ಉತ್ತಮ ಜೊತೆ ಸಿಗಲಿಲ್ಲ. ಅಂತಿಮವಾಗಿ ಕರ್ನಾಟಕ ತಂಡವು 47.2 ಓವರ್‌ಗಳಲ್ಲಿ 207 ರನ್ ಗಳಿಸಿ ಹೋರಾಟ ಮುಗಿಸಿತು.

ಶುಭಾ ಪಡೆಯು ಮೊಹಾಲಿಯಲ್ಲಿ ಇದೇ 23ರಂದು ನಡೆಯಲಿರುವ ಕ್ವಾರ್ಟರ್ ಫೈನಲ್‌ನಲ್ಲಿ ಸಿ ಗುಂಪಿನ ಅಗ್ರಸ್ಥಾನಿ ರೈಲ್ವೇಸ್ ಜೊತೆಗೆ ಸೆಣಸಲಿದೆ.

ಸಂಕ್ಷಿಪ್ತ ಸ್ಕೋರು: ಪುದುಚೇರಿ : 50 ಓವರ್‌ಗಳಲ್ಲಿ 6 ವಿಕೆಟ್‌ಗೆ 253 (ಯುವಶ್ರೀ 85, ದಿವ್ಯಾ ಜ್ಞಾನಾನಂದ 65, ಮೋನಿಕಾ ಸಿ. ಪಟೇಲ್ 42ಕ್ಕೆ2). ಕರ್ನಾಟಕ: 47.2 ಓವರ್‌ಗಳಲ್ಲಿ 207 (ಸೌಮ್ಯಾ ವರ್ಮಾ 39, ಶ್ರೇಯಾ ಎಸ್. ಚವಾಣ್ ಔಟಾಗದೇ 54; ಎಂ.ರೇವತಿ 36ಕ್ಕೆ2).

ಫರ್ಹಾನ್ ಶತಕ: ಸುಲಭದ ತುತ್ತಾದ ನಮೀಬಿಯಾ

ಗೆಲುವಿನೊಡನೆ ಸೂಪರ್ 8ಕ್ಕೆ ಪಾಕ್

ಅಜೇಯ ಶತಕ ಗಳಿಸಿದ ಸಾಹಿಬ್‌ಝಾದಾ ಫರ್ಹಾನ್ ಎಎಫ್‌ಪಿ ಚಿತ್ರ

ಕೊಲಂಬೊ (ಎಎಫ್‌ಪಿ): ಆರಂಭ ಆಟಗಾರ ಸಾಹಿಬ್‌ಝಾದಾ ಫರ್ಹಾನ್ ಅವರ ಆಕರ್ಷಕ ಅಜೇಯ ಶತಕದ ನೆರವಿನಿಂದ ಪಾಕಿಸ್ತಾನ ತಂಡ 102 ರನ್‌ಗಳ ದೊಡ್ಡ ಅಂತರದಿಂದ ನಮೀಬಿಯಾ ತಂಡವನ್ನು ಸೋಲಿಸಿ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತಕ್ಕೆ ಮುನ್ನಡೆಯಿತು.

ಫರ್ಹಾನ್ ಕೇವಲ 58 ಎಸೆತಗಳಲ್ಲಿ ಬರೋಬ್ಬರಿ 100 ರನ್ ಬಾರಿಸಿದರು. ಇದರಲ್ಲಿ ನಾಲ್ಕು ಸಿಕ್ಸರ್, ಹತ್ತು ಬೌಂಡರಿಗಳಿದ್ದವು. ಪಾಕಿಸ್ತಾನ 20 ಓವರುಗಳಲ್ಲಿ 3 ವಿಕೆಟ್‌ಗೆ 199 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಫರ್ಹಾನ್ ಪ್ರಯತ್ನಕ್ಕೆ ಪೂರಕವಾಗಿ ಸ್ಪಂದಿಸಿದ ಸ್ಪಿನ್ನರ್‌ಗಳು ನಮೀಬಿಯಾ ತಂಡವನ್ನು 17.3 ಓವರುಗಳಲ್ಲಿ 97 ರನ್‌ಗಳಿಗೆ ಉರುಳಿಸಿದರು.

ಈ ಗೆಲುವಿನಿಂದ ಪಾಕಿಸ್ತಾನ ಎ ಗುಂಪಿನಲ್ಲಿ 4 ಪಂದ್ಯಗಳಿಂದ 6 ಅಂಕ ಸಂಗ್ರಹಿಸಿ ಎರಡನೇ ತಂಡವಾಗಿ ಸೂಪರ್ ಎಂಟಕ್ಕೆ ಮುನ್ನಡೆಯಿತು. ಭಾರತ ಈಗಾಗಲೇ ಅಗ್ರಸ್ಥಾನ ಪಡೆದಿದೆ. ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದ ಅಮೆರಿಕ ಹೊರಬಿತ್ತು. ಸೂಪರ್ ಎಂಟರಲ್ಲಿ ಬಿ ಗುಂಪಿನಲ್ಲಿರುವ ಪಾಕ್ ತಂಡ ತನ್ನೆಲ್ಲಾ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಡಲಿದೆ.

ಭಾರತ ಎದುರು 61 ರನ್‌ಗಳಿಂದ ಸೋಲನುಭವಿಸಿ ಮಾನಸಿಕವಾಗಿ ಕುಗ್ಗಿದ್ದ ಪಾಕಿಸ್ತಾನಕ್ಕೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿತ್ತು.

'ಪಾರ್ಟ್ ಬೌಲರ್' ಉಸ್ಮಾನ್ ತಾರಿಖ್ ಆಫ್ ಸ್ಪಿನ್ ದಾಳಿಯಲ್ಲಿ 16 ರನ್ನಿಗೆ 4 ವಿಕೆಟ್ ಪಡೆದರೆ, ಲೆಗ್ ಸ್ಪಿನ್ನರ್ ಶದಾಬ್ ಖಾನ್ 19 ರನ್‌ಗಳಿಗೆ 3 ವಿಕೆಟ್ ಪಡೆದು ಅನನುಭವಿ ನಮೀಬಿಯಾ ತಂಡದ ಬ್ಯಾಟಿಂಗ್ ಬೆನ್ನೆಲುಬು ಮುರಿದರು. ಆರಂಭ ಆಟಗಾರ ಲಾರೆನ್ ಸ್ಟೀನ್‌ಕ್ಯಾಂಪ್ ಗಳಿಸಿದ 23 ರನ್‌ಗಳೇ ತಂಡದ ವೈಯಕ್ತಿಕ ಗರಿಷ್ಠ ಮೊತ್ತವೆನಿಸಿತು.

ಇದಕ್ಕೆ ಮೊದಲು, ಫರ್ಹಾನ್ ಅವರು ಗೆರ್ಹಾರ್ಡ್ ಎರಾಸ್ಮಸ್ ಮಾಡಿದ ಕೊನೆಯ ಓವರಿನಲ್ಲಿ ಶತಕ ಪೂರೈಸಿದರು. ಅವರು ಟಿ20 ವಿಶ್ವಕಪ್‌ನಲ್ಲಿ ಶತಕ ಬಾರಿಸಿದ ಪಾಕಿಸ್ತಾನದ ಎರಡನೇ ಆಟಗಾರ ಎನಿಸಿದರು. ಈ ಹಿಂದೆ ಅಹ್ಮದ್ ಶೆಹಝಾದ್ 2014ರಲ್ಲಿ ಬಾಂಗ್ಲಾದೇಶ ವಿರುದ್ಧ ಶತಕ (111*) ಗಳಿಸಿದ್ದರು. ಮುರಿಯದ ನಾಲ್ಕನೇ ವಿಕೆಟ್‌ಗೆ ಫರ್ಹಾನ್– ಶದಾಬ್ 81 ರನ್ ಸೇರಿಸಿದರು. ಫರ್ಹಾನ್, ನಾಯಕ ಸಲ್ಮಾನ್ ಆಘಾ (38) ಜೊತೆ ಎರಡನೇ ವಿಕೆಟ್‌ಗೆ 67 ರನ್ ಸೇರಿಸಿದ್ದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರುಗಳಲ್ಲಿ 3ಕ್ಕೆ 199 (ಸಾಹಿಬ್‌ಝಾದಾ ಫರ್ಹಾನ್ ಔಟಾಗದೇ 100, ಸಲ್ಮಾನ್ ಆಘಾ 38, ಶದಾಬ್ ಖಾನ್ ಔಟಾಗದೇ 36; ಜಾಕ್ ಬ್ರಸೆಲ್ 48ಕ್ಕೆ2); ನಮೀಬಿಯಾ: 17.3 ಓವರುಗಳಲ್ಲಿ 97 (ಲಾರೆನ್ ಸ್ಟೀನ್‌ಕ್ಯಾಂಪ್ 23, ಶದಾಬ್ ಖಾನ್ 19ಕ್ಕೆ3, ಉಸ್ಮಾನ್ ತಾರಿಖ್ 16ಕ್ಕೆ4) ಪಂದ್ಯದ ಆಟಗಾರ: ಸಾಹಿಬ್‌ಝಾದಾ ಫರ್ಹಾನ್.

ಟಿ20 ವಿಶ್ವಕಪ್ ಸೂಪರ್ 8

ಎ ಗುಂಪು	ಬಿ ಗುಂಪು
ಭಾರತ	ಇಂಗ್ಲೆಂಡ್
ದಕ್ಷಿಣ ಆಫ್ರಿಕಾ	ನ್ಯೂಜಿಲೆಂಡ್
ವೆಸ್ಟ್ ಇಂಡೀಸ್	ಪಾಕಿಸ್ತಾನ
ಜಿಂಬಾಬ್ವೆ	ಶ್ರೀಲಂಕಾ

ಇಂದಿನ ಪಂದ್ಯ

ವೆಸ್ಟ್ ಇಂಡೀಸ್ V/s ಇಟಲಿ
ತಾಣ: ಕೋಲ್ಕತ್ತ, ಆರಂಭ: ಬೆಳಿಗ್ಗೆ 11

ಶ್ರೀಲಂಕಾ V/s ಜಿಂಬಾಬ್ವೆ
ತಾಣ: ಕೊಲಂಬೊ, ಆರಂಭ: ಮಧ್ಯಾಹ್ನ 3

ಅಫ್ಗಾನಿಸ್ತಾನ V/s ಕೆನಡಾ
ರಾತ್ರಿ ತಾಣ: ಚೆನ್ನೈ, ಆರಂಭ: 7

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಸೂಪರ್ 8ರ ವೇಳಾಪಟ್ಟಿ

ದಿನಾಂಕ	ಪಂದ್ಯ	ತಾಣ	ಪಂದ್ಯ ಆರಂಭ
ಫೆ.21	ನ್ಯೂಜಿಲೆಂಡ್–ಪಾಕಿಸ್ತಾನ	ಕೊಲಂಬೊ	ಸಂಜೆ 7
ಫೆ.22	ಶ್ರೀಲಂಕಾ–ಇಂಗ್ಲೆಂಡ್	ಪಲ್ಲೆಕೆಲೆ	ಮಧ್ಯಾಹ್ನ 3
	ಭಾರತ–ದಕ್ಷಿಣ ಆಫ್ರಿಕಾ	ಅಹಮದಾಬಾದ್	ಸಂಜೆ 7
ಫೆ.23	ಜಿಂಬಾಬ್ವೆ–ವೆಸ್ಟ್ ಇಂಡೀಸ್	ಮುಂಬೈ	ಸಂಜೆ 7
ಫೆ.24	ಇಂಗ್ಲೆಂಡ್–ಪಾಕಿಸ್ತಾನ	ಪಲ್ಲೆಕೆಲೆ	ಸಂಜೆ 7
ಫೆ.25	ಶ್ರೀಲಂಕಾ–ನ್ಯೂಜಿಲೆಂಡ್	ಕೊಲಂಬೊ	ಸಂಜೆ 7
ಫೆ.26	ವೆಸ್ಟ್ ಇಂಡೀಸ್–ದಕ್ಷಿಣ ಆಫ್ರಿಕಾ	ಅಹಮದಾಬಾದ್	ಮಧ್ಯಾಹ್ನ 3
	ಭಾರತ–ಜಿಂಬಾಬ್ವೆ	ಚೆನ್ನೈ	ಸಂಜೆ 7
ಫೆ.27	ಇಂಗ್ಲೆಂಡ್–ನ್ಯೂಜಿಲೆಂಡ್	ಕೊಲಂಬೊ	ಸಂಜೆ 7
ಫೆ.28	ಶ್ರೀಲಂಕಾ–ಪಾಕಿಸ್ತಾನ	ಪಲ್ಲೆಕೆಲೆ	ಸಂಜೆ 7
ಮಾ.1	ಜಿಂಬಾಬ್ವೆ–ದಕ್ಷಿಣ ಆಫ್ರಿಕಾ	ದೆಹಲಿ	ಮಧ್ಯಾಹ್ನ 3
	ಭಾರತ–ವೆಸ್ಟ್ ಇಂಡೀಸ್	ಕೋಲ್ಕತ್ತ	ಸಂಜೆ 7

ಗಾಯಾಳು ಪಥಿರಾಣ ಬದಲಿಗೆ ಮಧುಶಂಕಗೆ ಸ್ಥಾನ

ಮಧುಶಂಕ

ಕೊಲಂಬೊ: ಗಾಯಾಳು ಮಥೀಶ ಪಥಿರಾಣ ಬದಲಿಗೆ ವೇಗಿ ದಿಲ್ಶಾನ್ ಮಧುಶಂಕ ಅವರು ಶ್ರೀಲಂಕಾ ಕ್ರಿಕೆಟ್ ತಂಡಕ್ಕೆ ಬುಧವಾರ ಸೇರ್ಪಡೆಯಾಗಿದ್ದಾರೆ.

ಬಲಗೈ ವೇಗಿ ಪಥಿರಾಣ ಅವರು ಸೋಮವಾರ ನಡೆದ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದ ವೇಳೆ ಸ್ನಾಯು ಸೆಳೆತಕ್ಕೆ ತುತ್ತಾಗಿದ್ದರು.

ಶಿವಂ ಆಲ್‌ರೌಂಡ್ ಆಟಕ್ಕೆ ಒಲಿದ ಜಯ

ಮೂರನೇ ಬಾರಿಯೂ ಖಾತೆ ತೆರೆಯದ ಅಭಿಷೇಕ್
● ಡಚ್ ತಂಡದ ವಿರೋಚಿತ ಹೋರಾಟ

12 ಭಾರತ ತಂಡವು ಟಿ20 ವಿಶ್ವಕಪ್‌ನಲ್ಲಿ (2024ರಿಂದ) ಸತತ 12ನೇ ಜಯ ಸಾಧಿಸಿತು.



ಪಿಟಿಐ ಚಿತ್ರ

ಅಹಮದಾಬಾದ್ (ಪಿಟಿಐ): ಹೆಚ್ಚು ಅನುಭವವಿಲ್ಲದ ನೆದರ್ಲೆಂಡ್ಸ್ ಬೌಲರ್‌ಗಳ ಮುಂದೆ ಭಾರತದ ಅಗ್ರ ಬ್ಯಾಟರ್‌ಗಳು ಎಡವಿದರು. ಬ್ಯಾಟಿಂಗ್‌ನಲ್ಲಿಯೂ ಡಚ್ ಆಟಗಾರರು ವಿರೋಚಿತ ಹೋರಾಟ ಪ್ರದರ್ಶಿಸಿದರು. ಆದರೂ ಭಾರತವು ಪ್ರಯಾಸದ ಗೆಲುವು ಸಾಧಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಶಿವಂ ದುಬೆ (66; 31ಎ, 4x4, 6x6) ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 193 ರನ್ ಗಳಿಸಿತು. ಅವರಿಗೆ ಹಾರ್ದಿಕ್ ಪಾಂಡ್ಯ (30; 21ಎ, 6x3) ಉತ್ತಮ ಜೊತೆ ನೀಡಿದರು. ಐದನೇ ವಿಕೆಟ್ ಜತೆಯಾಟದಲ್ಲಿ 76 (35ಎ) ರನ್ ಸೇರಿಸಿದರು. ಗುರಿ ಬೆನ್ನಟ್ಟಿದ ನೆದರ್ಲೆಂಡ್ಸ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 176 ರನ್ ಗಳಿಸಿತು. ದುಬೆ (35ಕ್ಕೆ2) ಬೌಲಿಂಗ್‌ನಲ್ಲಿಯೂ ಮಿಂಚಿದರು. 17 ರನ್‌ಗಳ ಅಂತರದಿಂದ ಸೂರ್ಯಕುಮಾರ್ ಯಾದವ್ ಪಡೆ ಗೆದ್ದಿತು.

ಬ್ಯಾಟರ್‌ಗಳ ವೈಫಲ್ಯ: ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸ್ಪಿನ್ನರ್ ಆರ್ಯನ್ ದತ್ ಅವರನ್ನು ದಾಳಿಗಿಳಿಸಿದ ನೆದರ್ಲೆಂಡ್ಸ್ ಯೋಜನೆ ಕೈಗೂಡಿತು. ಮೊದಲ ಓವರ್‌ನ ಮೂರನೇ ಎಸೆತದಲ್ಲಿಯೇ 'ಸ್ಫೋಟಕ ಶೈಲಿ'ಯ ಆಟಗಾರ ಅಭಿಷೇಕ್ ಶರ್ಮಾ ಕ್ಲೀನ್‌ಬೌಲ್ಡ್ ಆದರು. ಈ ಟೂರ್ನಿಯಲ್ಲಿ ತಾವು ಆಡಿದ ಎಲ್ಲ ಮೂರು ಪಂದ್ಯಗಳಲ್ಲಿಯೂ ಸೊನ್ನೆ ಸುತ್ತಿದರು.

ಪಾಕ್ ಎದುರಿನ ಪಂದ್ಯದ ಗೆಲುವಿನ ರೂವಾರಿ ಇಶಾನ್ ಕಿಶನ್ (18; 7ಎ, 4x2, 6x1) ಉತ್ತಮವಾಗಿ ಆಡುತ್ತಿರುವಾಗಲೇ ಆರ್ಯನ್ ಹಾಕಿದ ಎಸೆತದಲ್ಲಿ ಬೌಲ್ಡ್ ಆದರು. ಈ ಹಂತದಲ್ಲಿ ತಿಲಕ್ ವರ್ಮಾ (31; 27ಎ) ಮತ್ತು ನಾಯಕ ಸೂರ್ಯಕುಮಾರ್ ಯಾದವ್ (34; 28ಎ) ಅವರು ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಪ್ರಯತ್ನ ಮಾಡಿದರು. 3ನೇ ವಿಕೆಟ್ ಜೊತೆಯಾಟದಲ್ಲಿ 30 ರನ್ ಸೇರಿಸಿದರು.

ಲೊಗನ್ ವ್ಯಾನ್ ಬೀಕ್ ಎಸೆತವನ್ನು ತಿಲಕ್ ಅವರು ಎತ್ತರಕ್ಕೆ ಹೊಡೆದರು. 41 ವರ್ಷದ ರೋಯಲ್ಫ್ ವ್ಯಾನ್ ಡೆರ್ ಮರ್ವೆ ಅವರು ಪಡೆದ ಆಕರ್ಷಕ ಕ್ಯಾಚ್‌ಗೆ ತಿಲಕ್ ಆಟಕ್ಕೆ ತೆರೆಬಿತ್ತು. ಐದು ಓವರ್‌ಗಳ ನಂತರ ಸೂರ್ಯ ವಿಕೆಟ್ ಕೈಲ್ ಕ್ಲೀನ್ ಅವರ ಪಾಲಾಯಿತು. ಆಗ ತಂಡದ ಮೊತ್ತವು 4ಕ್ಕೆ110 ಆಗಿತ್ತು. ಇನಿಂಗ್ಸ್‌ನಲ್ಲಿ ಇನ್ನೂ 6.3 ಓವರ್‌ಗಳು ಬಾಕಿ ಇದ್ದವು.

ದುಬೆ ಆರಂಭಿಕ ಹಂತದಲ್ಲಿ ಎಚ್ಚರಿಕೆಯಿಂದ ಆಡಿದರು. ಇನ್ನೊಂದು ಬದಿಯಲ್ಲಿ ಹಾರ್ದಿಕ್ ದೊಡ್ಡ ಹೊಡೆತಕ್ಕೆ ಯತ್ನಿಸಿದರು. ಆದರೆ, ಪೂರ್ಣ ಯಶಸ್ವಿಯಾಗಲಿಲ್ಲ. ಕೊನೆಯ ಐದು ಓವರ್ ಗಳಿದ್ದಾಗ ದುಬೆ ಆಟದ ವೇಗ ಹೆಚ್ಚಿಸಿದರು. ಅರ್ಧಡಜನ್ ಸಿಕ್ಸರ್ ಸಿಡಿಸಿದರು. ಆದರೂ ತಂಡಕ್ಕೆ ದ್ವಿಶತಕದ ಗಡಿ ಮುಟ್ಟಲು ಸಾಧ್ಯವಾಗಲಿಲ್ಲ.

ಡಚ್ ಬ್ಯಾಟರ್‌ಗಳ ಆಟ: ಮಿಚೆಲ್ ಲೆವಿಟ್ (24 ರನ್) ಮತ್ತು ಮ್ಯಾಕ್ ಒಡೌಡ್ (20 ರನ್) ಉತ್ತಮ ಆರಂಭ ನೀಡಿದರು. ಆರ್ಯನ್ ದತ್ ಅವರು ಖಾತೆ ತೆರೆಯಲಿಲ್ಲ. ಅವರನ್ನು ಬಿಟ್ಟರೆ ಉಳಿದೆಲ್ಲ ಬ್ಯಾಟರ್‌ಗಳು ಉತ್ತಮವಾಗಿ ಬ್ಯಾಟಿಂಗ್ ಮಾಡಿದರು. ಆದರೆ ಅವರು ದೀರ್ಘ ಜೊತೆಯಾಟಕ್ಕೆ ಕುದುರುವ ಮುನ್ನವೇ ಸ್ಪಿನ್ನರ್ ವರುಣ್ ಚಕ್ರವರ್ತಿ (14ಕ್ಕೆ3) ಅವರು ಕಡಿವಾಣ ಹಾಕಿದರು. ಅವರಿಗೆ ಉಳಿದ ಬೌಲರ್‌ಗಳೂ ಸಾಥ್ ನೀಡಿದರು. ಇದರಿಂದಾಗಿ ತಂಡವು 15.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 125 ರನ್ ಗಳಿಸಿತು. ಜ್ಯಾಕ್ ಲಯನ್ ಕ್ಯಾಚೆಟ್ (26 ರನ್) ಮತ್ತು ನೋಹ್ ಕ್ರೋಸ್ (ಔಟಾಗದೇ 25) ಅವರು ಬೀಸಾಟದ ಮೂಲಕ ಭಾರತ ತಂಡಕ್ಕೆ ಸವಾಲೊಡ್ಡಿದರು. ಈ ಹಂತದಲ್ಲಿ ಭಾರತದ ಫೀಲ್ಡರ್‌ಗಳು ಕೆಲವು ಕ್ಯಾಚ್‌ಗಳನ್ನು ಕೈಚೆಲ್ಲಿದರು.

ಕೊನೆಯ ಓವರ್‌ನಲ್ಲಿ ಗೆಲುವಿಗೆ 28 ರನ್‌ಗಳ ಅಗತ್ಯವಿತ್ತು. ಈ ಓವರ್ ಬೌಲಿಂಗ್ ಮಾಡಿದ ದುಬೆ ಕೇವಲ 10 ರನ್ ಕೊಟ್ಟರು. ಗೆಲುವು ಸಾಧ್ಯವಾಯಿತು

ಭಾರತ ತಂಡವು ಈಗಾಗಲೇ ಸೂಪರ್ ಎಂಟರ ಹಂತಕ್ಕೆ ಪ್ರವೇಶ ಗಿಟ್ಟಿಸಿದೆ. ಈ ಪಂದ್ಯವು ಔಪಚಾರಿಕವಾಗಿತ್ತು. ಆದ್ದರಿಂದ ತಂಡದಲ್ಲಿ ಎರಡು ಬದಲಾವಣೆಗಳ ಪ್ರಯೋಗವನ್ನೂ ಮಾಡಿತು. ಉಪನಾಯಕ ಅಕ್ಷರ್ ಪಟೇಲ್ ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೆ ವಿಶ್ರಾಂತಿ ಕೊಟ್ಟು, ವಾಷಿಂಗ್ಟನ್ ಸುಂದರ್ ಮತ್ತು ವೇಗಿ ಅರ್ಷದೀಪ್ ಸಿಂಗ್ ಅವರನ್ನು ಕಣಕ್ಕಿಳಿಸಲಾಯಿತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 193 (ಇಶಾನ್ ಕಿಶನ್ 18, ತಿಲಕ್ ವರ್ಮಾ 31, ಸೂರ್ಯಕುಮಾರ್ ಯಾದವ್ 34, ಶಿವಂ ದುಬೆ 66, ಹಾರ್ದಿಕ್ ಪಾಂಡ್ಯ 30, ಆರ್ಯನ್ ದತ್ 19ಕ್ಕೆ2, ಲೊಗಾನ್ ವ್ಯಾನ್ ಬೀಕ್ 56ಕ್ಕೆ3) ನೆದರ್ಲೆಂಡ್ಸ್: 20 ಓವರ್‌ಗಳಲ್ಲಿ 7ಕ್ಕೆ176 (ಮಿಚೆಲ್ ಲೆವಿಟ್ 24, ಮ್ಯಾಕ್ ಒ ಡೌಡ್ 20, ಬ್ಯಾಸ್ ಡಿ ಲೀಡ್ 33, ಕಾಲಿನ ಎಕರ್‌ಮನ್ 23, ಜ್ಯಾಕ್ ಲಯನ್ ಕ್ಯಾಚೆಟ್ 26, ನೋಹ್ ಕ್ರೋಸ್ ಔಟಾಗದೇ 25, ವರುಣ್ ಚಕ್ರವರ್ತಿ 14ಕ್ಕೆ3, ಶಿವಂ ದುಬೆ 35ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 17 ರನ್ ಜಯ. ಪಂದ್ಯದ ಆಟಗಾರ: ಶಿವಂ ದುಬೆ.

ಟಿ20 ವಿಶ್ವಕಪ್: ಅಂಕಪಟ್ಟಿ

ಎ ಗುಂಪು

	ತಂಡಗಳು	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
1	ಭಾರತ	4	4	0	-	8	2.500
2	ಪಾಕಿಸ್ತಾನ	4	3	1	-	6	0.976
3	ಅಮೆರಿಕ	4	2	2	-	4	0.788
4	ನೆದರ್ಲೆಂಡ್ಸ್	4	1	3	-	2	-1.217
5	ನಮೀಬಿಯಾ	4	0	4	-	0	-3.108

ದಕ್ಷಿಣ ಆಫ್ರಿಕಾ ತಂಡಕ್ಕೆ ಸವಾಲಾಗದ ಯುಎಇ

ಮೂರು ವಿಕೆಟ್ ಪಡೆದ ಕಾರ್ಬಿನ್ ಬಾಷ್ ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾ ತಂಡ, ಟಿ20 ವಿಶ್ವಕಪ್‌ನ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಬುಧವಾರ ಯುಎಇ ತಂಡದ ವಿರುದ್ಧ ಆರು ವಿಕೆಟ್‌ಗಳ ನಿರಾಯಾಸ ಗೆಲುವು ಸಾಧಿಸಿತು. ಡಿ ಗುಂಪಿನಲ್ಲಿ ಆಡಿದ ನಾಲ್ಕೂ ಪಂದ್ಯಗಳನ್ನು ಗೆದ್ದ ಹರಿಣಗಳ ಪಡೆ ಅಜೇಯ ಸಾಧನೆ ದಾಖಲಿಸಿತು.

ಫಿರೋಜ್ ಶಾ ಕೋಟ್ಲಾದಲ್ಲಿ ಮೊದಲು ಆಡಿದ ಯುಎಇ 20 ಓವರುಗಳಲ್ಲಿ 6 ವಿಕೆಟ್‌ಗೆ 122 ರನ್ ಗಳಿಸಿತು. ಈ ಮೊದಲೇ ಸೂಪರ್ ಎಂಟರಲ್ಲಿ ಸ್ಥಾನ ಖಚಿತಪಡಿಸಿಕೊಂಡಿದ್ದ ದಕ್ಷಿಣ ಆಫ್ರಿಕಾ, ಹೆಚ್ಚು ಸಮಯ ವ್ಯರ್ಥಮಾಡದೇ 13.1 ಓವರುಗಳಲ್ಲಿ 4 ವಿಕೆಟ್‌ಗೆ 123 ರನ್ ಹೊಡೆದು ಸಂಭ್ರಮಿಸಿತು.

ನಾಯಕ ಏಡನ್ ಮರ್ಕರಂ ರಟ್ಟೆಯರಳಿಸಿ 11 ಎಸೆತಗಳಲ್ಲಿ 28 ರನ್ ಗಳಿಸಿದರು. ಬ್ರೆವಿಸ್ 25 ಎಸೆತಗಳಲ್ಲಿ ಒಂದು ಬೌಂಡರಿ, ಮೂರು ಸಿಕ್ಸರ್ ಗಳಿದ್ದ ಅಜೇಯ 36 ರನ್ ಗಳಿಸಿದರು. ರಿಯಾನ್ ರಿಕೆಲ್ಟನ್ (30,16 ಎಸೆತ) ಕೂಡ ಹಿಂದೆ ಬೀಳಲಿಲ್ಲ.

ಭಾರತ ವಿರುದ್ಧ ಭಾನುವಾರ ನಡೆಯಲಿರುವ ಸೂಪರ್ ಎಂಟರ ಮಹತ್ವದ ಪಂದ್ಯಕ್ಕೆ ಸಜ್ಜಾಗಲು ಬ್ರೆವಿಸ್‌ಗೆ ಈ ಪಂದ್ಯ ನೆರವಾಯಿತು. ಎಡಗೈ ವೇಗದ ಬೌಲರ್ ಮುಹಮ್ಮದ್ ಜವಾದುಲ್ಲಾ ಎಸೆದ ಬೌನ್ಸರ್‌ನಲ್ಲಿ ಪುಲ್ ಮಾಡಿ ಹೊಡೆದ ಸಿಕ್ಸರ್ ಆಕರ್ಷಕವಾಗಿತ್ತು. ಎಡಗೈ ಸ್ಪಿನ್ನರ್ ಹೈದರ್ ಅಲಿ ಎಸೆತದಲ್ಲಿ ಎಕ್ಸ್‌ಟ್ರಾ ಕವರ್ ಮೇಲೆ ಎತ್ತಿದ ಸಿಕ್ಸರ್ ಸ್ಟ್ಯಾಂಡ್‌ನಲ್ಲಿ ಲ್ಯಾಂಡ್ ಆಯಿತು.

ಇದಕ್ಕೆ ಮೊದಲು, ಕಾರ್ಬಿನ್ ಬಾಷ್ (4–0–12–3) ಅವರ ನೇತೃತ್ವದಲ್ಲಿ ದಕ್ಷಿಣ ಆಫ್ರಿಕಾ ಬೌಲರ್‌ಗಳು ಯುಎಇ ತಂಡವನ್ನು 6 ವಿಕೆಟ್‌ಗೆ 122 ರನ್‌ಗಳಿಗೆ ಸೀಮಿತಗೊಳಿಸಿದರು. ಆ್ಯನ್ರಿಚ್ ನಾಕಿಯಾ (28ಕ್ಕೆ2) ಮತ್ತು ಜಾರ್ಜ್ ಲಿಂಡೆ (17ಕ್ಕೆ1) ಅವರೂ ಪರಿಣಾಮಕಾರಿ ಎನಿಸಿದರು. ಎರಡು ಜೀವದಾನ ಪಡೆದ ಯುವ ಆಟಗಾರ ಅಲಿಶಾನ್ ಶರಾಫು 38 ಎಸೆತಗಳಲ್ಲಿ 45 ರನ್ (4x5, 6x1) ಗಳಿಸಿದ್ದರಿಂದ ಯುಎಇ ಮೊತ್ತ 100 ದಾಟಿತು. ಕಾರ್ಬಿನ್ ಬಾಷ್ ಪಂದ್ಯದ ಆಟಗಾರನಾದರು.

ದಕ್ಷಿಣ ಆಫ್ರಿಕಾ ಈ ಪಂದ್ಯಕ್ಕೆ ಪ್ರಮುಖ ಆಟಗಾರರಾದ ಮಾರ್ಕೊ ಯಾನ್ಸೆನ್, ಲುಂಗಿ ಎನ್‌ಗಿಡಿ ಮತ್ತು ಸ್ಪಿನ್ನರ್ ಕೇಶವ ಮಹಾರಾಜ್ ಅವರಿಗೆ ವಿಶ್ರಾಂತಿ ನೀಡಿತು.

ರಣಜಿ ಟೂರ್ನಿ: 67 ವರ್ಷಗಳಲ್ಲಿ ಮೊದಲ ಸಲ ಫೈನಲ್ ಪ್ರವೇಶ

ಜಮ್ಮು–ಕಾಶ್ಮೀರ ತಂಡದ ಚಾರಿತ್ರಿಕ ಸಾಧನೆ

ವಂಶಜ್ ಶರ್ಮಾ ಪಿಟಿಐ ಚಿತ್ರ

ಕಲ್ಯಾಣಿ, ಬಂಗಾಳ (ಪಿಟಿಐ): ಕಣಿವೆ ರಾಜ್ಯ ಜಮ್ಮು ಮತ್ತು ಕಾಶ್ಮೀರದ ಕ್ರಿಕೆಟ್ ತಂಡವು ಇದೇ ಮೊದಲ ಬಾರಿ ರಣಜಿ ಟ್ರೋಫಿ ಟೂರ್ನಿಯ ಫೈನಲ್ ತಲುಪುವ ಮೂಲಕ ಇತಿಹಾಸ ರಚಿಸಿತು. ತಂಡದ 67 ವರ್ಷಗಳ ಇತಿಹಾಸದಲ್ಲಿ ಪ್ರಥಮ ಸಲ ಈ ಸಾಧನೆ ಮೂಡಿಬಂದಿದೆ.

ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ಈ ತಂಡ ಎರಡು ಸಲದ ಚಾಂಪಿಯನ್ ಬಂಗಾಳ ವಿರುದ್ಧ 6 ವಿಕೆಟ್‌ಗಳಿಂದ ಜಯಿಸಿತು. 126 ರನ್‌ಗಳ ಸಾಧಾರಣ ಗುರಿ ಬೆನ್ನಟ್ಟಿದ ಜಮ್ಮು–ಕಾಶ್ಮೀರ ತಂಡವು ವಂಶಜ್ ಶರ್ಮಾ (ಔಟಾಗದೇ 43) ಮತ್ತು ಅಬ್ದುಲ್ ಸಮದ್ (ಔಟಾಗದೇ 30) ಅವರ ಬ್ಯಾಟಿಂಗ್‌ನಿಂದ 34.4 ಓವರ್‌ಗಳಲ್ಲಿ ಗುರಿ ತಲುಪಿತು.

ಈ ಪಂದ್ಯದಲ್ಲಿ ಕಾಶ್ಮೀರದ ವೇಗಿ ಅಕೀಬ್ ನಬಿ ಅವರು ಒಟ್ಟು 9 ವಿಕೆಟ್ ಗಳಿಸಿದರು. ಆ ಮೂಲಕ ಬಂಗಾಳದ ಉತ್ತಮ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಿದರು. ಅದರಲ್ಲೂ ಎರಡನೇ ಇನಿಂಗ್ಸ್‌ನಲ್ಲಿ ಆತಿಥೇಯ ತಂಡವು ಕುಸಿಯಲು ಕಾರಣರಾದರು.

1959–60ರ ಋತುವಿನಲ್ಲಿ ಮೊದಲ ಬಾರಿ ಜಮ್ಮು–ಕಾಶ್ಮೀರ ತಂಡವು ಆಡಿತ್ತು. ಇತ್ತೀಚಿನವರೆಗೂ ಬಲಾಢ್ಯ ತಂಡಗಳ ಸಾಲಿನಲ್ಲಿ ಪರಿಗಣಿಸಲ್ಪಟ್ಟಿರಲಿಲ್ಲ. 2013–14ರಲ್ಲಿ ಪ್ರಥಮ ಸಲ ತಂಡವು ನಾಕೌಟ್ ಪ್ರವೇಶಿಸಿತ್ತು. ಮಂಗಳವಾರ ದಿನದಾಟದ ಅಂತ್ಯಕ್ಕೆ ತಂಡವು 2 ವಿಕೆಟ್‌ಗಳಿಗೆ 43 ರನ್ ಗಳಿಸಿತ್ತು. ಶುಭಮ್ ಪಂಡಿರ (27 ರನ್) ಮತ್ತು ನಾಯಕ ಪಾರಸ್ ಡೋಗ್ರಾ (9 ರನ್) ಅವರ ವಿಕೆಟ್‌ಗಳು ಬುಧವಾರ ಬೆಳಿಗ್ಗೆ ಪತನವಾದವು. ಆದರೆ ವಂಶಜ್ ಮತ್ತು ಸಮದ್ ಅವರು ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಮೊಹಮ್ಮದ್ ಶಮಿ, ಮುಕೇಶ್ ಕುಮಾರ್, ಆಕಾಶ್ ದೀಪ್, ಅಭಿಮನ್ಯು ಈಶ್ವರನ್ ಹಾಗೂ ಶಹಬಾಜ್ ಅಹಮದ್ ಅವರಂಥ ಅನುಭವಿ ಗಳಿದ್ದ ಬಂಗಾಳ ತಂಡ ಆಘಾತ ಅನುಭವಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಂಗಾಳ: 97.1 ಓವರ್‌ಗಳಲ್ಲಿ 328. ಜಮ್ಮು–ಕಾಶ್ಮೀರ: 76.1 ಓವರ್‌ಗಳಲ್ಲಿ 302. ಎರಡನೇ ಇನಿಂಗ್ಸ್: ಬಂಗಾಳ: 25.2 ಓವರ್‌ಗಳಲ್ಲಿ 99. ಜಮ್ಮು–ಕಾಶ್ಮೀರ: 34.4 ಓವರ್‌ಗಳಲ್ಲಿ 4ಕ್ಕೆ126 (ವಂಶಜ್ ಶರ್ಮಾ ಔಟಾಗದೇ 43, ಅಬ್ದುಲ್ ಸಮದ್ ಔಟಾಗದೇ 30, ಆಕಾಶ್ ದೀಪ್ 46ಕ್ಕೆ3, ಮೊಹಮ್ಮದ್ ಶಮಿ 24ಕ್ಕೆ1) ಫಲಿತಾಂಶ: ಜಮ್ಮು–ಕಾಶ್ಮೀರ ತಂಡಕ್ಕೆ 6 ವಿಕೆಟ್ ಜಯ. ಪಂದ್ಯದ ಆಟಗಾರ: ಅಕೀಬ್ ನಬಿ ದಾರ್.

ಕರ್ನಾಟಕ ತಂಡಕ್ಕೆ 802 ರನ್‌ಗಳ ಮುನ್ನಡೆ

ರಣಜಿ ಟ್ರೋಫಿ ಸೆಮಿಫೈನಲ್: ಎರಡನೇ ಇನಿಂಗ್ಸ್‌ನಲ್ಲೂ ಶತಕ ಸಿಡಿಸಿದ ಸ್ಮರಣ್

ಶತಕ ಸಿಡಿಸಿದ ಆರ್. ಸ್ಮರಣ್

ಲಖನೌ (ಪಿಟಿಐ): ರವಿಚಂದ್ರನ್ ಸ್ಮರಣ್ ರಣಜಿ ಟ್ರೋಫಿ ಸೆಮಿಫೈನಲ್ ಪಂದ್ಯದಲ್ಲಿ ಎರಡನೇ ಶತಕ ಗಳಿಸಿದರು. ಇದರಿಂದಾಗಿ ಕರ್ನಾಟಕ ತಂಡವು ಉತ್ತರಾಖಂಡ ಎದುರು ಒಟ್ಟು 802 ರನ್‌ಗಳ ಮುನ್ನಡೆ ಸಾಧಿಸಿದೆ.

ಪಂದ್ಯದ ನಾಲ್ಕನೇ ದಿನವಾದ ಬುಧವಾರ ಬೆಳಿಗ್ಗೆ ಉತ್ತರಾಖಂಡ ತಂಡವನ್ನು 233 ರನ್‌ಗಳಿಗೆ ಕಟ್ಟಿಹಾಕಿದ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 503 ರನ್‌ಗಳ ಬೃಹತ್ ಮುನ್ನಡೆ ಸಾಧಿಸಿತು. ಎರಡನೇ ಇನಿಂಗ್ಸ್ ಆರಂಭಿಸಿದ ಕರ್ನಾಟಕ ತಂಡವು ದಿನದಾಟದ ಮುಕ್ತಾಯಕ್ಕೆ 6 ವಿಕೆಟ್‌ಗಳಿಗೆ 299 ರನ್ ಗಳಿಸಿದೆ. ಕೆ.ಎಲ್. ರಾಹುಲ್ (ಬ್ಯಾಟಿಂಗ್ 70) ಕ್ರೀಸ್‌ನಲ್ಲಿದ್ದಾರೆ.

ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 739 ರನ್ ಗಳಿಸಲು ದೇವದತ್ತ ಪಡಿಕ್ಕಲ್ ದ್ವಿಶತಕ, ರಾಹುಲ್ ಮತ್ತು ಸ್ಮರಣ್ ಶತಕಗಳು ಕಾರಣವಾಗಿದ್ದವು. ಎರಡನೇ ಇನಿಂಗ್ಸ್‌ನಲ್ಲಿ ಐದನೇ ಕ್ರಮಾಂಕದಲ್ಲಿ ಬಂದ ಸ್ಮರಣ್ (127; 149ಎಸೆತ, 4X12, 6X3) ಮತ್ತೆ ಶತಕ ಗಳಿಸಿದರು. ಅಲ್ಲದೇ ಅವರು ರಾಹುಲ್ ಜೊತೆಗೆ ಐದನೇ ವಿಕೆಟ್ ಜೊತೆಯಾಟದಲ್ಲಿ 168 ರನ್ ಸೇರಿಸಿದರು. 22 ವರ್ಷದ ಸ್ಮರಣ್ ಅವರಿಗೆ ಇದು ಆರನೇ ಶತಕ.

ಒಂದೊಮ್ಮೆ ಕರ್ನಾಟಕ ತಂಡವು ಕೊನೆಯ ದಿನವಾದ ಗುರುವಾರ ಬೆಳಿಗ್ಗೆ ಡಿಕ್ಲೇರ್ ಮಾಡಿಕೊಂಡು ಉತ್ತರಾಖಂಡ ತಂಡವನ್ನು ಆಲೌಟ್ ಮಾಡಿ ಗೆಲುವಿಗೆ ಪ್ರಯತ್ನಿಸಬಹುದು. ಇಲ್ಲದಿದ್ದರೆ ಪಂದ್ಯ ಡ್ರಾ ಆಗಬಹುದು. ಒಟ್ಟಿನಲ್ಲಿ ಕರ್ನಾಟಕ ತಂಡವು ಫೈನಲ್ ಪ್ರವೇಶಿಸುವುದು ಖಚಿತವಾಗಿದೆ. ಇದೇ 24ರಿಂದ ನಡೆಯುವ ಫೈನಲ್‌ನಲ್ಲಿ ಜಮ್ಮು–ಕಾಶ್ಮೀರವನ್ನು ಎದುರಿಸಲಿದೆ.

ವೈಶಾಖ–ವಿದ್ಯಾಧರ್ ಮಿಂಚು: ಮಂಗಳವಾರ ದಿನದಾಟದ ಅಂತ್ಯಕ್ಕೆ ಉತ್ತರಾಖಂಡ 5 ವಿಕೆಟ್‌ಗಳಿಗೆ 149 ರನ್ ಗಳಿಸಿತ್ತು. ಕ್ರೀಸ್‌ನಲ್ಲಿ ಲಕ್ಷ್ಯ ರಾಯಚಂದಾನಿ ಮತ್ತು ಸೌರಭ್ ರಾವತ್ ಅವರಿದ್ದರು.

ದಿನದ ಮೊದಲ ಓವರ್‌ನಲ್ಲಿ ವೇಗಿ ವೈಶಾಖ ವಿಜಯಕುಮಾರ್ ಅವರು ರಾವತ್ (14) ವಿಕೆಟ್ ಗಳಿಸಿದರು. ವೈಶಾಖ ಅವರ ಬೌಲಿಂಗ್‌ನಲ್ಲಿಯೇ ರಾಯಚಂದಾನಿ ಅವರ ಇನಿಂಗ್ಸ್ ಕೂಡ ಕೊನೆಯಾಯಿತು. 175 ರನ್‌ಗಳಾಗುವಷ್ಟರಲ್ಲಿ ತಂಡವು 9 ವಿಕೆಟ್ ಕಳೆದುಕೊಂಡಿತು. ಆದಿತ್ಯ ರಾವತ್ (45; 38ಎ) ಅವರ ಏಕಾಂಗಿ ಹೋರಾಟದಿಂದಾಗಿ ತಂಡವು 200ರ ಗಡಿ ದಾಟಿತು.

ವೈಶಾಖ ಮತ್ತು ವಿದ್ಯಾಧರ್ ಪಾಟೀಲ ಅವರು ಒಟ್ಟು ಆರು ವಿಕೆಟ್ ಹಂಚಿಕೊಂಡರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 739. ಉತ್ತರಾಖಂಡ: 88.5 ಓವರ್‌ಗಳಲ್ಲಿ 233 (ಲಕ್ಷ್ಯ ರಾಯಚಂದಾನಿ 55, ಆದಿತ್ಯ ರಾವತ್ ಔಟಾಗದೇ 45, ವೈಶಾಖ ವಿಜಯಕುಮಾರ್ 45ಕ್ಕೆ3, ವಿದ್ಯಾಧರ್ ಪಾಟೀಲ 40ಕ್ಕೆ3) ಎರಡನೇ ಇನಿಂಗ್ಸ್: ಕರ್ನಾಟಕ: 63.5 ಓವರ್‌ಗಳಲ್ಲಿ 6ಕ್ಕೆ299 (ಆರ್. ಸ್ಮರಣ್ 127, ಕೆ.ಎಲ್. ರಾಹುಲ್ ಬ್ಯಾಟಿಂಗ್ 70, ಕೃತಿಕ್ ಕೃಷ್ಣ 52, ಅಭಯ್ ನೇಗಿ 53ಕ್ಕೆ2).

ಫೈನಲ್ ಪಂದ್ಯ ಎಲ್ಲಿ?

ಬೆಂಗಳೂರು: ಹತ್ತು ವರ್ಷಗಳ ನಂತರ ಕರ್ನಾಟಕ ತಂಡ ರಣಜಿ ಟ್ರೋಫಿ ಫೈನಲ್ ಪ್ರವೇಶಿಸಲಿರುವುದು ಕ್ರಿಕೆಟ್ ಪ್ರೇಮಿಗಳಲ್ಲಿ ಹೊಸ ಉತ್ಸಾಹ ಮೂಡಿಸಿದೆ.

ಅಲ್ಲದೇ ಜಮ್ಮು ಮತ್ತು ಕಾಶ್ಮೀರ ಎದುರಿನ ಪಂದ್ಯವು ಕರ್ನಾಟಕದ ಆತಿಥ್ಯದಲ್ಲಿ ನಡೆಯುವುದು ಕೂಡ ಖಚಿತವಾಗಿದೆ. 15 ವರ್ಷಗಳ ನಂತರ ಕೆಎಸ್‌ಸಿಎಗೆ ರಣಜಿ ಟ್ರೋಫಿ ಫೈನಲ್‌ಗೆ ಆತಿಥ್ಯ ವಹಿಸುವ ಅವಕಾಶ ಸಿಗಲಿದೆ. ಆದರೆ ಯಾವ ಕ್ರೀಡಾಂಗಣದಲ್ಲಿ ಎಂಬುದು ಗುರುವಾರ ಖಚಿತವಾಗಲಿದೆ.

2013–14 ಹಾಗೂ 2014–15ರ ಸತತ ಎರಡು ಋತುಗಳಲ್ಲಿ ವಿನಯಕುಮಾರ್ ನಾಯಕತ್ವದ ಕರ್ನಾಟಕ ಟ್ರೋಫಿ ಜಯಿಸಿತ್ತು. ಅದರ ನಂತರ ಫೈನಲ್ ಪ್ರವೇಶಿಸಿರಲಿಲ್ಲ. ಕೆಲವು ಟೂರ್ನಿಗಳಲ್ಲಿ ನಾಕೌಟ್ ಹಂತದಲ್ಲಿ ನಿರಾಸೆ ಅನುಭವಿಸಿತ್ತು. 2009–10ರ ಋತುವಿನಲ್ಲಿ ಮೈಸೂರಿನಲ್ಲಿ ಫೈನಲ್ ನಡೆದಿತ್ತು. ಅದರಲ್ಲಿ ಕರ್ನಾಟಕ ತಂಡವು ಮುಂಬೈ ಎದುರು ಸೋತಿತ್ತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನವೀಕರಣ ಕಾರ್ಯ ನಡೆಯುತ್ತಿರುವುದರಿಂದ ಪಂದ್ಯ ನಡೆಸಲು ಸಾಧ್ಯವಾಗುವುದಿಲ್ಲ. ಅದರಿಂದಾಗಿ ಮೈಸೂರಿನ ಗಂಗೋತ್ರಿ ಗ್ಲೇಡ್ಸ್, ಹುಬ್ಬಳ್ಳಿಯ ರಾಜನಗರದ ಕೆಎಸ್‌ಸಿಎ ಮೈದಾನ, ಶಿವಮೊಗ್ಗದ ನವುಲೆ ಕ್ರೀಡಾಂಗಣ ಅಥವಾ ಬೆಂಗಳೂರು ಹೊರವಲಯದ ಆಲೂರಿನ ಕ್ರೀಡಾಂಗಣದಲ್ಲಿ ಪಂದ್ಯ ನಡೆಸುವ ಸಾಧ್ಯತೆ ಹೆಚ್ಚಿದೆ.

'ಗುರುವಾರ ಬಿಸಿಸಿಐ ಜೊತೆ ಸಭೆ ಇದೆ. ನಂತರವಷ್ಟೇ ಪಂದ್ಯವನ್ನು ಯಾವ ಮೈದಾನದಲ್ಲಿ ನಡೆಸಬೇಕು ಎನ್ನುವ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ 'ಪ್ರಜಾವಾಣಿ'ಗೆ ತಿಳಿಸಿದರು.